ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಂತಾರಾಷ್ಟ್ರೀಯ ಯೋಗ ದಿನ

ಟೆಸ್ಟ್ ಪಂದ್ಯಕ್ಕೆ ತ್ರಿವಳಿ ಕನ್ನಡಿಗರ ಬಲ

- ರಾಹುಲ್, ಕರುಣ್, ಪ್ರಸಿದ್ಧಕೃಷ್ಣಗೆ ಮೊದಲ ಟೆಸ್ಟ್ ಪಂದ್ಯದಲ್ಲಿ ಸ್ಥಾನ
- ಹಲವು ವರ್ಷಗಳ ಬಳಿಕ ಒಂದೇ ಪಂದ್ಯದಲ್ಲಿ ಮೂವರು ಕನ್ನಡಿಗರಿಗೆ ಸ್ಥಾನ
- ಭಾರತ 300ರ ಗಡಿ ದಾಟಲು ಜೈಸ್ವಾಲ್ ಮತ್ತು ಗಿಲ್ ಶತಕದ ನೆರವು

ಸಮಾಚಾರ ಸಣ್ಣದಲ್ಲ

ಗಾಯಗೊಂಡಿದ್ದ ಬಾಲಕ ಸಾವು

ಬೆಂಗಳೂರು: ಹೈಟೆನ್ಷನ್ ವಿದ್ಯುತ್ ತಂತಿಯಿಂದ ಶಾಕ್ ಹೊಡೆದು ಅಸ್ವಸ್ಥನಾಗಿದ್ದ ಬಾಲಕ ಅನಂತ್ (10) ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾನೆ. ಜೂನ್ 15ರಂದು ಕೆ.ಆರ್. ಪುರಂನ ಸ್ವಾತಂತ್ರ್ಯ ನಗರದಲ್ಲಿ ಬಾಲಕನಿಗೆ ವಿದ್ಯುತ್ ಶಾಕ್ ತಗುಲಿದ ಘಟನೆ ಸಂಭವಿಸಿತ್ತು. ನೇಪಾಳ ಮೂಲದ ತಾಯಿ ಹಾಗೂ ಇಬ್ಬರು ಸಹೋದರಿಯರೊಂದಿಗೆ ಬಾಲಕ ನಗರದಲ್ಲಿ ವಾಸವಿದ್ದ. 2 ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದ ಬಾಲಕನ ತಾಯಿ, ಹೌಸ್ ಕೀಪಿಂಗ್ ಕೆಲಸ ಮಾಡುತ್ತ ಮಕ್ಕಳನ್ನ ಪೋಷಿಸುತ್ತಿದ್ದರು. ಮೇ 15 ರಂದು ಸಂಜೆ ತಾಯಿ ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಮನೆಯ ಆವರಣದಲ್ಲಿ ಆಟವಾಡುತ್ತಿದ್ದ ಬಾಲಕ, ಪೊರಕೆಯನ್ನ ಎಸೆಯಲು ತೆರಳಿದ್ದ. ಆ ವೇಳೆ ಬಾಲಕನ ಕೈಯಲ್ಲಿದ್ದ ಪೊರಕೆ ಮನೆಯ ಪಕ್ಕದಲ್ಲಿ ಹಾದು ಹೋಗಿರುವ ಹೈ ಟೆನ್ಷನ್ ವಿದ್ಯುತ್ ತಂತಿಗೆ ತಗುಲಿತ್ತು. ಇದರಿಂದ ಬಾಲಕನಿಗೆ ತೀವ್ರವಾಗಿ ವಿದ್ಯುತ್ ಶಾಕ್ ಹೊಡೆದಿತ್ತು. ತಕ್ಷಣ ಬಾಲಕನನ್ನ ಆತನ ಚಿಕ್ಕಪ್ಪ ಕೆ. ಆರ್. ಪುರಂ ಸರಕಾರಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಕೈ, ಕಾಲು ಮತ್ತು ದೇಹದ ಕೆಲವು ಭಾಗಗಳಲ್ಲಿ ಗಂಭೀರವಾಗಿ ಸುಟ್ಟ ಗಾಯಗಳಾಗಿದ್ದರಿಂದ ಬಾಲಕನನ್ನ ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಬಾಲಕ ಸಾವನ್ನಪ್ಪಿದ್ದಾನೆ.

ಕಾರುಗಳ ಕಳ್ಳತನ: ಮೂವರ ಬಂಧನ

ಬೆಂಗಳೂರು: ಓಮ್ನಿ ಕಾರುಗಳನ್ನೇ ಕದ್ದು ಹಳ್ಳಿಗಳಲ್ಲಿ ಮಾರಾಟ ಮಾಡುತ್ತಿದ್ದ ಕಳ್ಳರ ಗುಂಪನ್ನು ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಉಮೇಶ್, ತಬ್ರೇಜ್ ಹಾಗೂ ಜಬೀರ್ ಖಾನ್ ಬಂಧಿತ ಆರೋಪಿಗಳು. ಬಂಧಿತರಿಂದ 12 ಲಕ್ಷ ಮೌಲ್ಯದ ಒಟ್ಟು ಆರು ಓಮ್ನಿ ಕಾರುಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಹಿಂದೆ ಟ್ರ್ಯಾಕ್ಟರ್‌ಗಳನ್ನು ಕಳ್ಳತನ ಮಾಡುತ್ತಿದ್ದ ಇದೇ ಆರೋಪಿಗಳನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು 2020ರಲ್ಲಿ ಬಂಧಿಸಿ ಜೈಲಿಗಟ್ಟಿದ್ದರು. ಜೈಲಿನಿಂದ ಹೊರಬಂದ ಆರೋಪಿಗಳು ಓಮ್ನಿ ಕಾರುಗಳ ಕಳ್ಳತನ ಆರಂಭಿಸಿದ್ದರು. ಬೆಂಗಳೂರಿನ ವಿವಿಧೆಡೆ ಓಮ್ನಿ ಕಾರುಗಳನ್ನು ಕದ್ದು, ಅವುಗಳನ್ನು ಹಳ್ಳಿಗಳಲ್ಲಿ ಮಾರಾಟ ಮಾಡುತ್ತಿದ್ದರು. ಮೇ ತಿಂಗಳಿನಲ್ಲಿ ಇದೇ ರೀತಿ ವಿದ್ಯಾರಣ್ಯಪುರ ವ್ಯಾಪ್ತಿಯಲ್ಲಿ ಓಮ್ನಿ ಕಾರು ಕದ್ದೊಯ್ದಿದ್ದ ಆರೋಪಿಗಳಿಗಾಗಿ ವಿಶೇಷ ತಂಡವೊಂದನ್ನು ರಚಿಸಲಾಗಿತ್ತು. ಕಳ್ಳತನದ ಹಿಸ್ಟರಿ ಹೊಂದಿದ್ದ ಆರೋಪಿಗಳನ್ನು ಬಂಧಿಸಿ ವಿಚಾರಣೆಗೊಳಪಡಿಸಿದಾಗ ಕೃತ್ಯ ಬಯಲಾಗಿದೆ ಎಂದು ಬೆಂಗಳೂರು ಪೂರ್ವ ವಲಯದ ಹೆಚ್ಚುವರಿ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ತಿಳಿಸಿದ್ದಾರೆ.

ವೈದ್ಯೆ ಕಿರಿಕ್‌ನಿಂದಾಗಿ 2 ತಾಸು ವಿಮಾನ ಹಾರಾಟ ವಿಳಂಬ | ಬೆಂಗಳೂರಿನ ಕೆಂಪೇಗೌಡ ಏರ್‌ಪೋರ್ಟ್‌ನಲ್ಲಿ ಘಟನೆ

ಏರ್ ಇಂಡಿಯಾ ವಿಮಾನ ಪತನದ ಬೆದರಿಕೆ

ಬೆಂಗಳೂರು: ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ಪತನವಾಗಿ 270 ಕ್ಕೂ ಹೆಚ್ಚು ಮಂದಿ ದುರ್ಮರಣಕ್ಕೀಡಾದ ಬಳಿಕ ಪದೇ ಪದೇ ಒಂದಲ್ಲ ಒಂದು ಘಟನೆಗೆ ಏರ್ ಇಂಡಿಯಾ ಸುದ್ದಿಯಾಗುತ್ತಿದೆ. ಹಲವು ವಿಮಾನಗಳ ರದ್ದು, ಭೂಸ್ಪರ್ಶ ಸೇರಿದಂತೆ ವಿಮಾನ ಹಾರಾಟದಲ್ಲಿ ವಿಳಂಬ ವಾದ ಘಟನೆಗಳು ನಡೆದಿವೆ.

ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲೂ ಅಚಾನಕ್ ಘಟನೆ ನಡೆದಿದ್ದು, ಯಲಹಂಕದ ವೈದ್ಯೆಯೊಬ್ಬಳ ಕಿರಿಕ್‌ನಿಂದಾಗಿ ವಿಮಾನ ಹಾರಾಟ 2 ಗಂಟೆ ವಿಳಂಬವಾಗಿದೆ. ಬ್ಯಾಗ್ ಇಡುವ ವಿಚಾರಕ್ಕೆ ಸಹ ಪ್ರಯಾಣಿಕರ ಜತೆ ಹಾಗೂ ಗಗನ ಸಖಿಯರ ಜತೆ ಯಲಹಂಕದ ಶಿವನಹಳ್ಳಿಯ ನಿವಾಸಿ ವೈದ್ಯೆ ವ್ಯಾಸ್ ಹಿರಲ್ ಮೋಹನ್‌ಭಾಯಿ ಗಲಾಟೆ ಮಾಡಿಕೊಂಡಿದ್ದಾರೆ. ಅಲ್ಲದೇ ವಿಮಾನ ಪತನ ಮಾಡಲಾಗುವುದು ಎಂಬ ಬೆದರಿಕೆಯನ್ನು ವೈದ್ಯೆ ಹಾಕಿದ್ದಾರೆ ಎಂದು ಆರೋಪಿಸಲಾಗಿದೆ.

ಬೆಂಗಳೂರಿನಿಂದ ಸೂರತ್‌ಗೆ ತೆರಳುತ್ತಿದ್ದ ವಿಮಾನದ ಹಾರಾಟ 2 ಗಂಟೆ ತಡವಾಗಿದೆ. ಗಲಾಟೆ ಮಾಡಿದ ವೈದ್ಯೆಯನ್ನು ಏರ್‌ಪೋರ್ಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪೊಲೀಸರಿಗೂ ನಿಂದನೆ ಆರೋಪ: ಪರಿಸ್ಥಿತಿ ಕೈಮೀರುತ್ತಿರುವುದನ್ನು ಅರಿತ ಕ್ಯಾಪ್ಟನ್ ಭದ್ರತಾ ಸಿಬ್ಬಂದಿಗೆ ಮಾಹಿತಿ ನೀಡಿದರು. ಸಿಬ್ಬಂದಿ ವಿಮಾನಕ್ಕೆ ಬಂದು ಆಕೆಯನ್ನು ಕೆಳಗಿಳಿಸಿದರು. ಭದ್ರತಾ ಸಹಾಯಕ ವ್ಯವಸ್ಥಾಪಕ ಅಗ್ನಿಮಿತ್ರ ಬಹಿನಿಪತಿ ದೂರು ದಾಖಲಿಸಿದ್ದಾರೆ. ಘಟನೆ ಮಧ್ಯಾಹ್ನ 2.45 ರಿಂದ ಸಂಜೆ 5.30 ರ ನಡುವೆ ನಡೆದಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಏರ್ ಇಂಡಿಯಾ ಜು.15 ರವರೆಗೆ ಉತ್ತರ ಅಮೆರಿಕಾ, ಯುಕೆ, ಇಯು, ದೂರದ ಪೂರ್ವ ಮತ್ತು ಆಸ್ಟ್ರೇಲಿಯಾದಲ್ಲಿ ವಿಮಾನಗಳ ಸಂಖ್ಯೆಯನ್ನು ಕಡಿಮೆ ಮಾಡಿದೆ. ಪೊಲೀಸರು ಮೋಹನ್‌ಭಾಯಿ ಅಲ್ಲಿಗೆ ಸುಮ್ಮನಾಗಲಿಲ್ಲ. ಪೊಲೀಸ್ ಠಾಣೆಗೆ ಕರೆದೊಯ್ದ ನಂತರವೂ, ಅವರು ಪೊಲೀಸ್ ಅಧಿಕಾರಿಗಳನ್ನು ನಿಂದಿಸುವುದು ಮತ್ತು ಹಲ್ಲೆ ಮಾಡಿದರು ಎನ್ನಲಾಗಿದೆ.

ಆಕೆಯ ಪತಿ ನಗರದ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು, ಅವರು ಒಡಿಶಾದವರಾಗಿದ್ದಾರೆ. ಬಳಿಕ ಅವರನ್ನೂ ಠಾಣೆಗೆ ಕರೆಸಿ, ಕೇಳಿದಾಗ ಮೋಹನ್‌ಭಾಯಿ ವೈದ್ಯ ವೃತ್ತಿ ನಿಲ್ಲಿಸಿದ್ದಾರೆ. ಅವರು ಗುಜರಾತ್‌ನಲ್ಲಿರುವ ತನ್ನ ಕುಟುಂಬ ಭೇಟಿ ಮಾಡಲು ಹೋಗುತ್ತಿದ್ದರು ಎಂದು ಪೊಲೀಸರಿಗೆ ತಿಳಿಸಿದರು. ಈ ಹಿಂದೆ ಸಾರ್ವಜನಿಕ ಸ್ಥಳಗಳಲ್ಲಿ ತೊಂದರೆ ಉಂಟು ಮಾಡಿದ್ದಾರೆ ಎಂದು ಅವರು ಹೇಳಿದ್ದಾರೆ. ಪೊಲೀಸರು ಈಗ ಆಕೆಯ ಹಿನ್ನೆಲೆ ಮತ್ತು ಹಿಂದಿನ ಘಟನೆಗಳ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ.

ಗಲಾಟೆ ಹೇಗಾಯ್ತು?

ಏರ್ ಇಂಡಿಯಾದ 2749 ವಿಮಾನದಲ್ಲಿ ಮೋಹನ್ ಭಾಯಿ ಪ್ರಯಾಣಿಸಲು ಸಿದ್ದರಾಗಿದ್ದರು. ಪೊಲೀಸರ ಪ್ರಕಾರ, ಆಯುರ್ವೇದ ವೈದ್ಯೆಯಾದ ಮೋಹನ್‌ಭಾಯಿ ಚೆಕ್-ಇನ್ ಕೌಂಟರ್ ಅನ್ನು ದಾಟಿದ್ದರು. ಎರಡು ಬ್ಯಾಗ್‌ಗಳನ್ನು ವಿಮಾನದಲ್ಲಿ ಕೊಂಡೊಯ್ಯಲು ಪಟ್ಟು ಹಿಡಿದರು. ವಿಮಾನದಲ್ಲಿ ಹತ್ತಿದ ನಂತರ, ಒಂದು ಬ್ಯಾಗ್ ಅನ್ನು ಸಿಬ್ಬಂದಿ ಕ್ಯಾಬಿನ್ ಬಳಿ ಇಟ್ಟರು. ಇನ್ನೊಂದು ಬ್ಯಾಗ್ ಅನ್ನು ತನ್ನ ಸೀಟ್ 20 ಎಫ್ ಗೆ ತೆಗೆದುಕೊಂಡು ಹೋದರು. ಬ್ಯಾಗ್ ಅನ್ನು ತನ್ನ ಸೀಟಿನ ಮೇಲಿನ ಕಂಪಾರ್ಟ್‌ಮೆಂಟ್‌ನಲ್ಲಿ ಇಡಲು ಸಿಬ್ಬಂದಿ ಕೇಳಿದರು. ಆದರೆ ಆಕೆ ನಿರಾಕರಿಸಿದರು. ಬ್ಯಾಗ್ ಅನ್ನು ಅವರ ಬಳಿಯೇ ಇಟ್ಟುಕೊಳ್ಳುವಂತೆ ಪಟ್ಟು ಹಿಡಿದರು. ಸಿಬ್ಬಂದಿ ಮತ್ತು ನಂತರ ಕ್ಯಾಪ್ಟನ್ ಹಲವು ಬಾರಿ ಕೇಳಿದರೂ ಮೋಹನ್‌ಭಾಯಿ ಒಪ್ಪಲಿಲ್ಲ. ಸಿಬ್ಬಂದಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಲು ಪ್ರಾರಂಭಿಸಿದರು. ನಂತರ ಇತರ ಪ್ರಯಾಣಿಕರು ಆಕೆಗೆ ಸಮಾಧಾನ ಮಾಡಲು ಪ್ರಯತ್ನಿಸಿದರು. ಆದ ಆಕೆ ಅವರ ಮೇಲೂ ರೇಗಾಡಿದರು. ಒಂದು ಹಂತದಲ್ಲಿ, ಸಿಬ್ಬಂದಿ ತನ್ನ ಬ್ಯಾಗ್ ಅನ್ನು ಸರಿಸಿದರೆ ವಿಮಾನವನ್ನು ಉರುಳಿಸುವುದಾಗಿ ಬೆದರಿಕೆ ಹಾಕಿದರು ಎಂದು ಆರೋಪಿಸಲಾಗಿದೆ.

ರಾಜ್ಯ ಸರಕಾರದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ

ಬೆಂಗಳೂರು: ಕಾಂಗ್ರೆಸ್‌ನ ಸ್ವಪಕ್ಷೀಯರೇ ಮಾಡುತ್ತಿರುವ ಆರೋಪಗಳಿಂದ ರಾಜ್ಯ ಸರಕಾರದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ತಾಂಡವ ಆಡುತ್ತಿದೆ ಎಂಬುದು ಸಾಬೀತಾಗುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ತಾಂಡವ ನೃತ್ಯ ಆಡುತ್ತಿದೆ ಎನ್ನುವುದಕ್ಕೆ ಹಿರಿಯ ಶಾಸಕ ಬಿ. ಆರ್.ಪಾಟೀಲ್ ತಮ್ಮದೇ ಸರಕಾರದ ವಿರುದ್ಧ ಮಾಡಿರುವ ಸ್ಫೋಟಕ ಆರೋಪವೇ ಸಾಕ್ಷಿಯಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಣ್ಣ ಬಯಲಾಗಿದೆ. ಅದರಲ್ಲೂ ವಸತಿ ಇಲಾಖೆಯಲ್ಲಿ ಹೆಜ್ಜೆ ಹೆಜ್ಜೆಗೂ ಕಾಂಚಾಣವೇ ಮಾತಾಡಬೇಕು. ಹಣ ಇಲ್ಲದಿದ್ದರೆ ಅಲ್ಲಿ ಏನೇನೂ ಆಗುವುದಿಲ್ಲ ಎಂದು ಆಡಳಿತ ಪಕ್ಷದ ಶಾಸಕರೇ ಮಾಡಿರುವ ಆರೋಪದ ಹಿನ್ನೆಲೆಯಲ್ಲಿ ಮಂತ್ರಿ ಜಮೀರ್ ಅಹ್ಮದ್ ರಾಜೀನಾಮೆ ಕೊಟ್ಟು ತೊಲಗಬೇಕು. ಇಲ್ಲದಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಂಪುಟದಿಂದ ವಜಾ ಮಾಡಬೇಕು ಎಂದು ಒತ್ತಾಯಿಸಿದರು. ಸಚಿವ ಜಮೀರ್ ಅಹ್ಮದ್ ಅವರ ಆಪ್ತ ಕಾರ್ಯದರ್ಶಿ ಸರ್ಫರೋಜ್ ಖಾನ್ ಅವರೇ ಇಲಾಖೆಯಲ್ಲಿನ ಮನೆ ಹಂಚಿಕೆಗೆ ಲಂಚ ಕೊಡುವ ಪರಿಸ್ಥಿತಿ ಇದೆ ಎಂದು ಆಡಳಿತ ಪಕ್ಷದ ಶಾಸಕರಿಗೆ ಹೇಳಿರುವುದು ನೋಡಿದರೆ ಆಡಳಿತ ವ್ಯವಸ್ಥೆ ಕುಲಗೆಟ್ಟು ಹೋಗಿರುವುದು ಅರ್ಥವಾಗುತ್ತದೆ ಎಂದು ಶರವಣ ಕಿಡಿಕಾರಿದರು.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ ಶನಿವಾರ ಬೆಳಗ್ಗೆ 10 ರಿಂದ ಸಂಜೆ 5 ವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಕೋರಮಂಗಲ ವಿಭಾಗದ ಐ.ಬಿ.ಎಂ, ಗುರಪ್ಪನ ಪಾಳ್ಯ, ಸೋಬಾ ಮಜಾರಿಯಾ ಅಪಾರ್ಟ್‌ಮೆಂಟ್, ಬಿಜಿರಸ್ತೆ, ಬಿಟಿಎಂ 1ನೇ ಹಂತ, ಮಡಿವಾಳ ಮಾರುತಿ ನಗರ, ಭಿಸ್ಮಿಲ್ಲಾ ನಗರ, ಜೈಭೀಮ ನಗರ, ಐಬಿಮಮ್, ಜಿಎಂ ಪಾಳ್ಯ, ಕೃಷ್ಣಪ್ಪ ಗಾರ್ಡನ್, ಕಾವೇರಿ ಲೇಔಟ್, ಈಜೀಪುರ, ಕೆಆರ್ ಕಾಲೋನಿ, ಗುಂಡಪ್ಪಗೌಡ ರಸ್ತೆ, ವಿವೇಕನಗರ, ಕೋಡಿಹಳ್ಳಿ ಸುತ್ತ ಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸೇವೆ ಇರುವುದಿಲ್ಲ.

ಜುಲೈ 14ರಂದು ಪ್ರಕರಣದ ವಿಚಾರಣೆ ಮುಂದೂಡಿ ಹೈಕೋರ್ಟ್ ಆದೇಶ

ಅರ್ನಬ್ ವಿರುದ್ಧದ ಪ್ರಕರಣ ತಡೆ ಆದೇಶ ವಿಸ್ತರಣೆ

ಬೆಂಗಳೂರು: ಪತ್ರಕರ್ತ ಅರ್ನಾಬ್ ಗೋಸ್ವಾಮಿ ಪ್ರಕರಣ ದಲ್ಲಿ ಮಧ್ಯಂತರ ಆದೇಶ ವಿಸ್ತರಿಸದಿದ್ದರೆ ಬಿಡ್ತಾರಾ? ತಕ್ಷಣ ಬ್ರೇಕಿಂಗ್ ನ್ಯೂಸ್ ಆರಂಭವಾಗುತ್ತದೆ ಎಂದು ಕರ್ನಾಟಕ ಹೈಕೋರ್ಟ್ ಶುಕ್ರವಾರ ಲಘು ದಾಟಿಯಲ್ಲಿ ಹೇಳಿತು.



ಟರ್ಕಿಯ ಇಸ್ತಾನ್‌ಬುಲ್ ಕಾಂಗ್ರೆಸ್ ಕೇಂದ್ರವು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕಚೇರಿ ಎಂದು ಟ್ವೀಟ್ ಮಾಡಿದ್ದ ಬಿಜೆಪಿಯ ಸಾಮಾಜಿಕ ಮಾಧ್ಯಮದ ಮುಖ್ಯಸ್ಥ ಅಮಿತ್ ಮಾಳವಿಯಾ ಮತ್ತು ಅದನ್ನು ರಿಪಬ್ಲಿಕ್ ಸುದ್ದಿ ವಾಹಿನಿಯಲ್ಲಿ ದುರುದ್ದೇಶ ಪೂರ್ವಕ ಪ್ರಸಾರ ಮಾಡಿದ ಆರೋಪದ ಸಂಬಂಧ ವಾಹಿನಿಯ ಪ್ರಧಾನ ಸಂಪಾದಕ ಅರ್ನಾಬ್ ಗೋಸ್ವಾಮಿ ವಿರುದ್ಧ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣ ಕುಮಾರ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಅರ್ಜಿದಾರರನ್ನು ಪ್ರತಿನಿಧಿಸಿದ್ದ ವಕೀಲ ಸುಯೋಗ್ ಹೇರಳೆ ಅವರು ಅಮಿತ್ ಮಾಳವೀಯಾ ಮತ್ತು ಅರ್ನಾಬ್ ಗೋಸ್ವಾಮಿ ವಿರುದ್ಧದ ಪ್ರಕರಣದಲ್ಲಿ ಮಧ್ಯಂತರ ಆದೇಶ ವಿಸ್ತರಿಸಬೇಕು ಎಂದು ಕೋರಿದರು. ಆಗ ಪೀಠವು ಅರ್ಜಿದಾರರು ಯಾರೆಂದು ಗೊತ್ತಾಗಲಿಲ್ಲ. ಜಗತ್ತು ನೋಡಬೇಕಿದೆ (ವರ್ಲ್ಡ್ ವಾಂಟ್ಸ್ ಟು ನೋ). ಅವರ ಪ್ರಕರಣದಲ್ಲಿ ಮಧ್ಯಂತರ ಆದೇಶ ವಿಸ್ತರಿಸದಿದ್ದರೆ ಬಿಡುತ್ತಾರಾ? ಆಮೇಲೆ ಬ್ರೇಕಿಂಗ್ ನ್ಯೂಸ್ ಆರಂಭವಾಗುತ್ತದೆ ಎಂದು ಲಘು ದಾಟಿಯಲ್ಲಿ ಹೇಳಿದರು.

ವಿಚಾರಣೆ ಆರಂಭವಾಗುತ್ತಿದ್ದಂತೆ ಸರಕಾರದ ವಕೀಲರು ವಿಶೇಷ ಸರಕಾರಿ ಅಭಿಯೋಜಕರು ವಾದಿಸಲು ಬರಲಿದ್ದಾರೆ. ಅರ್ಜಿಯ ವಿಚಾರಣೆ ಕೆಲ ಕಾಲ ಮುಂದೂಡಬೇಕು ಎಂದು ಕೋರಿದರು. ಇದಕ್ಕೆ ಪೀಠವು ಈಗ ಅರ್ಜಿ ಇತ್ಯರ್ಥ ಪಡಿಸುತ್ತಿಲ್ಲ, ಮುಂದೂಡಲಾಗುತ್ತಿದೆ. ಅಲ್ಲದೇ, ವಿಸ್ತೃತವಾಗಿ ಆಲಿಸಿ, ಮಧ್ಯಂತರ ಆದೇಶ ಮಾಡಲಾಗಿದೆಯಲ್ಲವೇ ಎಂದಿತು.

ಮಾಳವೀಯ ಕೇಸ್‌ನಲ್ಲೂ ಆದೇಶ ಮುಂದುವರಿಕೆ

ಅಂತಿಮವಾಗಿ ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ಅರ್ನಾಬ್ ಗೋಸ್ವಾಮಿ ಮತ್ತು ಅಮಿತ್ ಮಾಳವಿಯಾ ವಿರುದ್ಧ ದಾಖಲಾಗಿರುವ ಪ್ರಕರಣಕ್ಕೆ ತಡೆ ನೀಡಿ ಮೇ 22ರಂದು ಆದೇಶಿಸಿರುವ ಮಧ್ಯಂತರ ಆದೇಶವನ್ನು ಹೈಕೋರ್ಟ್ ವಿಸ್ತರಿಸಿತು. ಅಲ್ಲದೇ, ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸೀಂ ಮುನೀರ್ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸಂಬಂಧ ಬೆಸೆದು ಟ್ವೀಟ್ ಮಾಡಿದ ಮತ್ತೊಂದು ಪ್ರಕರಣದ ಸಂಬಂಧ ಅಮಿತ್ ಮಾಳವಿಯಾ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲೂ ಮಧ್ಯಂತರ ಆದೇಶ ವಿಸ್ತರಿಸಿ, ಎಲ್ಲಾ ಪ್ರಕರಣಗಳ ವಿಚಾರಣೆಯನ್ನು ಜುಲೈ 14ಕ್ಕೆ ಮುಂದೂಡಿತು.

ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಪ್ರಕರಣ ವಿಚಾರಣೆ ಮುಂದುವರಿಸಲಿ: ಹೈಕೋರ್ಟ್

ಬೆಂಗಳೂರು: ಮನೆಯಲ್ಲಿ ಕೆಲಸ ಮಾಡುವ ಮಹಿಳೆಯ ಮೇಲಿನ ಅತ್ಯಾಚಾರ ಆರೋಪ ಪ್ರಕರಣದಲ್ಲಿ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ವಿಚಾರಣೆಯನ್ನು ವಿಚಾರಣಾಧೀನ ನ್ಯಾಯಾಲಯ ಮುಂದುವರಿಸಬಹುದು ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಸಂಬಂಧ ದಾಖಲಾಗಿರುವ ಎಫ್‌ಐಆರ್, ಆ ನಂತರ ಸಲ್ಲಿಕೆಯಾಗಿರುವ ಆರೋಪ ಪಟ್ಟಿ ಹಾಗೂ ನ್ಯಾಯಾಂಗ ಪ್ರಕ್ರಿಯೆ ರದ್ದುಪಡಿಸಬೇಕು ಎಂದು ಕೋರಿ ಜೆಡಿಎಸ್ ಶಾಸಕ ಹಾಗೂ ಪ್ರಜ್ವಲ್ ಅವರ ತಂದೆ ಎಚ್.ಡಿ.ರೇವಣ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್ ಕೃಷ್ಣ ಕುಮಾರ್ ಅವರ ಏಕಸದಸ್ಯ ಪೀಠ, ಈ ಸೂಚನೆ ನೀಡಿದೆ.

ವಿಚಾರಣೆ ವೇಳೆ ರೇವಣ್ಣ ಪರ ವಕೀಲರು, ಅರ್ಜಿದಾರರಿಗೆ ಸೀಮಿತವಾಗಿ ಈ ನ್ಯಾಯಾಲಯ ಮಧ್ಯಂತರ ಆದೇಶ ಮಾಡಿದೆ. ಪ್ರಜ್ವಲ್ ವಿರುದ್ಧ ವಿಚಾರಣೆ ಮುಂದುವರಿಸಲು ಯಾವುದೇ ಅಡ್ಡಿಯಿಲ್ಲ ಎಂದು ತಿಳಿಸಿದರು. ಇದನ್ನು ಆಲಿಸಿದ ಪೀಠ, ರೇವಣ್ಣ ವಿರುದ್ಧದ ನ್ಯಾಯಾಂಗ ಪ್ರಕ್ರಿಯೆಗೆ ತಡೆಯಾಜ್ಞೆ ನೀಡಲಾಗಿದೆ. ಹೀಗಾಗಿ, ಪ್ರಜ್ವಲ್ ವಿರುದ್ಧ ವಿಚಾರಣಾಧೀನ ನ್ಯಾಯಾಲಯವು ವಿಚಾರಣೆ ಮುಂದುವರಿಸಲು ಈ ಆದೇಶ ಅಡ್ಡಿಯಾಗದು ಎಂದು ಸ್ಪಷ್ಟಪಡಿಸಿ ವಿಚಾರಣೆ ಜುಲೈ 4ಕ್ಕೆ ಮುಂದೂಡಿತು.

ಸರಕಾರದ ಪರ ವಕೀಲರ ವಾದಕ್ಕೆ ಆಕ್ಷೇಪಿಸಿದ ಪ್ರಜ್ವಲ್ ಪರ ವಕೀಲರು, ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ಪ್ರಜ್ವಲ್ ನ್ಯಾಯಾಂಗ ಬಂಧನದಲ್ಲಿದ್ದಾರೆ. 157 ಸಾಕ್ಷಿಗಳನ್ನು ಉಲ್ಲೇಖಿಸಲಾಗಿದೆ. ಮೊದಲ ಜಾಮೀನು ಅರ್ಜಿ ತಿರಸ್ಕೃತವಾದಾಗಿನಿಂದ ಒಂದೇ ಒಂದು ಇಂಚೂ ಪ್ರಕರಣ ಮುಂದುವರಿದಿಲ್ಲ. ದೂರುದಾರೆಯ ಘನತೆಗೆ ಹಾನಿ ಮಾಡಿದ್ದೇವೆ ಎಂಬ ಆರೋಪವಿದೆ. ಸಂವಿಧಾನ 21ನೇ ವಿಧಿಯಡಿಯೂ ವಾದಿಸುತ್ತೇನೆ. ವಾದ ಆಲಿಸಿದ ನ್ಯಾಯ ಪೀಠ, ವಿಚಾರಣೆ ಜೂನ್ 24ಕ್ಕೆ ಮುಂದೂಡಿತು.

ಪ್ರಜ್ವಲ್ ಜಾಮೀನು ಅರ್ಜಿ ಮುಂದೂಡಿಕೆ

ಮತ್ತೊಂದು ಪ್ರಕರಣದಲ್ಲಿ ಜಾಮೀನು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಮುಂದೂಡಿತು. ವಿಚಾರಣೆ ವೇಳೆ ಸರಕಾರದ ಪರ ವಕೀಲರು, ಜಾಮೀನು ಅರ್ಜಿಗೆ ಆಕ್ಷೇಪ ವ್ಯಕ್ತಪಡಿಸಿದರು. ಇದೇ ರೀತಿಯ ಆರೋಪಗಳನ್ನು ಒಳಗೊಂಡಿರುವ ಇನ್ನೊಂದು ಪ್ರಕರಣದಲ್ಲಿ ವಿಚಾರಣೆ ಬಹುತೇಕ ಮುಗಿದಿದೆ. ಆ ಪ್ರಕರಣ ಮುಗಿದ ತಕ್ಷಣ ಈ ಪ್ರಕರಣ ಕೈಗೆತ್ತಿಕೊಳ್ಳುವಂತೆ ವಿಚಾರಣಾಧೀನ ನ್ಯಾಯಾಲಯವನ್ನು ಕೋರಿದ್ದೇವೆ. ಇದು ಮುಂದಿನ ವಾರ ಅಥವಾ 15 ದಿನಗಳಲ್ಲಿ ಆರಂಭವಾಗುವ ಸಾಧ್ಯತೆ ಇದೆ ಎಂದರು.

ಮೈ ಕ್ಲಿಪ್ ಹೊಸ ಸಾಧನ ಪರಿಚಯ

ಬೆಂಗಳೂರು: ಭಾರತದ ಮೊದಲ ಟ್ರಾನ್ಸ್‌ಕ್ಯಾಥೆಟರ್ ಎಡ್ಜ್-ಟು-ಎಡ್ಜ್ ರಿಪೇರಿ ವ್ಯವಸ್ಥೆಯಾದ ಮೈಕ್ಲಿಪ್ ಅನ್ನು ಬಿಡುಗಡೆ ಮಾಡುವ ಮೂಲಕ ಮಹತ್ವದ ಮೈಲಿಗಲ್ಲನ್ನು ಸಾಧಿಸಿದೆ.

ಭಾರತದಲ್ಲಿ ಸುಮಾರು 1.5 ಮಿಲಿಯನ್ ಜನರು ತೀವ್ರವಾದ ಮಿಟ್ರಲ್ ರಿಗರ್ಗಿಟೇಶನ್ ಅನ್ನು ಹೊಂದಿದ್ದಾರೆಂದು ತಿಳಿದು ಬಂದಿದೆ. ಈ ಪೈಕಿ ಕನಿಷ್ಠ 1.2 ಮಿಲಿಯನ್ ಜನರು ಹೃದಯ ಸ್ನಾಯುವಿನ ಊತಕ ಸಾವು (ಎಂಐ ಅಥವಾ ಹೃದಯಾಘಾತ) ಅಥವಾ ಹೃದಯ ವೈಫಲ್ಯದ ನಂತರ ಸಾವನ್ನಪ್ಪಿದ್ದಾರೆ. ಮೈಕ್ಲಿಪ್ ಸಿಸ್ಟಮ್‌ನ ಪರಿಚಯವು ಒಂದು ಪ್ರಮುಖ ಬದಲಾವಣೆಯನ್ನು ಸೂಚಿಸುತ್ತದೆ ಮತ್ತು ನಾವು ಆರಂಭಿಕ ಅಳವಡಿಕೆಗೆ ಸಾಕ್ಷಿಯಾಗುತ್ತಿದ್ದೇವೆ. ಹೃದ್ರೋಗ ತಜ್ಞರಿಗೆ ತರಬೇತಿ ನೀಡುವಲ್ಲಿ ಮತ್ತು ಟಿಇಇ-ಆಧಾರಿತ ಇಮೇಜಿಂಗ್ ಪರಿಣತಿಯನ್ನು ನಿರ್ಮಿಸುವಲ್ಲಿ ಮೆರಿಲ್ ಅವರ ಪ್ರಯತ್ನಗಳು ದೇಶಾದ್ಯಂತ ಈ ಜೀವ ಉಳಿಸುವ ಚಿಕಿತ್ಸೆಯನ್ನು ಸ್ಕೇಲಿಂಗ್ ಮಾಡುವಲ್ಲಿ ನಿರ್ಣಾಯಕ ಹಂತಗಳಾಗಿವೆ ಎಂದು ಮೆರಿಲ್ ಲೈಫ್ ಸೈನ್ಸ್‌ನ ಕಾರ್ಪೊರೇಟ್ ಕಾರ್ಯತಂತ್ರದ ಹಿರಿಯ ಉಪಾಧ್ಯಕ್ಷ ಸಂಜೀವ್ ಭಟ್ ಹೇಳಿದರು.

ಬಾರ್, ಕ್ಲಬ್‌ಗಳ ಮೇಲೆ ಖಾಕಿ ದಾಳಿ

ಬೆಂಗಳೂರು: ನಿಯಮ ಉಲ್ಲಂಘಿಸಿ ಯುವತಿಯರನ್ನು ಬಳಸಿಕೊಂಡು ತಡರಾತ್ರಿ ಅಶ್ಲೀಲ ನೃತ್ಯ ಪ್ರದರ್ಶನಕ್ಕೆ ಅವಕಾಶ ನೀಡಿದ್ದ 17ಕ್ಕೂ ಹೆಚ್ಚು ಬಾರ್, ಪಬ್, ಕ್ಲಬ್‌ಗಳ ಮೇಲೆ ನಗರ ಪೊಲೀಸರು ತಡ ರಾತ್ರಿ ದಿಢೀರ್ ದಾಳಿ ನಡೆಸಿದ್ದಾರೆ. ನಗರದ ಕ್ಲಬ್ ಒನ್, ರಂಬಾ, ಬ್ರಿಗೇಡ್ ಬ್ಲೂ ಸೇರಿದಂತೆ 17 ಕ್ಕೂ ಹೆಚ್ಚು ಡ್ಯಾನ್ಸ್ ಬಾರ್‌ಗಳ ಮೇಲೆ ದಾಳಿ ನಡೆಸಿರುವ ಪೊಲೀಸರು ಪರಿಶೀಲನೆ ಕೈಗೊಂಡಿದ್ದಾರೆ. ಅವಧಿ ಮೀರಿ ಬಾರ್ ತೆಗೆದಿರುವುದು, ಯುವತಿಯರು ಅಶ್ಲೀಲ ಬಟ್ಟೆ ತೊಟ್ಟು ಡ್ಯಾನ್ಸ್ ಸೇರಿದಂತೆ ಹಲವು ನಿಯಮಗಳ ಉಲ್ಲಂಘನೆ ಹಿನ್ನೆಲೆಯಲ್ಲಿ ಎಂ.ಜಿ. ರೋಡ್, ಬ್ರಿಗೇಡ್ ರೋಡ್, ಉಪ್ಪಾರಪೇಟೆ ಸುತ್ತಮುತ್ತ ಪೊಲೀಸರು ದಾಳಿ ನಡೆಸಿದರು. ಕೇಂದ್ರ ವಿಭಾಗ ಹಾಗೂ ಪಶ್ಚಿಮ ವಿಭಾಗದ ಡ್ಯಾನ್ಸ್ ಬಾರ್‌ಗಳ ಮೇಲೂ ದಾಳಿ ನಡೆಸಲಾಗಿದ್ದು, ಕಬ್ಬನ್‌ಪಾರ್ಕ್, ಅಶೋಕ್ ನಗರ ಸೇರಿದಂತೆ ನಗರದ ವಿವಿಧ ಠಾಣಾ ವ್ಯಾಪ್ತಿಯಲ್ಲಿ ನಿಯಮ ಉಲ್ಲಂಘಿಸಿದ ಡ್ಯಾನ್ಸ್ ಬಾರ್‌ಗಳ ಮೇಲೆ ಪ್ರಕರಣ ದಾಖಲಾಗಿದೆ. ಈ ಡ್ಯಾನ್ಸ್ ಬಾರ್‌ಗಳಲ್ಲಿ ಈಶಾನ್ಯ ರಾಜ್ಯಗಳ ಹಲವು ಯುವತಿಯರನ್ನು ಕರೆತಂದು ತಡರಾತ್ರಿ ಡ್ಯಾನ್ಸ್ ಮಾಡಿಸಲಾಗುತ್ತಿತ್ತು. ಮದ್ಯದ ಹೊಳೆ ಯಥೇಚ್ಛವಾಗಿ ಹರಿಯುತ್ತಿದ್ದು, ಇದು ಕೆಲವು ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೂ ತಿಳಿದಿದ್ದರೂ ಕ್ರಮ ತೆಗೆದುಕೊಂಡಿರಲಿಲ್ಲ ಎಂದು ಗೊತ್ತಾಗಿದೆ. ಕೆಲವು ಕಡೆ ಗುಪ್ತ ಪ್ರದೇಶಗಳಲ್ಲಿ ಅಶ್ಲೀಲ ನೃತ್ಯದ ಬಳಿಕ ಹೈಟೆಕ್ ವೇಶ್ಯಾವಾಟಿಕೆಗೂ ಅವಕಾಶ ಕಲ್ಪಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಕೇಸ್

ಬೆಂಗಳೂರು: ಮರದ ಕೊಂಬೆ ಬಿದ್ದು ಯುವಕ ಸಾವನ್ನಪ್ಪಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಬಿಎಂಪಿಯ ಅರಣ್ಯಾಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಬೆನಕ್ ರಾಜ್ ಎಂಬುವವರು ಹನುಮಂತನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರಿನ ಆಧಾರದ ಮೇಲೆ ಬಿಬಿಎಂಪಿಯ ಮೂವರು ಅರಣ್ಯಾಧಿಕಾರಿಗಳಾದ ಆರ್‌ಎಫ್‌ಒ, ಎಸಿಎಫ್, ಡಿಎಫ್‌ಒ ವಿರುದ್ಧ ದಾಖಲು ಮಾಡಲಾಗಿದೆ. ಅಧಿಕಾರಿಗಳ ನಿರ್ಲಕ್ಷ್ಯವೇ ಅಕ್ಷಯ್ ಸಾವಿಗೆ ಕಾರಣವಾಗಿದೆ. ಎ1 ಆರೋಪಿ ಆರ್‌ಎಫ್‌ಒ, ಎ2 ಆರೋಪಿ ಎಸಿಎಫ್, ಎ3 ಆರೋಪಿ ಡಿಎಫ್‌ಒ ಆಗಿದ್ದು, ಯುವಕನ ಸಾವಿಗೆ ಕಾರಣವಾಗಿರುವ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳುವಂತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯದ ಆರೋಪದ ಮೇಲೆ ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಪ್ರಕರಣದ ಆರೋಪಿಗಳಾಗಿರುವ ಬಿಬಿಎಂಪಿ ಅರಣ್ಯಾಧಿಕಾರಿಗಳಿಗೆ ಕರೆದು ವಿಚಾರಣೆ ಮಾಡಲು ಪೊಲೀಸರು ಮುಂದಾಗಿದ್ದಾರೆ.

ಘಟನೆ ಏನು?: ಜೂ.15ರಂದು ಯುವಕ ಅಕ್ಷಯ್ ದ್ವಿಚಕ್ರ ವಾಹನದಲ್ಲಿ ಚಲಿಸುತ್ತಿದ್ದಾಗಲೇ ಮರದ ಕೊಂಬೆ ಬಿದ್ದು ಬಸವನಗುಡಿಯ ಬ್ರಹ್ಮ ಚೈತನ್ಯ ಮಂದಿರದ ಬಳಿ ಸವಾರ ಗಂಭೀರವಾಗಿ ಗಾಯಗೊಂಡಿದ್ದರು. ಎರಡು ದಿನದ ಹಿಂದೆಯಷ್ಟೇ ಅಕ್ಷಯ್ ಬ್ರೈನ್ ಡೆಡ್ ಆಗಿದೆ ಎಂದಿದ್ದರು. ಆದರೆ ಜೂ.19 ಸಾವನ್ನಪ್ಪಿರುವುದಾಗಿ ವೈದ್ಯರು ದೃಢಪಡಿಸಿದ್ದರು.

7ನೇ ಗ್ರಿಹ ಪ್ರಾದೇಶಿಕ ಸಮಾವೇಶದಲ್ಲಿ ಸಚಿವ ದಿನೇಶ್ ಗುಂಡೂರಾವ್ ಅಭಿಮತ

ಭವಿಷ್ಯದ ಪೀಳಿಗೆಗೆ ಉತ್ತಮ ಪರಿಸರ ಕಾಪಾಡೋಣ

ಬೆಂಗಳೂರು: ಹೆಚ್ಚುತ್ತಿರುವ ಪರಿಸರ ಸವಾಲುಗಳಿಗೆ ಸುಸ್ಥಿರ ಪರಿಹಾರ ಕಂಡುಕೊಳ್ಳುವ ಮೂಲಕ ಭವಿಷ್ಯದ ಪೀಳಿಗೆಗೆ ಉತ್ತಮ ಪರಿಸರ ಕಾಪಾಡೋಣ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

> **ಬೆಂಗಳೂರು ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದ್ದು, ಈ ಬೆಳವಣಿಗೆಯೊಂದಿಗೆ ಪರಿಸರ ಸವಾಲುಗಳೂ ಹೆಚ್ಚಾಗುತ್ತಿವೆ. ಜಲಸಂಕಷ್ಟ, ತ್ಯಾಜ್ಯ ನಿರ್ವಹಣೆ ಮತ್ತು ಸಂಚಾರ ದಟ್ಟಣೆ ಇವು ನಮ್ಮ ನಗರ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಾಗಿದ್ದು, ಈ ಸಮಸ್ಯೆಗಳಿಗೆ ಸುಸ್ಥಿರ ಪರಿಹಾರಗಳನ್ನು ಚರ್ಚಿಸಲು ಮತ್ತು ಕಾರ್ಯರೂಪಕ್ಕೆ ತರಲು ಎಲ್ಲರೂ ಕೈಜೋಡಿಸಬೇಕು.**
> **-ದಿನೇಶ್ ಗುಂಡೂರಾವ್**, ಆರೋಗ್ಯ ಸಚಿವ

ನಗರದ ರಾಡಿಸನ್ ಬ್ಲೂ ಏಟ್ರಿಯಾ ಹೋಟೆಲ್‌ನಲ್ಲಿ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ಮತ್ತು ಇಂಧನ ಮತ್ತು ಸಂಪನ್ಮೂಲ ಸಂಸ್ಥೆ ಸಹಯೋಗದೊಂದಿಗೆ ನಡೆದ 7ನೇ ಗ್ರಿಹ ಪ್ರಾದೇಶಿಕ ಸಮಾವೇಶದಲ್ಲಿ ಮಾತನಾಡಿದ ಅವರು, ಈ ಸಮಾವೇಶವು ಹಸಿರು ಕಟ್ಟಡಗಳ ನಿರ್ಮಾಣ ಮತ್ತು ಸುಸ್ಥಿರ ಜೀವನಶೈಲಿ ಉತ್ತೇಜಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಇದು ಹವಾಮಾನ ಬದಲಾವಣೆಯ ಸವಾಲುಗಳನ್ನು ಎದುರಿಸಲು ನಾವೀನ್ಯಪೂರ್ಣ ಪರಿಹಾರಗಳನ್ನು ಕಂಡು ಕೊಳ್ಳಲು ಒಂದು ಪ್ರಮುಖ ವೇದಿಕೆಯಾಗಿದೆ. ಹವಾಮಾನ ಬದಲಾವಣೆಯ ಪ್ರಭಾವವು ನಮ್ಮ ಜನರ ಮೇಲೂ ಭಾರಿ ಪರಿಣಾಮ ಬೀರುತ್ತದೆ. ಆಗಾಗಿ ನಾವು ಹೇಗೆ ಸಮತೋಲನ ಕಂಡು ಕೊಳ್ಳಬೇಕು, ಜಲಸಂಕಷ್ಟ, ತ್ಯಾಜ್ಯ ನಿರ್ವಹಣೆ ಮತ್ತು ಸಂಚಾರ ದಟ್ಟಣೆ ಇವು ನಮ್ಮ ನಗರ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಾಗಿದ್ದು, ಈ ಸಮಸ್ಯೆಗಳಿಗೆ ಸುಸ್ಥಿರ ಪರಿಹಾರಗಳನ್ನು ಚರ್ಚಿಸಲು ಮತ್ತು ಕಾರ್ಯರೂಪಕ್ಕೆ ತರಲು ಸಹಕಾರಿಯಾಗಲಿದೆ ಎಂದರು. ನಾವು ಹಸಿರು ತಂತ್ರಜ್ಞಾನಗಳು, ನವೀಕರಿಸಬಹುದಾದ ಇಂಧನ ಮೂಲಗಳು ಮತ್ತು ಪರಿಸರ ಸ್ನೇಹಿ ನಿರ್ಮಾಣ ವಿಧಾನಗಳನ್ನು ಪ್ರೋತ್ಸಾಹಿಸಲು ಬದ್ಧವಾಗಿದ್ದೇವೆ, ಕಟ್ಟಡ ನಿರ್ಮಾಣದಲ್ಲಿ ಸುಸ್ಥಿರ ಅಭ್ಯಾಸ ಅಳವಡಿಸಿ ಕೊಳ್ಳುವುದು ಕೇವಲ ಪರಿಸರ ಸಂರಕ್ಷಣೆಗಾಗಿ ಮಾತ್ರವಲ್ಲ, ಅದು ಆರ್ಥಿಕವಾಗಿಯೂ ಲಾಭದಾಯಕವಾಗಿದೆ.

ಹಸಿರು ಕಟ್ಟಡಗಳು ಇಂಧನ ಉಳಿತಾಯಕ್ಕೆ, ನೀರಿನ ದಕ್ಷ ಬಳಕೆಗೆ ಮತ್ತು ಉತ್ತಮ ಜೀವನ ಗುಣಮಟ್ಟಕ್ಕೆ ಕೊಡುಗೆ ನೀಡುತ್ತವೆ. ಹವಾಮಾನ ಸ್ಥಿತಿಸ್ಥಾಪಕತ್ವವುಳ್ಳ ವಿಶ್ವಕ್ಕಾಗಿ ನಾವೀನ್ಯತೆಯಿಂದ ಕಾರ್ಯನಿರ್ವಹಿಸುವುದು ಎಂಬ ಸಮಾವೇಶದ ಘೋಷ ವಾಕ್ಯ ಅತ್ಯಂತ ಪ್ರಸ್ತುತವಾಗಿದೆ. ಸುಸ್ಥಿರ ಅಭಿವೃದ್ಧಿಯ ಗುರಿ ಸಾಧಿಸಲು ಮತ್ತು ಭವಿಷ್ಯದ ಪೀಳಿಗೆಗೆ ಉತ್ತಮ ಪರಿಸರ ಕಾಪಾಡಿಕೊಳ್ಳಲು ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕಿದೆ ಎಂದರು.

ನಗರದ ರಾಡಿಸನ್ ಬ್ಲೂ ಏಟ್ರಿಯಾ ಹೋಟೆಲ್‌ನಲ್ಲಿ ನಡೆದ 7ನೇ ಗ್ರಿಹ ಪ್ರಾದೇಶಿಕ ಸಮಾವೇಶವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು.

ಅರ್ಜಿ ಸಂಖ್ಯೆ ಯುಆರ್‌ಸಿ–2

ಭಾಗ–1ರ ಅಧ್ಯಾಯ 21ರಡಿ ನೋಂದಣಿ ಬಗ್ಗೆ ಸೂಚನೆ ನೀಡುವ ಬಗ್ಗೆ ಜಾಹೀರಾತು [ಸೆಕ್ಷನ್ 374(ಬಿ)ರ ಕಂಪನಿ ಕಾಯಿದೆ, 2013ರ ನಿಯಮ 4(1)ರ ಕಂಪನಿಗಳಿಗೆ ಸಂಬಂಧಪಟ್ಟಂತೆ (ಅಧಿಕೃತ ನೋಂದಣಿಯಾಗಲು) ನಿಯಮಗಳು, 2014]

1, ಈ ಮೂಲಕ ಸೂಚಿಸುವುದೇನೆಂದರೆ, ಷೇರುಗಳಿಂದ ನಿಯಮಿತವಾದ ಕಂಪನಿಯನ್ನಾಗಿ ಕಂಪನಿಗಳ ಕಾಯ್ದೆ 2013ರ ಚಾಪ್ಟರ್ 21ರ ಭಾಗ 1ರ ಅಡಿಯಲ್ಲಿ **ಮೆ॥ "ಯೋಟೆಕ್ ಸಿಸ್ಟಮ್ಸ್ ಎಲ್‌ಎಲ್‌ಪಿ** (ಎಲ್‌ಎಲ್‌ಪಿಐಎನ್ ;ಎಎಕ್ಯೂ–0567)"ಅನ್ನು ಇಂದಿನಿಂದ ಹದಿನೈದು ದಿನಗಳ ನಂತರ ಹಾಗೂ ಮೂವತ್ತು ದಿನಗಳ ಒಳಗಾಗಿ ನೋಂದಣಿ ಮಾಡಬಹುದು ಎಂಬುದಾಗಿ ಬೆಂಗಳೂರಿನಲ್ಲಿನ **ರಿಜಿಸ್ಟ್ರಾರ್ ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೋರೇಟ್ ಅಫೇರ್ಸ್(ಐಐಸಿಎ), ಪ್ಲಾಟ್ ನಂ.6,7,8 ಸೆಕ್ಟರ್–5, ಐಎಂಟಿ ಮಾನೇಸರ್, ಜಿಲ್ಲೆ, –ಗುರಗಾಂವ್ (ಹರ್ಯಾಣ), ಪಿನ್ ಕೋಡ್ – 122050 ಇವರಿಗೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 366 ಉಪಪ್ರಕರಣ(2)ರ ಅನುಸಾರ ರಿಜಿಸ್ಟ್ರಾರ್** ಅರ್ಜಿಯೊಂದನ್ನು ಸಲ್ಲಿಸಲು ಉದ್ದೇಶಿಸಲಾಗಿದೆ.

2. ಕಂಪನಿಯ ಮುಖ್ಯ ಉದ್ದೇಶಗಳು ಈ ರೀತಿಯಾಗಿವೆ,

I.ರಚನೆ, ಅಭಿವೃದ್ಧಿ, ತಯಾರಿಕೆ, ಜೋಡಣೆ, ಪರೀಕ್ಷೆ, ಪೂರೈಕೆ, ಸ್ಥಾಪನೆ, ನಿರ್ವಹಣೆ ಮತ್ತು ಸೇವೆಗಳನ್ನು ಒದಗಿಸುವ ಮೂಕ ಎಲೆಕ್ಟ್ರಾನಿಕ್ಸ್ ವ್ಯವಸ್ಥೆಗಳು, ಎಂಬೆಡೆಡ್ ಸಾಫ್ಟ್‌ವೇರ್, ಮೆಕಾನಿಕಲ್ ಸಿಸ್ಟಮ್‌ಗಳು ಮತ್ತು ವಾಯುಯಾನ ಉಪಕರಣಗಳನ್ನು ರಕ್ಷಣಾ ವಾಯುಯಾನ ಕೈಗಾರಿಕಾ ಮತ್ತು ಇತರ ಸಂಬಂಧಿತ ಕ್ಷೇತ್ರಗಳಲ್ಲಿ ಅನ್ವಯಿಸಲು ರೂಪಿಸುವುದು,

II.ಎಲೆಕ್ಟ್ರಾನಿಕ್ಸ್ ಎಂಬೆಡೆಡ್ ಸಾಫ್ಟ್‌ವೇರ್ ಮೆಕಾನಿಕಲ್ ಸಿಸ್ಟಮ್‌ಗಳು ಮತ್ತು ಏರೋನಾಟಿಕಲ್ ಇಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಸಲಹೆ ತಾಂತ್ರಿಕ ಬೆಂಬಲ, ತರಬೇತಿ ಮತ್ತು ನಿರ್ವಹಣೆ ಸೇವೆಗಳನ್ನು ಒದಗಿಸುವುದು.

III.ತಾಂತ್ರಿಕ ಪರಿಹಾರಗಳ ಪೂರೈಕೆ, ಏಕೀಕರಣ ಮತ್ತು ಅಳವಡಿಕೆಗೆ ಸಂಬಂದಿಸಿದಂತೆ ಸರ್ಕಾರಿ ಅರೆ ಸರ್ಕಾರಿ, ಖಾಸಗಿ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೆ ಒಪ್ಪಂದಗಳು, ಗುತ್ತಿಗೆಗಳು, ಜಂಟಿ ಉಪಕ್ರಮಗಳು, ಸಹಕಾರಗಳು, ತಂತ್ರಜ್ಞಾನ ವರ್ಗಾವಣೆಗಳು ಮತ್ತು ವ್ಯೂಹಾತ್ಮಕ ಪಾಲುದಾರಿಕೆಗಳನ್ನು ನಡೆಸುವುದು.

IV ಎಲೆಕ್ಟ್ರಾನಿಕ್, ಮೆಕ್ಯಾನಿಕಲ್ ಮತ್ತು ಏರೋನಾಟಿಕಲ್ ಘಟಕಗಳನ್ನು ಅತ್ಯುತ್ತಮವಾಗಿ ತಯಾರಿಸಲು ಉತ್ಪಾದನೆ, ಪರೀಕ್ಷೆ, ಮತ್ತು ರಚಿಸುವ ಸೌಲಭ್ಯಗಳನ್ನು ಸ್ಥಾಪಿಸುವುದು ಖರೀದಿ, ಬಾಡಿಗೆ ಅಥವಾ ನಿರ್ವಹಣೆ ಮಾಡುವ ಮೂಲಕ ಕೈಗಾರಿಕೆ ಗುಣಮಟ್ಟಗಳು, ನಿಯಂತ್ರಣ ಅಗತ್ಯಗಳು ಮತ್ತು ಜಾಗತಿಕ ಉತ್ತಮ ಅಭ್ಯಾಸಗಳನ್ನು ಅನುಸರಿಸುವುದು..

3. ಪ್ರಸ್ತಾವಿತ ಕಂಪನಿಯ ಕರಡು ಪತ್ರ ಮತ್ತು ನಿರ್ಧರಿತ ಆರ್ಟಿಕಲ್ ಆಫ್ ಅಸೋಸಿಯೇಶನ್‌ನ ನಕಲನ್ನು ನಂ.114/ಸಿ, 6ನೇ ಮುಖ್ಯ ರಸ್ತೆ, ತುಮಕೂರು ಮೈನ್ ರೋಡ್, ಯಶವಂತಪುರ ಇಂಡಸ್ಟ್ರಿಯಲ್ ಸಬ್‌ಅರ್ಬ್, 2ನೇ ಹಂತ, ಪೀಣ್ಯ ಮೆಟ್ರೊ ಸ್ಟೇಷನ್ ಎದುರು, ಬೆಂಗಳೂರು–560022, ಇಲ್ಲಿ ಪರಿಶೀಲಿಸಬಹುದಾಗಿದೆ.

4. ಈ ಅರ್ಜಿಯನ್ನು ಆಕ್ಷೇಪಿಸುವ ಯಾವುದೇ ವ್ಯಕ್ತಿಯು ತಮ್ಮ ಆಕ್ಷೇಪಣೆಯನ್ನು **ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಷನ್ ಸೆಂಟರ್ (ಸಿಆರ್‌ಸಿ) ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೋರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ.6,7,8, ಸೆಕ್ಟರ್–5, ಐಎಂಟಿ ಮಾನೇಸರ್, ಜಿಲ್ಲೆ–ಗುರುಗಾಂವ್(ಹರ್ಯಾಣ), ಪಿನ್ ಕೋಡ್–122050** ಈ ವಿಳಾಸಕ್ಕೆ ಈ ಸೂಚನೆ ಪ್ರಕಟವಾದ 21 ದಿನಗಳ ಒಳಗಾಗಿ ಲಿಖಿತ ಮೂಲಕ ಹಾಗೂ ಒಂದು ಪ್ರತಿಯನ್ನು ನೋಂದಾಯಿತ ಕಚೇರಿಗೆ ಕಳುಹಿಸಬಹುದಾಗಿದೆ.

ಅರ್ಜಿದಾರ(ರ) ಹೆಸರು
ಯೋಟೆಕ್ ಸಿಸ್ಟಮ್ಸ್ ಎಲ್‌ಎಲ್‌ಪಿ ರವರ ಪರವಾಗಿ
ಸಹಿ/–
ಬಿಮಲ್ ಕುಮಾರ್ ಚಂದಮಲ್ ಜೈನ್
(ಪದೋನ್ನತ ಪಾಲುದಾರರು)
ಸಿದ್ದಾರ್ಥ್ ಬಿಮಲ್ ಜೈನ್
(ಪದೋನ್ನತ ಪಾಲುದಾರರು)
ದಿನಾಂಕ: 21.06.2025. **ಸ್ಥಳ: ಬೆಂಗಳೂರು**

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 621/2024

ಅರ್ಜಿದಾರರು: ಶಿವಣ್ಣ ಬಿನ್ ಲೇಟ್ ದೊಡ್ಡಲಿಂಗೇಗೌಡ ವಯಸ್ಸು 70 ವರ್ಷ ವಿಳಾಸ: ಶೆಟ್ಟಿಕೆರೆದೊಡ್ಡಿ ಗ್ರಾಮ ಮುಳ್ಳಹಳ್ಳಿ ಅಂಚೆ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಮಾನ್ಯ ತಹಶೀಲ್ದಾರ್ ರವರು ಜನನ ಮತ್ತು ಮರಣ ನೊಂದಣಿ ಇಲಾಖೆ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ –562117 2. ಗ್ರಾಮಲೆಕ್ಕಾಧಿಕಾರಿ, ಶೆಟ್ಟಿಕೆರೆದೊಡ್ಡಿ ಗ್ರಾಮ ಹೂಕುಂದ ವೃತ್ತ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 5ನೇ ಅರ್ಜಿದಾರರ ತಂದೆಯಾದ ಶ್ರೀ ದೊಡ್ಡಲಿಂಗೇಗೌಡ ಬಿನ್ ಲೇಟ್ ಜವನೇಗೌಡ ರವರು, ಇದೇ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಶೆಟ್ಟಿಕೆರೆದೊಡ್ಡಿ ಗ್ರಾಮದಲ್ಲಿ ದಿನಾಂಕ 07.08.1980 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ನ್ಯಾಯಾಲಯದ ಆದೇಶವನ್ನು ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾವುದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂ–ದರೆ, ದಿನಾಂಕ 31/07/2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ 17–06–2025 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಶ್ರೀ ಗೋಪಾಲ್.ಕೆ
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 17–06–2025

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 353/2025

ಅರ್ಜಿದಾರರು: 1. ಶ್ರೀಮತಿ ಪಾರ್ವತಮ್ಮ ಕೋಂ ಲೇಟ್ ಚನ್ನಿಗೇಗೌಡ ವಯಸ್ಸು 82 ವರ್ಷ ವಾಸ: ಹೊರಳಗಲ್ಲು ಗ್ರಾಮ & ಅಂಚೆ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು

ವಿರುದ್ಧ

ಎದುರುದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ಹೊರಳಗಲ್ಲು ವೃತ್ತ, ಹೊರಳಗಲ್ಲು ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಮಾವ, ಮತ್ತು 2 ರಿಂದ 5ನೇ ಅರ್ಜಿದಾರರ ತಾತನವರಾದ ಶ್ರೀ ಚಲುವೇಗೌಡ ಬಿನ್ ಲೇಟ್ ಪಿಳ್ಳೇಗೌಡ ರವರು, ದಿನಾಂಕ 10.09.1984 ರಂದು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಹೊರಳಗಲ್ಲು ಅಂಚೆ, ಹೊರಳಗಲ್ಲು ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 28.07.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 17ನೇ ಜೂನ್ 2025 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಸಿ.ಎಂ.ಜಗದೀಶ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ:17–06–2025

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಂತಾರಾಷ್ಟ್ರೀಯ ಯೋಗ ದಿನ

ಗಿನ್ನೆಸ್ ದಾಖಲೆಗೆ ಸಜ್ಜು

ಅಂತಾರಾಷ್ಟ್ರೀಯ ಯೋಗದಿನದ ಅಂಗವಾಗಿ ಆಂಧ್ರ ಪ್ರದೇಶ ಸರಕಾರ 3 ಲಕ್ಷಕ್ಕೂ ಹೆಚ್ಚು ಯೋಗಪಟುಗಳನ್ನು ಒಳಗೊಂಡ ಯೋಗ ಕವಾಯತು ಹಮ್ಮಿಕೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಗಿನ್ನಿಸ್ ದಾಖಲೆಯ ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಸೊಂಪಾದ ಪುಟಗಳು

ತುರ್ತು ಪರಿಸ್ಥಿತಿಯಲ್ಲಿ ಆರೆಸ್ಸೆಸ್ ಹೋರಾಟ
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ 6

ನಿಮಗೆ ಸಂಧಿರೋಗ ಯಾಕೆ ಬಂತು ಗೊತ್ತೇ?
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ 7

ದಾರಿದೀಪೋಕ್ತಿ

ನಿಮ್ಮ ಮೊಬೈಲ್ ಫೋನ್ ಈಗಾಗಲೇ ನಿಮ್ಮ ವಾಚ್, ಕ್ಯಾಮೆರಾ, ಕ್ಯಾಲೆಂಡರ್, ಅಲಾರಾಮ್, ಡೈರಿಗಳನ್ನು ಕಿತ್ತುಕೊಂಡಿದೆ. ಅದು ನಿಮಗೆ ಗೊತ್ತಿಲ್ಲದೇ ನಿಮ್ಮ ಕುಟುಂಬವನ್ನೂ ಕಿತ್ತುಕೊಳ್ಳಬಹುದು. ಯಾವ ಕಾರಣಕ್ಕೂ ಅದನ್ನು ಕಿತ್ತುಕೊಳ್ಳಲು ಅವಕಾಶ ನೀಡಬಾರದು. ಈ ವಿಷಯದಲ್ಲಿ ಎಚ್ಚರದಿಂದ ಇರಬೇಕು.

ವಕ್ರತುಂಡೋಕ್ತಿ

ಕೆಲವು ಸಲ ನಿಮಗೆ ಆಮಂತ್ರಣ ಪತ್ರಿಕೆ ಬಂದಿರಬಹುದು. ಅಷ್ಟಕ್ಕೇ ನಿಮ್ಮನ್ನು ಆಹ್ವಾನಿಸಿದ್ದಾರೆ ಎಂದರ್ಥವಲ್ಲ.

ಫನ್‌ತರಂಗ

- ರಘುಪತಿ ಶೃಂಗೇರಿ -



ಭಾರತದ ವಿಮಾನ ಇಳಿಯಲು ಅವಕಾಶ ಮಾಡಿಕೊಟ್ಟ ಇರಾನ್

ಸಾವಿರ ವಿದ್ಯಾರ್ಥಿಗಳ ರಕ್ಷಣೆ

ಟೆಹರಾನ್: ಇರಾನ್ ಹಾಗೂ ಇಸ್ರೇಲ್ ನಡುವೆ ಉಲ್ಬಣಿಸಿರುವ ಸಂಘರ್ಷ ಎರಡನೇ ವಾರಕ್ಕೆ ಕಾಲಿಟ್ಟಿದ್ದು, ದಾಳಿ ಪ್ರತಿದಾಳಿಗಳು ತೀವ್ರ ಗೊಂಡಿವೆ. ಈ ನಡುವೆ ಇರಾನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಕರೆತರಲು ಕೇಂದ್ರ ಸರಕಾರ ವಿಶೇಷ ವಿಮಾನವನ್ನು ಕಳುಹಿಸಿದೆ.

ವಿದ್ಯಾರ್ಥಿಗಳನ್ನು ಸ್ಥಳಾಂತರಿಸಲು ಇರಾನ್, ಭಾರತೀಯ ವಿಮಾನಗಳಿಗೆ ಮಾತ್ರ ತನ್ನ ವಾಯುಪ್ರದೇಶವನ್ನು ಮುಕ್ತಗೊಳಿ ಸಿದೆ. ಇರಾನ್‌ನಿಂದ ಮೂರು ವಿಶೇಷ ವಿಮಾನಗಳು ಸುಮಾರು 1,000 ಭಾರತೀಯರನ್ನು ಸಾಗಿಸಲಿದ್ದು, ಮೊದಲ ವಿಮಾನ ಶುಕ್ರವಾರ ರಾತ್ರಿ ಭಾರತಕ್ಕೆ ಆಗಮಿಸಿದೆ. ಉಳಿದ ಎರಡು ವಿಮಾನಗಳು ಶನಿವಾರ ಮಧ್ಯಾಹ್ನ ಬಂದಿಳಿಯುವ ಇಳಿಯುವ ನಿರೀಕ್ಷೆಯಿದೆ. ಅಗತ್ಯವಿದ್ದರೆ ಹೆಚ್ಚಿನ ವಿಮಾನಗಳನ್ನು ಆಯೋಜಿ ಸಲಾಗುವುದು ಎಂದು ಇರಾನಿನ ಅಧಿಕಾರಿಗಳು ಹೇಳಿದ್ದಾರೆ.

ಆಪರೇಷನ್ ಸಿಂಧು ಮೂಲಕ ಇರಾನ್‌ನಲ್ಲಿರುವ ಭಾರತೀಯರನ್ನು ಕರೆತರಲಾಗುತ್ತಿದೆ. ಇರಾನ್‌ನಿಂದ ಬರಲು ಬಯಸುವ ಭಾರತೀಯರಿಗಾಗಿ ನಾವು ಈ ಚಾರ್ಟರ್ಡ್ ವಿಮಾನಗಳನ್ನು ನಿಗದಿಪಡಿಸಿದ್ದೇವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಇರಾನ್‌ನಲ್ಲಿ ಸುಮಾರು 10,000 ಭಾರತೀಯರಿದ್ದು, ಅದರಲ್ಲಿ ಸುಮಾರು 1,500–2,000 ವಿದ್ಯಾರ್ಥಿಗಳು ಮತ್ತು 6,000ಕ್ಕೂ ಅಧಿಕ ಜನರು ಅಲ್ಲಿಯೇ ಕೆಲಸ ಮಾಡುತ್ತಿದ್ದಾರೆ. ಇರಾನ್‌ನಲ್ಲಿರುವ ಎಲ್ಲ ಭಾರತೀಯರು ಸುರಕ್ಷಿತವಾಗಿದ್ದಾರೆ ಎಂದು ತಿಳಿದು ಬಂದಿದೆ.

ಕ್ಷಿಪಣಿಗಳ ದಾಳಿ, ಅವ್ಯಾಹತ ಹಾನಿ: ಶುಕ್ರವಾರವೂ ಇಸ್ರೇಲ್ ಮತ್ತು ಇರಾನ್ ಪರಸ್ಪರದ ನೆಲೆಗಳನ್ನು ಗುರಿಯಾಗಿಸಿ ಕ್ಷಿಪಣಿಗಳ ದಾಳಿ ನಡೆಸಿದ್ದು ಉಭಯ ಕಡೆಗಳಲ್ಲೂ ತೀವ್ರತರನಾದ ಹಾನಿಗಳಾಗಿವೆ. ಇರಾನ್‌ನ ಕೈಗಾರಿಕಾ ವಲಯದ ಕ್ಷಿಪಣಿ ತಯಾರಿಕಾ ಘಟಕದ ಮೇಲೆ 60ಕ್ಕೂ ಹೆಚ್ಚು ವಿಮಾನ ಬಳಸಿ ದಾಳಿ ನಡೆಸಿದ್ದಾಗಿ ಇಸ್ರೇಲ್ ಹೇಳಿದೆ. ಇತ್ತ ಇರಾನ್‌ನ ಕ್ಷಿಪಣಿ ದಾಳಿಯಿಂದಾಗಿ ಇಸ್ರೇಲ್‌ನಲ್ಲಿ ಹಲವು ವಸತಿ ಕಟ್ಟಡಗಳಿಗೆ ಹಾನಿಯಾಗಿದೆ. ವಾಷಿಂಗ್ಟನ್ ಮೂಲದ ಮಾನವ ಹಕ್ಕುಗಳ ಸಂಘಟನೆಯ ಪ್ರಕಾರ, ಇರಾನ್‌ನಲ್ಲಿ 263 ನಾಗರಿಕರು ಸೇರಿ 657 ಜನರು ಹತರಾಗಿದ್ದಾರೆ. 2 ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಪ್ರತೀಕಾರವಾಗಿ ಇರಾನ್ ಸುಮಾರು 450 ಕ್ಷಿಪಣಿಗಳು, 1000 ಡ್ರೋನ್‌ಗಳನ್ನು ಪ್ರಯೋಗಿಸಿದೆ. ಹೆಚ್ಚಿನ ಕ್ಷಿಪಣಿಗಳ ತಡೆದುರುಳಿಸಲಾಗಿದೆ. ದಾಳಿಯಿಂದ ಇಸ್ರೇಲ್‌ನಲ್ಲಿ 24 ಜನರು ಸತ್ತಿದ್ದು, ನೂರಾರು ಜನರು ಗಾಯಗೊಂಡಿದ್ದಾರೆ.

ಅಣು ಸ್ಥಾವರದ ಮೇಲೆ ಇಸ್ರೇಲ್ ದಾಳಿ: ಇರಾನ್‌ನ ಪರಮಾಣು ಶಸ್ತ್ರಾಸ್ತ್ರಗಳ ಅಭಿವೃದ್ಧಿ ಕೇಂದ್ರ, ಎನ್ನಲಾಗುವ ರಕ್ಷಣಾತ್ಮಕ ನಾವೀನ್ಯತೆ ಮತ್ತು ಸಂಶೋಧನಾ ಸಂಸ್ಥೆ ಸೇರಿದಂತೆ ವಿವಿಧ ಸೇನಾ ನೆಲೆಗಳ ಮೇಲೆ ಗುರುವಾರ ರಾತ್ರಿ ಇಡೀ ದಾಳಿ ನಡೆಸಲಾಗಿದೆ. ಇರಾನ್ ರಾಜಧಾನಿ ಟೆಹರಾನ್‌ನತ್ತ ರಾತ್ರಿಯಿಡೀ ನಡೆಸಿದ ದಾಳಿ ಮುಕ್ತಾಯವಾಗಿದೆ ಎಂದು ಇಸ್ರೇಲ್ ಸೇನೆ ಹೇಳಿಕೊಂಡಿದೆ. ಆದರೆ ಇಸ್ರೇಲ್ ನಡೆಸಿರುವ ದಾಳಿ ವೇಳೆ ಬುಶೆಹ್ರ್ ಅಣು ಸ್ಥಾವರಕ್ಕೆ ಯಾವುದೇ ರೀತಿಯ ಹಾನಿಯಾಗಿಲ್ಲ ಎಂದು ಇರಾನ್ ಹೇಳಿ ಕೊಂಡಿದೆ. ಈ ನಡುವೆ ಟೆಲ್ ಅವಿವ್‌ನಲ್ಲಿರುವ ನಾರ್ವೆ ರಾಯಭಾರಿಯ ನಿವಾಸದ ಮೇಲೆ ಗ್ರೆನೇಡ್ ದಾಳಿ ನಡೆದಿದೆ. ಇರಾನ್ ಯುದ್ಧದ ನಡುವೆಯೇ ಇಸ್ರೇಲ್ ಗಾಜಾ ಮೇಲೆ ದಾಳಿ ನಡೆಸಿದ್ದು 80ಕ್ಕೂ ಹೆಚ್ಚು ಪ್ಯಾಲೆಸ್ತೀನಿಯರು ಮೃತಪಟ್ಟಿದ್ದಾರೆ.

ಸಂಘರ್ಷಪೀಡಿತ ಇಸ್ರೇಲ್‌ನಿಂದ ವಾಪಸ್ ಬಂದಿರುವ ಕನ್ನಡಿಗರು ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಧನ್ಯವಾದ ಸಲ್ಲಿಸಿದರು.

> ಭವಿಷ್ಯದಲ್ಲಿ ಇರಾನ್ ಜತೆಗೆ ಸಂಧಾನ ಮಾತುಕತೆ ಅಸಾಧ್ಯ ಎಂಬ ಅಂಶವನ್ನು ಆಧರಿಸಿ ಸೇನಾ ದಾಳಿಯಲ್ಲಿ ಅಮೆರಿಕ ನೇರವಾಗಿ ಭಾಗವಹಿಸುವ ಕುರಿತು 2 ವಾರದಲ್ಲಿ ನಿರ್ಧರಿಸುತ್ತೇನೆ.
> **ಡೊನಾಲ್ಡ್ ಟ್ರಂಪ್** ಅಧ್ಯಕ್ಷ ಅಮೆರಿಕ

> ಇಸ್ರೇಲ್ ವಾಯುದಾಳಿ ನಿಲ್ಲಿಸುವವರೆಗೂ ಯಾರೊಂದಿಗೂ ಮಾತುಕತೆ ನಡೆಸುವುದಿಲ್ಲ. ಅಮೆರಿಕ ಈಗಾಗಲೇ ಇಸ್ರೇಲ್ ಜತೆ ಕೈಜೋಡಿಸಿದೆ. ಇರಾನ್ ಬಗ್ಗೆ ಮಾತನಾಡುವಾಗ ಟ್ರಂಪ್ 'ನಾವು' ಎಂದೇ ಬಳಸುತ್ತಿದ್ದಾರೆ.
> **-ಅಬ್ಬಾಸ್ ಅರಾಘ್ಚಿ** ಇರಾನ್‌ನ ವಿದೇಶಾಂಗ ಸಚಿವ

ಸಂಘರ್ಷ ಶಮನಕ್ಕೆ ಯತ್ನ

ಇರಾನ್ ಮತ್ತು ಇಸ್ರೇಲ್ ನಡುವಣ ಸಂಘರ್ಷ ತೀವ್ರಗೊಳ್ಳುತ್ತಿರುವ ನಡುವೆಯೇ ಉಭಯ ದೇಶಗಳ ನಡುವಣ ಉದ್ವಿಗ್ನ ಶಮನಗೊಳಿಸುವ ಯತ್ನಗಳೂ ಚುರುಕು ಪಡೆದಿವೆ. ಸಂಘರ್ಷ ಶಮನ ಕುರಿತು ಮಾತುಕತೆ ಜಿನೀವಾದಲ್ಲಿ ನಡೆಯಲಿದೆ. ಇದರಲ್ಲಿ ಭಾಗವಹಿಸಲು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ತೆರಳಿದ್ದಾರೆ. ಐರೋಪ್ಯ ಒಕ್ಕೂಟದ ಹಿರಿಯ ರಾಜತಾಂತ್ರಿಕರು, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿಯ ವಿದೇಶಾಂಗ ಸಚಿವರೂ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಅರಾಘ್ಚಿ ಭಾಗವಹಿಸುವಿಕೆಯನ್ನು ಇರಾನ್ ದೃಢಪಡಿಸಿದೆ. ಈ ಮಧ್ಯೆ, ಬಿಕ್ಕಟ್ಟು ಶಮನದ ರಾಜಿಸೂತ್ರ ಕುರಿತು ಶ್ವೇತಭವನದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ, ರಾಯಭಾರಿ ಸ್ಟೀವ್ ವಿಟ್ಕಾಫ್ ಜತೆ ಚರ್ಚಿಸಿದ್ದಾಗಿ ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ತಿಳಿಸಿದ್ದಾರೆ.

- ಇಸ್ರೇಲ್ ಕ್ಷಿಪಣಿ ದಾಳಿಯಿಂದ ಇರಾನ್‌ನ ಅರಾಕ್ ಹೆವಿ ವಾಟರ್ ರಿಯಾಕ್ಟರ್ ಘಟಕಕ್ಕೆ ತೀವ್ರ ಹಾನಿ
- ಇಸ್ರೇಲ್ ದಕ್ಷಿಣ ಭಾಗದ ಪ್ರಮುಖ ಆಸ್ಪತ್ರೆ ಮೇಲೆ ಇರಾನ್ ನಡೆಸಿದ ಕ್ಷಿಪಣಿ ದಾಳಿಯಲ್ಲಿ 200ಗೆ ಮಂದಿಗೆ ಗಾಯ
- ಬಲ್ಗೇರಿಯಾ ಇಸ್ರೇಲ್‌ನಿಂದ 80 ಪ್ರಜೆಗಳನ್ನು ಕರೆಸಿಕೊಂಡಿದೆ. ಚೀನಾ ಇಸ್ರೇಲ್‌ನಿಂದ 1600, ಇರಾನ್‌ನಿಂದ ನೂರಾರು ಪ್ರಜೆಗಳನ್ನು ವಾಪಸು ಕರೆಸಿದೆ

ವಸತಿ ಯೋಜನೆಯಲ್ಲಿ ಲಂಚದ ದೂರು ಜಮೀರ್ ಅಹಮದ್ ರಾಜೀನಾಮೆಗೆ ಒತ್ತಡ

ಬಿಆರ್‌ಪಿ ಆಡಿಯೋ ಬಾಂಬ್: ಕೈಪಡೆ ತಲ್ಲಣ

ಬೆಂಗಳೂರು: ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಹಾಗೂ ಕಾಂಗ್ರೆಸ್ ಶಾಸಕ ಬಿ.ಆರ್.ಪಾಟೀಲ್ ವಸತಿ ಇಲಾಖೆ ಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿರುವ ಆಡಿಯೋ ಕ್ಲಿಪ್ ವೈರಲ್ ಆಗಿದ್ದು ಸರಕಾರಕ್ಕೆ ಇರಿಸುಮುರಿಸು ತರಿಸಿದೆ.

ಸಚಿವ ಜಮೀರ್ ಆಪ್ತ ಕಾರ್ಯದರ್ಶಿ ಸರ್ಫರಾಜ್ ಖಾನ್ ಜತೆ ಮಾತನಾಡಿರುವ ಆಡಿಯೋ ಕ್ಲಿಪ್ ಇದಾಗಿದೆ. ಪಾಟೀಲ್ ತಮ್ಮ ಆಳಂದ್ ಕ್ಷೇತ್ರದೊಳಗಿನ ವಿವಿಧ ಗ್ರಾಮಗಳಲ್ಲಿ ಒಟ್ಟು 950 ಮನೆಗಳನ್ನು ಫಲಾನುಭವಿಗಳಿಂದ ಹಣ ಪಡೆದು ಹಂಚಿಕೆ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿ, ಕಾರ್ಯದರ್ಶಿಯನ್ನು ಪ್ರಶ್ನಿಸಿದ್ದರು. ತಮ್ಮಲ್ಲಿರುವ ಮಾಹಿತಿಯನ್ನು ಬಹಿರಂಗಪಡಿಸಿದರೆ, ಕಾಂಗ್ರೆಸ್ ನೇತೃತ್ವದ ಸರಕಾರದ ಅಡಿಪಾಯವೇ ಅಲುಗಾಡುತ್ತದೆ ಎಂದೂ ಹೇಳಿದ್ದಾರೆ. ಇನ್ನು ಆಡಿಯೋ ವೈರಲ್ ಆದ ಬೆನ್ನಲ್ಲೆ ಬಿಜೆಪಿ ರಾಜ್ಯ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದು. ವಸತಿ ಸಚಿವ ಜಮೀರ್ ಅಹ್ಮದ್ ರಾಜಿನಾಮೆಗೆ ಪ್ರತಿಪಕ್ಷ ಆಗ್ರಹಿಸಿ, ನ್ಯಾಯಾಂಗ ತನಿಖೆಗೆ ಒತ್ತಾಯಿಸಿದೆ.

> ಬಿ.ಆರ್ .ಪಾಟೀಲ್ ಹೇಳಿದ್ದು ನೂರಕ್ಕೆ ನೂರು ಸತ್ಯ. ಹಣ ಕೊಡದೆ ಯಾವುದೇ ಕೆಲಸ ಆಗುವುದಿಲ್ಲ ಎಂಬುದು ಸಾಬೀತಾಗಿದೆ. ಬಡವರು ಮನೆ ಬೇಕೆಂದರೂ ದುಡ್ಡು ಕೊಟ್ಟು ತೆಗೆದುಕೊಳ್ಳಬೇಕಾಗಿದೆ.
> **-ಎಚ್.ಡಿ.ಕುಮಾರಸ್ವಾಮಿ** ಕೇಂದ್ರ ಸಚಿವ

> ವಸತಿ ಇಲಾಖೆಯಲ್ಲಿ ಯಾರು ಲಂಚ ಕೇಳುತ್ತಿದ್ದಾರೆ ಎಂಬುದರ ಬಗ್ಗೆ ಬಿ.ಆರ್. ಪಾಟೀಲ್ ದೂರು ನೀಡಿದರೆ ಕ್ರಮ ತೆಗೆದುಕೊಳ್ಳಲಾಗುವುದು. ಪಾಟೀಲರು ಯಾವ ಅರ್ಥದಲ್ಲಿ ಹೇಳಿದ್ದಾರೆ ಗೊತ್ತಿಲ್ಲ. ಭ್ರಷ್ಟಾಚಾರ ಆರೋಪವನ್ನು ನೇರವಾಗಿ ಹೇಳಿಲ್ಲ.
> **ಪರಮೇಶ್ವರ್,** ಗೃಹಸಚಿವ



> ಇವತ್ತು ಜನಸಾಮಾನ್ಯರು, ಉದ್ಯಮಿಗಳು ಸೇರಿ ಯಾರನ್ನೇ ಕೇಳಿದರೂ ಶೇ.100 ಭ್ರಷ್ಟಾಚಾರ ನಡೆಯುವ ಬಗ್ಗೆ ಜನಸಾಮಾನ್ಯರೇ ಮಾತನಾಡುತ್ತಿದ್ದಾರೆ. ಈ ರೀತಿ ಭ್ರಷ್ಟಾಚಾರದಲ್ಲಿ ಮುಳುಗಿ ಹೋದ ಬಗ್ಗೆ ಸ್ವತಃ ಆಡಳಿತ ಪಕ್ಷದ ಶಾಸಕರೇ ಬಹಿರಂಗಪಡಿಸಿದ್ದಾರೆ.
> **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

> ಸ್ವಪಕ್ಷದ ಶಾಸಕರೇ ಭ್ರಷ್ಟಾಚಾರದ ಆರೋಪ ಮಾಡುತ್ತಿರು ವಾಗ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರಿಗೆ ತಮ್ಮ ಸ್ಥಾನದಲ್ಲಿ ಮುಂದುವರಿಯುವ ಯಾವ ನೈತಿಕತೆ ಉಳಿದಿದೆ?
> **-ಆರ್.ಅಶೋಕ** ಪ್ರತಿಪಕ್ಷದ ನಾಯಕ

ರಾಜ್ಯ ಬಿಜೆಪಿಗೆ ಶಾ ಕ್ಲಾಸ್

ಬೆಂಗಳೂರು: ಬಿಜೆಪಿಯ ಪ್ರಮುಖರಿಗೆ ಕೇಂದ್ರ ಸಚಿವ ಅಮಿತ್ ಶಾ ತರಾಟೆಗೆ ತೆಗೆದುಕೊಂಡಿದ್ದು, ಒಳಜಗಳಗಳಿಗೆ ಆಸ್ಪದ ನೀಡದೆ ಸಂಘಟಿತ ಹೋರಾಟ ಮಾಡಿ ಕಾಂಗ್ರೆಸ್ ಸರಕಾರದ ಹಗರಣಗಳನ್ನು ರಾಜ್ಯದ ಜನತೆಗೆ ಮುಟ್ಟಿಸಲು ಮತ್ತಷ್ಟು ಚುರುಕಾಗಿ ಕೆಲಸ ಮಾಡಬೇಕೆಂದು ಚಾಟಿ ಬೀಸಿದ್ದಾರೆ.

ಆದಿಚುಂಚನಗಿರಿ ಮಠದ ಕಾರ್ಯಕ್ರಮಕ್ಕಾಗಿ ಎರಡು ದಿನ ರಾಜ್ಯಕ್ಕೆ ಆಗಮಿಸಿದ್ದ ಕೇಂದ್ರ ಸಚಿವ ಅಮಿತ್ ಶಾ ಅವರು ಮಾಜಿ ಸಿಎಂಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್.ಅಶೋಕ ಮತ್ತಿತರ ನಾಯಕರ ಜತೆ ಚರ್ಚೆ ನಡೆಸಿದ್ದಾರೆ. ಅಲ್ಲದೆ ರಾಜ್ಯದಲ್ಲಿ ಬಿಜೆಪಿಯನ್ನು ಮತ್ತಷ್ಟು ಸಂಘಟಿಸಬೇಕು. ಈಗಿನ ಕಾಂಗ್ರೆಸ್ ಸರಕಾರದ ಭ್ರಷ್ಟಾಚಾರಗಳ ಬಗ್ಗೆ ಹೋರಾಟ ತೀವ್ರಗೊಳಿಸಬೇಕೆಂದು ಸೂಚಿಸಿದ್ದಾರೆ ಎನ್ನಲಾಗಿದೆ.

ಇದೇ ವೇಳೆ ಜೆಡಿಎಸ್ ಜತೆಗಿನ ಮೈತ್ರಿಯ ಬಗ್ಗೆ ಕೆಲ ನಾಯಕರು ಅಪಸ್ವರ ಎತ್ತುತ್ತಿರುವ ಬಗ್ಗೆ ಅಮಿತ್ ಶಾ ಅಸಮಾಧಾನ ಹೊರಹಾಕಿದ್ದಾರೆ ಎನ್ನಲಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಜತೆ ಒಗ್ಗೂಡಿ ಹೋಗಲು ಸಜ್ಜಾಗಬೇಕೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯದ ನಾಯಕರಿಗೆ ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ. → 4



ಕೇಂದ್ರ ಸಚಿವ ಅಮಿತ್ ಶಾ ಅವರನ್ನು ಸಂಸದ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್.ಅಶೋಕ ಭೇಟಿ ಮಾಡಿ ಮಾತುಕತೆ ನಡೆಸಿದರು.

ಸಿಎಂ ದೆಹಲಿಗೆ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಅವರು ಸೋಮವಾರದಿಂದ ಮೂರು ದಿನ ದೆಹಲಿಗೆ ಭೇಟಿ ನೀಡುತ್ತಿದ್ದು ಕುತೂಹಲ ಮೂಡಿಸಿದ್ದು, ರಾಷ್ಟ್ರಪತಿ ಸೇರಿದಂತೆ ಹೈಕಮಾಂಡ್ ನಾಯಕರನ್ನು ಭೇಟಿಯಾಗಲಿದ್ದಾರೆ ಎನ್ನಲಾಗಿದೆ. ಸೋಮವಾರ ಸಂಜೆ ದೆಹಲಿಗೆ ಪ್ರಯಾಣಿಸಲಿರುವ ಸಿಎಂ ಸಿದ್ದರಾಮಯ್ಯ, ಮಂಗಳವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲಿದ್ದಾರೆ. ಈ ವೇಳೆ ರಾಜ್ಯಪಾಲರು ಅನುಮತಿ ನಿರಾಕರಿಸಿ ರಾಷ್ಟ್ರಪತಿಗಳಿಗೆ ಕಳುಹಿಸಿರುವ ಐದು ವಿಧೇಯಕಗಳ ಬಗ್ಗೆ ವಿವರಣೆ ನೀಡಿ ಅಂಗೀಕರಿಸಲು ಮನವೊಲಿಸುವ ಪ್ರಯತ್ನ ಮಾಡಲಿದ್ದಾರೆ ಎನ್ನಲಾಗಿದೆ.

ಎಸ್‌ಪಿಗೆ ನೋಟಿಸ್

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮು ಸಂಘರ್ಷಗಳು ಪದೇ ಪದೆ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಅವುಗಳಿಗೆ ಬ್ರೇಕ್ ಹಾಕಲು ಮಂಗಳೂರು ಪೊಲೀಸರು ಮಧ್ಯರಾತ್ರಿ ಹಿಂದೂ ಮುಖಂಡರ ಮನೆಗಳ ಕದ ತಟ್ಟಿದ್ದರು. ಈ ವಿಚಾರ ಇದೀಗ ಪೊಲೀಸರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ದಕ್ಷಿಣ ಕನ್ನಡ ಎಸ್‌ಪಿ ಅರುಣ್ ಅವರಿಗೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದ್ದು, ಸೂಕ್ತ ದಾಖಲೆ ಸಲ್ಲಿಸುವಂತೆ ತಾಕೀತು ಮಾಡಿದೆ. ಉಪ್ಪಿನಂಗಡಿಯ ಉದ್ಯಮಿ, ಆರ್‌ಎಸ್‌ಎಸ್ ಮುಖಂಡ ಯು.ಜಿ. ರಾಧಾ ಎಂಬುವರ ಮನೆಗೆ ಪೊಲೀಸರು ಮಧ್ಯರಾತ್ರಿ ತೆರಳಿ ಜಿಪಿಎಸ್ ಪೋಟೋ ಅಪ್‌ಲೋಡ್ ಮಾಡಿದ್ದರು.

ಬೆಟ್ಟದಲ್ಲೇ ಸಭೆ

ಬೆಂಗಳೂರು: ಚಿಕ್ಕಬಳ್ಳಾಪುರ ತಾಲೂಕಿನ ನಂದಿ ಬೆಟ್ಟದ ಮಯೂರ ಸಭಾಂಗಣದಲ್ಲಿ ಜು.2ರ ಮಧ್ಯಾಹ್ನ 12 ಗಂಟೆಗೆ ರಾಜ್ಯ ಸಚಿವ ಸಂಪುಟ ಸಭೆಯನ್ನು ನಡೆಸಲು ಸರಕಾರ ನಿರ್ಧರಿಸಿದೆ. ಈ ಹಿಂದೆ ನಿಗದಿಪ ಡಿಸಿದಂತೆ ಜೂ.19ರಂದು ನಂದಿ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಸಬೇಕಿತ್ತು. ಆದರೆ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗ ಳೂರು ಗ್ರಾಮಾಂತರ ಜಿಲ್ಲೆಗಳಿಗೆ ಸಂಬಂಧಿ ಸಿದಂತೆ ಕೆಲವು ಇಲಾಖೆಗಳಿಂದ ಪ್ರಸ್ತಾವನೆಗಳು ಬರುವುದು ವಿಳಂಬವಾಗಿದ್ದರಿಂದ ಸಚಿವ ಸಂಪುಟ ಸಭೆಯನ್ನು ಬೆಂಗಳೂರಿಗೆ ಸ್ಥಳಾಂತರಿಸಲಾಗಿತ್ತು.

ಎಚ್‌ಪಿಸಿಎಲ್ ಸಂಸ್ಥೆಯ ಎಲ್‌ಪಿಜಿ ಸಂಗ್ರಹಣಾಗಾರ ಕಾಮಗಾರಿ ಪೂರ್ಣ

ರಾಜ್ಯದಲ್ಲಿ ಅತಿದೊಡ್ಡ ಎಲ್‌ಪಿಜಿ ದಾಸ್ತಾನು

ಮಂಗಳೂರು: ಮಂಗಳೂರಿನ ಬಾಲಾದಲ್ಲಿ 80,000 ಮೆಟ್ರಿಕ್ ಟನ್ ಸಾಮರ್ಥ್ಯದ ದೇಶದ ಅತಿದೊಡ್ಡ ಭೂಗತ ಎಲ್‌ಪಿಜಿ ಸಂಗ್ರಹಣಾ ಗಾರದ ನಿರ್ಮಾಣ ಕಾರ್ಯ ಪೂರ್ಣ ಗೊಂಡಿದ್ದು, ಭಾರತದ ಇಂಧನ ಮೂಲ ಸೌಕರ್ಯ ವ್ಯವಸ್ಥೆಯಲ್ಲಿ ಇದೊಂದು ಪ್ರಮುಖ ಮೈಲಿಗಲ್ಲಾಗಿದೆ.

ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (HPCL) ಗಾಗಿ ಮೇಘಾ ಎಂಜಿನಿಯರಿಂಗ್ ಮತ್ತು ಮೂಲಸೌಕರ್ಯ ಲಿಮಿಟೆಡ್ (MEIL) ಅಭಿವೃದ್ಧಿಪಡಿಸಿದ ಈ ಸೌಲಭ್ಯವು ಭಾರತದ ಕಾರ್ಯತಂತ್ರದ ಪೆಟ್ರೋಲಿಯಂ ನಿಕ್ಷೇಪಗಳನ್ನು ಬಲಪಡಿಸುವತ್ತ ಒಂದು ಮಹತ್ವದ ಹೆಜ್ಜೆಯಾಗಿದೆ.

ವಿಶಾಖಪಟ್ಟಣಂನಲ್ಲಿ ಕೂಡ ಇದೇ ರೀತಿಯ ಭೂಗತ ಸಂಗ್ರಹಣಾಗಾರವಿದ್ದು, ಇದು ದೇಶದಲ್ಲಿ ಎರಡನೇ ಭೂಗತ ಎಲ್‌ಪಿಜಿ ಸಂಗ್ರಹ ಣಾಗಾರವಾಗಿದೆ. ಇಂಧನ ಸುರಕ್ಷತೆಯನ್ನು ಹೆಚ್ಚಿಸಲು ಮತ್ತು ಶುದ್ಧ ಶಕ್ತಿಯ ನಿರಂತರ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಇದು ನಿರ್ಣಾಯಕ ಪಾತ್ರ ವಹಿಸುತ್ತದೆ. ಈ ಸಂಗ್ರಹಣಾಗಾರದಲ್ಲಿ ಆರು ಲಕ್ಷ ಬ್ಯಾರೆಲ್‌ಗಳು ಅಥವಾ 60 ಮಿಲಿಯನ್ ಲೀಟರ್ ದ್ರವೀಕೃತ ಪೆಟ್ರೋಲಿಯಂ ಅನಿಲ ಸಂಗ್ರಹಿಸಬಹುದು. ಇದು 40,000 ಎಮ್‌ಟಿ ಪ್ರೊಪೇನ್ ಮತ್ತು 60,000 ಎಮ್‌ಟಿ ಬ್ಯುಟೇನ್ ಅನ್ನು ಸಂಗ್ರಹಿಸಲು ವಿನ್ಯಾಸಗೊಳಿಸಲಾದ ಎರಡು ಪ್ರತ್ಯೇಕ ಭೂಗತ ಕೋಣೆಗಳನ್ನು ಒಳಗೊಂಡಿದೆ.

ಈ ಸಂಗ್ರಹಾಗಾರವನ್ನು 854 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ಜೂ 6ರಂದು ಎಲ್ಲ ಪ್ರಮುಖ ಪರೀಕ್ಷಾ ಹಂತಗಳಲ್ಲಿ ಉತ್ತೀರ್ಣವಾಗಿದೆ. ಈ ಸಂಗ್ರಹಾಗಾರ ಈಗ ಕಾರ್ಯಾಚರಣೆಗೆ ಸಂಪೂರ್ಣವಾಗಿ ಸಿದ್ಧವಾಗಿದೆ ಎಂದು ಜೂನ್ 6 ರಂದು ಎಂಇಐಎಲ್ ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ತಿಳಿಸಿದೆ. → 4

ಇಂಧನ ಪೂರೈಕೆ ಅಡಚಣೆ ನಿಭಾಯಿಸುವಲ್ಲಿ ಹೆಚ್ಚಿನ ಬಲ

ಮಂಗಳೂರು ಎಲ್‌ಪಿಜಿ ಸಂಗ್ರಹಾಗಾರವನ್ನು ಪೂರ್ಣಗೊಳಿಸುವುದು ದೇಶದ ಹೆಚ್ಚುತ್ತಿರುವ ಶುದ್ಧ ಇಂಧನದ ಅಗತ್ಯವನ್ನು ಪೂರೈಸಲು ಸಹಾಯ ಮಾಡುವಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ ಮತ್ತು ಇಂಧನ ಪೂರೈಕೆಯಲ್ಲಿ ಭವಿಷ್ಯದಲ್ಲಿ ಉಂಟಾಗುವ ಯಾವುದೇ ಅಡಚಣೆಗಳನ್ನು ನಿಭಾಯಿಸುವ ದೇಶದ ಸಾಮರ್ಥ್ಯವನ್ನು ಬಲಪಡಿಸುತ್ತದೆ ಎಂದು ಮೂಲಗಳು ತಿಳಿಸಿವೆ.

- ಇದು ದೇಶದಲ್ಲಿ ಎರಡನೇ ಭೂಗತ ಎಲ್‌ಪಿಜಿ ಸಂಗ್ರಹಣಾಗಾರ
- 854 ಕೋಟಿ ರುಪಾಯಿ ವೆಚ್ಚದಲ್ಲಿ ಈ ಸಂಗ್ರಹಾಗಾರ ನಿರ್ಮಾಣ

ಒಲೈಕೆ ರಾಜಕಾರಣದಿಂದ ಮೀಸಲು ಹೆಚ್ಚಳ

ಹುಬ್ಬಳ್ಳಿ: ಮುಸ್ಲಿಮರು ಹೊರತುಪಡಿಸಿ ಬೇರೆಯವರು ತಮಗೆ ಬೆಂಬಲ ನೀಡುವುದಿಲ್ಲ ಎಂದು ವಸತಿ ಯೋಜನೆಗಳಲ್ಲಿ ಅಲ್ಪಸಂಖ್ಯಾತರಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸಿದ್ದಾರೆ' ಎಂದು ಸಂಸದ ಜಗದೀಶ ಶೆಟ್ಟರ್ ಆರೋಪಿಸಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಸಂ: 903/ಅಇಂ(ವಿ)/ವೃಕಹು/ಕಾ/25-26/ಸಿವೈಎಸ್-03 ದಿನಾಂಕ: 18.06.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಕವಿಪ್ರನಿನಿಯು ಹುಬ್ಬಳ್ಳಿ ಪ್ರಸರಣ ಯೋಜನೆಗಳ ವೃತ್ತದ ವ್ಯಾಪ್ತಿಯಡಿಯಲ್ಲಿ ಬರುವ **ಉದ್ದೇಶಿತ 220/110ಕೆವಿ ವಿದ್ಯುತ್ ಕೇಂದ್ರಗಳಿಗೆ ಗಡಿ ರಕ್ಷಣಾ ಬೇಲಿ ಹಾಕುವ ಕಾಮಗಾರಿಗಳ** ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳ ಬಗ್ಗೆ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್ ವಿಧಾನದ ಮೂಲಕ ಕೆ.ಪಿ.ಪಿ. ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ: 23.06.2025** ರಂದು ಅಥವಾ ನಂತರ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆದುಕೊಳ್ಳಬಹುದಾಗಿದೆ.

ಸಹಿ/- ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ಯೋಜನೆಗಳ) ವೃತ್ತ, ಕವಿಪ್ರನಿನಿ, ವಿದ್ಯುತ್ ನಗರ, ಕಾರವಾರ ರಸ್ತೆ, ಹುಬ್ಬಳ್ಳಿ-580 024, ದೂರವಾಣಿ: 0836-2203094.

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯನಗರ
28ನೇ ವಾರ್ಡ್, 3ನೇ ಕ್ರಾಸ್, ಮೃತ್ಯುಂಜಯನಗರ, ಹೊಸಪೇಟೆ.
ಸಂ.ಕಾನಿ/ಪಂರಾಇಂವಿ/ವಿಜಯನಗರ/ತಾ.ಶಾಖೆ/ಟೆಂಡರ್/ವಿವಿಲೆಶಿ/2025-26/466
ದಿನಾಂಕ:18.06.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through Government of Karnataka e-procurement)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯನಗರ ಹೊಸಪೇಟೆ ಕಛೇರಿಯಿಂದ ಕನಿಷ್ಠ ರೂ.6.00ಲಕ್ಷಗಳಿಂದ ಗರಿಷ್ಠ ರೂ:200.00ಲಕ್ಷಗಳವರೆಗಿನ ಕೆಪಿಎಸ್, ಡಿಎಂಎಫ್, ದಾರ್ಮಿದತ್ತಿ ಇಲಾಖೆ ಅನುದಾನ ಮತ್ತು ಇತರೆ ಲೆಕ್ಕ ಶೀರ್ಷಿಕೆಗಳಡಿ ಟರ್ನ ಕೀ ಆಧಾರದ ಮೇಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ **Standard Bid Document KW-I,II,III&IV-KG** ನಿಯಮಾವಳಿಗಳಂತೆ ವೆಬ್‌ಸೈಟ್‌ನ ಆಯಾ ಇಂಡೆಂಟ್‌ಗಳಲ್ಲಿ ಅಪ್‌ಲೋಡ್ ಮಾಡಲಾಗಿರುವ ನಿಬಂಧನೆಗಳಿಗೊಳಪಟ್ಟು (ವರ್ಕ್ಸ್/ಗೂಡ್ಸ್) ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:02.07.2025ರಂದು ನಿಗಧಿಪಡಿಸಲಾಗಿದೆ. **(Auto Extension Specialty up to 4 Days)**

Indent Nos : 10354/CALL-2, 15797, 15946, 15951, 15974, 9648/call-2 ಮತ್ತು ಇತರೆ ಇಂಡೆಂಟ್‌ಗಳು

ಟೆಂಡರ್ ಪ್ರಕ್ರಿಯೆ ದಿನಾಂಕಗಳು/ತಿದ್ದುಪಡಿ/ಮುಂದೂಡಿಕೆಗಳ ಬಗ್ಗೆ ಕಾರಣಾಂತರಗಳಿಂದ ಬದಲಾವಣೆಯಾದಲ್ಲಿ ಕೆಪಿಪಿ ಪೋರ್ಟಲ್ **(https://kppp.karnataka.gov.in)** ವೆಬ್‌ಸೈಟ್‌ನಲ್ಲಿಯೆ ನೋಡಿಕೊಳ್ಳುವುದು. ಬಾಕಿ ಉಳಿದಂತೆ ಟೆಂಡರ್ ಪ್ರಕಟಣೆಯ (ಅನುಭಂದ) ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ.ಪಿ ವೆಬ್‌ಸೈಟ್ ಮತ್ತು ಕಛೇರಿ ವೇಳೆಯಲ್ಲಿ ಖುದ್ದಾಗಿ **(eepredvijayanagara@gmail.com)** ಸಂಪರ್ಕಿಸಬಹುದು.

ಸಹಿ/- ಕಾಪಅ ಪಂರಾಇಂ ವಿಭಾಗ, ವಿಜಯನಗರ
ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/105

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ:O&MEIRLTENDER:2025-26/574
ದಿನಾಂಕ:19.06.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:03/2025-26
(ದ್ವಿ-ಲಕೋಟೆ ಪದ್ಧತಿ) (Kppp portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಎಂ.ವಿ.ಎಸ್ ಓ&ಎಂ ಯೋಜನೆಯಡಿ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬಿ.ಜಿ.ಪುರ ಮತ್ತು ಇತರೆ 56 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ (Variation due to new items) ಕಾಮಗಾರಿಯ ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.66.69ಲಕ್ಷಗಳು, ಪೂರ್ವಭಾವಿ ಸಭೆ ದಿನಾಂಕ:24.06.2025 ಸಮಯ:ಬೆಳಿಗ್ಗೆ 11:00 ಗಂಟೆಗೆ (ಸ್ಥಳ:ಕಾ.ಇಂ ಕಛೇರಿ, ಗ್ರಾ.ಕು.ನೀ&ನೈ ವಿಭಾಗ, ಮಂಡ್ಯ), ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:26.06.2025 ಸಂಜೆ: 5:00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:27.06.2025 ಸಂಜೆ: 05:05 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ:01-07-2025 ಬೆಳಿಗ್ಗೆ:11:00 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ:08232-222363.

ಸಹಿ/-ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/204/2025-26

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಬೆಂಗಳೂರು ದಕ್ಷಿಣ ಜಿಲ್ಲೆ, ಜಿಲ್ಲಾ ನಗರಾಭಿವೃದ್ಧಿ ಕೋಶ
ರಾಮನಗರ-562159.
Telephone No: 080-27274108, **E-Mail:** ka.ramanagara.dude@gmail.com
ಸಂ.: ರಾಜಿನಕೋ/ಎಂಯುಎನ್(1)/ಅಮೃತ ನಗರೋತ್ಥಾನ-4/ಬಿಡಿದಿ/ಸಿಆರ್/244/2023-24 ದಿನಾಂಕ: 19.06.2025

ಟೆಂಡರ್ ಅಧಿಸೂಚನೆ

ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) 4ನೇ ಹಂತದ ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ರವರು 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಆಸಕ್ತಿವುಳ್ಳ ಗುತ್ತಿಗೆದಾರರು ಕೆ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಕೆ.ಪಿ.ಪಿ ಪೋರ್ಟಲ್ ವೇದಿಕೆ ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸುವುದು. ಇಎಂಡಿ ಮತ್ತು ಟೆಂಡರ್ ಸಂಸ್ಕರಣಾ ಶುಲ್ಕವನ್ನು ಕೆ.ಪಿ.ಪಿ ಪೋರ್ಟಲ್ ಆನ್‌ಲೈನ್ ಮೂಲಕವೇ ಪಾವತಿಸುವುದು.

ಇಂಡೆಂಟ್ ಸಂ.: 1) DMA/2025-26/BD/WORK_INDENT41760, **2)** DMA/2025-26/EL/WORK_INDENT41761, **3)** DMA/2025-26/BD/WORK_INDENT40314, **4)** DMA/2025-26/BD/WORK_INDENT41405, **5)** DMA/2025-26/RD/WORK_ INDENT39271, **6)** DMA/2024-25/RD/WORK_INDENT26194, **7)** DMA/2024-25/ BD/WORK_INDENT27416.

ಟೆಂಡರ್‌ಗಿಟ್ಟ ಮೊತ್ತವು **ರೂ. 8.99 ಲಕ್ಷಗಳಿಂದ ರೂ. 169.38 ಲಕ್ಷಗಳಾಗಿರುತ್ತದೆ.** ಇಎಂಡಿ ಮೊತ್ತವು **ರೂ. 0.23 ಲಕ್ಷಗಳಿಂದ ರೂ. 2.40 ಲಕ್ಷಗಳಾಗಿರುತ್ತದೆ.** ಪೂರ್ವಭಾವಿ ಸಭೆ **ದಿನಾಂಕ: 26.06.2025 ರಂದು ಮಧ್ಯಾಹ್ನ 03:00 ಗಂಟೆಗೆ.** ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 04.07.2025 ರಂದು ಸಂಜೆ 05.00 ಗಂಟೆಗೆ.** ಟೆಂಡರ್‌ಗಳನ್ನು (ತಾಂತ್ರಿಕ ಬಿಡ್) ತೆರೆಯುವ **ದಿನಾಂಕ : 05.07.2025 ರಂದು ಸಂಜೆ 05:30 ಗಂಟೆಗೆ**

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/-
ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ದಕ್ಷಿಣ ಜಿಲ್ಲೆ
ರಾಮನಗರ.
DIPR/SAD/181/SA/2025-26

ಕಾವೇರಿ ನಿವಾಸದಲ್ಲಿ ನಡೆದ ಸಭೆ | 7 ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವುದು ಸರಕಾರದ ಗುರಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ನಿಗದಿತ ಅವಧಿಯೊಳಗೆ ಎತ್ತಿನಹೊಳೆ ಯೋಜನೆ ಪೂರ್ಣ

ಬೆಂಗಳೂರು: ಎತ್ತಿನಹೊಳೆ ಯೋಜನೆಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವುದು ಸರಕಾರದ ಆದ್ಯತೆಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಸಿಎಂ ಅಧಿಕೃತ ನಿವಾಸ ಕಾವೇರಿಯಲ್ಲಿ ನಡೆಸಿದ ಎತ್ತಿನಹೊಳೆ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ವಿಚಾರವನ್ನು ಸ್ಪಷ್ಟಪಡಿಸಿದ್ದು, ಎತ್ತಿನಹೊಳೆ ನೀರಾವರಿ ಯೋಜನೆಯಲ್ಲ, ಕುಡಿಯುವ ನೀರಿನ ಮತ್ತು ಕೆರೆ ತುಂಬಿಸುವ ಯೋಜನೆಯಾಗಿದೆ. ಯೋಜನಾ ವ್ಯಾಪ್ತಿಯ ಎಲ್ಲಾ 7 ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವುದು ಸರಕಾರದ ಗುರಿಯಾಗಿದೆ ಎಂದರು.

ಕುಡಿಯುವ ನೀರಿನ ಪೂರೈಕೆಗೆ ಬೇಕಾದಷ್ಟು ನೀರು ಸರಾಸರಿ ಲಭ್ಯವಿದೆ. ಪ್ರಾರಂಭಿಕ ಹಂತದಲ್ಲಿ ಕುಡಿಯುವ ನೀರಿನ ಕಾಮಗಾರಿಗಳನ್ನು ಪೂರ್ಣಗೊಳಿಸಿ ಬಳಿಕ ಕೆರೆಗಳನ್ನು ತುಂಬಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು. ಯೋಜನಾ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಖಾತ್ರಿಪಡಿಸಬೇಕು. ಕುಡಿಯುವ ನೀರು ಕಾಮಗಾರಿ ಪೂರ್ಣಗೊಳಿಸಲು ಇರುವ ಎಲ್ಲಾ ತಾಂತ್ರಿಕ ಅಡಚಣೆಗಳನ್ನು ನಿವಾರಿಸಬೇಕು ಎಂದು ಮುಖ್ಯಮಂತ್ರಿ ಅವರು ಸೂಚನೆ ನೀಡಿದ್ದಾರೆ.

ಸಿಎಂ ಅಧಿಕೃತ ನಿವಾಸ ಕಾವೇರಿಯಲ್ಲಿ ನಡೆಸಿದ ಎತ್ತಿನಹೊಳೆ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇದ್ದರು.

ಕಳೆದ ಏಳು ವರ್ಷಗಳಲ್ಲಿ ಸರಾಸರಿ 18.08 ಟಿಎಂಸಿ ನೀರು ಯೋಜನೆಗೆ ಲಭ್ಯವಿದ್ದು, ಉಳಿದ 6ಟಿಎಂಸಿ ನೀರಿನ ಕೊರತೆ ನೀಗಿಸಲು ಹೆಚ್ಚುವರಿ ನೀರನ್ನು ತಿರುವುಗೊಳಿಸುವ ಕುರಿತು ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲು ಸಮಾಲೋಚಕರನ್ನು ನೇಮಕ ಮಾಡಲಾಗಿದೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಡಾ.ಜಿ.ಪರಮೇಶ್ವರ್, ಕೆ.ಎಚ್. ಮುನಿಯಪ್ಪ, ಕೃಷ್ಣ ಭೈರೇಗೌಡ, ಡಾ.ಎಂ.ಸಿ.ಸುಧಾಕರ್, ಭೈರತಿ ಸುರೇಶ್, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿ ಅವರ ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೆಜ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಯೋಜನೆಗೆ 23,251.66 ಕೋಟಿ ರು. ವೆಚ್ಚ

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿ 14.056 ಟಿಎಂಸಿ ಕುಡಿಯುವ ನೀರು, 9.953 ಟಿಎಂಸಿ ನೀರು ಕೆರೆಯನ್ನು ತುಂಬಿಸಲು ಡಿಪಿಆರ್ ಮಾಡಲಾಗಿದೆ. ಯೋಜನೆಗೆ 23,251.66 ಕೋಟಿ ರು. ಪರಿಷ್ಕೃತ ಅಂದಾಜು ಮಾಡಲಾಗಿದ್ದು, ಇದುವರೆಗೆ 17,147 ಕೋಟಿ ರು.ವೆಚ್ಚವಾಗಿದೆ. ಒಂದನೇ ಹಂತದಲ್ಲಿ ನದಿ ಪಾತ್ರದ ಏತ ಕಾಮಗಾರಿಗಳಲ್ಲಿ 7 ಪ್ಯಾಕೇಜ್ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಹಂತ 2ರಲ್ಲಿ ಗುರುತ್ವ ಮುಖ್ಯ ಕಾಲುವೆ ಕಾಮಗಾರಿಗಳಲ್ಲಿ 33 ಪ್ಯಾಕೇಜ್‌ಗಳ ಪೈಕಿ 11 ಪ್ಯಾಕೇಜ್ ಪೂರ್ಣಗೊಳಿಸಲಾಗಿದೆ. 16 ಕಿಮೀ ವ್ಯಾಪ್ತಿಯ ಕಾಮಗಾರಿ ಪ್ರಾರಂಭಿಸಬೇಕಿದ್ದು, ಇದರಲ್ಲಿ 6ಎಕರೆ ಅರಣ್ಯ ಪ್ರದೇಶ ಹಾಗೂ 10ಕಿಮೀ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಬೇಕಾಗಿದೆ. ಯೋಜನೆಯನ್ನು 2027ರ ಮಾರ್ಚ್ ಒಳಗಾಗಿ ಪೂರ್ಣಗೊಳಿಸಲು ಕಾಲಾವಧಿ ನಿಗದಿಪಡಿಸಲಾಗಿದೆ ಎಂದು ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನೌಕಾದಳದಿಂದ 6 ಮೀನುಗಾರರ ಸೆರೆ

ಕಾರವಾರ: ಅರಬ್ಬಿ ಸಮುದ್ರದಲ್ಲಿ ಮೀನುಗಾರಿಕೆ ನಡೆಸುತ್ತಿದ್ದ ಎರಡು ಬೋಟುಗಳು ಅಲೆಯ ಅಬ್ಬರಕ್ಕೆ ನೌಕಾದಳದ ವ್ಯಾಪ್ತಿ ಪ್ರದೇಶಕ್ಕೆ ಹೋಗಿದ್ದು, ನೌಕಾದಳದವರು ಎರಡು ಬೋಟುಗಳನ್ನು ವಶಕ್ಕೆ ಪಡೆದು ಆರು ಜನ ಮೀನುಗಾರರನ್ನು ಬಂಧಿಸಿದ್ದಾರೆ. ಕಾರವಾರದ ಅರಗಾ ಬಳಿಯ ಸಮುದ್ರ ಭಾಗದಲ್ಲಿ ಘಟನೆ ನಡೆದಿದೆ. ಕಾರವಾರದ ಬೈತಕೋಲಿನ ರವಿ ನಾರಾಯಣ್ ಹರಿಕಾಂತ್ ಎಂಬವರಿಗೆ ಸೇರಿದ ಆರ್ಯಪರಮ್ ಎಂಬ ಬೋಟ್ ಹಾಗೂ ರಾಜು ವಾಮಂತ್ ತಾಂಡೇಲ್ ಎಂಬವರಿಗೆ ಸೇರಿದ ಓಂ ಶ್ರೀ ಆರ್ಯದುರ್ಗ ಎಂಬ ಹೆಸರಿನ ಬೋಟನ್ನು ನೌಕಾದಳದವರು ವಶಕ್ಕೆ ಪಡೆದಿದ್ದು, ಆರು ಜನ ಮೀನುಗಾರರನ್ನು ಬಂಧಿಸಿ ಕಾರವಾರ ಗ್ರಾಮೀಣ ಠಾಣೆ ಪೊಲೀಸರ ವಶಕ್ಕೆ ನೀಡಿದ್ದಾರೆ.

ಭೂಗತ ಎಲ್‌ಪಿಜಿ ಸಂಗ್ರಹಣಾಗಾರ ಪೂರ್ಣ

← ಮೊದಲಪುಟದಿಂದ

ಅತ್ಯಂತ ನಿರ್ಣಾಯಕ ಹಂತವಾದ ಕ್ಯಾವರ್ನ್ ಅಕ್ಸೆಪ್ಟೆನ್ಸ್ ಪರೀಕ್ಷೆ (CAT) ಯನ್ನು ಮೇ 9 ರಿಂದ ಜೂನ್ 6 ರವರೆಗೆ ನಡೆಸಲಾಯಿತು. ಇದು ಕಠಿಣ 3-ಹಂತದ ಪ್ರಕ್ರಿಯೆಯನ್ನು ಒಳಗೊಂಡಿತ್ತು. ಸಂಗ್ರಹಾಗಾರದೊಳಗೆ ಗಾಳಿ ತುಂಬಿಸಿ ಒತ್ತಡವನ್ನು 8.310 kg/cmJಗೆ ಹೆಚ್ಚಿಸಲಾಯಿತು. ಬಳಿಕ 100 ಗಂಟೆಗಳ ಸ್ಥಿರೀಕರಣ ಹಂತವನ್ನು ಅನುಸರಿಸಲಾಯಿತು. ಈ ಸಮಯದಲ್ಲಿ ಸೋರಿಕೆಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಜಲಭೂ ವೈಜ್ಞಾನಿಕ ಡೇಟಾವನ್ನು ಟ್ರ್ಯಾಕ್ ಮಾಡಲು ಎಲ್ಲ ದ್ವಾರಗಳನ್ನು ಮುಚ್ಚಲಾಯಿತು. ಕ್ರಮೇಣ ಒತ್ತಡ ಕಡಿಮೆ ಮಾಡಿ ಪರೀಕ್ಷಿಸಲಾಯಿತು. ಎಲ್ಲ ಹಂತಗಳು ಯಶಸ್ವಿಯಾಗಿ ಪೂರ್ಣಗೊಂಡ ಬಳಿಕ ಎಲ್‌ಪಿಜಿಯನ್ನು ಸುರಕ್ಷಿತವಾಗಿ ಸಂಗ್ರಹಿಸಲು ಸಿದ್ಧವಾಗಿದೆ ಎಂದು ದೃಢೀಕರಿಸಲಾಯಿತು. ಅದ್ಭುತವಾಗಿ ವಿನ್ಯಾಸಗೊಳಿಸಲಾದ ಈ ಸಂಗ್ರಹಾಗಾರದಲ್ಲಿ 11,083 ಮೀಟರ್ ಉದ್ದದ ಪ್ರವೇಶ ಸುರಂಗ ಇದೆ. ಮೇಲಿನ ಮತ್ತು ಕೆಳಗಿನ ವಾರ್ಟ ಕರ್ಟೈನ್ಸ್‌ಗಳು ಕ್ರಮವಾಗಿ 578.2 ಮೀಟರ್ ಮತ್ತು 804.31 ಮೀಟರ್ ಆಳತೆ ಹೊಂದಿವೆ ಮತ್ತು 486.2 ಮೀಟರ್ ಉದ್ದದ ಸಂಪರ್ಕಿಸುವ ಸುರಂಗಗಳನ್ನು ಹೊಂದಿವೆ. 220 ಮೀಟರ್ ಆಳದ ಖ1 ಮತ್ತು 225 ಮೀಟರ್ ಆಳದ ಖ2 ಎಂಬ ಎರಡು ಮುಖ್ಯ ಸಂಗ್ರಹಣಾಗಾರಗಳಿವೆ. ವರ್ಟಿಕಲ್ ಶಾಫ್ಟ್ 164.1 ಮೀಟರ್ ವಿಸ್ತರಿಸಿದೆ.

ಆನೆ ದಾಳಿಗೆ ವಸತಿಗೃಹದ ಕಾವಲುಗಾರ ಸಾವು

ಶಿವಮೊಗ್ಗ: ವಿಶ್ವೇಶ್ವರಯ್ಯ ಕಬ್ಬಿಣ ಹಾಗೂ ಉಕ್ಕು ಕಾರ್ಖಾನೆಯ ವಸತಿಗೃಹದ ಕಾವಲುಗಾರನೊಬ್ಬ ಕಾಡಾನೆಯ ದಾಳಿಯಿಂದ ಸಾವನ್ನಪ್ಪಿದ ಘಟನೆ ಭದ್ರಾವತಿ ತಾಲೂಕು ಕೆಂಚಮ್ಮನ ಗುಡ್ಡದಲ್ಲಿ ಗುರುವಾರ ರಾತ್ರಿ ಸಂಭವಿಸಿದೆ.

ಒಂಟಿ ಸಲಗವೊಂದು ಕಾವಲುಗಾರ ಕುಮಾರ್ (50) ಎಂಬವರನ್ನು ತುಳಿದು ಸಾಯಿಸಿದೆ. ಕೆಂಚಮ್ಮನ ಗುಡ್ಡದ ಬಳಿ ವಿಐಎಸ್‌ಎಲ್ ವಸತಿಗೃಹಗಳಿವೆ. ಗುರುವಾರ ರಾತ್ರಿ ಸುಮಾರು 10:30ರ ಸುಮಾರಿಗೆ ಇಲ್ಲಿನ ವಸತಿಗೃಹದ ಚೆಕ್‌ಪೋಸ್ಟ್ ಬಳಿ ಇದ್ದ ಕಾವಲುಗಾರನ ಮೇಲೆ ಏಕಾಏಕಿ ಸಲಗ ದಾಳಿ ಮಾಡಿದ್ದು, ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ.
ದರಪಟ್ಟಿ ಸಂಖ್ಯೆ: ಕಾಇಂ/ಪಂರಾಇಂ/ವಿಶಿ/ಕಿಇಂ./2025-26/
ದಿನಾಂಕ: 19.06.2025

ದರಪಟ್ಟಿ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಶಿವಮೊಗ್ಗ ವ್ಯಾಪ್ತಿಯ ಶಿವಮೊಗ್ಗ ಹಾಗೂ ಭದ್ರಾವತಿ ತಾಲ್ಲೂಕಿನ ಲೆಕ್ಕ ಶೀರ್ಷಿಕೆ: 2024-25ನೇ ಸಾಲಿನ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯ ಬೂದುನೀರು ನಿರ್ವಹಣಾ ಘಟಕ ಯೋಜನೆಯಡಿ ಹಾಗೂ 2022-23 ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ-ಕರ್ನಾಟಕ (ಪಿ.ಎ.ಬಿ 2022-23 ಅನುಮೋದಿತ ಶಾಲೆ) ಕಾಮಗಾರಿಗಳ ಒಟ್ಟು ಮೊತ್ತ ರೂ. 211.75 ಲಕ್ಷಗಳು, ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ವೇಳೆಯಲ್ಲಿ ದಿ: 18/06/2025 ರಿಂದ ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಿದ ದರಪಟ್ಟಿಗಳನ್ನು ಸಲ್ಲಿಸುವ ಕೊನೆಯ 04/07/2025 ಸಂಜೆ 4.30 ಗಂಟೆರವರೆಗೆ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/25-26/94/06/453

ಗಡ್ಡೆಗೂಳಿ ಶ್ರೀಬಸವೇಶ್ವರ ದೇವಸ್ಥಾನ ಮುಳುಗಡೆ

ಬೆಂಗಳೂರು: ಮಹಾರಾಷ್ಟ್ರ ಭಾಗದಲ್ಲಿ ಭಾರಿ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ನಾರಾಯಣಪುರ (ಬಸವಸಾಗರ) ಜಲಾಶಯಕ್ಕೆ ಸಾವಿರಾರು ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಹೆಚ್ಚುವರಿ ನೀರನ್ನು ಕೃಷ್ಣಾ ನದಿಗೆ ಹರಿಬಿಡಲಾಗಿದೆ. ಹೀಗಾಗಿ, ಜಿಲ್ಲೆಯಲ್ಲಿ ನದಿ ತೀರದತ್ತ ಜನರು ತೆರಳದಂತೆ ಜಿಲ್ಲಾಡಳಿತ ಎಚ್ಚರಿಕೆ ನೀಡಿದೆ.

ದೇವದುರ್ಗ ತಾಲೂಕಿನ ಹೂವಿನಹೆಡಗಿ ಬಳಿ ಗಡ್ಡೆಗೂಳಿ ಶ್ರೀಬಸವೇಶ್ವರ ದೇವಸ್ಥಾನ ನೀರಿನಲ್ಲಿ ಮುಳುಗಡೆಯಾಗಿದೆ. ಶುಕ್ರವಾರ ಬೆಳಗ್ಗೆ ಜಲಾಶಯದಲ್ಲಿ 75 ಸಾವಿರ ಕ್ಯೂಸೆಕ್ ಒಳಹರಿವಿನ ಪ್ರಮಾಣವಿದೆ. ಜಲಾಶಯದ 25 ಗೇಟ್‌ಗಳನ್ನು ತೆರೆದು 75,015 ಕ್ಯೂಸೆಕ್ ನೀರನ್ನು ಕೃಷ್ಣಾ ನದಿಗೆ ಬಿಡುಗಡೆ ಮಾಡಲಾಗಿದೆ.

ಕೃಷ್ಣಾ ನದಿಯ ಮೇಲ್ಭಾಗದಲ್ಲಿ ಹೆಚ್ಚಿನ ಮಳೆಯಾಗುತ್ತಿರುವುದರಿಂದ ಜಲಾಶಯಕ್ಕೆ ಭಾರಿ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ. ಒಂದು ವೇಳೆ ನೀರಿನ ಒಳಹರಿವು ಏರಿಕೆಯಾದರೆ, ಮತ್ತಷ್ಟು ನೀರನ್ನು ನದಿಗೆ ಹರಿಬಿಡುವ ಸಾಧ್ಯತೆಯಿದೆ ಎಂದು ಜಿಲ್ಲಾಡಳಿತ ತಿಳಿಸಿದೆ.

ರಾಜ್ಯದಲ್ಲಿ ತಗ್ಗಿದ ಮಳೆ: ಕರ್ನಾಟಕದ ಕರಾವಳಿ ಹೊರತುಪಡಿಸಿ ಉಳಿದ ಭಾಗಗಳಲ್ಲಿ ಮುಂಗಾರು ಮಳೆ ಪ್ರಮಾಣ ಕಡಿಮೆಯಾಗಿದ್ದು, ಒಣ ಹವೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದ್ದು, ಇಲ್ಲಿ ಜೂನ್ 26ರವರೆಗೂ ಮಳೆಯಾಗಲಿದೆ.

ಜೋಗಕ್ಕೆ ಕಳೆ ತಂದ ಮುಂಗಾರು ಮಳೆ: ಮಲೆನಾಡಿನಲ್ಲಿ ಭರ್ಜರಿಯಾಗಿ ಮುಂಗಾರು ಮಳೆ ಸುರಿಯುತ್ತಿದೆ. ಹಳ್ಳ, ಕೊಳ್ಳಗಳು ತುಂಬಿ ನದಿ ಸೇರುತ್ತಿವೆ. ಜಿಲ್ಲೆಯ ನದಿಗಳೆಲ್ಲಾ ತುಂಬಿ ಹರಿಯಲು ಪ್ರಾರಂಭಿಸಿವೆ. ಶರವೇಗದಲ್ಲಿ ಹರಿಯುತ್ತಿರುವ ಶರಾವತಿ ನದಿ ಜೋಗ ಜಲಪಾತದಲ್ಲಿ 900 ಅಡಿಗೂ ಮೇಲಿಂದ ನಾಲ್ಕು ಕವಲುಗಳಾಗಿ ಧುಮ್ಮಿಕ್ಕಿ ಹರಿಯುತ್ತಿರುವುದನ್ನು ನೋಡುವುದೇ ಚೆಂದ. ರಾಜ, ರಾಣಿ, ರೋರರ್, ರಾಕೆಟ್‌ಗಳಾಗಿ ಹರಿಯುತ್ತಿರುವ ಜೋಗದ ಸೌಂದರ್ಯಕ್ಕೆ ಪ್ರವಾಸಿಗರು ಮನಸೋಲುತ್ತಿದ್ದಾರೆ. ಅಭಿವೃದ್ಧಿ ಕಾಮಗಾರಿಗಾಗಿ ಬಂದ್ ಆಗಿದ್ದ ಜೋಗಕ್ಕೆ ಪ್ರವೇಶ ಪುನಃ ಪ್ರಾರಂಭವಾಗಿದ್ದು, ಪ್ರವಾಸಿಗರು ಜೋಗದತ್ತ ಬಂದು ಜಲಪಾತದ ವೈಭವ ಕಣ್ತುಂಬಿಕೊಳ್ಳುತ್ತಿದ್ದಾರೆ.

ಕರ್ನಾಟಕ ಸರಕಾರ
(ಲೋಕೋಪಯೋಗಿ, ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ,
ಸೇಡಂ ವಿಭಾಗ ಜಿಲ್ಲೆ: ಕಲಬುರಗಿ.
ಸಂ:ಕಾನಿಇಂ/ಲೋಇ./ಸೇವಿ/ತಾಶಾ-2/2025-26/718 ದಿನಾಂಕ : 16-06-2025

-:: ಅಲ್ಪಾವಧಿ ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::-

1) ಕಾಮಗಾರಿಯ ವಿವರ : 1. ಚಿಂಚೋಳಿ ತಾಲೂಕಿನ 01 ರಸ್ತೆ ಕಾಮಗಾರಿ ಇಂಡೆಂಟ್ ಸಂ : **21984,** 2) ಲೆಕ್ಕ ಶೀರ್ಷಿಕೆ: 2023-24 ನೇ ಸಾಲಿನ ಅಂಪೆಡಿಕ್ಸ್-ಇ ಯೋಜನೆಯಡಿಯಲ್ಲಿನ ಕಾಮಗಾರಿ, 3) ಟೆಂಡರಿಗಿಟ್ಟ ಮೊತ್ತ: **ಕನಿಷ್ಠ ರೂ. 133.50 ಲಕ್ಷಗಳು, ಗರಿಷ್ಠ ರೂ. 133.50 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ: 1ನೇ ದರ್ಜೆ & ಮೇಲ್ಪಟ್ಟು, 5) ಪೂರ್ವಭಾವಿ ಸಭೆ ದಿನಾಂಕ: **21-06-2025 ಬೆಳಿಗ್ಗೆ 11:30 ಗಂಟೆವರೆಗೆ,** 6) ಟೆಂಡರ್ ಸ್ಪಷ್ಟೀಕರಣ ಪಡೆಯುವ ದಿನಾಂಕ: **23-06-2025 ಸಾಯಂಕಾಲ 17:30 ಗಂಟೆಯವರೆಗೆ,** 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **25-06-2025 ರ ಸಾಯಂಕಾಲ 16:00 ಗಂಟೆಯವರೆಗೆ.** 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **27-06-2025 ರ ಸಾಯಂಕಾಲ 16:30 ಗಂಟೆಯವರೆಗೆ.** 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **30-06-2025 ರ ಸಾಯಂಕಾಲ 16:30 ಗಂಟೆಯವರೆಗೆ.** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ.: ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮುಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ
ವಾ.ಸಾ.ಸಂ.ಇ/ಕಲಬುರಗಿ/230/ಕೆ.ಎಸ್.ಎಂ.ಸಿ.&ಎ/2025-26

ರಾಜ್ಯ ಬಿಜೆಪಿಗೆ ಶಾ ಕ್ಲಾಸ್

← ಮೊದಲಪುಟದಿಂದ

ನಾವೇ ಏಕಾಂಗಿಯಾಗಿ ಚುನಾವಣೆಗೆ ಹೋದರೆ ಸ್ವಯಂ ಬಲದ ಮೇಲೆ ಅಧಿಕಾರ ಹಿಡಿಯಬಹುದು ಎಂಬ ಮಾತು ಕೆಲ ನಾಯಕರಿಂದ ಕೇಳಿ ಬರುತ್ತಿದ್ದು, ಇಂತಹ ಮಾತುಗಳಿಗೆ ಅರ್ಥವಿಲ್ಲ.

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷದ ಮತ ಬ್ಯಾಂಕ್ ಎದುರಿಸಲು ಬಿಜೆಪಿ- ಜೆಡಿಎಸ್ ಒಗ್ಗೂಡಿ ಮುನ್ನಡೆಯುವುದು ಅನಿವಾರ್ಯ. ಲೋಕಸಭಾ ಚುನಾವಣೆಯಲ್ಲಿ ಇದು ನಿಸ್ಸಂಶಯವಾಗಿ ಸಾಬೀತಾಗಿದ್ದು, ಇಷ್ಟಾದ ನಂತರವೂ ಒಬ್ಬಂಟಿಯಾಗಿ ಚುನಾವಣೆ ಎದುರಿಸಬೇಕು ಎಂಬ ನಿಲುವು ಸರಿಯಲ್ಲ ಎಂದು ಅಮಿತ್ ಶಾ ಸ್ಪಷ್ಟವಾಗಿ ಹೇಳಿದ್ದಾರೆ ಎನ್ನಲಾಗಿದೆ.

ಕರ್ನಾಟಕದ ಜಾತಿ ಸ್ವರೂಪ ಗಮನಿಸಿದರೆ ನಮಗೆ ಜೆಡಿಎಸ್ ಜತೆಗಿನ ಹೊಂದಾಣಿಕೆ ಅನಿವಾರ್ಯ ಎಂದಿರುವ ಅಮಿತ್ ಶಾ, ರಾಜ್ಯ ಸರಕಾರದ ವಿರುದ್ಧ ಹೋರಾಟಗಳನ್ನು ರೂಪಿಸುವಾಗ ಜೆಡಿಎಸ್ ಪಕ್ಷವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರಿಯಬೇಕು.

ಪಕ್ಷದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರೆಯಬೇಕು. ಒಳಜಗಳಗಳಿಗೆ ಆಸ್ಪದವಿಲ್ಲ ಎಂದು ಹೇಳಿದ್ದಾರೆ ಎನ್ನಲಾಗಿದೆ. ರಾಜ್ಯದಲ್ಲಿ ಪಕ್ಷದ ಬೆಳವಣಿಗೆ ಬಿಜೆಪಿ ವರಿಷ್ಠರನ್ನು ಕೆರಳಿಸಿದ್ದು, ರಾಜ್ಯ ಬಿಜೆಪಿಯ ಉಸ್ತುವಾರಿ ಹೊತ್ತಿರುವ ರಾಧಾ ಮೋಹನ್ ದಾಸ್ ಅಗರ್‌ವಾಲ್ ಈ ಕುರಿತು ಕೇಂದ್ರಕ್ಕೆ ವರದಿ ನೀಡಿ ಎಚ್ಚರಿಸಿದ್ದರು ಎನ್ನಲಾಗಿದೆ.

ಈ ಹಂತದಲ್ಲೇ ಜೆಡಿಎಸ್ ಜತೆ ಸಮನ್ವಯಕ್ಕಾಗಿ ಎಚ್.ಡಿ.ಕುಮಾರಸ್ವಾಮಿ ಮತ್ತು ಶಾಸಕರ ಜತೆ ಅಧಿವೇಶನಕ್ಕೆ ಮೊದಲು ಚರ್ಚೆ ಮಾಡುವುದಾಗಿ ಅವರು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ತಿಳಿಸಿದ್ದಾರೆ.

ಭ್ರಷ್ಟ ಕಾಂಗ್ರೆಸ್ ಸರಕಾರದ ವಿರುದ್ಧ ಹೋರಾಟ ದ್ವಿಗುಣಗೊಳಿಸಬೇಕೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸಲಹೆ ಸೂಚನೆ ನೀಡಿದ್ದಾರೆ. ಅಲ್ಪಸಂಖ್ಯಾತರ ಓಲೈಕೆ ನಿಟ್ಟಿನಲ್ಲಿ ರಾಜ್ಯ ಸರಕಾರ ತೀರ್ಮಾನ ತೆಗೆದುಕೊಳ್ಳುತ್ತಿದೆ. ನಿನ್ನೆ ವಸತಿ ಇಲಾಖೆಯಡಿ ಅಲ್ಪಸಂಖ್ಯಾತರಿಗೆ ಶೇ.10 ಇದ್ದ ಮೀಸಲಾತಿ ಶೇ.15ಕ್ಕೆ ಏರಿಸಿದ್ದಾರೆ. ದೇಶದ ಪ್ರಧಾನಿ ನರೇಂದ್ರ ಮೋದಿಯವರು ಸಬ್ ಕಾ ಸಾಥ್ ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ ಔರ್ ಸಬ್ ಕಾ ಪ್ರಯಾಸ್ ಆಧಾರದ ಮೇಲೆ ದೇಶದ ಹಿಂದೂಗಳು, ಅಲ್ಪಸಂಖ್ಯಾತರು ಸೇರಿ ಎಲ್ಲರಿಗೂ ನ್ಯಾಯ ಕೊಡುತ್ತಿದ್ದಾರೆ.
-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಹುಬ್ಬಳ್ಳಿ
ಸಂ:ವಾಕರಸಾಸಂ:ಕಾನಿಅ:ನಕ್ಷೆ:ಹು:222:2025-26 ದಿನಾಂಕ : 20-06-2025

ಟೆಂಡರ ಪ್ರಕಟಣೆ

KPPP Portal ಪದ್ಧತಿಯಲ್ಲಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂ.ಇ.ಎಸ್ ನಲ್ಲಿ ನೋಂದಾಯಿತ ಅರ್ಹತೆಯುಳ್ಳ ಸಿವಿಲ್ ಗುತ್ತಿಗೆದಾರರಿಂದ ದ್ವಿ-ಲಕೋಟೆ ಆಧಾರದ ಮೇಲೆ ಈ ಕೆಳಕಂಡ ಕಾಮಗಾರಿಗಳಿಗೆ KPPP Portal ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ಈ ಕೆಳಕಂಡ ಕಾಮಗಾರಿಗಳಿಗೆ KPPP Portal ನಲ್ಲಿ ಬಿಡುಗಡೆಯಾಗಿರುವಂತೆ ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ http://kppp.karnataka.gov.in ನಲ್ಲಿ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಯಾವುದೇ ತಿದ್ದುಪಡಿ/ ದಿನಾಂಕಗಳಲ್ಲಿನ ಬದಲಾವಣೆಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು, ಈ ಕುರಿತು ಪ್ರತ್ಯೇಕ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಟೆಂಡರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **05.07.2025** ಸಮಯ 16.00 ಘಂಟೆ

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿ ಇಂಡೆಂಟ್ ಸಂಖ್ಯೆ	ಟೆಂಡರಿಗೆ ಇಟ್ಟ ಅಂದಾಜು ಮೊತ್ತ (ರೂ. ಗಳಲ್ಲಿ)	ಮುಂಗಡ ಠೇವಣಿ ಹಣ (ರೂ. ಗಳಲ್ಲಿ)	ಅರ್ಹತೆ
1	Construction of seminar hall over First Floor building of central office at Gokul road Hubballi	NWKRTC/2025-26/BD/WORK_INDENT44	**1,42,86,311/-**	**2,14,295/-**	ದರ್ಜೆ-3 ಹಾಗೂ ಮೇಲ್ಪಟ್ಟ
2	Construction of drain and other allied works in BRTS Depot at Hubballi	NWKRTC/2025-26/OW/WORK_INDENT45	**12,69,383/-**	**31,735/-**	ದರ್ಜೆ-4 ಹಾಗೂ ಮೇಲ್ಪಟ್ಟ

ಹೆಚ್ಚಿನ ವಿವರಗಳಿಗೆ ಸಹಾಯವಾಣಿ (help desk) +91-9240214000/+91-9240214001/+91-8068948777/+91-8046010000, 0836-2332383 ಗೆ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ವಾಕರಸಾಸಂಸ್ಥೆ, ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಹುಬ್ಬಳ್ಳಿ
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/312/2025-26

ಕರ್ನಾಟಕ ಸರ್ಕಾರ
ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ಸಾರ್ವಜನಿಕ ಆಸ್ಪತ್ರೆ, ಸೋಮವಾರಪೇಟೆ, ಕೊಡಗು ಜಿಲ್ಲೆ.
E-Mail address: amosomwarpetgh@gmail.com
Ph no: 08276-282700
ಕ್ರ.ಸಂ: ಸಾ.ಆ.ಸೋ./ಟೆಂಡರ್03/ಸರಬ/2025-26 ದಿನಾಂಕ:18/06/2025

ಇ-ಪ್ರಕ್ಯೂರ್‌ಮೆಂಟ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ, ಸೋಮವಾರಪೇಟೆ, ಕೊಡಗು ಜಿಲ್ಲೆ, ಇಲ್ಲಿಗೆ 2025-26ನೇ ಸಾಲಿನ 31-03-2026 ರವರೆಗೆ ಮಾತ್ರ ಪಥ್ಯಾಹಾರದ ಸಿದ್ದಪಡಿಸಿದ ಆಹಾರ ಸರಬರಾಜಿಗಾಗಿ ಅರ್ಹ ಟೆಂಡರ್ ದಾರರಿಂದ/ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಪಾರದರ್ಶಕ ಅಧಿನಿಯಮ 1999-2000 ಮೇರೆಗೆ, ದ್ವಿ ಲಕೋಟೆ ಪದ್ಧತಿಯನ್ವಯ, ಮೊಹರಾದ ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ, ಇ.ಎಂ.ಡಿ ಮೊತ್ತ. ಮತ್ತು ಇತರೆ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು www.eproc.karnataka.gov.in ವೆಬ್ ಸೈಟ್ ನಿಂದ ಡೌನಲೋಡ ಮಾಡಿಕೋಂಡು ಸಲ್ಲಿಸುವ ಮೂಲಕ ಇ-ಪ್ರಕ್ಯೂರ್‌ಮೆಂಟ್ ನಲ್ಲಿ ಭಾಗವಹಿಸಬಹುದು. e-portal ಮೂಲಕ ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ:17-06-2025 ಮತ್ತು ಭರ್ತಿಮಾಡಿದ ಟೆಂಡರ್‌ಗಳನ್ನು ದಿನಾಂಕ:17-07-2025 ಸಂಜೆ 4 ಗಂಟೆಯೊಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ, ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಅಥವಾ ವೆಬ್‌ಸೈಟ್‌ನಲ್ಲಿ ಕಾಣಬಹುದು.

ಸಹಿ/-
ಆಡಳಿತ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ, ಸೋಮವಾರಪೇಟೆ

ಬಿಲ್ ಕಲೆಕ್ಟರ್, ನೀರುಗಂಟಿ ಲೋಕಾ ಬಲೆಗೆ

ದಾವಣಗೆರೆ: ನಿವೇಶನದ ಹಕ್ಕು ಪತ್ರ ನೀಡಲು ಐದು ಸಾವಿರ ರು. ಲಂಚಕ್ಕೆ ಬೇಡಿಕೆ ಇಟ್ಟು ಆ ಲಂಚದ ಹಣ ಪಡೆಯುವ ವೇಳೆ ಗ್ರಾ.ಪಂ ಬಿಲ್ ಕಲೆಕ್ಟರ್ ಹಾಗೂ ನೀರುಗಂಟಿ ಇಬ್ಬರು ಲೋಕಾಯುಕ್ತರ ಬಲೆಗೆ ಬಿದ್ದಿರುವ ಘಟನೆ ನಡೆದಿದೆ. ದೇವರಹಳ್ಳಿ ಗ್ರಾ.ಪಂ ಹಂಗಾಮಿ ಬಿಲ್ ಕಲೆಕ್ಟರ್ ಲೋಕೇಶ ಹಾಗೂ ನೀರುಗಂಟಿ ಶೇಖರಪ್ಪ ಲೋಕಾಯುಕ್ತ ಬಲೆಗೆ ಬಿದ್ದ ಅಧಿಕಾರಿಗಳು. ಇಂದಿರಾ ಗ್ರಾಮೀಣ ವಸತಿ ನಿವೇಶನದಡಿ 2016ನೇ ಸಾಲಿನಲ್ಲಿ ಮಂಜೂರಾಗಿದ್ದ ವಸತಿ ಯೋಜನೆಯ ನಿವೇಶನದ ಹಕ್ಕುಪತ್ರ ನೀಡಲು 5 ಸಾವಿರ ರೂಪಾಯಿ ಲಂಚ ಪಡೆಯುವ ವೇಳೆ ಈ ಘಟನೆ ನಡೆದಿದೆ. ಜಿಲ್ಲೆಯ ಚನ್ನಗಿರಿ ತಾಲೂಕಿನ ದೇವರಹಳ್ಳಿ ಗ್ರಾಮದಲ್ಲಿ ಈ ಘಟನೆ ನಡೆದಿದೆ.

ಸಮಾಚಾರ ಸಣ್ಣದಲ್ಲ

ಹೆಣ್ಣು ಹುಲಿ ದೇವಿ ಸಾವು

ಬಳ್ಳಾರಿ: ಜಿಲ್ಲೆಯ ಕಮಲಾಪುರದ ಅಟಲ್‌ಜೀ ಮೃಗಾಲಯದಲ್ಲಿದ್ದ ಹೆಣ್ಣು ಹುಲಿ ದೇವಿ ವಯೋಸಹಜ ಕಾಯಿಲೆಯಿಂದ ಸಾವನ್ನಪ್ಪಿದೆ. ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರದ ಶ್ರೀಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್ ಮೃಗಾಲಯ ದಲ್ಲಿದ್ದ ದೇವಿ ಎಂಬ ಹೆಸರಿನ ಹೆಣ್ಣು ಹುಲಿ ವಯೋಸಹಜ ಕಾಯಿಲೆಯಿಂದ ಮೃತಪಟ್ಟಿದೆ. ಅಂದಾಜು 18 ರಿಂದ 19 ವರ್ಷದ ದೇವಿ ಮಾನವ-ವನ್ಯಜೀವಿ ಸಂಘರ್ಷದಲ್ಲಿ ಸಿಲುಕಿ ತೀವ್ರವಾಗಿ ಗಾಯಗೊಂಡು ನಿತ್ರಾಣವಾಗಿತ್ತು. ಹೀಗಾಗಿ ಹೆಚ್ಚಿನ ಚಿಕಿತ್ಸೆಗಾಗಿ ಶ್ರೀಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್ ಮೃಗಾಲಯಕ್ಕೆ ಸ್ಥಳಾಂತರಿಸಲಾಗಿತ್ತು. ಕಳೆದ 2 ವರ್ಷಗಳಿಂದ ಮೃಗಾಲಯದಲ್ಲಿರುವ ರಕ್ಷಣಾ ಕೇಂದ್ರದಲ್ಲಿ ವೈದ್ಯೋಪಚಾರ ನೀಡಲಾಗಿತ್ತು. ಆರೋಗ್ಯದಲ್ಲಿಯೂ ಸುಧಾರಣೆ ಕಂಡು ಬಂದಿತ್ತು. ಆದರೆ ಇದೀಗ ವಯೋಸಹಜವಾಗಿ ಮೃತಪಟ್ಟಿದೆ.

ಉದ್ಯೋಗ ಖಾತ್ರಿ: ಗೋಲ್‌ಮಾಲ್

ಬಾಗಲಕೋಟೆ: ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಗೋಲ್‌ಮಾಲ್ ನಡೆದಿರುವ ಬಗ್ಗೆ ಕೆಆರ್‌ಎಸ್ ಪಕ್ಷದ ಸಂತೋಷ ಹೂಗಾರ ಆರೋಪಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯ ಇಳಕಲ್ ತಾಲೂಕಿನ ಗಂಜಾಳ ಗ್ರಾಪಂ ವ್ಯಾಪ್ತಿಯ ಚಿಕ್ಕನಾಳ ಗ್ರಾಮದಲ್ಲಿ ಉದ್ಯೋಗ ಖಾತ್ರಿ ಯೋಜನೆಗಾಗಿ ಪುರುಷನೊಬ್ಬ ಮಹಿಳೆ ವೇಷದಲ್ಲಿ ಫೋಟೊ ಅಪ್‌ಲೋಡ್ ಮಾಡಿದ್ದಾನೆ ಎಂದು ಅನೇಕ ದಾಖಲೆಗಳನ್ನು ಬಿಡುಗಡೆಗೊಳಿಸಿದರು. ಮಂಗಳಮ್ಮ ಎಂಬ ಹೆಸರಿನಲ್ಲಿ ಸೀರೆ ಉಟ್ಟ ಪುರುಷನ ಫೋಟೊ ಅಪ್‌ಲೋಡ್ ಮಾಡಲಾಗಿದೆ. ಪುರುಷ ಸೀರೆ ಉಟ್ಟಿರುವ ಒಂದೇ ಫೋಟೊ 3 ಕಡೆಗಳಲ್ಲಿ ಅಪ್ ಲೋಡ್ ಆಗಿದೆ. ಅಂಗನವಾಡಿ ಕೆಲಸಕ್ಕೂ ಬೇರೆ ಬೇರೆ ಹೆಸರಲ್ಲಿ ಒಂದೇ ಫೋಟೊ ಅಪ್ ಲೋಡ್ ಮಾಡಲಾಗಿದೆ. ಯೋಜನೆಗೆ ಕನ್ನಾ ಹಾಕುವಲ್ಲೂ ಅಧಿಕಾರಿಗಳು ಶಾಮೀಲು ಆಗಿದ್ದಾರಾ ಎಂಬ ಶಂಕೆ ವ್ಯಕ್ತ ಪಡಿಸಿದರು.

ಮೊಬೈಲ್ ಚಟಕ್ಕೆ ಬಿದ್ದ ಪತ್ನಿಯ ಕೊಲೆ

ಉಡುಪಿ: ಪತ್ನಿ ಹೆಚ್ಚು ಸಮಯ ಮೊಬೈಲ್ ಬಳಸುತ್ತಾಳೆ ಎಂದು ಪತಿ ಕತ್ತಿಯಿಂದ ಕಡಿದು ಹತ್ಯೆಗೈದ ಘಟನೆ ಬ್ರಹ್ಮಾವರ ತಾಲೂಕಿನ ಹಿಲಿಯಾಣ ಗ್ರಾಮದ ಹೊಸಮಠ ಎಂಬಲ್ಲಿ ನಡೆದಿದೆ. ಹತ್ಯೆಯಾದ ಮಹಿಳೆಯನ್ನು ರೇಖಾ ಎಂದು ಗುರುತಿಸಲಾಗಿದೆ. ಕೊಲೆಗೈದ ಆರೋಪಿ ಗಣೇಶ್ ಪೂಜಾರಿಯನ್ನು ಪೊಲೀಸರು ಬಂಧಿಸಿದ್ದಾರೆ. ಹೆಂಡತಿ ಹೆಚ್ಚಿನ ಸಮಯ ಮೊಬೈಲ್ ಬಳಕೆ ಮಾಡುವ ವಿಚಾರಕ್ಕೆ, ಇಬ್ಬರ ನಡುವೆ ಗಲಾಟೆಯಾಗಿದೆ. ಈ ವೇಳೆ, ಆರೋಪಿ ಕತ್ತಿಯಿಂದ ಹಲ್ಲೆ ನಡೆಸಿ ಹತ್ಯೆ ಮಾಡಿದ್ದಾನೆ. ಇನ್ನೂ ಆರೋಪಿ ವಿಪರೀತ ಮದ್ಯ ವ್ಯಸನಿಯಾಗಿದ್ದ ಎಂದು ತಿಳಿದು ಬಂದಿದೆ. ಈ ಸಂಬಂಧ ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟ್ವೀಟೂ-ಖಾರಾ

ಪ್ರಲ್ಹಾದ್ ಜೋಶಿ, ಸಂಸದ

ಕರ್ನಾಟಕದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಸೃಷ್ಟಿಸಿ, ಕಾನೂನು ಸುವ್ಯವಸ್ಥೆ ಹಾಳುಮಾಡುತ್ತಾ, ವಾಕ್ ಸ್ವತಂತ್ರ ಕಿತ್ತುಕೊಂಡು ತುಘಲಕ್ ದರ್ಬಾರ್ ನಡೆಸುತ್ತಿದ್ದಾರೆ. ಯುವಬ್ರಿಗೇಡ್ ಆಯೋಜಿಸಿರುವ ಇನ್ನೀಗ ಅಖಂಡ ಭಾರತ ನಿರ್ಮಿಸಿಯೇ ವಿಶ್ರಾಂತಿ ವಿಚಾರ ಉಪನ್ಯಾಸ ಕಾರ್ಯಕ್ರಮಕ್ಕೆ ಚಕ್ರವರ್ತಿ ಸೂಲಿಬೆಲೆ ಅವರಿಗೆ ಭಾಗವಹಿಸಲು ಅವಕಾಶ ಕೊಡಬಾರದು ಎನ್ನುವುದು ಕಾಂಗ್ರೆಸ್ ಪಕ್ಷದ ಯಾವ ಸಂಸ್ಕೃತಿ? ಇದು ಸಂವಿಧಾನ ವಿರೋಧಿ ಚಟುವಟಿಕೆಯಲ್ಲವೇ? ಸಾರ್ವಜನಿಕ ಕಾರ್ಯಕ್ರಮದಲ್ಲಿ ರಾಜಕೀಯ ಮಾತನಾಡಬಾರದು ಎಂದು ತಾಕೀತು ಮಾಡಿ ಪೊಲೀಸರು ನೋಟಿಸ್ ಕೊಡುವುದು ವಾಕ್ ಸ್ವತಂತ್ರ ಕಿತ್ತುಕೊಳ್ಳವುದು ಅಲ್ಲವೇ, ಇದು ಅಸಹಿಷ್ಣುತೆಯ ಪರಮಾವಧಿಯಲ್ಲವೇ ಸಿದ್ದರಾಮಯ್ಯನವರೇ?.



ಅಪ್ಪು

ಚಕ್ರವರ್ತಿ ಸೂಲಿಬೆಲೆ ಹೇಳಿದ 10 ಸತ್ಯಗಳನ್ನು ತಿಳಿಸಿ.

ಆದಿಚುಂಚನಗಿರಿ ವಿಶ್ವವಿದ್ಯಾಲಯ, ಬಿಜಿಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಉದ್ಘಾಟನೆ | ಗೃಹ ಸಚಿವ ಅಮಿತ್ ಶಾ ಭಾಗಿ

ದೇಶದ ಆರೋಗ್ಯ ಕ್ಷೇತ್ರದಲ್ಲಿ ಮಹತ್ತರ ಸಾಧನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯಂತೆ ದೇಶದ ಆರೋಗ್ಯ ವ್ಯವಸ್ಥೆಯಲ್ಲಿ ಕೇಂದ್ರ ಸರಕಾರ ಕ್ರಾಂತಿಕಾರಕ ಹೆಜ್ಜೆ ಇಟ್ಟಿದ್ದು, ಕಳೆದ 11 ವರ್ಷಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಪರಿವರ್ತನೆ ತರಲಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಬೆಂಗಳೂರು ಉತ್ತರ ತಾಲೂಕಿನ ನಗರೂರಿನ ಬಿಜಿಎಸ್ ಎಂಸಿಎಚ್ ಆವರಣದಲ್ಲಿ ಆದಿಚುಂಚನಗಿರಿ ವಿಶ್ವವಿದ್ಯಾಲಯ, ಬಿಜಿಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಉದ್ಘಾಟಿಸಿ ಮಾತನಾಡಿ, ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ 26 ವರ್ಷಗಳ ಹಿಂದೆ ಬಡವರಿಗೆ ಆರೋಗ್ಯ ಚಿಕಿತ್ಸಾ ವೆಚ್ಚ ಭರಿಸುವುದು ಬಹುದೊಡ್ಡ ಸವಾಲು ಎಂದು ಚಿಂತಿತರಾಗಿದ್ದರು. ಆ ಸವಾಲನ್ನು ಇದೀಗ ಕೇಂದ್ರ ಸರಕಾರ ಸಾಕಾರಗೊಳಿಸಿದೆ. 60 ಕೋಟಿ ಜನರಿಗೆ ಪ್ರಧಾನಮಂತ್ರಿ ಆಯುಷ್ಮಾನ್ ಆರೋಗ್ಯ ವಿಮಾ ಯೋಜನೆಯಡಿ ಪ್ರತಿ ವರ್ಷ ವೆಚ್ಚ ಐದು ಲಕ್ಷ ರು. ಮೊತ್ತದಷ್ಟು ಉಚಿತ ಚಿಕಿತ್ಸೆ ದೊರೆಯುತ್ತಿದೆ. ಪ್ರಧಾನಮಂತ್ರಿ ಜನೌಷಧಿ ಮಳಿಗೆಗಳಲ್ಲಿ ರಿಯಾಯಿತಿ ದರದಲ್ಲಿ ಔಷಧಿಗಳನ್ನು ಒದಗಿಸುತ್ತಿದ್ದೇವೆ. ಮಗು ಗರ್ಭಾವಸ್ಥೆಯಿಂದ ಹಿಡಿದು ಬೆಳೆದುದೊಡ್ಡ ವರಾಗುವ ತನಕ ಮಿಷನ್ ಇಂದ್ರ ಧನುಷ್ ಸೇರಿದಂತೆ ಹಲವಾರು ಆರೋಗ್ಯ ಯೋಜನೆಗಳಡಿ ಸಮಗ್ರ ದೃಷ್ಟಿಕೋನದ ಮೂಲಕ ಆರೋಗ್ಯಪೂರ್ಣ ಸಮಾಜ ನಿರ್ಮಿಸಲಾಗುತ್ತಿದೆ ಎಂದರು. ಯೋಗ, ಯೋಗಕ್ಷೇಮ, ಲಸಿಕೆ ನೀಡುವ ಮೂಲಕ ಆರೋಗ್ಯವಂತ ವ್ಯಕ್ತಿಗಳನ್ನು ನಿರ್ಮಿಸಲು ಒತ್ತು ನೀಡಲಾಗಿದೆ. 2014ಕ್ಕೂ ಮುನ್ನ ದೇಶದಲ್ಲಿ 7 ಏಮ್ಸ್ ಗಳಿದ್ದವು. ಇದೀಗ ಅವುಗಳ ಸಂಖ್ಯೆ 23 ಕ್ಕೆ ಏರಿಕೆಯಾಗಿದೆ. ವೈದ್ಯಕೀಯ ಕಾಲೇಜುಗಳ ಸಂಖ್ಯೆ 387 ರಿಂದ 780ಕ್ಕೆ, ವೈದ್ಯಕೀಯ ಸೀಟುಗಳ ಸಂಖ್ಯೆ 51 ಸಾವಿರದಿಂದ 1.18 ಲಕ್ಷ, ಪಿಜಿ ಸೀಟುಗಳು 31 ಸಾವಿರದಿಂದ 74 ಸಾವಿರಕ್ಕೆ ಏರಿಕೆಯಾಗಿದೆ. ಈ ಕ್ರಮಗಳಿಂದ ದೇಶದಲ್ಲಿ ನುರಿತ ವೈದ್ಯಕೀಯ ಸಿಬ್ಬಂದಿ ಪ್ರಮಾಣ ವೃದ್ಧಿಸಿದೆ ಎಂದರು.



ಬೆಂಗಳೂರು ಉತ್ತರ ತಾಲೂಕಿನ ನಗರೂರಿನ ಬಿಜಿಎಸ್ ಎಂಸಿಎಚ್ ಆವರಣದಲ್ಲಿ ಆದಿಚುಂಚನಗಿರಿ ವಿಶ್ವವಿದ್ಯಾಲಯ, ಬಿಜಿಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಉದ್ಘಾಟನಾ ಕಾರ್ಯಕ್ರಮವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಉದ್ಘಾಟಿಸಿದರು. ಡಾ.ನಿರ್ಮಲಾನಂದ ಸ್ವಾಮೀಜಿ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ,ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್, ಚಿತ್ರದುರ್ಗ ಮಾದಾರ ಚನ್ನಯ್ಯ ಗುರುಪೀಠದ ಮಾದಾರ ಚನ್ನಯ್ಯ ಸ್ವಾಮೀಜಿ, ಕೇಂದ್ರ ಸಚಿವ ವಿ. ಸೋಮಣ್ಣ, ಪ್ರತಿಪಕ್ಷ ನಾಯಕ ಆರ್.ಅಶೋಕ. ಸಂಸದ ಡಾ.ಕೆ. ಸುಧಾಕರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು

ಬಾಲ ಗಂಗಾಧರನಾಥ ಸ್ವಾಮೀಜಿ ಕನಸು ನನಸು

ಡಾ.ನಿರ್ಮಲಾನಂದ ಸ್ವಾಮೀಜಿ ಮಾತನಾಡಿ, 1974 ರಲ್ಲಿ ಸರಿಯಾದ ಆರೋಗ್ಯ ಸೇವೆ ಸಿಗದೇ ನಮ್ಮ ಗುರುಗಳು ದೇಹ ತ್ಯಾಗ ಮಾಡಿದಾಗ ನಮ್ಮ ಹಿಂದಿನ ಗುರುಗಳು ಮಾಡಿದ ಸಂಕಲ್ಪದಿಂದ ಹಲವಾರು ಆರೋಗ್ಯ, ವೈದ್ಯಕೀಯ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಸಾಧ್ಯವಾಯಿತು. ವಿವಿ ಸ್ಥಾಪನೆ ಮೂಲಕ ಬಾಲ ಗಂಗಾಧರನಾಥ ಸ್ವಾಮೀಜಿ ಅವರ ಕನಸು ನನಸಾಗಿದೆ. ಅಮಿತ್ ಶಾ ಅವರು ದೊಡ್ಡ ಶಕ್ತಿ. ಮರ ಹಣ್ಣು, ಹೂವು ನೀಡಬೇಕಾದರೆ ಮರದ ಬೇರುಗಳು ಆಳವಾಗಿರಬೇಕಾಗುತ್ತದೆ. ಹಾಗೆಯೇ ಅಮಿತ್ ಶಾ ಗಟ್ಟಿತನದ ನಾಯಕರು. ನಮ್ಮ ದೇಶದ ಸಂಸ್ಕೃತಿ, ಪರಂಪರೆ ಶ್ರೇಷ್ಠವಾದದ್ದು. ಭಾರತ ಉಳಿದರೆ ಅಳಿಯುವವರಾರು, ಭಾರತ ಅಳಿದರೆ ಉಳಿಯುವವರು ಯಾರು ಎಂಬ ಮಾತು ಅಕ್ಷರಶಃ ಸತ್ಯ. ನಮ್ಮಲ್ಲಿರುವ ಶತಮಾನಗಳ ಜ್ಞಾನ ಸಂಪತ್ತು ಮತ್ತು ಪರಂಪರೆಯನ್ನು ಉಳಿಸಬೇಕಾಗಿದೆ ಎಂದರು.

ಆದಿಚುಂಚನಗಿರಿ ಮಹಾ ಸಂಸ್ಥಾನಕ್ಕೆ ಮಹೋನ್ನತ ಸ್ಥಾನ ತಂದುಕೊಟ್ಟ ಬಾಲಗಂಗಾಧರ ನಾಥ ಸ್ವಾಮೀಜಿ ಅವರನ್ನುಸ್ಮರಿಸಲೇಬೇಕು. ಅವರು 40 ವರ್ಷಗಳಲ್ಲಿ ಹಲವಾರು ಆಸ್ಪತ್ರೆಗಳನ್ನು ನಿರ್ಮಿಸಿದ್ದು, ಅನಾಥಾಲಯ, ವಿದ್ಯಾಸಂಸ್ಥೆಗಳನ್ನು ಕಟ್ಟಿದ್ದಾರೆ. ಈ ಪರಂಪರೆ ಮುಂದುವರಿಯಲಿ. ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಗೆ ನ್ಯಾಕ್ ಪ್ಲಸ್ ಮಾನ್ಯತೆ ದೊರೆತಿರುವುದು ಇಲ್ಲಿನ ಶಿಕ್ಷಣ ಗುಣಮಟ್ಟಕ್ಕೆ ಸೂಕ್ತ ನಿದರ್ಶನವಾಗಿದೆ. ಡಾ. ನಿರ್ಮಲಾನಂದ ಸ್ವಾಮೀಜಿ ಅವರು ಕರ್ಮಯೋಗಿಯಂತೆ ಕೆಲಸ ಮಾಡುತ್ತಿದ್ದಾರೆ.

-ಅಮಿತ್ ಶಾ, ಕೇಂದ್ರ ಗೃಹ ಸಚಿವ

ಆದಿ ಚುಂಚನಗಿರಿ ಮಠಕ್ಕೆ 1800 ವರ್ಷಗಳ ಹಿನ್ನೆಲೆಯಿದ್ದು, ಈ ಭವ್ಯ ಪರಂಪರೆ ಡಾ. ನಿರ್ಮಲನಾನಂದ ನಾಥ ಸ್ವಾಮೀಜಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಸೇವೆ, ಶಿಕ್ಷಣ, ಸಮರ್ಪಣೆಯಂತಹ ಉನ್ನತ ಮೌಲ್ಯಗಳನ್ನು ಪರಿಪಾಲಿಸುತ್ತಿದ್ದಾರೆ. ಸೇವಾ ಮನೋಭಾವ, ನಮ್ಮ ಸಂಸ್ಕೃತಿ, ಧರ್ಮ ರಕ್ಷಣೆ ಜತೆಗೆ ಸಮಾಜವನ್ನು ಜೋಡಿಸುವ ಏಕತೆಯ ಕೆಲಸ ಮಾಡುತ್ತಿರುವುದು ಅತ್ಯಂತ ಶ್ಲಾಘನೀಯ ಎಂದು ಹೇಳಿದರು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್, ಚಿತ್ರದುರ್ಗ ಮಾದಾರ ಚನ್ನಯ್ಯ ಗುರುಪೀಠದ ಮಾದಾರ ಚನ್ನಯ್ಯ ಸ್ವಾಮೀಜಿ , ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಪ್ರತಿಪಕ್ಷ ನಾಯಕ ಆರ್.ಅಶೋಕ. ಸಂಸದ ಡಾ.ಕೆ. ಸುಧಾಕರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಒಂದೇ ಚಾಪೆ ಮೇಲೆ ಕುಳಿತು ಜನರ ಸಮಸ್ಯೆಗೆ ಪರಿಹಾರ ಕಲ್ಪಿಸೋಣ

ಸಂಸದರೇ ನಮ್ಮ ಜತೆ ಹಳ್ಳಿಗಳಿಗೆ ಬನ್ನಿ

ಗೊಂಗಡಿಪುರ ಗ್ರಾಮದಲ್ಲಿ ಕೆಳಗೆ ಕುಳಿತು ಗ್ರಾಮಸ್ಥರ ಅಹವಾಲು ಪರಿಶೀಲಿಸುತ್ತಿರುವ ಶಾಸಕ ಪ್ರದೀಪ್ ಈಶ್ವರ್.

ಚಿಕ್ಕಬಳ್ಳಾಪುರ: ಸಂಸದ ಡಾ.ಕೆ.ಸುಧಾಕರ್ ಅವರೆ ದಯವಿಟ್ಟು ನಮ್ಮೂರಿಗೆ ನಮ್ಮ ಶಾಸಕ ಕಾರ್ಯಕ್ರಮಕ್ಕೆ ತಾವು ಕೂಡ ನನ್ನ ಜತೆ ನೀವೂ ಬನ್ನಿ. ಹಳ್ಳಿಗಳಿಗೆ ಇಬ್ಬರೂ ತೆರಳಿ ಒಂದೇ ಚಾಪೆ ಮೇಲೆ ಕುಳಿತು ಜನರ ಸಮಸ್ಯೆಗೆ ಪರಿಹಾರ ಕಲ್ಪಿಸೋಣ. ಕೆಲಸಗಳಿಗೆ ಮತ್ಸರವಿಲ್ಲದೆ ಮೆಚ್ಚುಗೆ ಸೂಚಿಸೋಣ ಎಂದು ಶಾಸಕ ಪ್ರದೀಪ್ ಈಶ್ವರ್ ಸಂಸದ ಡಾ.ಕೆ. ಸುಧಾಕರ್ ಅವರಿಗೆ ಬಹಿರಂಗ ಆಹ್ವಾನ ನೀಡಿದರು.

ತಾಲೂಕಿನ ಗೊಲ್ಲಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಪೈಯೂರು,ಇಟ್ಟಪನಹಳ್ಳಿ ಮತ್ತು ಗೊಂಗಡಿಪುರ ಗ್ರಾಮಗಳಿಗೆ 36 ಇಲಾಖೆಗಳ ಅಧಿಕಾರಿಗಳೊಂದಿಗೆ ತೆರಳಿ ಅಹವಾಲು ಸ್ವೀಕರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ನಗರ ನಿವಾಸಿಗಳಿಗೆ ಬಿ ಖಾತೆ ನೀಡುವುದರಲ್ಲಿ ವಿಳಂಬ ಕುರಿತು ಮಾತನಾಡಿ, ನಗರಸಭೆ ಕಾರ್ಯಗಳಲ್ಲಿ ನನ್ನ ಹಸ್ತಕ್ಷೇಪವಿಲ್ಲ. ಖಾತೆ ತಯಾರಿದ್ದರೇ ಅಧ್ಯಕ್ಷರು, ಪೌರಾಯುಕ್ತರು ವಿತರಿಸಲಿ, ಯಾವುದೋ ಕಾರಣಕ್ಕೆ ಪೌರಾಯುಕ್ತರ ಮೇಲೆ ಕೇಸು ದಾಖಲು ಮಾಡುತ್ತೇವೆ ಎಂದರೆ ಪೌರಾಯುಕ್ತರು ಏನು ಮಾಡಬೇಕು ಎಂದರು.

ನಂದಿ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಸಿ ಚಿಕ್ಕಬಳ್ಳಾಪುರಕ್ಕೆ ಏನನ್ನೂ ಘೋಷಣೆ ಮಾಡಿಲ್ಲ ಎಂದರೆ ಜಿಲ್ಲೆಯ ಜನರಿಗೆ ಬೇಸರವಾಗಲ್ಲವೇ? ಹಾಗಾಗಿ ನಾವೇ ಖುದ್ದು ಸಭೆಯನ್ನು ಮುಂದೂಡಲು ಮನವಿ ಮಾಡಿದ್ದೆವು.ನಮ್ಮ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿಗಳು ಸಭೆಯನ್ನು ಬೆಂಗಳೂರಿಗೆ ಶಿಫ್ಟ್ ಮಾಡಿದರು. ಬರುವ ತಿಂಗಳು ಜುಲೈ 2 ರಂದು ನಂದಿ ಬೆಟ್ಟದಲ್ಲೇ ಸಚಿವ ಸಂಪುಟ ಸಭೆ ನಡೆಯಲಿದೆ.

-ಪ್ರದೀಪ್ ಈಶ್ವರ್, ಶಾಸಕ

ದ್ವಿಶತಕ ಬಾರಿಸುವ ಸನಿಹ: ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಬೇಕೆಂಬ ಉದ್ದೇಶದಿಂದ ಶಾಸಕ ಪ್ರದೀಪ್ ಈಶ್ವರ್ ಪ್ರಾರಂಭಿಸಿರುವ ನಮ್ಮೂರಿಗೆ ನಮ್ಮ ಶಾಸಕ ಕಾರ್ಯಕ್ರಮ ಶೀಘ್ರವೇ 200 ಹಳ್ಳಿಗಳು ಪೂರೈಸಿ ದ್ವಿಶತಕ ಬಾರಿಸುವ ಸನಿಹದಲ್ಲಿದೆ. ಶುಕ್ರವಾರ ನಡೆದ ನಮ್ಮೂರಿಗೆ ನಮ್ಮ ಶಾಸಕ ಕಾರ್ಯಕ್ರಮದಲ್ಲಿ ಅಧಿಕಾರಿಗಳ ಜತೆ ತೆರಳಿ ಗ್ರಾಮಗಳಲ್ಲಿನ ಮೂಲಭೂತ ಸಮಸ್ಯೆಗಳಾದ ಚರಂಡಿ ಸಮಸ್ಯೆ, ರಸ್ತೆ ಸಮಸ್ಯೆ, ವಿದ್ಯುತ್ ದೀಪದ ಸಮಸ್ಯೆ, ಆರೋಗ್ಯ ಸಮಸ್ಯೆ, ಹೊಲಗಳಿಗೆ ತೆರಳುವ ರಸ್ತೆಯ ಸಮಸ್ಯೆ,ಸ್ಮಶಾನ ಜಾಗದ ಒತ್ತುವರಿ ತೆರವು,ಪಿಂಚಣಿ ಸೌಲಭ್ಯ ಸೇರಿದಂತೆ ಹಲವಾರು ಸಮಸ್ಯೆಗಳ ಬಗ್ಗೆ ಶಾಸಕರ ಬಳಿ ಹೇಳಿಕೊಂಡಿದ್ದು ಜನರ ಸಮಸ್ಯೆಗಳನ್ನು ಅರಿತು ಅಲ್ಲೆ ನೆರೆದಿದ್ದ ಅಧಿಕಾರಿಗಳಿಗೆ ಆದಷ್ಟು ಬೇಗ ಬಗೆಹರಿಸಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

ಈ ಸಂದರ್ಭದಲ್ಲಿ ಈ ವೇಳೆ ತಾಲೂಕು ತಹಸೀಲ್ದಾರ್ ರಶ್ಮೀ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಮಂಜುನಾಥ್, ವಿವೇಕ್ ಮಹದೇವ್, ಪಿಡಿಒ ಸತ್ಯಪ್ರಸಾದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ನಾಗಭೂಷಣ್, ರಕ್ಷಿತ್ ರೆಡ್ಡಿ,ಯುವ ಕಾಂಗ್ರೆಸ್ ಅಧ್ಯಕ್ಷ ನಾಗೇಶ್ ರೆಡ್ಡಿ,ಟಿಎಪಿಸಿಎಂಎಸ್ ನಿರ್ದೇಶಕ ಬಿಸೇಗಾರಹಳ್ಳಿ ನಾಗೇಶ್,ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯ ಹಮೀಮ್, ಮುಖಂಡರಾದ ಲಾಯರ್ ಮುನೇಗೌಡ, ಗವಿರಾಯಪ್ಪ,ಡಾನ್ಸ್ ಇದ್ದರು.

ರಾಜ್ಯದ ಬೆಳವಣಿಗೆಗಳ ಬಗ್ಗೆ ಹೈಕಮಾಂಡ್ ಜತೆ ಚರ್ಚೆ

ಕುತೂಹಲ ಮೂಡಿಸಿದ ಸಿಎಂ ದೆಹಲಿ ಭೇಟಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರದಿಂದ ಮೂರು ದಿನಗಳ ಕಾಲ ದೆಹಲಿ ಭೇಟಿ ನೀಡುತ್ತಿದ್ದು ಕುತೂಹಲ ಮೂಡಿಸಿದ್ದು, ರಾಷ್ಟ್ರಪತಿ ಸೇರಿದಂತೆ ಹೈಕಮಾಂಡ್ ನಾಯಕರನ್ನು ಭೇಟಿಯಾಗಲಿದ್ದಾರೆ ಎನ್ನಲಾಗಿದೆ.

ಸೋಮವಾರ ಸಂಜೆ ದೆಹಲಿಗೆ ಪ್ರಯಾಣಿಸಲಿರುವ ಸಿಎಂ ಸಿದ್ದರಾಮಯ್ಯ ಮಂಗಳವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲಿದ್ದಾರೆ. ರಾಜ್ಯದಲ್ಲಿನ ಶಾಲೆಗಳಲ್ಲಿ 1 ರಿಂದ 5ನೇ ತರಗತಿವರೆಗೆ ಮಾತೃ ಭಾಷೆಯ ಮಾಧ್ಯಮದಲ್ಲೇ ಶಿಕ್ಷಣ ಹಾಗೂ 1 ರಿಂದ 10 ನೇ ತರಗತಿವರೆಗೆ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ಕಡ್ಡಾಯವಾಗಿ ಕಲಿಸುವ ಕುರಿತ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ (ಕರ್ನಾಟಕ ತಿದ್ದುಪಡಿ)-2015’ ಹಾಗೂ ಅಲ್ಪಸಂಖ್ಯಾತರಿಗೆ ಗುತ್ತಿಗೆಯಲ್ಲಿ ಮೀಸಲಾತಿ ಕಲ್ಪಿಸುವ ಕೆಟಿಪಿಪಿ ತಿದ್ದುಪಡಿ ವಿಧೇಯಕ ಸೇರಿದಂತೆ ರಾಷ್ಟ್ರಪತಿಗಳ ಅಂಕಿತ ಬಾಕಿರುವ ಐದು ಪ್ರಮುಖ ವಿಧೇಯಕಗಳ ಕುರಿತು ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಷ್ಟ್ರಪತಿಗಳ ಖುದ್ದು ಭೇಟಿಗೆ ದೆಹಲಿಗೆ ತೆರಳಲಿದ್ದಾರೆ ಎನ್ನಲಾಗಿದೆ.

ಈ ವೇಳೆ ರಾಜ್ಯಪಾಲರು ಅನುಮತಿ ನಿರಾಕರಿಸಿ ರಾಷ್ಟ್ರಪತಿಗಳಿಗೆ ಕಳುಹಿಸಿರುವ ಅಲ್ಪಸಂಖ್ಯಾತರಿಗೆ ಗುತ್ತಿಗೆ ಹಾಗೂ ಖರೀದಿಯಲ್ಲಿ ಮೀಸಲಾತಿ ಕಲ್ಪಿಸುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ತಿದ್ದುಪಡಿ ಕಾಯಿದೆ (ಕೆಟಿಪಿಪಿ)-2025 ಕಾಯಿದೆ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಮಸೂದೆ ಹಾಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ (ಕರ್ನಾಟಕ ತಿದ್ದುಪಡಿ)-2015, ಕರ್ನಾಟಕ ನೋಂದಣಿ ತಿದ್ದುಪಡಿ ಕಾಯಿದೆ-2025 ಹಾಗೂ ನೋಟರಿ ಕರ್ನಾಟಕ ತಿದ್ದುಪಡಿ ಕಾಯದೆ - 2025 ಸೇರಿ ಐದು ವಿಧೇಯಕಗಳ ಬಗ್ಗೆ ವಿವರಣೆ ನೀಡಿ ಅಂಗೀಕರಿಸಲು ಮನವೊಲಿಸುವ ಪ್ರಯತ್ನವನ್ನು ಸಿದ್ದರಾಮಯ್ಯ ಮಾಡಲಿದ್ದಾರೆ.

ಮುಸ್ಲಿಮರಿಗೆ 4% ಗುತ್ತಿಗೆ ಮೀಸಲಾತಿ ನೀಡುವ ಸಂಬಂಧದ ವಿಧೇಯಕವನ್ನು ರಾಜ್ಯಪಾಲರು ಎರಡು ಬಾರಿ ವಾಪಸು ಕಳುಹಿಸಿದ್ದರು. ಈ ಬಗ್ಗೆ ಸಿಎಂ ಅವರ ಖುದ್ದು ಭೇಟಿ ಸ್ಪಷ್ಟನೆ ನೀಡಿದರೂ ತಿರಸ್ಕರಿಸಿ 3 ಬಾರಿಗೆ ರಾಷ್ಟ್ರಪತಿಗಳಿಗೆ ಕಳುಹಿಸಲು ಮೇ ಕೊನೆಯ ವಾರ ನೋಟ್ ಕಳುಹಿಸಿದ್ದರು.

ಕೇಂದ್ರ ಸಚಿವರ ಭೇಟಿ

ಮಂಗಳವಾರ ಸಂಜೆ ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಲಿದ್ದಾರೆ. ಈ ವೇಳೆ 16ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಅನ್ಯಾಯವಾಗದಂತೆ ಕ್ರಮ ವಹಿಸುವಂತೆ ಮನವಿ ಮಾಡಲಿದ್ದಾರೆ.ಬುಧವಾರ ಪ್ರಧಾನಮಂತ್ರಿ, ನರೇಂದ್ರಮೋದಿ ಅವರ ಭೇಟಿಗೂ ಅನುಮತಿ ಕೋರಿದ್ದು, ಅವಕಾಶ ದೊರೆತರೆ ಭೇಟಿ ಮಾಡಿ ರಾಜ್ಯದ ವಿವಿಧ ಬೇಡಿಕೆಗಳು ಹಾಗೂ ಅನುದಾನ ತಾರತಮ್ಯದ ಬಗ್ಗೆ ಚರ್ಚಿಸಲಿದ್ದಾರೆ ಎಂದು ತಿಳಿದುಬಂದಿದ್ದು, ಇದಾದ ನಂತರ ರಾಜ್ಯದ ಬೆಳವಣಿಗೆಗಳ ಬಗ್ಗೆ ಹೈಕಮಾಂಡ್ ಜತೆ ಚರ್ಚಿಸಲಿದ್ದಾರೆ ಎನ್ನಲಾಗಿದೆ.

ನಾನು ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿ

ಬೆಳಗಾವಿ: ನಾನು ಕೂಡ ಕೆಪಿಸಿಸಿ ಅಧ್ಯಕ್ಷಸ್ಥಾನದ ಆಕಾಂಕ್ಷಿಯಾಗಿದ್ದೇನೆ. ಆದರೆ, ಹೈಕಮಾಂಡ್ ನಿರ್ಧಾರ ಮಾಡಬೇಕು ಅಲ್ಲವೇ? ಯಾವಾಗ ಬದಲಾವಣೆ ಆಗುತ್ತದೆ, ಯಾವಾಗ ಮಾಡುತ್ತಾರೆ ಅನ್ನೋದು ಹೈಕಮಾಂಡ್‌ಗೆ ಬಿಟ್ಟಿರುವ ವಿಚಾರ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ನಾನಂತೂ ಆಕಾಂಕ್ಷಿ ಇದ್ದೇನೆ. ಹೈಕಮಾಂಡ್ ಯಾವಾಗ ಮಾಡುತ್ತಾರೆ ಕಾದು ನೋಡಬೇಕು. ನಾನು ಯಾವುದೇ ಒತ್ತಡ ಹಾಕುವುದಿಲ್ಲ ಎಂದು ಹೇಳಿದರು. ಬೆಳಗಾವಿ ಜಿಲ್ಲಾ ವಿಭಜನೆ ವಿಚಾರದ ಕುರಿತು ಮಾತನಾಡಿ, ತಕ್ಷಣ ಆಗುತ್ತೆ ಅಂತಾ ಇಲ್ಲ. ಇದೇ ಸರಕಾರದಲ್ಲಿ ಜಿಲ್ಲೆ ವಿಭಜನೆ ಆಗಬೇಕು ಅನ್ನೋದು ನನ್ನ ಆಸೆಯಿದೆ, ಸ್ವಲ್ಪ ವಿಳಂಬ ಆಗುತ್ತಿದೆ. ನಾನಾ ಕಾರಣಗಳಿವೆ ಎಂದು ಹೇಳಿದರು.

ಹಿಂದೂ ಚಿಂತನಾ ಸಭೆಯಲ್ಲಿ ಪ್ರವೀಣ್ ಭಾಯಿ ತೊಗಾಡಿಯಾ ಹೇಳಿಕೆ

ಹಿಂದೂಗಳು 3 ಮಕ್ಕಳನ್ನು ಪಡೆದರೆ ಪ್ರಬಲ

ಮೈಸೂರು: ಹಿಂದೂ ದಂಪತಿಗಳು ಮೂರು ಮಕ್ಕಳನ್ನು ಪಡೆದರೆ ಹಿಂದೂಗಳು ಪ್ರಬಲವಾಗುತ್ತಾರೆ. ಎರಡು ಮಕ್ಕಳನ್ನು ಪಡೆದರೆ ದುರ್ಬಲರಾಗುತ್ತಾರೆ ಎಂದು ಅಂತಾರಾಷ್ಟ್ರೀಯ ಹಿಂದೂ ಪರಿಷತ್ ಸಂಸ್ಥಾಪಕ ಪ್ರವೀಣ್ ಭಾಯಿ ತೊಗಾಡಿಯಾ ಹೇಳಿದರು.

ಅಂತಾರಾಷ್ಟ್ರೀಯ ಹಿಂದೂ ಪರಿಷತ್, ರಾಷ್ಟ್ರೀಯ ಬಜರಂಗದಳದ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಆಲಮ್ಮ ಛತ್ರದಲ್ಲಿ ಹಮ್ಮಿಕೊಂಡಿದ್ದ ಹಿಂದೂ ಚಿಂತನಾ ಸಭೆಯಲ್ಲಿ ಮಾತನಾಡಿ, 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದಾಗ ಹಿಂದೂಗಳ ಜನಸಂಖ್ಯೆ 86% ಇತ್ತು. ಮುಸ್ಲಿಮರ ಸಂಖ್ಯೆ 6% ಇತ್ತು. ಹಿಂದೂಗಳ ಜನಸಂಖ್ಯೆ 79% ಕ್ಕೆ ಕುಸಿತವಾಗಿದೆ. ಮುಸ್ಲಿಮರ ಸಂಖ್ಯೆ 15% ಕ್ಕೆ ಏರಿಕೆಯಾಗಿದೆ. ಹಿಂದೂಗಳು ಬಹುಸಂಖ್ಯಾತರಾಗಿ ಇರುವವರೆಗೂ ಸುರಕ್ಷಿತವಾಗಿರುತ್ತಾರೆ. ಹಿಂದೂಗಳು ಅಲ್ಪಸಂಖ್ಯಾತರಾದರೆ ಅಪಾಯ ಎದುರಾಗಲಿದೆ.

ಬಿಎಸ್‌ವೈ ಕುಟುಂಬವನ್ನು ಬಿಜೆಪಿಯಿಂದ ಮುಕ್ತ ಮಾಡಿ

ರಾಜ್ಯ ಬಿಜೆಪಿ ಸದ್ಯ ಐಸಿಯುನಲ್ಲಿದೆ

ವಿಜಯಪುರ: ರಾಜ್ಯ ಬಿಜೆಪಿಯಲ್ಲಿ ಅಸಮಾಧಾನ ತುಂಬಿ ತುಳುಕುತ್ತಿದ್ದು ಸದ್ಯ ಐಸಿಯುನಲ್ಲಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ಒಂದು ಹೋರಾಟ ಮಾಡಬೇಕೆಂದರೆ ಜನ ಸೇರುವುದಿಲ್ಲ, ಇದಕ್ಕೆ ಕಾರಣ ಎಂದರೆ ರಾಜ್ಯ ಬಿಜೆಪಿ ನಾಯಕತ್ವ. ಇನ್ನೂ ಕುಮಾರಸ್ವಾಮಿಯವರ ಜತೆ ಕೂಡ ಹೊಂದಾಣಿಕೆ ಇಲ್ಲ. ಜೆಡಿಎಸ್ ನಮ್ಮ ಮಿತ್ರ ಪಕ್ಷವಾಗಿದ್ದರೂ ಕೂಡ ಅದನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಈಗಲಾದರೂ ಅಮಿತ್ ಶಾ ಅವರು ತಿಳಿದುಕೊಳ್ಳಬೇಕು.ಯಡ್ಡಿಯೂರಪ್ಪ ಕುಟುಂಬದ ಬಗ್ಗೆ, ಯಡ್ಡಿಯೂರಪ್ಪ ಅವರ ಅಸ್ತಿತ್ವ ಏನು ಉಳಿದಿಲ್ಲ ಎಂದು ತಿಳಿದುಕೊಳ್ಳಬೇಕು. ಈಗಲೂ ಯಡ್ಡಿಯೂರಪ್ಪನ್ನ ಜೀ,ಜೀ ಅಂದರೆ ಕರ್ನಾಟಕದಲ್ಲಿ ಬಿಜೆಪಿಗೆ ಬಹಳ ಕಷ್ಟ ಆಗುತ್ತದೆ ಎಂದರು. ಯಡ್ಡಿಯೂರಪ್ಪ ಕುಟುಂಬವನ್ನು ಬಿಜೆಪಿಯಿಂದ ಮುಕ್ತ ಮಾಡಬೇಕು. ಹಿಂದೂ ಕಾರ್ಯಕರ್ತರ ಮೇಲೆ ಕೇಸ್ ಹಾಕುತ್ತಿದ್ದಾರೆ. ಇವರು ಸಿದ್ದರಾಮಯ್ಯ, ಡಿಕೆಶಿ, ಜಮೀರ್ ಅಹ್ಮದ್ ಜತೆ ಸಂತೋಷವಾಗಿದ್ದಾರೆ ಎಂದರು.

3 ವರ್ಷದಲ್ಲಿ ಕರ್ನಾಟಕ ಮುಸ್ಲಿಂ ರಾಜ್ಯವಾಗುತ್ತೆ

ಅಲ್ಪಸಂಖ್ಯಾತರಿಗೆ ವಸತಿಯಲ್ಲಿ 5% ಏರಿಕೆ ವಿಚಾರವಾಗಿ ಮಾತನಾಡಿದ ಯತ್ನಾಳ್, ಬೆಳಗಾವಿ ಅಧಿವೇಶನದಲ್ಲಿ ನನಗೆ ಹಾಗೂ ಜಮೀರ್‌ಗೆ ಇದೇ ವಿಷಯದಿಂದ ಜಗಳವಾಗಿತ್ತು. ಮುಸ್ಲಿಂರಿಗೆ 80% ಹಂಚಿಕೆ ಮಾಡಲು ಇರ್ಯಾರು? ಹಿಂದೂಗಳಿಗೆ ಇಲ್ಲಿ ಏನಿಲ್ಲ. ಸಿದ್ದರಾಮಯ್ಯ, ಡಿಕೆಶಿ ಬಹುತೇಕ ಮೂರು ವರ್ಷದಲ್ಲಿ ಕರ್ನಾಟಕವನ್ನ ಮತ್ತೊಂದು ಕೇರಳ, ಪಶ್ಚಿಮ ಬಂಗಾಳನಂತೆ ಮುಸ್ಲಿಂ ರಾಜ್ಯ ಮಾಡುತ್ತಾರೆ. ಸಿಎಂ ತಮ್ಮ ಸಮುದಾಯಕ್ಕೆ ಕೊಡುಗೆ ಕೊಡಲಿ ಎಂದರು.

ಉಪನ್ಯಾಸದಲ್ಲಿ ರಾಜಕೀಯ ವಿಚಾರ ಮಾತನಾಡದಂತೆ ಸೂಚನೆ

ಸೂಲಿಬೆಲೆಗೆ ಕುಂದಾಪುರ ಪೊಲೀಸ್ ನೋಟಿಸ್

ಕುಂದಾಪುರ: ಸಾರ್ವಜನಿಕ ಕಾರ್ಯಕ್ರಮದಲ್ಲಿ ರಾಜಕೀಯ ಮಾತನಾಡಬಾರದು ಎಂದು ತಾಕೀತು ಮಾಡಿ ವಾಗ್ಮಿ, ಚಿಂತಕ ಚಕ್ರವರ್ತಿ ಸೂಲಿಬೆಲೆ ಅವರಿಗೆ ಕುಂದಾಪುರ ಪೊಲೀಸರು ನೋಟಿಸ್ ನೀಡಿದ್ದಾರೆ.

ಕುಂದಾಪುರದಲ್ಲಿ ಚಕ್ರವರ್ತಿ ಸೂಲಿಬೆಲೆಯವರಿಂದ ‘ಇನ್ನೀಗ ಅಖಂಡ ಭಾರತ ನಿರ್ಮಿಸಿಯೇ ವಿಶ್ರಾಂತಿ’ ಎಂಬ ವಿಚಾರವಾಗಿ 21 ಮತ್ತು 22 ರಂದು ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಅನುಮತಿ ನೀಡಿರುವ ಪೊಲೀಸ್ ಅಧಿಕಾರಿಗಳು, ರಾಜಕೀಯ ಮಾತನಾಡಬಾರದು ಹಾಗೂ ಯಾವುದೇ ನಾಯಕರ ತೇಜೋವಧೆ ಮಾಡಬಾರದು ಎಂದು ಆಯೋಜಕರಿಗೆ ಹಾಗೂ ಸುಲಿಬೆಲೆಯವರಿಗೆ ನೀಡಿರುವ ನೋಟಿಸ್‌ನಲ್ಲಿ ಷರತ್ತು ವಿಧಿಸಿದ್ದಾರೆ. ತಮಗೆ ನೋಟಿಸ್ ನೀಡಿರುವುದರ ಬಗ್ಗೆ ಪ್ರತಿಕ್ರಿಯೆ ನೀಡಿರುವ ಚಕ್ರವರ್ತಿ ಸೂಲಿಬೆಲೆ, ಕರ್ನಾಟಕದಲ್ಲಿ ರಾಜಕೀಯ ಮಾತಾಡಬಾರದು ಎಂಬುದು ಯಾವಾಗಿನಿಂದ ಜಾರಿಯಾಗಿದೆ ಎಂದು ಪ್ರಶ್ನಿಸಿದ್ದಾರೆ.

ಸೂಲಿಬೆಲೆ ಸುಳ್ಳಿನ ಚಕ್ರವರ್ತಿ

ಉಡುಪಿ: ಚಕ್ರವರ್ತಿ ಸೂಲಿಬೆಲೆ ಸುಳ್ಳಿನ ಚಕ್ರವರ್ತಿ. ಬಾಯಿ ತೆರೆದರೆ ರಾಮಾಯಣ, ಭಗವದ್ಗೀತೆ, ಮಹಾಭಾರತ ಎಂದು ಹೇಳುವ ಅವರು ಯಾವ ಪ್ರಮಾಣದಲ್ಲಿ ಸುಳ್ಳು ಹೇಳುತ್ತಾರೆ ಎನ್ನುವುದು ಇಡೀ ರಾಜ್ಯಕ್ಕೆ ಗೊತ್ತು ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು. ಕುಂದಾಪುರದಲ್ಲಿ ಹಮ್ಮಿಕೊಂಡಿರುವ ಚಕ್ರವರ್ತಿ ಸೂಲಿಬೆಲೆ ಉಪನ್ಯಾಸ ಕಾರ್ಯಕ್ರಮದ ಆಯೋಜಕರಿಗೆ ಪೊಲೀಸರು ನೋಟಿಸ್ ನೀಡಿರುವ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಕಪ್ಪಗಿರುವುದನ್ನು ಬೆಳ್ಳಗೆ ಮಾಡುವುದರಲ್ಲಿ, ಬೆಳ್ಳಗೆ ಇರುವುದನ್ನು ಕಪ್ಪು ಮಾಡುವುದರಲ್ಲಿ ಸೂಲಿಬೆಲೆ ನಿಸ್ಸೀಮರು. ವಾಕ್ ಸ್ವಾತಂತ್ರ್ಯ ಸೇರಿದಂತೆ ಎಲ್ಲಾ ರೀತಿಯ ಸ್ವಾತಂತ್ರ್ಯವನ್ನು ಕಾಂಗ್ರೆಸ್ ಪಕ್ಷ ನೀಡಿದೆ. ಇತಿಹಾಸದಲ್ಲಿ ಸಂವಿಧಾನವನ್ನು ಎತ್ತಿ ಹಿಡಿದ ಪಕ್ಷ ಕಾಂಗ್ರೆಸ್ ಎಂದು ಅವರು ಹೇಳಿದರು. ನಾವು ಸೂಲಿಬೆಲೆಯಿಂದ ಪಾಠ ಕೇಳಬೇಕಾಗಿಲ್ಲ. ಅವರು ಮೂರು ದಿನ ಉಡುಪಿ ಜಿಲ್ಲೆಯಲ್ಲಿ ಇರುವ ವಿಚಾರ ಪೊಲೀಸ್ ವರಿಷ್ಠಾಧಿಕಾರಿಗಳಿಂದ ತಿಳಿಯಿತು. ದ್ವೇಷ ಭಾಷಣ, ಸುಳ್ಳು ಬಿತ್ತುವ ಕೆಲಸ, ವಿಷ ಬೀಜ ಬಿತ್ತುವ ಕೆಲಸ ಮಾಡದಿರಲಿ ಎಂದ ಹೆಬ್ಬಾಳ್ಕರ್ ಕಿಡಿಕಾರಿದರು.

ವಿಶ್ವವಾಣಿ

ಸಂಪಾದಕೀಯ

ಬೆಂಕಿಯಿಲ್ಲದೆ ಹೊಗೆಯಾಡುವುದಿಲ್ಲ

ಭಾರತದ ವಿರುದ್ಧ ಹೋರಾಡಲೆಂದು ಮತ್ತು ಭಾರತದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸಲೆಂದು ಖಲಿಸ್ತಾನಿ ಪ್ರತ್ಯೇಕತಾವಾದಿಗಳು ಕೆನಡಾದ ನೆಲವನ್ನು ಭೂಮಿಕೆಯನ್ನಾಗಿಸಿಕೊಂಡಿದ್ದಾರೆ ಎಂಬ ಸಂಗತಿಯೀಗ ಅಧಿಕೃತ ಮಾಹಿತಿಯಾಗಿ ಹೊರಬಿದ್ದಿದೆ. ಕೆನಡಾದ ಗುಪ್ತಚರ ಸಂಸ್ಥೆಯು ಈ ಕುರಿತು ನೀಡಿದ ವರದಿಯಲ್ಲಿ, 'ಖಲಿಸ್ತಾನಿ ಪ್ರತ್ಯೇಕತಾ ಸಂಘಟನೆಗಳು ಮತ್ತು ಪಾಕಿಸ್ತಾನಿ ನಾಗರಿಕರು ಭಾರತದಲ್ಲಿ ಹಿಂಸಾಚಾರಗಳನ್ನು ಹುಟ್ಟುಹಾಕಲು ಇಂಥ ಕಸರತ್ತಿನಲ್ಲಿ ತೊಡಗಿದ್ದಾರೆ' ಎಂಬುದು ಇದಕ್ಕೆ ಸಾಕ್ಷಿ. ಇದು ಭಾರತಕ್ಕೆ ಪ್ರಜಾತಾಂತ್ರಿಕ ನೆಲೆಯಲ್ಲಿ ದಕ್ಕಿದ ಮಹತ್ವದ ಗೆಲುವು ಎಂಬುದರಲ್ಲಿ ಎರಡು ಮಾತಿಲ್ಲ. ಏಕೆಂದರೆ, ತನ್ನ ವಿರುದ್ಧದ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಉಗ್ರವಾದಿಗಳಿಗೆ ಕೆನಡಾ ದೇಶವು ಆಶ್ರಯ ನೀಡಿದೆ ಎಂದು ಭಾರತ ಸಾಕಷ್ಟು ವರ್ಷಗಳಿಂದಲೂ ಹೇಳಿಕೊಂಡೇ ಬಂದಿತ್ತು. ಆದರೆ 2023ರಲ್ಲಿ, ಖಲಿಸ್ತಾನಿ ಪ್ರತ್ಯೇಕತಾವಾದಿಗಳ ಗುಂಪಿನ ಮುಖಂಡ ಹರ್‌ದೀಪ್ ಸಿಂಗ್ ನಿಜ್ಜರ್ ಹತನಾದಾಗ, ಕೆನಡಾದ ಅಂದಿನ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಈ ಹತ್ಯೆಯ ಆರೋಪವನ್ನು ಭಾರತದ ತಲೆಗೆ ಕಟ್ಟಿದ್ದರು. ಅಂದಿನಿಂದಲೂ ಭಾರತ ಮತ್ತು ಕೆನಡಾ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧವು ಹದಗೆಟ್ಟಿತ್ತು ಎಂಬುದನ್ನಿಲ್ಲಿ ಸ್ಮರಿಸಬಹುದು. ಈಗ, ಭಾರತದ ಗ್ರಹಿಕೆ ಮತ್ತು ನಿಲುವನ್ನೇ ಕೆನಡಾದ ಗುಪ್ತಚರ ಸಂಸ್ಥೆಯು ಪುನರುಚ್ಚರಿಸಿರುವ ಹಿನ್ನೆಲೆಯಲ್ಲಿ, ಭಾರತದ ಮಾತುಗಳಿಗೆ ಒಂದು ತೂಕ ಬಂದಂತಾಗಿದೆ ಹಾಗೂ ಭಯೋತ್ಪಾದಕ ಚಟುವಟಿಕೆಗಳನ್ನು ಶತಾಯಗತಾಯ ದಮನಿಸುವ ಭಾರತದ ಬದ್ಧತೆಯ ದನಿಗೆ ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಬಲ ಬಂದಂತಾಗಿದೆ ಎನ್ನಲಡ್ಡಿಯಿಲ್ಲ. ಆದ್ದರಿಂದ, ಉಗ್ರವಾದದ ದಮನಕ್ಕೆ ಜಾಗತಿಕ ಸಮುದಾಯವು ಪರಸ್ಪರ ಕೈಜೋಡಿಸಬೇಕಾದ ಕಾಲವೀಗ ಸನ್ನಿಹಿತವಾಗಿದೆ. ಏಕೆಂದರೆ, ಕ್ಯಾನ್ಸರ್‌ನಂತೆ ಪಸರಿಸುತ್ತಿರುವ ಉಗ್ರರು ನಡೆಸುವ ಪೈಶಾಚಿಕ ಕೃತ್ಯದಿಂದಾಗಿ ಭಾರತ ಮತ್ತು ಪಾಕಿಸ್ತಾನದ ಪ್ರಜೆಗಳು ಎಂತೆಂಥ ಬೆಳವಣಿಗೆಗಳಿಗೆ ಸಾಕ್ಷಿಯಾಗಬೇಕಾಯಿತು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಈ ಜಗತ್ತು ಶಾಂತಿ- ನೆಮ್ಮದಿಯ ಆಡುಂಬೊಲವಾಗಬೇಕು ಎಂದಾದಲ್ಲಿ, ಉಗ್ರವಾದಿಗಳ ದಮನವಾಗಲೇಬೇಕು.

ಸೊಂಪಾದಕೀಯ

ನಂಬರ್ 15 ಎಕ್ಕ

ಅದೇನೋ, ಮದುವೆಗೂ ಸುಳ್ಳಿಗೂ ಅವಿನಾಭಾವ ಸಂಬಂಧ ಅನ್ನುತ್ತೆ. ತಮ್ಮ ಸಂಗಾತಿಯ ಬಳಿ, ಅದರಲ್ಲೂ ಗಂಡನು ಹೆಂಡತಿಯ ಬಳಿ ಸುಳ್ಳು ಹೇಳೋದು ತುಂಬಾ ಕಾಮನ್ ವಿಷಯ. ಎಂಥ ಸತ್ಯ ಹರಿಶ್ಚಂದ್ರ ಎನಿಸಿಕೊಂಡವರೂ ಕನಿಷ್ಠ ಪಕ್ಷ ತಮ್ಮ ಹೆಂಡತಿಯ ಬಳಿ ಅಂತಹ ಸುಳ್ಳು ಹೇಳಿಯೇ ಇರುತ್ತಾರೆ ಅನ್ನೋದು ಜಗತ್ತೇ ನಂಬುವ ವಿಷಯ. ಇದು ಮದುವೆ ಆದ ಮೇಲೆ ತಮ್ಮ ಸಂಗಾತಿಗಳ ಬಳಿ ಸುಳ್ಳು ಹೇಳುವವರ ವಿಷಯ ಆದರೆ, ಇನ್ನು ಕೆಲವು ಪ್ರವರ್ತೋಶಿಗಳು, ಜೋಡಿ ಹುಡುಕಿಕೊಂಡು, ವರಮಾಲೆ ಹಾಕುವ ಮುನ್ನ, ಮದುವೆ ಆಗೋಕೆ ಅಂತಲೇ ಸುಳ್ಳುಗಳ ಸರಮಾಲೆ ಜೋಡಿಸುತ್ತಾರೆ. ಇಂಥ ಮೋಸದ ಮದುವೆಗಳಿಗೆ, 'ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು' ಎಂದ ಹಿರಿಯರ ಪ್ರೋತ್ಸಾಹವೂ ಇದೆ. ಆದರೆ, ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಎಂದಿದ್ದಾರಷ್ಟೇ, ನಂತರ ಸುಳ್ಳು ಹೇಳುತ್ತಾ ಬೇರೆ ಮದುವೆ ಮಾಡು ಅಂತ ಎಲ್ಲೂ ಹೇಳಿಲ್ಲ. ಅದೇ ನಂಬಿಕೆ ಮೇಲೆ ಬೆಂಗಳೂರಿನ ಬನಶಂಕರಿಯಲ್ಲಿರುವ ಭೂಪನೊಬ್ಬ ಬರೋಬ್ಬರಿ 15 ಮದುವೆ ಆಗಿದ್ದಾನಂತೆ. ಅವನು 15 ಜನಕ್ಕೆ ಮೂರು ಗಂಟು ಹಾಕಿರೋದು ಸುಳ್ಳು ಹೇಳುವ ಮೂಲಕ ಅಂತ ಬಿಡಿಸಿ ಹೇಳಬೇಕಿಲ್ಲ ಬಿಡಿ. 5ನೇ ಕ್ಲಾಸ್ ಓದಿರುವ ಈತ, 'ನಂಬರ್ ಐದು ಎಕ್ಕ, ನಮಗೆಲ್ಲಾ ಒಂದೇ ಲೆಕ್ಕ' ಎನ್ನುವಂತೆ ಕಂಡಕಂಡವರನ್ನು ಮದುವೆ ಆಗಿ, ನಂತರ ಅವರ ಬಳಿ ಇದ್ದ ಹಣ, ಬಂಗಾರ ದೋಚಿಕೊಂಡು ಪರಾರಿ ಆಗುತ್ತಿದ್ದನಂತೆ. ಮದುವೆ ಆಗುವ ಹೆಣ್ಣುಮಕ್ಕಳಿಗೆ ತಾನು ಡಾಕ್ಟರ್, ಎಂಜಿನಿಯರ್, ಕಂಟ್ರ್ಯಾಕ್ಟರ್ ಅಂತ ತರಹೇವಾರಿ ಸುಳ್ಳು ಹೇಳಿ ಯಾಮಾರಿಸುತ್ತಿದ್ದನಂತೆ. ಆದರೂ 35ನೇ ವಯಸ್ಸಿಗೇ 15 ಮದುವೆ ಆಗಿರುವ ಈ ಕಿಲಾಡಿ ಕೃಷ್ಣ, ಅದು ಹೇಗೆ ಇಷ್ಟೊಂದು ಮ್ಯಾರೇಜ್‌ಗಳನ್ನು ಮ್ಯಾನೇಜ್ ಮಾಡಿಕೊಂಡು ಹೋಗುತ್ತಿದ್ದನೋ, ಈಗ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ. ಹಾಗಾಗಿ, 15 ಮದುವೆ ಆಗಿದ್ದರೂ ಪಾಪ, ಅಷ್ಟೂ ಜನ ಹೆಂಡತಿಯರ ಅಪ್ಪಂದಿರ ಮನೆಗೆ ಹೋಗುವ ಅವಕಾಶ ಸಿಕ್ಕದ ಈ ಲಗ್ನ ವೀರ ರಾಯರು ಈಗ ಮಾವನ ಮನೆಯಲ್ಲಿ ಅತಿಥಿ ಆಗಿದ್ದಾರೆ ಎಂದರೆ ತಪ್ಪಲ್ಲ ಬಿಡಿ.

ಸಂಪಾದಕರ ಸದ್ಯಶೋಧನೆ

ವಿಮಾನದೊಳಗಿನ ವಾತಾವರಣ

ವಿಮಾನಯಾನದ ತಂತ್ರಜ್ಞಾನ ನಿಜಕ್ಕೂ ಅದ್ಭುತವೇ. ಎಷ್ಟೋ ಸಲ ವೈಜ್ಞಾನಿಕವಾಗಿ ವಿವರಿಸಿದರೂ ನಂಬುವುದು ಕಷ್ಟ. ಮಾನವ ಪ್ರಗತಿಯ ಪ್ರತೀಕವಾಗಿರುವ, ಕೆಲವೊಂದು ಸಾಧನೆಗಳು ಅಚ್ಚರಿ ಮೂಡಿಸುವಂತಿವೆ. ಅದಕ್ಕೆ ಒಂದು ಉದಾಹರಣೆಯೆಂದರೆ ವಿಮಾನಯಾನ. ಇಂದು ನಾವು 40 ಸಾವಿರ ಅಡಿಗಳ ಎತ್ತರದಲ್ಲಿ ಹಾರುವ ವಿಮಾನದಲ್ಲಿ ಆರಾಮವಾಗಿ ಕುಳಿತು, ಟಿವಿ ನೋಡುತ್ತೇವೆ, ಸ್ನಾನ ಮಾಡುತ್ತೇವೆ, ಓದುತ್ತೇವೆ, ಬರೆಯುತ್ತೇವೆ, ಊಟ ಮಾಡುತ್ತೇವೆ, ನಿದ್ರಿಸುತ್ತೇವೆ... ಇವೆಲ್ಲವೂ ನಮಗೆ ಸಾಧ್ಯವಾಗುತ್ತಿದೆ. ಆದರೆ ಬಾಹ್ಯ ವಾತಾವರಣದಲ್ಲಿ ಆಗುವ ತಾಪಮಾನದ ಬಗ್ಗೆ ಯೋಚಿಸಿದರೆ, ಒಮ್ಮೆ ಎದೆಬಡಿತವಾಗದಿರದು, ಆಶ್ಚರ್ಯವಾಗುತ್ತದೆ. ವಿಮಾನಗಳು ಸಾಮಾನ್ಯವಾಗಿ ಸಮತಲ ವಾತಾವರಣದಲ್ಲಿ (Cruising Altitude) ಸಂಚರಿಸುವಾಗ ಸುಮಾರು 40 ಸಾವಿರ ಅಡಿಗಳ ಎತ್ತರದಲ್ಲಿ ಹಾರುತ್ತವೆ. ಈ ಎತ್ತರದಲ್ಲಿ ಬಾಹ್ಯ ತಾಪಮಾನ ಮೈನಸ್ 70 ಡಿಗ್ರಿ ಸೆಂಟಿಗ್ರೇಡ್ (- 94KF) ವರೆಗೆ ಇಳಿಯಬಹುದು. ಇದು ಅತಿ ತೀವ್ರ ಚಳಿಯ ವಾತಾವರಣ. ಇಂಥ ವಾತಾವರಣದಲ್ಲಿ ಮನುಷ್ಯನಿಗೆ ಬದುಕು ಅಸಾಧ್ಯ. ಇಷ್ಟು ಶೀತ ಪ್ರದೇಶದಲ್ಲಿ ಎರಡು ನಿಮಿಷ ಸಹ ಇರಲು ಸಾಧ್ಯ ಇಲ್ಲ. ಇಷ್ಟು ಕಡಿಮೆ ತಾಪಮಾನದಲ್ಲಿ ಉಸಿರಾಟಕ್ಕೆ ಆಮ್ಲಜನಕ ಸಾಕಾಗುವುದಿಲ್ಲ, ಮನುಷ್ಯನ ದೇಹದ ತಾಪಮಾನ ಕೆಲವು ನಿಮಿಷಗಳಲ್ಲಿ ಕಡಿಮೆಯಾಗುತ್ತದೆ. ಚರ್ಮ ಮತ್ತು ಉಸಿರಾಟದ ಅಂಗಗಳು ತಕ್ಷಣಕ್ಕೆ ಹಾನಿಗೊಳಗಾಗುತ್ತವೆ. ಹೀಗಾಗಿ, ಈ ತಾಪಮಾನದಲ್ಲಿ ಮನುಷ್ಯನಿಗೆ ಯಾವುದೇ ರೀತಿಯ ರಕ್ಷಣೆ ಇಲ್ಲದಿದ್ದರೆ ಅವನು ಅತ್ಯಲ್ಪ ಸಮಯದಲ್ಲಿ ಅಚೇತನನಾಗಿ ಬಿಡುತ್ತಾನೆ ಮತ್ತು ಕೊನೆಗೆ ಸಾವು ಸಂಭವಿಸುತ್ತದೆ. ಆದರೆ ಹೊರಗೆ ಅಷ್ಟು ಶೀತವಿದ್ದರೂ, ನಾವು ವಿಮಾನದ ಒಳಗೆ ಹೇಗೆ ಚಳಿಯಿಂದ ತಪ್ಪಿಸಿಕೊಳ್ಳುತ್ತೇವೆ? ಇದರ ಉತ್ತರ ಒಂದು ಪದದಲ್ಲಿದೆ. ಅದೇನೆಂದರೆ, ಕ್ಯಾಬಿನ್ ಪ್ರೆಶರೈಸೇಷನ್. ಇಲ್ಲಿ ನಾವು ವಿಮಾನವನ್ನು ವಿಶಿಷ್ಟವಾಗಿ ರೂಪಿಸಿರುವುದನ್ನು ಗಮನಿಸಬೇಕು. ವಿಮಾನದಲ್ಲಿ ಬಾಹ್ಯ ವಾತಾವರಣವನ್ನು ಸಂಪೂರ್ಣ ಬಂದ್ ಮಾಡಿ, ಒಳಗಿನ ತಾಪಮಾನವನ್ನು ಮಾನವನಿಗೆ ಅನುಕೂಲವಾಗುವಂತೆ ಇಡಲಾಗುತ್ತದೆ. ವಿಮಾನದ ಒಳಗಿನ ಭಾಗ, ಅಂದರೆ ಕ್ಯಾಬಿನ್‌ನಲ್ಲಿ ಸಾಮಾನ್ಯವಾಗಿ 22 ಡಿಗ್ರಿ ಸೆಂಟಿಗ್ರೇಡ್‌ನಿಂದ 24 ಡಿಗ್ರಿ ಸೆಂಟಿಗ್ರೇಡ್ ಉಷ್ಣತೆ ಇರುತ್ತದೆ. ಅಂದರೆ ನಮ್ಮ ಮನೆಯಂತೆ ಹಿತವಾಗಿರುತ್ತದೆ. ಈ ಸಹಜತೆಯನ್ನು ಸಾಧ್ಯವಾಗಿಸೋದು ವಿಮಾನ ಎಂಜಿನಿಯರಿಂಗ್ ತಂತ್ರಜ್ಞಾನ. ಕ್ಯಾಬಿನ್ ಪ್ರೆಶರೈಸೇಶನ್ ಹೇಗೆ ಕೆಲಸ ಮಾಡುತ್ತದೆ? ವಿಮಾನದ ಎಂಜಿನ್‌ಗಳು ಹಾರಾಟದ ಗಾಳಿಯನ್ನು ಸೆಳೆದು ಅದನ್ನು ಉಷ್ಣಗೊಳಿಸಿ, ಗಾತ್ರವನ್ನೂ, ಒತ್ತಡವನ್ನೂ ಹೆಚ್ಚಿಸುತ್ತವೆ. ಎಂಜಿನ್‌ಗಳಿಂದ ಹಾರುವ ಉಷ್ಣಗೊಳ್ಳುವ ಈ ಗಾಳಿಯನ್ನು Bleed Air ಎನ್ನುತ್ತಾರೆ. ಈ ಗಾಳಿಯನ್ನು ವಿಶೇಷ ಹವಾಮಾನ ನಿಯಂತ್ರಣ ವ್ಯವಸ್ಥೆ (Air Conditioning System) ಮೂಲಕ ಫಿಲ್ಟರ್ ಮಾಡಲಾಗುತ್ತದೆ. ಆಮೇಲೆ, ಈ ಗಾಳಿಯನ್ನು ವಿಮಾನದ ಒಳಗೆ ಹರಿಸಲಾಗುತ್ತದೆ. ವಿಮಾನದ ಒಳಗಿನ ಒತ್ತಡವನ್ನು 8,000 ಅಡಿಗಳ ಸಮಾನದ ಮಟ್ಟಕ್ಕೆ ಸಮಾನವಾಗುವಂತೆ ಇಡಲಾಗುತ್ತದೆ. ಅದು ಮನುಷ್ಯನಿಗೆ ಸುರಕ್ಷಿತ. ಈ ವಿಧಾನದಿಂದ, ವಿಮಾನವು ಹೊರಗಿನ ಮೈನಸ್ 70 ಡಿಗ್ರಿ ಸೆಂಟಿಗ್ರೇಡ್ ತಾಪಮಾನವಿದ್ದರೂ ಒಳಗೆ ಮನುಷ್ಯನಿಗೆ ಬೇಕಾದ ತಾಪಮಾನ, ಆಮ್ಲಜನಕ ಹಾಗೂ ಒತ್ತಡವನ್ನು ನೀಡುತ್ತದೆ. ವಿಮಾನದ ರಚನೆ ಇದರಲ್ಲಿ, ಅದು ಬಾಹ್ಯ ಜಗತ್ತಿನಿಂದ ನಮ್ಮನ್ನು ರಕ್ಷಿಸುವ ಪಾತ್ರಕವಚ! ವಿಮಾನ ತಯಾರಿಕೆಗೆ ಅಲ್ಯೂಮಿನಿಯಂ ಮಿಶ್ರಲೋಹ (Aluminium Alloy) ಅಥವಾ ಕಾರ್ಬನ್ ಫೈಬರ್ ಕಾಂಪೋಸಿಟ್ ಅನ್ನು ಬಳಸಲಾಗುತ್ತದೆ. ಇವು ಸ್ವಲ್ಪ ತೂಕದಿದ್ದರೂ, ಭಾರಿ ಒತ್ತಡ ಸಹಿಸುವ ಸಾಮರ್ಥ್ಯವನ್ನು ಹೊಂದಿವೆ. ವಿಮಾನದ ಕ್ಯಾಬಿನ್ ಅನ್ನು ಸೀಲ್ ಮಾಡಲಾಗಿರುತ್ತದೆ. ಅಂದರೆ ಯಾವುದೇ ಗಾಳಿಯೂ ಹೊರಹೋಗದಂತಿರುತ್ತದೆ. ಪ್ರತಿಯೊಂದು ಕಿಟಕಿ, ಬಾಗಿಲುಗಳು ಬಹುಪದರ ಶಕ್ತಿಶಾಲಿ ಗಾಜಿನಿಂದ ಮಾಡಲ್ಪಟ್ಟಿರುತ್ತವೆ. ವಿಮಾನದಲ್ಲಿ ಎಲ್ಲ ವ್ಯವಸ್ಥೆಗಳೂ ಅತ್ಯಾಧುನಿಕ ಗಣಕಯಂತ್ರಗಳ (Computers) ಮೂಲಕ ನಿಯಂತ್ರಿತವಾಗಿವೆ. ಉದಾಹರಣೆಗೆ, ತಾಪಮಾನ ಹೆಚ್ಚಿದರೆ ಅಥವಾ ಕಡಿಮೆಯಾದರೆ ತಕ್ಷಣ ಸರಿಪಡಿಸಲಾಗುತ್ತದೆ. ಒತ್ತಡ ಬದಲಾದರೆ, ಆಮ್ಲಜನಕ ನಿಗದಿತ ಪ್ರಮಾಣವನ್ನು ಸರಿಹೊಂದಿಸಲಾಗುತ್ತದೆ. ತುರ್ತು ಸಂದರ್ಭಗಳಿಗೆ ಆಮ್ಲಜನಕ ಮಾಸ್ಕ್‌ಗಳು ಏರ್ ಡ್ರಾಪ್ ಆಗುತ್ತವೆ. ಈ ಎಲ್ಲವುಗಳು ನಮ್ಮ ಜೀವದ ರಕ್ಷಣೆಗೆ ಬದ್ಧವಾಗಿರುವ ತಂತ್ರಜ್ಞಾನದ ಫಲಗಳಾಗಿವೆ.

ತುರ್ತು ಪರಿಸ್ಥಿತಿಯಲ್ಲಿ ಆರೆಸ್ಸೆಸ್ ಹೋರಾಟ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
vveditoped@gmail.com
camohanbn@gmail.com

1970ರ ದಶಕದಲ್ಲಿ ಇಂದಿರಾ ಗಾಂಧಿಯವರು ಪ್ರಧಾನಿಯಾಗಿದ್ದ ಸಮಯದಲ್ಲಿ ದೇಶದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ಆದರೆ 'ಭ್ರಷ್ಟಾಚಾರವು ಜಗತ್ತಿನೆಲ್ಲೆಡೆ ಇರುವಂತೆ ಭಾರತದಲ್ಲಿಯೂ ಇದೆ, ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ' ಎಂದು ಕೆಲವು ಕಾಂಗ್ರೆಸ್ ನಾಯಕರು ಬಹಿರಂಗವಾಗಿ ಹೇಳಿದ್ದರು. ದೇಶದಲ್ಲಿ ಭ್ರಷ್ಟಾಚಾರ ಹೆಚ್ಚಾದಂತೆ ಗುಜರಾತಿನಲ್ಲಿ ಅದರ ವಿರುದ್ಧ ದೊಡ್ಡದೊಂದು ಚಳವಳಿ ಪ್ರಾರಂಭವಾಯಿತು. ಗುಜರಾತಿನ ಅಂದಿನ ಮುಖ್ಯಮಂತ್ರಿ ಕಾಂಗ್ರೆಸ್ಸಿನ ಚಿಮನ್ ಭಾಯ್ ಪಟೇಲ್ ವಿರುದ್ಧ ದೊಡ್ಡ ಮಟ್ಟದ ಭ್ರಷ್ಟಾಚಾರದ ಆರೋಪಗಳು ಕೇಳಿಬಂದಿದ್ದವು. ಅವರ ವಿರುದ್ಧ ಪ್ರಾರಂಭವಾದ ಚಳವಳಿಯನ್ನು 'ನಿರ್ಮಾಣ್ ಆಂದೋಲನ'ವೆಂದು ಕರೆಯಲಾಯಿತು. ನಂತರದ ದಿನಗಳಲ್ಲಿ ಈ ಆಂದೋಲನ ಗುಜರಾತಿನಿಂದ ಬಿಹಾರ ತಲುಪಿತು. ಆಗ ಜಯಪ್ರಕಾಶ್ ನಾರಾಯಣ್ ವಿರೋಧ ಪಕ್ಷಗಳ ನೇತೃತ್ವ ವಹಿಸಿ ಈ ಆಂದೋಲನವನ್ನು ದೊಡ್ಡ ಮಟ್ಟಕ್ಕೆ ತೆಗೆದುಕೊಂಡು ಹೋಗುವಲ್ಲಿ ಯಶಸ್ವಿಯಾದರು.

ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರೆಸ್ಸೆಸ್) 'ನಿರ್ಮಾಣ್ ಆಂದೋಲನ'ವನ್ನು ಬೆಂಬಲಿಸಿತ್ತು. ಸಂಘ ನೀಡಿದ ಬೆಂಬಲದ ಬಗ್ಗೆ ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಬಾಳಾಸಾಹೇಬರು, ''ಸಂಘದ ಸ್ವಯಂಸೇವಕ ಈ ದೇಶದ ನಾಗರಿಕನಾಗಿ ಭ್ರಷ್ಟಾಚಾರದ ವಿರುದ್ಧ ಧ್ವನಿಯೆತ್ತುವುದು ತಪ್ಪೇ? ಭ್ರಷ್ಟಾಚಾರದ ಸಮಸ್ಯೆ ಎಲ್ಲರನ್ನೂ ಕಾಡುವಂತೆ ಸ್ವಯಂಸೇವಕನನ್ನೂ ಕಾಡುತ್ತದೆ. ಈ ಸಮಸ್ಯೆ ಬಗೆಹರಿದರೆ ಅವನಿಗೂ ಒಳ್ಳೆಯದಲ್ಲವೇ? ಒಳ್ಳೆಯ ಕಾರ್ಯಕ್ಕೆ ಯಾಕೆ ಆತ ಕೈ ಜೋಡಿಸಬಾರದು?'' ಎಂದಿದ್ದರು. ಕೆಲವು ತಿಂಗಳಲ್ಲಿ ಭ್ರಷ್ಟಾಚಾರ ವಿರೋಧಿ ಆಂದೋಲನ ದೊಡ್ಡ ಮಟ್ಟದಲ್ಲಿ ದೇಶದಾದ್ಯಂತ ಹರಡಿತು. ಸಂಘದ ಸ್ವಯಂಸೇವಕರು ಈ ಆಂದೋಲನದಲ್ಲಿ ದೊಡ್ಡಮಟ್ಟದಲ್ಲಿ ಭಾಗವಹಿಸುತ್ತಿರುವ ವಿಷಯ ಇಂದಿರಾರಿಗೆ ತಿಳಿಯಿತು. 1975ರ ಜನವರಿಯಲ್ಲಿ ಇಂದಿರಾರ ವಕೀಲರೊಬ್ಬರು ಆರೆಸ್ಸೆಸ್ ಅನ್ನು ನಿಷೇಧಿಸಬೇಕೆಂದು ಪತ್ರದ ಮೂಲಕ ಸಲಹೆ ನೀಡಿದ್ದರು. ಇಂದಿರಾರ ಅಪ್ಪ ಜವಾಹರಲಾಲ್ ನೆಹರು 1948ರಲ್ಲಿ ಆರೆಸ್ಸೆಸ್‌ನ ಕಾರ್ಯಕರ್ತರ ಮೇಲೆ ಇಲ್ಲ ಸಲ್ಲದ ಆರೋಪ ಹೊರಿಸಿ ನಿಷೇಧಿಸಿದ್ದರು. ಇತಿಹಾಸ ಮರುಕಳಿಸುತ್ತದೆ ಎನ್ನುವಂತೆ, ಇಂದಿರಾ ಅಧಿಕಾರಕ್ಕೆ ಬಂದ ನಂತರ ಅಂಥದೇ ಪ್ರಯತ್ನಕ್ಕೆ ಕೈಹಾಕಿದ್ದರು. ಇಂದಿರಾರ ವಕೀಲರು ನೀಡಿದ್ದ ಸಂಘದ ನಿಷೇಧದ ಸಲಹೆ ಪತ್ರಕರ್ತರಿಗೆ ಸೋರಿಕೆಯಾಗಿ 20-06-1975ರಂದು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿತ್ತು. ಪರಿಣಾಮ, ದೇಶದಾದ್ಯಂತ ಸರಕಾರದ ವಿರುದ್ಧ ದೊಡ್ಡಮಟ್ಟದ ಆಕ್ರೋಶ ಕೇಳಿ ಬಂತು. ಹಾಗಾಗಿ ಇಂದಿರಾರು ಸಂಘವನ್ನು ನಿಷೇಧಿಸುವ ನಿರ್ಧಾರವನ್ನು ಕೈಬಿಡಬೇಕಾಯಿತು. ''ಕಮ್ಯುನಿಸ್ಟರ ಮಾತು ಕೇಳಿ ಕಾಂಗ್ರೆಸ್ ಸರಕಾರ ದೇಶದಲ್ಲಿ ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದ್ದು ಇದರ ಭಾಗವಾಗಿ ಸಂಘವನ್ನು ನಿಷೇಧಿಸುವತ್ತ ಚಿಂತನೆ ನಡೆಸುತ್ತಿದೆ. ಶಿಸ್ತಿಗೆ ಹೆಸರಾಗಿರುವ ಸಂಘವು ಇಂಥ ಬೆದರಿಕೆಗೆ ಜಗ್ಗುವುದಿಲ್ಲ'' ಎಂದು ಬಾಳಾಸಾಹೇಬರು ಹೇಳಿದ್ದರು. ಇಷ್ಟಾದರೂ ಇಂದಿರಾರ ಮೇಲೆ ಸಂಘಕ್ಕೆ ನಂಬಿಕೆ ಇರಲಿಲ್ಲ, ಇಂದಲ್ಲ ನಾಳೆ ಬ್ಯಾನ್ ಮಾಡಬಹುದೆಂಬ ಅನುಮಾನ ಸಂಘಕ್ಕಿತ್ತು.

ಅದೇ ಸಮಯದಲ್ಲಿ ಅಲಹಾಬಾದ್ ನ್ಯಾಯಾಲಯವು ಇಂದಿರಾರ 1971ರ ಚುನಾವಣೆಯಲ್ಲಿ ನಡೆದ ಅಕ್ರಮಗಳನ್ನು ಪರಿಗಣಿಸಿ ಅವರ ಚುನಾವಣಾ ಗೆಲುವನ್ನು ಅಸಿಂಧುಗೊಳಿಸಿ, ಮುಂದಿನ 6 ವರ್ಷಗಳ ಕಾಲ ಚುನಾವಣೆಗೆ ನಿಲ್ಲಬಾರದೆಂದು ತೀರ್ಪನ್ನು ನೀಡಿತು.ತೀರ್ಪು ಬಂದಾಕ್ಷಣ ಇಂದಿರಾರು ರಾತ್ರೋರಾತ್ರಿ ಸಂವಿಧಾನವನ್ನು ತಿದ್ದುಪಡಿ ಮಾಡಿ ತಮ್ಮ ಚುನಾವಣೆ ವಿಷಯ ನ್ಯಾಯ ವ್ಯಾಪ್ತಿಗೆ ಬರುವುದಿಲ್ಲವೆಂದರು. ಇದನ್ನು ಕಂಡ ನ್ಯಾಯಾಲಯ ಈ ತಿದ್ದುಪಡಿಯು ಸಂವಿಧಾನದ ಮೂಲ ಉದ್ದೇಶಗಳ ವಿರುದ್ಧವಿರುವ ಕಾರಣ,ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ ಬಂದಿದೆ ಎಂದಿತ್ತು. ನಂತರ ದೇಶದಾದ್ಯಂತ ಇಂದಿರಾರ ವಿರುದ್ಧ ಹಾಹಾಕಾರವೇ ಸೃಷ್ಟಿಯಾಯಿತು. ಇಂದಿರಾರ ಸರ್ವಾಧಿಕಾರಿ ಆಡಳಿತದಲ್ಲಿ ಸಿಕ್ಕ ಸಿಕ್ಕವರನ್ನು ಜೈಲಿಗೆ ಹಾಕಲಾಯಿತು. ಮೊದಲ ಬಾರಿಗೆ ಪತ್ರಿಕೆಗಳ ಮೇಲೆ ನಿರ್ಬಂಧ ಹೇರಲಾಯಿತು. 04-07-1975ರಂದು ಆರೆಸ್ಸೆಸ್ ಅನ್ನು ನಿಷೇಧಿಸಲಾಯಿತು. ಜತೆಗೆ ಒಟ್ಟಾರೆ 27 ಸಂಘಟನೆಯನ್ನು ಬ್ಯಾನ್ ಮಾಡಲಾಗಿತ್ತು. ಆದರೆ ಇಂದಿರಾರ ಪ್ರಮುಖ ಟಾರ್ಗೆಟ್ ಆರೆಸ್ಸೆಸ್ ಆಗಿತ್ತು. ಬಾಳಾಸಾಹೇಬರನ್ನು ಬಂಧಿಸಿ ಯರವಾಡ ಜೈಲಿನಲ್ಲಿಡಲಾಗಿತ್ತು. ಅಲ್ಲಿದ್ದ ಇತರ ಹೋರಾಟಗಾರರು ಬಾಳಾಸಾಹೇಬರನ್ನೊಮ್ಮೆ ಕೇಳಿದರಂತೆ- ''ನೀವು ಜೈಲಿನಲ್ಲಿದ್ದರೂ ಹೊರಗಡೆ ತಮ್ಮ ಹೋರಾಟ ಅಷ್ಟು ಸರಾಗವಾಗಿ ಹೇಗೆ ನಡೆಯುತ್ತಿದೆ?'' ಅಂತ. ಆಗ ಬಾಳಾಸಾಹೇಬರು, ''ಇಂದಿರಾರು ಒಬ್ಬ ಸರಸಂಘಚಾಲಕನನ್ನು ಬಂಧಿಸಿರಬಹುದು, ಹೊರಗಡೆ ನಾಲ್ವರು ಸರಸಂಘಚಾಲಕರಿದ್ದಾರೆ'' ಅಂತ ಹೇಳಿದ್ದರಂತೆ. ಈ ಮಾತುಗಳಿಂದ ತಿಳಿಯುವುದೇನೆಂದರೆ ಸಂಘದಲ್ಲಿ ಸ್ಥಾನವೆಂಬುದು ಮುಖ್ಯವಲ್ಲ, ಮಾಡುವ ಕೆಲಸ ಮುಖ್ಯವಾಗುತ್ತದೆ. ಸಂಘದ ಪ್ರತಿಯೊಬ್ಬರೂ ಸಮಾನವಾಗಿ, ರಾಷ್ಟ್ರ ನಿರ್ಮಾಣಕ್ಕಾಗಿ ಕೆಲಸ ಮಾಡುತ್ತಾರೆ.

ಬಾಳಾಸಾಹೇಬರು ಜೈಲಿನಲ್ಲಿರುವಾಗ ಸ್ವಯಂಸೇವಕರಿಗೆ ಮಾರ್ಗದರ್ಶನ ನೀಡುವ ವೇಳೆ, ''ತುರ್ತು ಪರಿಸ್ಥಿತಿ 14 ವರ್ಷಗಳ ಕಾಲ ಇರಬಹುದು, ಅಲ್ಲಿಯವರೆಗೂ ನಮ್ಮ ಹೋರಾಟವನ್ನು ಗಟ್ಟಿಯಾಗಿ ನಿಂತು ಮುಂದುವರಿಸಬೇಕು. ಈ ಹೋರಾಟ ಒಂದು ಯುದ್ಧವಿದ್ದಂತೆ. ತಾಳ್ಮೆ ಹಾಗೂ ನಿರಂತರ ಹೋರಾಟದ ಮೂಲಕವಷ್ಟೇ ನಾವು ಈ ಯುದ್ಧವನ್ನು ಗೆಲ್ಲಬೇಕು. ಅದಕ್ಕಾಗಿ ಎಲ್ಲರೂ ಸಿದ್ಧರಾಗಿರಬೇಕು'' ಎಂದು ಹೇಳುತ್ತಿದ್ದರು. ಬಾಳಾಸಾಹೇಬರು ಸ್ವಯಂಸೇವಕರಿಗೆ ಯಾವಾಗಲೂ ಇಸ್ರೇಲ್ ದೇಶದ ಉದಾಹರಣೆಯನ್ನು ನೀಡುತ್ತಿದ್ದರು. ಯಹೂದಿಗಳ ನಿರಂತರ ದೇಶಾಭಿಮಾನ ಹಾಗೂ ಇಚ್ಛಾಶಕ್ತಿಯ ಪರಿಣಾಮ, ಎಂಥ ಸಮಸ್ಯೆ ಎದುರಾದರೂ ಇಸ್ರೇಲ್ ದೇಶ ಧೈರ್ಯವಾಗಿ ಎದುರಿಸಲು ಸದಾ ಸಿದ್ಧವಿರುತ್ತದೆ. ಹಾಗಾಗಿ ಸಂಘದ ಕಾರ್ಯಕರ್ತರೂ ನಿರಂತರ ಇಚ್ಛಾಶಕ್ತಿಯಿಂದ ಕೆಲಸ ಮಾಡಬೇಕು ಎನ್ನುತ್ತಿದ್ದರು ಅವರು.

04-12-1976ರಲ್ಲಿ ಲಂಡನ್‌ನಿಂದ ಬಂದಿದ್ದ ಪತ್ರಕರ್ತರೊಬ್ಬರು, ''ಇಂದಿರಾರ ಸರ್ವಾಧಿಕಾರಿ ಧೋರಣೆಯಿಂದ ಭಾರತದಲ್ಲಿ ಸತ್ತು ಹೋಗಿರುವ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸಲು ಆರೆಸ್ಸೆಸ್‌ನಿಂದ ಮಾತ್ರ ಸಾಧ್ಯ'' ಎಂದಿದ್ದರು. ಅವರ ಮಾತಿಗೆ ಹಲವರು ಸಹಮತ ವ್ಯಕ್ತಪಡಿಸಿದ್ದರು. ಈಗಲೂ ಬಹುತೇಕರು ಸಂಘವಿಲ್ಲದಿದ್ದರೆ ತುರ್ತು ಪರಿಸ್ಥಿಯ ಸಂದರ್ಭದಲ್ಲಿ ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುವುದು ಕಷ್ಟವಿತ್ತೆಂದು ಹೇಳುತ್ತಾರೆ. 2003ರಲ್ಲಿ 'ದಿ ಹಿಂದೂ' ದಿನಪತ್ರಿಕೆ ''ರಾಷ್ಟ್ರೀಯ ಸ್ವಯಂಸೇವಕ ಸಂಘವು ತುರ್ತು ಪರಿಸ್ಥಿಯ ಹೋರಾಟವನ್ನು ಎರಡನೇ ಸ್ವಾತಂತ್ರ್ಯ ಹೋರಾಟವೆಂದು ಪರಿಗಣಿಸಿದೆ. ದೇಶದಲ್ಲಿ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸಿದ್ದು ರಾಷ್ಟ್ರೀಯ ಸ್ವಯಂಸೇವಕ ಸಂಘ'' ಎಂದಿತ್ತು. ಜೈಲಿನಲ್ಲಿದ್ದ ಬಾಳಾಸಾಹೇಬರು ಇಂದಿರಾರಿಗೆ ಪತ್ರವೊಂದನ್ನು ಬರೆದು- ''ಇಡೀ ಸರಕಾರವೇ ನಿಮ್ಮ ಕೈಯಲ್ಲಿರುವಾಗ ಸಂಘದ ಕಚೇರಿಗಳನ್ನು ತಲಾಶ್ ಮಾಡಿ ಸಂಘದ ವಿರುದ್ಧ ನೀವು ಮಾಡಿರುವ ಆರೋಪಗಳನ್ನು ಸಾಬೀತುಪಡಿಸುವ ಪುರಾವೆಗಳು ಸಿಗುತ್ತದೆಯೇ?'' ಎಂದು ಸವಾಲು ಹಾಕಿದರು. ಆದರೆ ಇಂದಿರಾರಿಗೆ ಸವಾಲನ್ನು ಸ್ವೀಕರಿಸಲು ಸಾಧ್ಯವಾಗಲಿಲ್ಲ, ಅವರ ಪತ್ರಕ್ಕೆ ಉತ್ತರಿಸಲು ಯಾವ ದಾರಿಯೂ ಕಾಣಿಸಲಿಲ್ಲ.

ಜನತಾಪಕ್ಷದ ಸ್ಥಾಪನೆಯ ಬಗ್ಗೆ ಜೈಲಿನಲ್ಲಿ ಚರ್ಚೆಗಳು ಶುರುವಾಗಿದ್ದವು. ಮೊಟ್ಟಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರಕಾರವನ್ನು ಅಧಿಕಾರಕ್ಕೆ ತಂದು ಇಂದಿರಾರ ಸರ್ವಾಧಿಕಾರಿ ಧೋರಣೆಯನ್ನು ಅಂತ್ಯಗೊಳಿಸಬೇಕೆಂಬ ಉದ್ದೇಶದಿಂದ ಮುಂದಿನ ಚುನಾವಣೆಯಲ್ಲಿ ಜನತಾಪಕ್ಷ ಸ್ಪರ್ಧಿಸಬೇಕೆಂದು ನಿರ್ಧರಿಸಲಾಗಿತ್ತು. ಅದೇ ಸಮಯದಲ್ಲಿ ಇಂದಿರಾರ ಬೇಹುಗಾರಿಕಾ ತಂಡ ಈಗ ಚುನಾವಣೆ ನಡೆದರೆ ಕಾಂಗ್ರೆಸ್‌ಗೆ ಸೋಲಾಗುವುದು ನಿಶ್ಚಿತವೆಂದು ಹೇಳಿತ್ತು. ಇಂದಿರಾರು ಹೇರಿದ್ದ ತುರ್ತು ಪರಿಸ್ಥಿಯ ಬಗ್ಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗಳಾಗುತ್ತಿದ್ದವು. ಹೀಗಾಗಿ, ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುವ ಒತ್ತಡ ಇಂದಿರಾರ ಮೇಲಿತ್ತು. ವಿವಿಧ ಅಂತಾರಾಷ್ಟ್ರೀಯ ಸಂಘಟನೆಗಳು ಭಾರತದಲ್ಲಿ ನಡೆಯುತ್ತಿದ್ದ ಪ್ರಜಾಪ್ರಭುತ್ವದ ಕಗ್ಗೊಲೆಯ ಬಗ್ಗೆ ಸತತವಾಗಿ ವರದಿ ಮಾಡುತ್ತಿದ್ದವು. ಚುನಾವಣೆ ಹತ್ತಿರ ಬರುತ್ತಿದ್ದಂತೆ ಇಂದಿರಾರಿಗೆ ಸೋಲಿನ ಭಯ ಕಾಡತೊಡಗಿತ್ತು. ಹೀಗಾಗಿ, ಆರೆಸ್ಸೆಸ್‌ನ ಹಿರಿಯ ಪ್ರಚಾರಕರೊಬ್ಬರಿಗೆ ಕೆಲವು ಸರಕಾರಿ ಅಧಿಕಾರಿಗಳ ಮೂಲಕ ಅವರು ಕಳಿಸಿದ ಸಂದೇಶ ಹೀಗಿತ್ತು: ''ಸಂಘವು ಜನತಾಪಕ್ಷಕ್ಕೆ ಬೆಂಬಲ ನೀಡಿದರೆ ಸರಕಾರ ಹೇರಿರುವ ನಿಷೇಧವನ್ನು ಹಿಂಪಡೆಯುವುದಿಲ್ಲ. ಜನರ ಮಧ್ಯೆ ಸಂಘಕ್ಕೆ ವಿರೋಧವಿದ್ದು, ಕಾಂಗ್ರೆಸ್ ಪುನಃ ಅಧಿಕಾರಕ್ಕೆ ಬರುತ್ತದೆ. ಆಗ ತೆರೆಯ ಹಿಂದೆ ಕೆಲಸ ಮಾಡುತ್ತಿರುವ ಸ್ವಯಂಸೇವಕರನ್ನು ಬಂಧಿಸಲಾಗುವುದು. ಅದರಿಂದ ಅವರ ಕುಟುಂಬಗಳಿಗೆ ತೊಂದರೆಯಾಗುತ್ತದೆ. ಇದೆಲ್ಲವೂ ಬೇಡವೆಂದರೆ ಸಂಘವು ಜನತಾಪಕ್ಷದಿಂದ ದೂರ ಉಳಿಯಬೇಕು''.

ಸಂಘವು ತನ್ನ ಮೇಲಿನ ನಿಷೇಧದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುವ ನಿಟ್ಟಿನಲ್ಲಿ ಹೋರಾಟ ನಡೆಸುತಿತ್ತು. ಜನತಾಪಕ್ಷ ತನ್ನ ಪ್ರಣಾಳಿಕೆಯಲ್ಲಿ 'ಆರೆಸ್ಸೆಸ್ ಮೇಲಿನ ನಿಷೇಧವನ್ನು ತೆಗೆಯುತ್ತೇವೆ' ಎಂದು ಮುದ್ರಿಸಲು ಮುಂದಾದಾಗ ಬೇಡವೆಂದಿದ್ದ ಬಾಳಾಸಾಹೇಬರು, ''ಸಂಘದ ಕೆಲಸವೇನಿದ್ದರೂ ದೇಶವನ್ನು ಸರ್ವಾಧಿಕಾರದಿಂದ ಮುಕ್ತಗೊಳಿಸಿ ಪ್ರಜಾಪ್ರಭುತ್ವವನ್ನು ಮರುನಿರ್ಮಾಣ ಮಾಡುವುದು'' ಎಂದಿದ್ದರು. ದೊಡ್ಡಮಟ್ಟದ ಹೋರಾಟಗಳ ಫಲವಾಗಿ ದೇಶದಲ್ಲಿ ಇಂದಿರಾರ ಸರ್ವಾಧಿಕಾರಿ ಆಡಳಿತ ಅಂತ್ಯವಾಯಿತು, ಪ್ರಜಾಪ್ರಭುತ್ವ ಮರುಸ್ಥಾಪಿತವಾಯಿತು. ಸುಮಾರು 30 ವರ್ಷಗಳ ಬಳಿಕ ಭಾರತದಲ್ಲಿ ಕಾಂಗ್ರೆಸ್ಸೇತರ ಸರಕಾರ, ಅಂದರೆ ಜನತಾಪಕ್ಷದ ಸರಕಾರ ಅಧಿಕಾರಕ್ಕೆ ಬಂದಿತು. 21 ತಿಂಗಳುಗಳ ನಂತರ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೇಲಿನ ನಿಷೇಧವನ್ನು ನೂತನ ಸರಕಾರ ಹಿಂಪಡೆಯಿತು. ಜೈಲಿನಿಂದ ಹೊರಬಂದ ಬಾಳಾಸಾಹೇಬರು ಯಥಾಪ್ರಕಾರ ಸಂಘದಲ್ಲಿನ ತಮ್ಮ ಕೆಲಸಗಳಲ್ಲಿ ತೊಡಗಿಸಿಕೊಂಡು ಸಂಘವು ತಮಗೆ ನೀಡಿದ್ದ ಜವಾಬ್ದಾರಿಯನ್ನು ನಿಭಾಯಿಸಿದರು.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅರ್ಥಪೂರ್ಣ ಅಂಕಣ

ಶಿಶಿರ್ ಹೆಗಡೆಯವರ 'ಶಿಶಿರಕಾಲ' ಅಂಕಣ (ಜೂನ್ 20) ತುಂಬಾ ಅರ್ಥಪೂರ್ಣವಾಗಿದೆ. ಕಾಲಾನುಕಾಲಕ್ಕೆ ನಾವು ಅನೇಕ ಅದ್ಭುತ ವೈಜ್ಞಾನಿಕ ಸಾಧನೆಗಳನ್ನು ಕಾಣುತ್ತ ಬಂದಿದ್ದರೂ, ಜೀವದ ಅಸ್ತಿತ್ವದ ಕುರಿತಾದ ಮತ್ತು ಬ್ರಹ್ಮಾಂಡದ ಬಗೆಗಿನ ಇನ್ನೂ ಅನೇಕ ಪ್ರಶ್ನೆಗಳಿಗೆ ಅದು ಉತ್ತರಗಳನ್ನು ಹುಡುಕುವುದು ಬಾಕಿಯಿದೆ.

'ಜೀವ' ಎಂದರೇನು, ಅದು ಉಂಟಾದದ್ದು ಹೇಗೆ, ಪ್ರಜ್ಞೆಯು ನಮ್ಮನ್ನು ರೂಪಿಸುವುದು ಹೇಗೆ ಎಂಬುದು ವಿಜ್ಞಾನಕ್ಕೆ ಇನ್ನೂ ಬಹುಶಃ ಗೋಚರವಾಗಿಲ್ಲ. ನಮ್ಮ ಅನೇಕ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಪ್ರಕ್ರಿಯೆಗಳು ಹೇಗೆ ಜೋಡಣೆಯಾಗುತ್ತವೆ, ಅವು ನಮ್ಮ ಮನಸ್ಸಿನಲ್ಲಿ ಹೇಗೆ ಪ್ರತಿಕ್ರಿಯೆಗಳನ್ನು ಉಂಟುಮಾಡುತ್ತವೆ? ಎಂಬೆಲ್ಲ ಪ್ರಶ್ನೆಗಳಿಗೆ ಸ್ಪಷ್ಟವಾದ ಉತ್ತರವಿಲ್ಲ. ಆದರೆ ಈ ಪರಿಸ್ಥಿತಿಯನ್ನು ನಾವು ಸರಳವಾಗಿ ಸ್ವೀಕರಿಸಿ, ನಮ್ಮ ವಿಚಾರಗಳಲ್ಲಿ, ಅನುಭವಗಳಲ್ಲಿ ನವೀನತೆಯನ್ನು ಕಂಡುಕೊಳ್ಳುತ್ತಿದ್ದೇವೆ. 'ಸಮಯ' ಎಂಬ ವಿಚಾರ ಕೂಡ ಅನೇಕ ತತ್ವಾಂಶಗಳ ಜಟಿಲತೆಯಲ್ಲಿ ಸಿಲುಕಿಕೊಂಡಿದೆ. ಸಮಯವು ಹೇಗೆ ವಿಸ್ತಾರಗೊಂಡಿತು ಮತ್ತು ಕಣ ಪ್ರಪಂಚದೊಂದಿಗೆ ಅದಕ್ಕಿರುವ ಸಂಬಂಧವೇನು ಎಂಬುದರ ಬಗ್ಗೆ ವಿವಿಧ ವೈಜ್ಞಾನಿಕ ತತ್ವಗಳು, ಕ್ವಾಂಟಮ್ ಸಿದ್ಧಾಂತಗಳು ವಿವರಿಸುತ್ತವೆ. ಆದರೆ ಯಾವ ಇಷ್ಟಾರ್ಥವಾಗಿದ್ದರೂ ನಾವು ದಿನನಿತ್ಯವೂ ಅವಶ್ಯಕತೆಯ ಪ್ರಕಾರ ಸಮಯವನ್ನು ಅನುಭವಿಸುತ್ತೇವೆ. ನಿದ್ರೆಯು ಕೂಡ ಒಂದು ಮಹತ್ವದ ವಿಚಾರ. ನಿದ್ರೆಯ ಸಮಯದಲ್ಲಿ ನಮ್ಮ ದೇಹವು ಪುನರುಜ್ಜೀವನಗೊಳ್ಳುವುದರ ಜತೆಗೆ ಮನಸ್ಸು ಕೂಡ ವಿವಿಧ ಚಟುವಟಿಕೆಗಳಲ್ಲಿ ವ್ಯಸ್ತವಾಗಿರುತ್ತದೆ. ಕಣ್ಣು ಮುಚ್ಚಿದಾಗ ಕನಸು ಕಾಣುವುದು ಸೇರಿದಂತೆ ಜೈವಿಕ ಚಟುವಟಿಕೆಯ ಹಲವು ಅನುಭವಗಳೂ ಆಗುತ್ತವೆ. ಇದು ವಿಜ್ಞಾನದ ವಿವರಣೆಗೆ ನಿಲುಕದ ನಿಗೂಢ ವಿಷಯ. ಆದ್ದರಿಂದ, ಅಂಕಣದಲ್ಲಿ ಉಲ್ಲೇಖಿಸಿರುವಂತೆ ಕೆಲವು ಪ್ರಶ್ನೆಗಳಿಗೆ 'ಇದಮಿತ್ಥಂ' ಎನ್ನುವ ಮಟ್ಟಿಗೆ ಉತ್ತರ ಸಿಕ್ಕರೆ, ಮತ್ತೊಂದೆಡೆ ಪ್ರತಿಯೊಂದು ಪ್ರಶ್ನೆಯ ಹಿನ್ನೆಲೆಯಲ್ಲಿ ಮತ್ತೊಂದು ಹೊಸ ಪ್ರಶ್ನೆ ಉದ್ಭವಿಸುತ್ತದೆ. ಅದು ನಮಗೆ ಹೊಸ ದಾರಿಯನ್ನು ತೋರುತ್ತದೆ. ಹೀಗಾಗಿ, ಈ ವಿವರಣೆಗಳ ಪೈಕಿ ಯಾವುದೂ ನಮ್ಮ ಗ್ರಹಿಕೆಗೆ ಬಹುದೂರದಲ್ಲಿರುವಂತೆ ಕಾಣ ಬಹುದು; ಆದರೆ ನಾವು ಯಾವುದೇ ವಿಚಾರಗಳನ್ನು ಸಾರ್ಥಕವಾಗಿ ಪರೀಕ್ಷಿಸಿದಾಗ ಸೀಮಿತ ತತ್ವಗಳನ್ನು ಪಡೆದುಕೊಳ್ಳಬಹುದು.

- ಶಿವಯೋಗಿ ಎಂ.ವಿ., ರಾಂಪುರ

ಮನೆಯಲ್ಲೇ ಪ್ರವಾಸ

ಪ್ರವಾಸಿ ಪ್ರಪಂಚ' ಪತ್ರಿಕೆಯು ರಂಜನೀಯವಾಗಿದ್ದು ಹಲವು ಉಪಯುಕ್ತ ವಿಷಯಗಳನ್ನು ನೀಡುತ್ತಿದೆ. ವಿವಿಧೆಡೆಯ ಪ್ರಸಿದ್ಧ ದೇವಾಲಯಗಳು, ವಿಹಾರ ತಾಣಗಳನ್ನು ನೋಡಬೇಕು, ದೇಶ-ವಿದೇಶಗಳನ್ನು ಸುತ್ತಬೇಕು ಎಂಬುದು ಬಹುತೇಕರ ಆಸೆಯಾಗಿರುತ್ತದೆ. ಆದರೆ ಕಾರ್ಯದ ಒತ್ತಡದಿಂದಾಗಿ ಎಲ್ಲಾ ಕಡೆಯೂ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ, ಜತೆಗೆ ನಮ್ಮಂಥ ಗೃಹಿಣಿಯರಿಗೆ ಮಾಹಿತಿಯ ಕೊರತೆ. ಇಷ್ಟಾಗಿಯೂ ವಿಭಿನ್ನ ತಾಣಗಳ ವಿಶೇಷತೆ, ಜೀವನ ಶೈಲಿ, ಆಹಾರಪದ್ಧತಿ, ಸಂಸ್ಕೃತಿ, ಅಲ್ಲಿಗೆ ತಲುಪಲು ಇರುವ ಮಾರ್ಗೋಪಾಯಗಳು, ತಗಲುವ ವೆಚ್ಚ ಇತ್ಯಾದಿಗಳನ್ನು ತಿಳಿಯುವ ಕುತೂಹಲ ನಮಗೆ. ಇವೆಲ್ಲವನ್ನೂ 'ಪ್ರವಾಸಿ ಪ್ರಪಂಚ' ವರ್ಣರಂಜಿತ ಪತ್ರಿಕೆ ನಮಗೆ ಒದಗಿಸುತ್ತಿದೆ. 'ದೇಶ ಸುತ್ತು, ಕೋಶ ಓದು' ಎಂದಿದ್ದಾರೆ ಹಿರಿಯರು. ಮನೆಯಲ್ಲೇ ಕುಳಿತು ಪ್ರಪಂಚವನ್ನು ನೋಡುವ ಅವಕಾಶವನ್ನು ಒದಗಿಸುತ್ತಿರುವ 'ಪ್ರವಾಸಿ ಪ್ರಪಂಚ' ತಂಡಕ್ಕೆ ಧನ್ಯವಾದಗಳು.

- ಮಾಲಿನಿ ಆರ್.ಪಿ., ಬೆಂಗಳೂರು

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಅನಂತರಿಗೆ ಸಿಕ್ಕ ಪದ್ಮಭೂಷಣ, ರಾಜ್ಯದಲ್ಲಿ ಅನಾಥವಾಯ್ತು

ಪದಸಾಗರ

ನವೀನ್ ಸಾಗರ್
vveditoped@gmail.com
naveensagar2709@gmail.com

ಎರಡು ವಾರಗಳ ಹಿಂದೆ ಪದ್ಮ ಪ್ರಶಸ್ತಿಗಳ ಪ್ರದಾನ ಕಾರ್ಯಕ್ರಮ ನಡೆಯಿತು. ಸುಮಾರು 139 ಗಣ್ಯರಿಗೆ ರಾಷ್ಟ್ರಪತಿಗಳು ಗೌರವ ಪ್ರದಾನ ಮಾಡುವ ಕಾರ್ಯಕ್ರಮವದು. ಪ್ರಧಾನಿ ಆದಿಯಾಗಿ ಇಡೀ ಕೇಂದ್ರ ಸರಕಾರ ಹಾಗೂ ಗಣ್ಯರ ಸಮ್ಮುಖದಲ್ಲಿ ಪದ್ಮಶ್ರೀ, ಪದ್ಮಭೂಷಣ, ಪದ್ಮವಿಭೂಷಣ ಪ್ರಶಸ್ತಿಗಳನ್ನು ನೀಡುವ ಆಡಂಬರವಿಲ್ಲದ ಅಪರೂಪದ ಈ ಕಾರ್ಯಕ್ರಮಕ್ಕೆ ನಿಜಕ್ಕೂ ಮೆರುಗು ಬಂದದ್ದು ಇತ್ತೀಚಿನ ದಿನಗಳಲ್ಲೇ. ಮೊದಲೆಲ್ಲ ಘೋಷಣೆಯಾದ ಸುದ್ದಿ ಕೇಳುತ್ತಿದ್ದೆವಷ್ಟೆ. ಹೆಚ್ಚೆಂದರೆ ಪ್ರದಾನ ಕಾರ್ಯಕ್ರಮದ ಫೋಟೋಗಳು ಮರುದಿನದ ಪತ್ರಿಕೆಯಲ್ಲಿ ನೋಡಲು ಸಿಗುತ್ತಿದ್ದವು. ಆದರೆ ಈಗೆಲ್ಲ ಈ ಕಾರ್ಯಕ್ರಮದ ಲೈವ್ ನೋಡಲು ಸಿಗುತ್ತದೆ. ಯಾವ ಭಾಷಣ, ಬಿಲ್ಡಪ್ ಇಲ್ಲದೇ ಪ್ರಶಸ್ತಿ ವಿಜೇತರ ಹೆಸರು ಕರೆಯಲಾಗುತ್ತದೆ. ಅವರು ನಡೆದು ಬಂದು ರಾಷ್ಟ್ರಪತಿಗಳಿಗೆ ವಂದಿಸಿ ಪ್ರಶಸ್ತಿ ಸ್ವೀಕರಿಸಿ ವಾಪಸ್ ಹೋಗುತ್ತಾರೆ. ಆದರೆ ಒಬ್ಬೊಬ್ಬರು ಬಂದು ಪ್ರಶಸ್ತಿ ಸ್ವೀಕರಿಸಿ ಹೋಗುವ ಆ ಕ್ಷಣಗಳಿವೆಯಲ್ಲ ಅವು, ನಿಜಕ್ಕೂ ಕಣ್ತುಂಬಿಕೊಳ್ಳುವ ಹಾಗಿರುತ್ತವೆ. ಅದರಲ್ಲೂ ಕೆಲವರು ಪ್ರಶಸ್ತಿ ಸ್ವೀಕರಿಸಿದ ಕ್ಷಣಗಳು ಮನಸಿನಲ್ಲಿ ಅಚ್ಚೊತ್ತಿದಂತೆ ಉಳಿದುಬಿಟ್ಟಿದೆ. ಸಾಲುಮರದ ತಿಮ್ಮಕ್ಕ, ಭೀಮವ್ವ, ಮಂಜಮ್ಮ ಜೋಗತಿ, ಹಾಜಬ್ಬ, ಇಬ್ರಾಹಿಂ ಸುತಾರ್ ಇಂಥವರಿಗೆ ಪದ್ಮ ಪ್ರಶಸ್ತಿ ಘೋಷಣೆಯಾದಾಗ, ಅವರು ಸ್ವೀಕರಿಸುವ ದೃಶ್ಯಾವಳಿಗಳನ್ನು ನೋಡಿದಾಗ ಮನಸು ಅನುಭವಿಸಿದ ಖುಷಿ, ಹೊರಬಂದ ಆನಂದದ ಕಣ್ಣೀರು ವಿವರಿಸಲಸಾಧ್ಯ. ಇನ್ನು ವೈಯಕ್ತಿಕವಾಗಿ ನಂಗೆ ಈ ಸಮಾರಂಭ ನೋಡುವಾಗ ವಿಜೇತರು ನಡೆದು ಬರುವ ರೀತಿ, ಪ್ರಧಾನಿ ಮೋದಿಗೆ ವಂದಿಸುವ ಆ ಕ್ಷಣಾರ್ಧ, ಅದಕ್ಕೆ ಮೋದಿ ರಿಯಾಕ್ಟ್ ಮಾಡುವ ಬಗೆ, ದೊಡ್ಡ ವ್ಯಕ್ತಿಗಳ ವಿನಮ್ರತೆ, ರಾಷ್ಟ್ರಪತಿಗಳು ಪ್ರಶಸ್ತಿ ಪ್ರದಾನ ಮಾಡಿ ಕೈಮುಗಿಯುವ ಭಂಗಿ, ಪ್ರತಿಯೊಂದೂ ಇಷ್ಟದ ಮೊಮೆಂಟ್‌ಗಳು. ಇವತ್ತಿನವರೆಗೆ ನನಗೆ ವಿಪರೀತ ಇಷ್ಟವಾದದ್ದೆಂದರೆ ನನ್ನ ನೆಚ್ಚಿನ ಕ್ರಿಕೆಟರ್ ಧೋನಿ ಮಿಲಿಟರಿ ವಸ್ತ್ರ ಧರಿಸಿ, ಅದೇ ಪರೇಡ್ ಶೈಲಿಯಲ್ಲಿ ನಡೆದು ಬಂದು ಸೆಲ್ಯೂಟ್ ಮಾಡಿ ಪ್ರಶಸ್ತಿ ಸ್ವೀಕರಿಸಿದ ಆ ಗಳಿಗೆ. ಅಂದಿನ ನಂತರ ಈ ಪ್ರಶಸ್ತಿ ಸ್ವೀಕರಿಸುವುದನ್ನು ನೋಡಬೇಕು ನಾನು ಅಂತ ಈ ತನಕ ಕಾದಿದ್ದು ಒಬ್ಬರೇ ಒಬ್ಬರಿಗಾಗಿ. ಅದು ಅನಂತ್ ನಾಗ್.

ಹೌದು. ಅನಂತ್ ನಾಗ್‌ರನ್ನು ಇಷ್ಟ ಪಡುವ ಕರ್ನಾಟಕದ ಬಹುದೊಡ್ಡ ಸಮೂಹವೊಂದು ಅವರಿಗೆ ಪದ್ಮಪ್ರಶಸ್ತಿ ಸಿಗಬೇಕೆಂದು ತಪಸ್ಸು ಮಾಡಿತ್ತು. ಸಾತ್ವಿಕ ಹೋರಾಟ ಮಾಡಿತ್ತು. ಶಬರಿಯಂತೆ ಕಾದಿತ್ತು. ಕೊನೆಗೂ ಅದು ಸಾಕಾರಗೊಂಡಾಗ, ಪ್ರಶಸ್ತಿ ಸ್ವೀಕರಿಸುವ ದೃಶ್ಯ ನೋಡಲು ಹಾತೊರೆದಿತ್ತು. ಮೊದಲ ಕಂತಿನ ಕಾರ್ಯಕ್ರಮದಲ್ಲಿ ಅನಂತ್ ನಾಗ್ ಹೆಸರು ಬರಲೇ ಇಲ್ಲ. ಸುಮಾರು ಒಂದೂವರೆ ಗಂಟೆಯ ಆ ಕಾರ್ಯಕ್ರಮದಲ್ಲಿ ಅನಂತ್ ನಾಗ್ ಅವರನ್ನು ಹುಡುಕಿ ನಿರಾಸೆಗೊಂಡಿದ್ದೆ. ಎರಡನೇ ಗುಂಪಿನಲ್ಲಿ ಅನಂತ್ ನಾಗ್ ಅವರಿಗೆ ಪ್ರಶಸ್ತಿ ಪ್ರದಾನ ಆಗುವ ಹೊತ್ತಿಗೆ ರಾಜ್ಯದಲ್ಲಿ ಆರ್‌ಸಿಬಿ ಗೆಲುವಿನ ಸಂಭ್ರಮ, ಕಾಲ್ತುಳಿತದಲ್ಲಿ ಆದ ಸಾವುಗಳಿಗೆ ಸಂತಾಪ, ರಾಜಕೀಯ, ಇತ್ಯಾದಿಗಳ ಅಬ್ಬರ ಅತಿರೇಕಕ್ಕೆ ಹೋಗಿತ್ತು. ವರ್ಷಗಳಿಂದ ಕಾದಿದ್ದ ಅಪರೂಪದ ಕ್ಷಣ ತೆರೆಮರೆಗೆ ಸರಿದುಹೋಯ್ತು. ಅಲ್ಲೊಂದು ಇಲ್ಲೊಂದು ಸೋಷಿಯಲ್ ಮೀಡಿಯಾ ರೀಲ್‌ಗಳಾಗಿ ಓಡಾಡಿ ಮರೆಯಾಗಿಬಿಟ್ಟಿತು. ಪತ್ರಿಕೆಗಳಲ್ಲೂ, ಸುದ್ದಿವಾಹಿನಿಗಳಲ್ಲೂ ಇದೊಂದು ಸುದ್ದಿಯೇ ಅಲ್ಲವೆಂಬಂತೆ ಬದಿಗೆ ಸರಿದುಹೋಗಿಬಿಟ್ಟಿತು.

ಪ್ರತಿ ಬಾರಿ ಪದ್ಮ ಪ್ರಶಸ್ತಿ ಘೋಷಣೆಯಾದಾಗ ಅನಂತ್ ನಾಗ್ ಅವರಿಗೆ ಬರಲಿಲ್ಲ ಎಂದು ಬೇಸರಗೊಂಡು, ಪದ್ಮ ಪ್ರಶಸ್ತಿಯನ್ನು ದೂಷಿಸಿ, ಹಾಳು ವ್ಯವಸ್ಥೆಯನ್ನು ಬಯ್ದು, ಆಕ್ರೋಶ ಹತಾಶೆ ಹೊರಹಾಕುತ್ತಿದ್ದ ರಾಜ್ಯ, ಅನಂತ್ ನಾಗ್ ಆ ಪ್ರಶಸ್ತಿ ಪಡೆದದ್ದಕ್ಕೆ ಇಷ್ಟು ನೀರಸವಾದ ಪ್ರತಿಕ್ರಿಯೆ ಕೊಟ್ಟಿದೆ ಅಂದರೆ ಅದನ್ನು ನನಗೆ ಈ ಕ್ಷಣಕ್ಕೂ ಒಪ್ಪಿಕೊಳ್ಳಲಾಗುತ್ತಿಲ್ಲ. ಈ ರಾಜ್ಯದಲ್ಲಿ ಪ್ರತಿಭೆ ಮತ್ತು ಸಾಧನೆಗೆ ತಕ್ಕ ಮನ್ನಣೆ ಸಿಕ್ಕಿಲ್ಲ ಎಂದು ಹೆಚ್ಚು ಮಾತುಗಳು ಕೇಳಿಬಂದಿದ್ದು ಇಬ್ಬರ ಬಗ್ಗೆ. ಎಸ್.ಎಲ್. ಭೈರಪ್ಪನವರಿಗೆ ಜ್ಞಾನಪೀಠ ದೊರೆತಿಲ್ಲ ಮತ್ತು ಅನಂತ್ ನಾಗ್‌ಗೆ ಪದ್ಮಪ್ರಶಸ್ತಿ ಸಿಕ್ಕಿಲ್ಲ ಅನ್ನೋದು. ವಿಷ್ಣುವರ್ಧನ್ ಬಿಡಿ ಅವರೊಬ್ಬ ಶಾಪಗ್ರಸ್ತ ಗಂಧರ್ವ. ಸಾವಿನ ನಂತರವೂ ಅನ್ಯಾಯಕ್ಕೆ ಒಳಗಾಗುತ್ತಲೇ ಇರುವ ಜೀವ ಅದು.

ಎಷ್ಟೋ ಬಾರಿ ಅನರ್ಹರಿಗೆ, ಅಪಾತ್ರರಿಗೆ, ಕುಖ್ಯಾತರಿಗೆ, ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿರುವವರಿಗೆ ಪದ್ಮ ಪ್ರಶಸ್ತಿ ಬಂದಾಗ, ಅನಂತ್ ನಾಗ್ ಅವರಿಗೆ ಪದ್ಮ ಪ್ರಶಸ್ತಿ ಬರದಿದ್ದುದೇ ಒಳ್ಳೆಯದು. ಈಗ ಪ್ರಶಸ್ತಿ ಗೌರವ ಕಳೆದುಕೊಂಡಿದೆ. ಅಂಥವರೆಲ್ಲ ಪಡೆದುಕೊಂಡ ಪ್ರಶಸ್ತಿ ಅನಂತ್‌ಗೆ ಸಿಗದಿರೋದೇ ಮರ್ಯಾದೆ ಅಂತ ಸಮಾಧಾನಿಸಿಕೊಂಡದ್ದೂ ಇದೆ. ಭೈರಪ್ಪನವರ ಪ್ರತಿಭೆ ಮತ್ತು ಸಾಧನೆಗೆ ಜ್ಞಾನಪೀಠವೇ ಕಮ್ಮಿ ಅನಿಸಿದ್ದೂ ಇದೆ. ಇನ್ನು ರಾಜಕೀಯ ತಳಕು ಹಾಕಿಕೊಂಡಾಗ ಅನಂತ್ ನಾಗ್ ಮತ್ತು ಭೈರಪ್ಪನವರಿಗೆ ಈಗಲಾದರೂ ಸಿಗಬೇಕಾದ ಮನ್ನಣೆ ಸಿಕ್ಕಬಹುದಾ ಅಂತ ಒಂದು ಕಡೆ ಅನಿಸಿದರೆ, ಇನ್ನೊಂದು ಕಡೆ ಇದರ ಇನ್ನೊಂದು ದೃಷ್ಟಿಕೋನ ಕಾಣುತ್ತಿತ್ತು. ಈಗ ಇವರಿಗೆ ಅರ್ಹವಾಗಿಯೇ ಪ್ರಶಸ್ತಿ ಒಲಿದರೂ ಜನರು ಬಲಪಂಥೀಯ ಪಕ್ಷಪಾತಕ್ಕೆ ಲಿಂಕ್ ಮಾಡಿ ಪ್ರಶಸ್ತಿ ಸಿಕ್ಕಿರುವ ಖುಷಿ ಹಾಳುಮಾಡುತ್ತಾರೆಂಬ ಅಳುಕು ಕಾಡುತ್ತಿತ್ತು. ಇದರ ಜತೆಗೆ ಇನ್ನೊಂದು ಆಯಾಮ. ಈಗಲೂ ಸಿಗದಿದ್ದರೆ ಇನ್ಯಾವಾಗ ಎಂಬ ಪ್ರಶ್ನೆ!

ಅಂತೂ ಭೈರಪ್ಪನವರಿಗೆ ಜ್ಞಾನಪೀಠ ಮರೀಚಿಕೆಯಾಗಿಯೇ ಉಳಿದಿದ್ದರೂ, ಅನಂತ್ ನಾಗ್ ಅವರಿಗೆ ಪದ್ಮಭೂಷಣ ದೊರೆತಿದೆ. ಸಮಾಧಾನದ ಸಂತೋಷದ ನಿಟ್ಟುಸಿರು ಬಿಡಲಡ್ಡಿಯಿಲ್ಲ.

ನನಗೆ ಇವತ್ತಿಗೂ ಪದ್ಮಭೂಷಣ ಅಂದರೆ ಅದರ ಮುಂದೆ ಬರುವ ಹೆಸರು ಒಂದೇ. ರಾಜ್ ಕುಮಾರ್. ಡಾಕ್ಟರ್ ಆಗ್ಲೀ, ಪದ್ಮಭೂಷಣ, ರಾಜ್‌ಕುಮಾರ್ ಹೆಸರಿನ ಹಿಂದೆ ಕೂತಷ್ಟು ಪರ್ಫೆಕ್ಟಾಗಿ ಇನ್ಯಾರ ಹೆಸರ ಹಿಂದೆಯೂ ಕೂರುವುದಿಲ್ಲ ಅನಿಸುವಷ್ಟು ನಮ್ಮಲ್ಲಿ ಅದು ಬೇರೂರಿದೆ. ಪದ್ಮಭೂಷಣ ನಟಸಾರ್ವಭೌಮ ಡಾಕ್ಟರ್ ರಾಜ್‌ಕುಮಾರ್ ಅಂತ ಹೇಳೋದರಲ್ಲಿ ಇರೋ ಅದ್ಭುತ ಆನಂದವೇ ಬೇರೆ. ಇವತ್ತಿಗೆ ಕನ್ನಡ ಚಿತ್ರರಂಗದಲ್ಲಿ ಥ್ರಿಲ್ಲರ್ ಮಂಜು, ಕೊಬ್ರಿ ಮಂಜುವಿನಿಂದ ಹಿಡಿದು ರವಿಚಂದ್ರನ್ ತನಕ ಪ್ರತಿಯೊಬ್ಬರೂ ಡಾಕ್ಟರ್‌ಗಳೇ. ಅದರೆ ಅವರೇ ಅದನ್ನ ಡಿಮ್ಯಾಂಡ್ ಮಾಡಿ ಕರೆಸಿಕೊಳ್ಳಬೇಕೇ ಹೊರತು, ಅಯಾಚಿತವಾಗಿ ಅವರ ಹೆಸರಿನೊಂದಿಗೆ 'ಡಾಕ್ಟರ್' ಹೇಳಲು ಸಾಧ್ಯವಾಗುವುದೇ ಇಲ್ಲ. ಇಲ್ಲಿಯತನಕ ಕರ್ನಾಟಕದವರು 76 ಮಂದಿ ಪದ್ಮಭೂಷಣ ಗೌರವ ಪಡೆದಿದ್ದಾರೆ. 23 ಪದ್ಮವಿಭೂಷಣ ಸಿಕ್ಕಿದೆ. ಸುಮಾರು 200ರ ಹತ್ತಿರ ಪದ್ಮಶ್ರೀ ಅವಾರ್ಡ್‌ಗಳು ಕನ್ನಡಿಗರಿಗೆ ಒಲಿದಿವೆ. ಭೈರಪ್ಪ, ಕಂಬಾರ, ಸುಧಾಮೂರ್ತಿ, ದ್ರಾವಿಡ್, ಶಿವಕುಮಾರ ಸ್ವಾಮಿಗಳು, ಬಿ.ಎಂ. ಹೆಗಡೆ, ಪುಟ್ಟರಾಜ ಗವಾಯಿಗಳು, ವೀರೇಂದ್ರ ಹೆಗ್ಗಡೆಯವರು, ಡಿವಿಜಿ ಹೀಗೆ ಖ್ಯಾತನಾಮರ ದೊಡ್ಡ ಪಟ್ಟಿಯೇ ಇದೆ. ಆದರೆ ರಾಜ್‌ಕುಮಾರ್ ಅವರನ್ನ ಪದ್ಮಭೂಷಣದೊಂದಿಗೆ ಸಂಭ್ರಮಿಸುವಂತೆ ನಾವು ಯಾರನ್ನೂ ಸಂಭ್ರಮಿಸಿದ್ದಿಲ್ಲ. ಈಗ ಅನಂತ್ ನಾಗ್ ಅವರನ್ನೂ ನಾವೇನೂ ಪ್ರತಿ ಬಾರಿ ಕರೆಯುವಾಗ ಪದ್ಮಭೂಷಣ ಡಾಕ್ಟರ್ ಅನಂತ್ ನಾಗ್ ಎಂದು ಸಂಬೋಧಿಸುವುದಿಲ್ಲ. ಆದರೆ ಅವರಿಗೆ ಆ ಗೌರವ ಸಿಗಲೇಬೇಕೆಂದು ಬಹುವಾಗಿ ಕಾದಿದ್ದಂತೂ ನಿಜ.



ಅನಂತ್ ನಾಗ್ ಕನ್ನಡ ಸಿನಿಮಾರಂಗ ಕಂಡ, ಭಾರತೀಯ ಚಿತ್ರರಂಗದ ಅಪರೂಪದ ಸಹಜ ನಟರಲ್ಲೊಬ್ಬರು. ಅಸಹಜ ಫೈಟು, ಡ್ಯಾನ್ಸು ಇವೆರಡನ್ನು ಹೊರತುಪಡಿಸಿ ಇನ್ಯಾವ ಪಾತ್ರ ಕೊಟ್ಟರೂ ಲೀಲಾಜಾಲವಾಗಿ ನಟಿಸಬಲ್ಲ ನಟ ಅನಂತ್. ಎಂಥ ಕಲ್ಲೆದೆ ಪ್ರೇಕ್ಷಕನನ್ನೂ ಕ್ಷಣಮಾತ್ರದಲ್ಲಿ ನಗಿಸುವ ಅಳಿಸುವ ಶಕ್ತಿ ಇರುವ ಕಲಾವಿದ. ಅನಂತ್ ನಾಗ್ ತೆರೆಯ ಮೇಲಿದ್ದರೆ ದೃಶ್ಯಕ್ಕೊಂದು ಘನತೆ, ಸ್ಕ್ರೀನಿಗೊಂದು ಮೆರುಗು. ಅನಂತ್ ನಾಗ್‌ಗೆ ಈ ಪಾತ್ರ ಒಪ್ಪೋದಿಲ್ಲ, ಅನಂತ್ ನಾಗ್ ಈ ಪಾತ್ರದಲ್ಲಿ ಚೆನ್ನಾಗಿ ಅಭಿನಯಿಸಿಲ್ಲ ಅಂತ ಪಟ್ಟಿ ಮಾಡೋಕೆ ಹೋದರೆ ನನಗಂತೂ ಎರಡೋ ಮೂರೋ ಚಿತ್ರಗಳಷ್ಟೆ ಸಿಗೋದು. ರಾಜಕೀಯ ಬದುಕಿನಿಂದ ಹೊರಬಂದು, ಚಿತ್ರರಂಗದಲ್ಲಿ ಸೆಕೆಂಡ್ ಇನ್ನಿಂಗ್ಸ್ ಆರಂಭಿಸಿದಾಗ ಅನಂತ್ ನಾಗ್ ಕಳಪೆ ಚಿತ್ರಗಳಲ್ಲಿ ತಮಗೊಪ್ಪದ ಪಾತ್ರಗಳನ್ನು ಮಾಡಿದ್ದರು. ಆದರೆ ಅವರ ಮೊದಲ ಇನ್ನಿಂಗ್ಸ್ ಹಾಗೂ ಎರಡನೇ ಇನ್ನಿಂಗ್ಸಿನ ದ್ವಿತೀಯಾರ್ಧ ಅತ್ಯದ್ಭುತ. 'ಮುಂಗಾರು ಮಳೆ'ಯ ನಂತರದ ಅನಂತ್ ಅಧ್ಯಾಯ, 'ಎಬಿಸಿ' ದಿವಾಳಿಯ ನಂತರ ಕಂಬ್ಯಾಕ್ ಮಾಡಿದ ಅಮಿತಾಭ್ ಅಧ್ಯಾಯ ಬಹುತೇಕ ಒಂದೇ ಥರದ್ದು. ಅವರ ಫಸ್ಟ್ ಹಾಫಿನ ಬೆಳದಿಂಗಳ ಬಾಲೆ, ಸೆಕೆಂಡ್ ಹಾಫಿನ ಗೋಧಿಬಣ್ಣ ಸಾಧಾರಣ ಮೈಕಟ್ಟು ಈ ಎರಡು ಚಿತ್ರಗಳು ಸಾಕು ಅನಂತ್ ಅವರಿಗೆ ಇರೋ ಬರೋ ಎಲ್ಲ ಅವಾರ್ಡುಗಳನ್ನು ಕೊಟ್ಟುಬಿಡಬಹುದು. ಗಣೇಶ, ಗೋಲ್ಮಾಲ್ ಸೀರೀಸ್‌ಗಳಲ್ಲಿ ನಗಿಸಿದ್ದು, ತಣ್ಣನೆಯ ನೆಗೆಟಿವ್ ರೋಲ್‌ಗಳಿಂದ ಅನಂತ್ ಹೀಗೂ ನಟಿಸುತ್ತಾರಾ ಎಂದು ಅಚ್ಚರಿ ಹುಟ್ಟಿಸಿದ್ದು, ಬೆಳದಿಂಗಳ ಬಾಲೆಯಲ್ಲಿ ಫೋನ್ ಹ್ಯಾಂಡ್ ಸೆಟ್ಟನ್ನೇ ಪ್ರೇಯಸಿಯನ್ನು ಸ್ಪರ್ಶಿಸುವಂತೆ ಸ್ಪರ್ಶಿಸುತ್ತಾ ತಾವು ಕಣ್ಣಲ್ಲಿ ನೀರು ತುಂಬಿಕೊಂಡು ನಮ್ಮನ್ನು ಅಳಿಸಿದ್ದು, ಗೋಧಿಬಣ್ಣದ ತೊದಲುಮಾತಿನ ವೆಂಕೋಬರಾವ್ ಆಗಿ ನಮ್ಮನ್ನು ಮೂಕರಾಗಿಸಿದ್ದು, ಮುಂಗಾರು ಮಳೆಯಲ್ಲಿ ಯಂಗ್ ಮ್ಯಾನ್ ಅನ್ನುತ್ತಲೇ ನಗಿಸಿ ಅಳಿಸಿದ್ದು ಯಾವುದನ್ನು ಮರೆಯೋಣ?

ಎತ್ತರದ ನಿಲುವು, ಫಾರ್ಮಲ್ ಡ್ರೆಸ್, ಮುಂದಲೆ ಮೇಲೆ ಜಾರುವ ಕೂದಲು, ಆರೋಗ್ಯ ಉಕ್ಕುವ ತ್ವಚೆ, ಅನಂತ್ ನಿಜಕ್ಕೂ ಗಂಡುಮಕ್ಕಳಿಗೆ ಹೊಟ್ಟೆಕಿಚ್ಚು ಹುಟ್ಟಿಸುವ, ಹೆಣ್ಮಕ್ಕಳಿಗೆ ಕ್ರಶ್ ಹುಟ್ಟಿಸುವ ಹೀರೋ. ಅಷ್ಟೇ ಗ್ರೇಸ್‌ಫುಲೀ ವೃದ್ಧರಾಗುತ್ತಾ ನಡೆದವರು ಅನಂತ್. ಈಗ ಅವರ ಮಾತುಗಳನ್ನು, ಹಾಡುವ ಗೀತೆಗಳನ್ನು ಕೇಳುತ್ತಾ ಇದ್ದರೆ, ಅನಂತ್ ನಾಗ್‌ರ ಜ್ಞಾನ ಇತರ ಪ್ರತಿಭೆಗಳು ಈಗ ಅನಾವರಣಗೊಳ್ತಾ ಇದೆಯಾ ಅಂತ ಅಚ್ಚರಿ ಆಗುತ್ತದೆ.

ಅನಂತ್ ನಾಗ್ ಅವರಿಗೆ ಪದ್ಮ ಪ್ರಶಸ್ತಿ ಬಂದದ್ದು ದೊಡ್ಡ ಮಟ್ಟದಲ್ಲಿ ಸೆಲೆಬ್ರೇಟ್ ಮಾಡಬೇಕಿದ್ದ ವಿಚಾರ. ಆದರೆ ಚಲನಚಿತ್ರ ಮಂಡಳಿಗಳು ಬ್ಯಾನ್ ಮಾಡೋದ್ರಲ್ಲಿ ಬ್ಯುಸಿ. ಡೀಲಿಂಗ್‌ಗಳಲ್ಲಿ ಬ್ಯುಸಿ, ಕನ್ನಡ ರಕ್ಷಣೆಗಿರುವವರು ಎನ್ನುವ ಹೋರಾಟ ಸಂಘಗಳು, ಬೇರೆ ಭಾಷಿಗರನ್ನು ದ್ವೇಷಿಸುವುದರಲ್ಲಿ ಬ್ಯುಸಿ, ಕನ್ನಡ ಚಿತ್ರರಂಗದ ನಟರು ಕ್ರಿಕೆಟ್ ಆಡುವುದರಲ್ಲಿ, ರಿಯಾಲಿಟಿ ಶೋಗಳಲ್ಲಿ ಮಂಗಾಟ ಮಾಡುವುದರಲ್ಲಿ ಬ್ಯುಸಿ. ಯಾರಿಗೂ ಒಗ್ಗೂಡಿ ಅನಂತ್ ನಾಗ್ ಅವರನ್ನು ಸೆಲೆಬ್ರೇಟ್ ಮಾಡುವ ಆಲೋಚನೆ ಕೂಡ ಇಲ್ಲ. ಆರ್‌ಸಿಬಿ ಗೆಲುವನ್ನು ಕನ್ನಡದ ಗೆಲುವು ಎಂದೆಲ್ಲ ರಾಜ್ಯಪ್ರೇಮ ಮೆರೆಯುವ ಕರ್ನಾಟಕಕ್ಕೆ, ಅನಂತ್ ನಾಗ್ ಪದ್ಮಭೂಷಣಕ್ಕೆ ಭಾಜನರಾಗಿದ್ದು ದೊಡ್ಡ ವಿಷಯ ಅನಿಸುವುದೇ ಇಲ್ಲ. ಯಾಕೆ? ಅನಂತ್ ನಾಗ್ ಅವರಿಗೆ ಅಭಿಮಾನಿ ಸಂಘಗಳಿಲ್ಲ. ಬಾಲಬಡುಕ ತಂಡವಿಲ್ಲ. ಪಿ.ಆರ್. ಇಲ್ಲ. ಯಾರ ಜತೆಗೂ ಗುರುತಿಸಿಕೊಂಡಿಲ್ಲ. ಬಕೆಟ್ ಹಿಡಿಯಲು ಬರುವವರನ್ನು ಹತ್ತಿರಕ್ಕೆ ಬಿಟ್ಟುಕೊಳ್ಳುವುದಿಲ್ಲ. ಪ್ರಚಾರ ಬೇಕಾಗಿಯೇ ಇಲ್ಲ. ಕಡೇಪಕ್ಷ ಸರಕಾರಕ್ಕಾದರೂ ಅನಿಸಬೇಕಿತ್ತಲ್ವಾ? ಹೆಂಡ ಮಾರುವವನ ತಂಡವನ್ನು ಕರೆಸಿ ವಿಧಾನಸೌಧದ ಮುಂದೆ ಸನ್ಮಾನ ಮಾಡುವ ಉತ್ಸಾಹದ ಒಂದು ಪರ್ಸೆಂಟಾದರೂ ಅನಂತ್ ನಾಗ್ ಅವರನ್ನು ಗೌರವಿಸುವ ಉತ್ಸಾಹ ತೋರಬಹುದಿತ್ತು. ಅನಂತ್ ನಾಗ್ ಮೋದಿಯನ್ನು ಹೊಗಳಿ ಮಾತನಾಡಿದ್ದು, ದೇಶಪ್ರೇಮವನ್ನು ತೋರಿಸಿಕೊಂಡದ್ದೇ ತಪ್ಪಾಗಿ ಹೋಯಿತಾ? ಅನಂತ್ ನಾಗ್‌ರನ್ನು ಹಾಡಿಹೊಗಳುತ್ತಿದ್ದ ಕೆಲವು ಬಣಗಳು ಅನಂತ್ ನಾಗ್‌ರ ಸೈದ್ಧಾಂತಿಕ ನಿಲುವು ಗಮನಿಸಿ ಬದಲಾದದ್ದನ್ನು ಗಮನಿಸಿದಾಗ ಇಂದಿನ ಈ ನೀರಸ ಸ್ಪಂದನೆಗೆ ಅದೇ ಕಾರಣವಿದ್ದಿರಬಹುದಾ ಅನಿಸುತ್ತಿದೆ. ಅನಂತ್ ನಾಗ್‌ರನ್ನೂ ಹೀಗೆಲ್ಲ ದೂರ ಮಾಡಿಕೊಳ್ಳಬಹುದಾ ಅಂತ ಅಚ್ಚರಿ ಆಗುತ್ತಿದೆ.

ಭಟ್ಟರ್ ಸ್ಕಾಚ್

- **ಸಗ್ರಿ ಹಯಗ್ರೀವ, ವಿದ್ಯಾಪೀಠ**
ಭಟ್ರೇ, ಸೈಕಲ್‌ನಿಂದ ಬಿದ್ದ ಡಿಕೆಶಿಯನ್ನು ನೋಡಿದ ಕುಮಾರಣ್ಣನ ಕಣ್ಣು ತೇವ ಆಯಿತಂತೆ?
- **ಹೂಂ.. ಸ್ವಲ್ಪವೂ ಪೆಟ್ಟಾಗಲಿಲ್ಲವಲ್ಲ ಅಂತ ಮನಸ್ಸು ನೊಂದು ತೇವವಾಯ್ತಂತೆ!**

- **ಕಮಲಿ (ಕಮ್ಮು), ಇಟ್ಟಮಡು**
ಭಟ್ರೇ, ಅಪಸ್ವರ ಬಾರದಂತೆ ಪಕ್ಷ ಕಟ್ಟೋಣ ಅಂತ ಬಿಜೆಪಿ ಮಂದಿ ಕರೆ ಕೊಟ್ಟರೆ ಯುವಕರಿಗೆ ಏನು ಅನುಮಾನ ಬರುತ್ತೆ?
- **ರಾಜಕೀಯ ಸೇರುವವರು ಸಂಗೀತ ಕಲಿತಿರಬೇಕಾ?!**

- **ಘಂಟಿ ರಾಮಾಚಾರ್ಯ, ಮೈಸೂರು**
ಭಟ್ರೇ, ಕನ್ನಡ ಸಾಹಿತ್ಯದ ಕಂಪನ್ನು ಎಲ್ಲೆಡೆ ಪಸರಿಸುವವರನ್ನು ಮುಕುಂದರಾಜು ಎಂದು ಕರೆಯಬಹುದಾ?
- **ಇಲ್ಲ..ಇಲ್ಲ.. ಸುಗಂಧರಾಜು ಎನ್ನಬಹುದು!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ರಾಹುಲ್ ಗಾಂಧಿ ತಮ್ಮ ಜೀವಮಾನ ಪೂರ್ತಿ ಚುನಾವಣೆಗಳಲ್ಲಿ ಸೋಲಲು ಸಿದ್ಧವಿದ್ದಾರಂತೆ?
- **ಅವರ ಮುಕ್ತ ಮನಸ್ಸನ್ನು ಒಪ್ಪಲೇಬೇಕು!**

- **ಆವಿಕ್ ಗೊಂದಿಮನೆ, ಕಡೂರು**
ಭಟ್ರೇ, ಮಂಡ್ಯ, ಶಿವಮೊಗ್ಗ, ಕುಡ್ಲ, ಕುಂದಾಪುರ, ಕಲಬುರ್ಗಿ, ಹುಬ್ಬಳ್ಳಿ ಭಾಗದ ಕನ್ನಡ ಸೇರಿಸಿ ಒಂದು ಭಾಷಣ ಮಾಡಿದ್ರೆ ಹೇಗಿರುತ್ತೆ?
- **ಅದು ಗ್ರೀಕ್ ಅಥವಾ ಸ್ಪ್ಯಾನಿಷ್ ಮಂದಿಗೆ ಅರ್ಥವಾಗಬಹುದು!**

- **ಸುರೇಂದ್ರ ಭಟ್, ಹೊನಗದ್ದೆ**
ಭಟ್ರೇ, ನನ್ನ ಸ್ನೇಹಿತ ಹೆಂಡತಿ ಹೇಳಿದಂತೆ ಕೇಳುತ್ತಾನಲ್ಲ?
- **ಜಗತ್ತು ನಡೆಯಬೇಕಾದುದು ಹಾಗೇ ಅಲ್ಲವೇ ಸುರೇಂದ್ರ?!**

- **ಸಿ.ನಾಗರಾಜ, ಬೆಂಗಳೂರು**
ಭಟ್ರೇ, ಡಿಕೆಶಿ ಸೈಕಲ್‌ನಿಂದ ವಾಲಿದ್ದು ಕೂಡ ಸುದ್ದಿಯಾಗಬೇಕಾ?
- **ಈ ದಿನಗಳಲ್ಲಿ ವಾಲಿದ್ದೇ ಸುದ್ದಿ!**

- **ಚಂದ್ರು, ಮೂಡಿಗೆರೆ**
ಭಟ್ರೇ, ಕುಮಾರಣ್ಣ ಪಂಚೆಗೆ ಸೆಟ್ಲ್ ಆದ ಹಾಗೆ ಕಾಣುತ್ತದಲ್ಲ?
- **ಕೇಳಿದರೆ ಕಟ್ಟಲು, ಬಿಚ್ಚಲು ಅದೇ ಸುಲಭ ಅಂತಾರಂತೆ!**

- **ಅರವಿಂದ ನಾಡಿಗ, (ಇಮೇಲ್ ಮೂಲಕ)**
ಭಟ್ರೇ, 'ಪ್ರವಾಸಿ ಪ್ರಪಂಚ' ಓದದಿದ್ದರೆ ನಿದ್ದೆ ಬರೊಲ್ಲ ಅಂತಾಳಲ್ಲ?
- **ಪೂರ್ತಿ ಓದಿದರೂ ಚೆನ್ನಾಗಿ ನಿದ್ದೆ ಬರುತ್ತೆ ಅಂತ ಹೇಳಬೇಕಾಗಿತ್ತು!**

- **ರಾಜೇಂದ್ರ ಕಲ್ಲೂರು, ಬೆಳಗಾವಿ**
ಭಟ್ರೇ, ಪ್ರಶ್ನೆ ಕೇಳಲು ಎಲ್ಲರಿಗೂ ಅವಕಾಶ ಕೊಡ್ತೀರಾ?
- **ಉತ್ತರವನ್ನೂ ನಾವೇ ಹೇಳ್ತೇವೆ ಅಂದ್ರೆ, ಕಷ್ಟ!**

ನಿಮಗೆ ಸಂಧಿರೋಗ ಯಾಕೆ ಬಂತು ಗೊತ್ತೇ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com
drsadhanashree@gmail.com

ಮಾನವ ಶರೀರವು ಒಂದು ಅತ್ಯದ್ಭುತವಾದ ಸೃಷ್ಟಿ. ಈ ಸೃಷ್ಟಿಯಲ್ಲಿ ಹಲವಾರು ರೀತಿಯ ಅಚ್ಚರಿಯ ವಿಷಯಗಳು ನಮಗೆ ಕಾಣಲಿಕ್ಕೆ ಸಿಗುತ್ತವೆ. ದೇಹದ ಪ್ರತಿಯೊಂದು ಅವಯವವೂ ಒಂದು ಸೋಜಿಗವೇ ಸರಿ. ಸಂಶೋಧನಾತ್ಮಕ ಅಧ್ಯಯನಗಳ ಮೂಲಕ ಅವುಗಳನ್ನು ಎಷ್ಟು ಅರ್ಥಮಾಡಿಕೊಂಡರೂ ಅದು ಅಪೂರ್ಣವೇ; ಕಾರಣ ಈ ಅವಯವಗಳೆಲ್ಲವೂ ಕಾಲಕ್ಕೆ ತಕ್ಕಂತೆ, ನಮ್ಮ ಅವಶ್ಯಕತೆಗೆ ತಕ್ಕಂತೆ ವಿಕಸನಗೊಳ್ಳುತ್ತಲೇ ಇರುತ್ತವೆ. ಏನಾಶ್ಚರ್ಯ ಅಲ್ಲವೇ? ಆಯುರ್ವೇದದಲ್ಲಿ ಮಾನವ ಶರೀರದ ಆಕೃತಿಯನ್ನು ಮತ್ತು ಅದರ ರಚನೆಯನ್ನು ಬಿಡಿಬಿಡಿಯಾಗಿ ಅರ್ಥಮಾಡಿಕೊಳ್ಳುವ ವ್ಯವಸ್ಥೆಯನ್ನು 'ರಚನಾ ಶಾರೀರ' ಎಂದು ಕರೆಯುತ್ತೇವೆ. ರಚನಾ ಶಾರೀರವು ಮಾನವನ ಶರೀರವನ್ನು ಬೇರೆ ಬೇರೆ ರೀತಿಯಾಗಿ ವಿಂಗಡಿಸಿ ತನ್ಮೂಲಕ ಆ ಆಕೃತಿಯ ಅಂತರಾಳಕ್ಕೆ ಹೋಗಿ ಅದರ ಒಳಗಿರುವ ಜೈವಿಕ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತದೆ. ಕಾರಣ, ಪ್ರಾಕೃತ ಅವಸ್ಥೆಯಲ್ಲಿ ಶರೀರದ ವ್ಯವಸ್ಥೆಯನ್ನು ಅರ್ಥ ಮಾಡಿಕೊಂಡಾಗ ಮಾತ್ರ ವಿಕೃತಿಯನ್ನು ಪರಿಹರಿಸಲು ಸಾಧ್ಯ.

ಶರೀರದ ನೂರಾರು ಅವಯವಗಳ ಪೈಕಿ ನಮ್ಮ ಸ್ಥಿರತೆಗೆ ಮತ್ತು ಒಂದು ನಿರ್ದಿಷ್ಟವಾದ ಆಕೃತಿಗೆ ಸಹಾಯ ಮಾಡುವ ಅವಯವವೆಂದರೆ ಅದು 'ಅಸ್ಥಿ'. ಅಸ್ಥಿ ಅಂದರೆ ಮೂಳೆಗಳು. ನಮ್ಮ ಶರೀರದಲ್ಲಿ ಸುಮಾರು 300 ಮೂಳೆಗಳನ್ನು ಕಾಣಬಹುದು. ಇದರಲ್ಲಿ ವಿವಿಧ ಪ್ರಕಾರಗಳಿವೆ. ಉದಾಹರಣೆಗೆ, ಉದ್ದನೆಯ ಮೂಳೆಗಳು ಕೈಕಾಲುಗಳಲ್ಲಿ ಕಂಡುಬಂದರೆ, ಹಲ್ಲಿನ ರೂಪದಲ್ಲಿ ಚಿಕ್ಕ ಚಿಕ್ಕ ಮೂಳೆಗಳಿವೆ. ಅಗಲವಾದ ಮೂಳೆಗಳು ಸೊಂಟ ಮತ್ತು ತಲೆಬುರುಡೆಯಲ್ಲಿದ್ದರೆ, ಮೃದುವಾದ ಮೂಳೆಗಳನ್ನು ಕಿವಿ ಮತ್ತು ಮೂಗಿನಲ್ಲಿ ನೋಡಬಹುದು.

ಒಂದು ಮೂಳೆಯ ಭಾಗವು ಮತ್ತೊಂದು ಮೂಳೆಯ ಭಾಗಕ್ಕೆ ಸೇರುವ ವ್ಯವಸ್ಥೆಯನ್ನು 'ಸಂಧಿ' ಎಂದು ಕರೆಯುತ್ತೇವೆ. ಆಡುಭಾಷೆಯಲ್ಲಿ ಸಂಧಿಗಳನ್ನು ಕೀಲುಗಳು ಎಂದು ಕರೆಯುವುದುಂಟು. ಸಾಮಾನ್ಯವಾಗಿ ಈ ಸಂಧಿಗಳನ್ನು ಎರಡು ರೀತಿಯಾಗಿ ವಿಂಗಡಿಸಬಹುದು– ಚಲ ಮತ್ತು ಅಚಲ ಸಂಧಿಗಳೆಂದು. ಚಲ ಸಂಧಿ ಅಂದರೆ ಚಲನೆ ಉಳ್ಳಂಥ ಸಂಧಿಗಳು. ಉದಾಹರಣೆಗೆ, ಕೈಕಾಲುಗಳಲ್ಲಿ, ಕುತ್ತಿಗೆ, ಸೊಂಟ, ದವಡೆ ಜಾಗಗಳಲ್ಲಿರುವ ಸಂಧಿಗಳು. ಅಚಲ ಸಂಧಿ ಅಂದರೆ ಚಲನೆ ರಹಿತವಾದಂಥ ಸಂಧಿಗಳು. ಉದಾಹರಣೆಗೆ, ಕಪಾಲದಲ್ಲಿರುವ ಸಂಧಿಗಳು.

ಈ ಸಂಧಿಗಳ ಮುಖ್ಯ ಕೆಲಸವೇ ನಮಗೆ ಚಲಿಸುವ ಸಾಮರ್ಥ್ಯವನ್ನು ನೀಡುವುದು. ನಮ್ಮ ಕೈಕಾಲುಗಳನ್ನು ಚಾಚಿಕೊಳ್ಳಲು, ಅಂಗಾಂಗಗಳನ್ನು ಬಗ್ಗಿಸಲು, ಕುಳಿತುಕೊಳ್ಳಲು, ಮೇಲೇಳಲು, ಒಂದು ಕಡೆಯಿಂದ ಮತ್ತೊಂದು ಕಡೆಗೆ ನಡೆಯಲು– ಹೀಗೆ, ಎಲ್ಲ ರೀತಿಯ ಕ್ರಿಯೆಗಳಿಗೂ ಸಹಾಯ ಮಾಡುವುದೇ ಸಂಧಿ. ಅನೇಕ ಮೂಳೆಗಳನ್ನು/ಮೂಳೆಗಳಿಂದ ಕೂಡಿರುವ ಸಂಧಿಯನ್ನು ಒಂದೆಡೆ ಬಿಗಿಯಾಗಿ ಹಿಡಿದಿಟ್ಟು, ಅವುಗಳ ಕಾರ್ಯಗಳನ್ನು ನಿಯಂತ್ರಿಸಲು ಹಗ್ಗದ ರೀತಿಯ ರಚನೆಗಳು (ಲಿಗಮೆಂಟ್) ಮತ್ತು ಮಾಂಸದ ತುದಿಯ ಭಾಗಗಳು (ಟೆಂಡನ್) ಸಹಾಯ ಮಾಡುತ್ತವೆ. ಈ ರಚನೆಗಳಿಂದಾಗಿಯೇ ಸಂಧಿಗಳು ತಮ್ಮ ಸ್ಥಾನದಲ್ಲಿ ಸ್ಥಿರವಾಗಿದ್ದು, ನಮಗೆ ಅನೇಕ ರೀತಿಯ ಚಲನೆಯನ್ನು ಮಾಡಲು ಅವಕಾಶ ಮಾಡಿಕೊಡುತ್ತವೆ. ಎರಡು ಅಥವಾ ಅನೇಕ ಮೂಳೆಗಳು ಸೇರುವ ಸಂಧಿಭಾಗದಲ್ಲಿ ಒಂದು ರೀತಿಯಾದ ಮೃದುವಾದ ಪದರವಿರುತ್ತದೆ. ಆ ಪದರವು ಜಿಡ್ಡಿನ ಅಂಶವಿರುವ ದ್ರವ (ಶ್ಲೇಷಕ ಕಫ) ದಿಂದ ಕೂಡಿರುತ್ತದೆ. ಈ ಜಿಡ್ಡಿನಂಶದಿಂದಲೇ ಸಂಧಿಗಳಿಗೆ ಚಲಿಸುವ ಸಾಮರ್ಥ್ಯ ಬರುವುದು. ನಮ್ಮ ಸಂಧಿಗಳ ಎಲ್ಲಾ ಕಾರ್ಯಗಳು ನೋವಿಲ್ಲದೆ, ಸರಾಗವಾಗಿ ಆಗಬೇಕಾದರೆ, ಅದರಲ್ಲಿರುವ ಸ್ನಿಗ್ಧಾಂಶವು ಉತ್ತಮ ಪ್ರಕಾರ ಮತ್ತು ಪ್ರಮಾಣದಲ್ಲಿ ಇರಬೇಕಾದ ಅವಶ್ಯಕತೆ ಇರುತ್ತವೆ. ಇದಕ್ಕೆ ಒಂದು ಉತ್ತಮವಾದ ಉದಾಹರಣೆಯನ್ನು ನೀಡಬೇಕಾದರೆ, ನಮ್ಮ ಬಾಗಿಲು ಮತ್ತು ಅದರ ಕೀಲುಗಳನ್ನು ನೋಡಬಹುದು. ಹೇಗೆ ಒಂದು ಬಾಗಿಲು ಚಲಿಸಬೇಕೆಂದರೆ ಅದರ ಕೀಲಿಗೆ ನಾವು ಪದೇ ಪದೆ ಎಣ್ಣೆ ಅಥವಾ ಗ್ರೀಸ್ ಪದಾರ್ಥವನ್ನು ಹಚ್ಚಬೇಕೋ ಅದೇ ರೀತಿಯಲ್ಲಿ ನಮ್ಮ ಮೂಳೆಗಳು ಸರಾಗವಾಗಿ ಚಲಿಸಬೇಕೆಂದರೆ ಈ ಸಂಧಿಗಳ ಸ್ನಿಗ್ಧತೆಯನ್ನು ಕಾಪಾಡಿಕೊಳ್ಳುವುದು ಅಷ್ಟೇ ಮುಖ್ಯ. ಒಟ್ಟಾರೆ ಈ ಸಂಧಿಯಲ್ಲಿರುವ ಮೂಳೆಗಳು, ಅದನ್ನು ಹಿಡಿದಿಟ್ಟಿರುವ ಸ್ನಾಯು ಮತ್ತು ಪೇಶಿಗಳು, ಸಂಧಿಯಲ್ಲಿರುವ ಪದರ ಮತ್ತು ಅದರಲ್ಲಿರುವ ಸ್ನಿಗ್ಧ ದ್ರವಾಂಶ– ಈ ಎಲ್ಲದರ ಸ್ವರೂಪ ಮತ್ತು ಪ್ರಮಾಣಗಳು ಸರಿಯಿದ್ದು, ಒಂದಕ್ಕೊಂದು ಪೂರಕವಾಗಿ ಕಾರ್ಯ ನಿರ್ವಹಿಸಿದಾಗ ಮಾತ್ರ ನಮ್ಮ ಸಂಧಿಯ ಆರೋಗ್ಯವು ಉತ್ತಮವಾಗಿರುತ್ತದೆ ಮತ್ತು ಹೆಚ್ಚಿನ ಶ್ರಮದಾಯಕ ಕೆಲಸಗಳನ್ನು ಮಾಡಲು ಸಹ ಅವುಗಳು ಸಹಕಾರಿಯಾಗುತ್ತವೆ. ಆದರೆ ಇವುಗಳಲ್ಲಿ ಯಾವುದೇ ಒಂದರಲ್ಲಿ ವ್ಯತ್ಯಾಸವಾದರೂ ತೊಂದರೆ ಪ್ರಾರಂಭವಾಗುತ್ತದೆ. ಮೇಲೆ ಹೇಳಿದ ಅವಯವಗಳ ಪ್ರಮಾಣ ಅಥವಾ ಸ್ವರೂಪದಲ್ಲಿ ಆಗುವ ಏರುಪೇರನ್ನೇ ನಾವು ಸಂಧಿರೋಗ ಎಂದು ಕರೆಯುತ್ತೇವೆ. ಈ ಸಂಧಿರೋಗಗಳು ನಮ್ಮ ಚಲನೆಯ ಸಾಮರ್ಥ್ಯವನ್ನು ಕುಗ್ಗಿಸಿ ನಮ್ಮನ್ನು ಪರಾವಲಂಬಿಯಾಗಿ ಮಾಡಿಬಿಡುತ್ತವೆ. ಆದ್ದರಿಂದ ಪ್ರತಿನಿತ್ಯವೂ ಈ ಸಂಧಿಗಳನ್ನು ಬಹಳ ಪ್ರೀತಿಯಿಂದ ನೋಡಿಕೊಳ್ಳುವ ಅವಶ್ಯಕತೆ ಇರುತ್ತದೆ. ಈ ಸಂಧಿಗಳ ಆರೋಗ್ಯ ಕುಂದು ಹೋಗುವ ಮುನ್ನವೇ ಅದರ ಬಗ್ಗೆ ಅರಿತು ಎಚ್ಚರ ವಹಿಸುವ ಅವಶ್ಯಕತೆ ಇದೆ.

ಆಯುರ್ವೇದ ವೈದ್ಯರಾಗಿ ಕ್ಲಿನಿಕ್‌ನಲ್ಲಿ ಕುಳಿತಾಗ ಸಾಮಾನ್ಯವಾಗಿ ಕಾಣಲಿಕ್ಕೆ ಸಿಗುವುದು ಮಂಡಿನೋವು ಅಥವಾ ಸೊಂಟನೋವು. ಈಗಿನಿಂದ 20–30 ವರ್ಷಗಳ ಹಿಂದಿನವರೆಗೂ ಈ ನೋವುಗಳು ಬಹಳ ವಿರಳವಾಗಿ ಕಾಣಿಸಿಕೊಳ್ಳುತ್ತಿದ್ದವು. ಆದರೆ ಈಗಂತೂ 30 ವರ್ಷದ ಪ್ರಾಯದಲ್ಲೇ ಈ ಸಂಧಿನೋವುಗಳ ತೊಂದರೆಯನ್ನು ಕಾಣಬಹುದು. ಇದಕ್ಕೆ ಮುಖ್ಯವಾದ ಕಾರಣ ನಮ್ಮ ಆಹಾರ ಮತ್ತು ನಮ್ಮ ಜೀವನಶೈಲಿಯಲ್ಲಿ ಆಗಿರುವ ವ್ಯತ್ಯಾಸಗಳು. ಈ ವ್ಯತ್ಯಾಸಗಳ ಬಗ್ಗೆ ತಿಳಿದುಕೊಂಡು, ಅದನ್ನು ನಮ್ಮ ಜೀವನದಿಂದ ದೂರ ಮಾಡುವ ಪ್ರಯತ್ನವೇ ಸಂಧಿಗಳ ಆರೋಗ್ಯವನ್ನು ಕಾಪಾಡಿಕೊಳ್ಳುವ ಕೈಂಕರ್ಯದ ಮೊದಲ ಮೆಟ್ಟಿಲು.

ಸಂಧಿರೋಗಗಳ ಮುಖ್ಯ ಕಾರಣಗಳಿವು:

- ಒಣಗಿದ ಆಹಾರವನ್ನು ಅಥವಾ ಸ್ನಿಗ್ಧಾಂಶವಿಲ್ಲದ ಆಹಾರವನ್ನು ಹೆಚ್ಚು ಪ್ರಮಾಣದಲ್ಲಿ ದಿನನಿತ್ಯವೂ ಸೇವಿಸುವುದು. ಉದಾಹರಣೆಗೆ, ಕಡ್ಲೆಪುರಿ, ಬನ್, ಬ್ರೆಡ್, ಒಣ ತರಕಾರಿಗಳು, ಒರಟಾದ ರೊಟ್ಟಿ, ಚಪಾತಿ, ಒಣಕಾಳುಗಳಾದ ಅಲಸಂದೆ, ಅವರೆ, ಕಡಲೆ ಇತ್ಯಾದಿ.
- ನಮ್ಮ ದಿನನಿತ್ಯದ ಆಹಾರದಲ್ಲಿ ತುಪ್ಪ, ಎಣ್ಣೆಗಳಂಥ ಒಳ್ಳೆಯ ಜಿಡ್ಡಿನಂಶವನ್ನು ಬಳಸದೆ ಇರುವುದು.
- ಆಹಾರ ಸೇವನೆಯ ಸಮಯದಲ್ಲಿ ಹಸಿವಿದ್ದರೂ ಸೇವಿಸದೇ ಇರುವುದು ಅಥವಾ ಹಸಿವನ್ನು ಗಮನಿಸದೆ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಆಹಾರ ಸೇವಿಸುವುದು.
- ಸದಾ ಶೀತವಾದ ಅಥವಾ ಶೈತ್ಯೀಕರಿಸಿದ ಆಹಾರವನ್ನು ಬಳಸುವುದು. ಉದಾಹರಣೆಗೆ, ಫ್ರಿಜ್‌ನಲ್ಲಿ ಇಟ್ಟಿರುವ ಮೊಸರು, ಹಾಲು, ತಂಗಳು ಆಹಾರ ಇತ್ಯಾದಿ ಅಥವಾ ಫ್ರಿಜ್‌ನಿಂದ ನೇರವಾಗಿ ತಣ್ಣೀರನ್ನು/ಜ್ಯೂಸ್‌ಗಳನ್ನು ಸೇವಿಸುವುದು.
- ಆಹಾರದಲ್ಲಿ ಅತಿಯಾದ ಖಾರ, ಹುಳಿ ರುಚಿ ಉಳ್ಳಂಥ ಖಾದ್ಯಗಳನ್ನು ಸತತವಾಗಿ ಸೇವಿಸುವುದು. ಉದಾಹರಣೆಗೆ, ಉಪ್ಪಿನಕಾಯಿ, ಮೆಣಸಿನಕಾಯಿ, ಹುಣಸೆ ಗೊಜ್ಜು ಇತ್ಯಾದಿ. ಅಂತೆಯೇ, ಕಹಿ, ಒಗರು ರುಚಿಗಳಿರುವ ಆಹಾರಗಳನ್ನು ಸಹ ಹೆಚ್ಚು ಪ್ರಮಾಣದಲ್ಲಿ ಪ್ರತಿನಿತ್ಯ ಸೇವಿಸುವುದು. ಉದಾಹರಣೆಗೆ, ಬೇವಿನ ಕಷಾಯ, ಹಾಗಲಕಾಯಿ ರಸ, ಕರಿಬೇವು ಜ್ಯೂಸ್, ಮೆಂತ್ಯ ಇತ್ಯಾದಿಗಳ ಅತಿಯಾದ ಬಳಕೆ.
- ರಾತ್ರಿ ಸಮಯದಲ್ಲಿ ನಿದ್ದೆಗೆಡುವುದು, ಸರಿಯಾದ ಸಮಯದಲ್ಲಿ ನಿದ್ದೆ ಮಾಡದೇ ಇರುವುದು ಅಥವಾ ಸಂಪೂರ್ಣವಾಗಿ ನಿದ್ದೆ ಮಾಡದೆ ಇರುವುದು.
- ನಮ್ಮ ದೈಹಿಕ ಬಲವನ್ನು ಗಮನಿಸದೆ ಅತಿಯಾದ ಆಯಾಸಕರವಾದ ಕೆಲಸಗಳನ್ನು ಸತತವಾಗಿ ಮಾಡುವುದು. ಉದಾಹರಣೆಗೆ, ನಮ್ಮ ಮಿತಿ ಮೀರಿದ ವ್ಯಾಯಾಮ, ಅತಿ ಹೆಚ್ಚು ಭಾರ ಹೊರುವುದು, ಆಯಾಸವಾಗಿದ್ದರೂ ಹೆಚ್ಚು ನಡೆಯುವುದು, ತುಂಬಾ ಹೊತ್ತು ನಿಂತಿರುವುದು ಇತ್ಯಾದಿ
- ಅತಿಯಾದ ಪ್ರಯಾಣವು ಸಹ ಸಂಧಿಗಳ ವಿಕೃತಿಗೆ ಕಾರಣ. ಊರಿಂದ ಊರಿಗೆ ಸತತವಾಗಿ ಪ್ರಯಾಣಿಸುತ್ತಿರುವುದು, ರಾತ್ರಿ ನಿದ್ದೆಗೆಟ್ಟು ಪ್ರಯಾಣ ಮಾಡುವುದು, ಅತಿಯಾಗಿ ವಾಹನವನ್ನು ಚಾಲಿಸುತ್ತಾ ಪ್ರಯಾಣ ಮಾಡುವುದು ಇತ್ಯಾದಿ.
- ಬಿಸಿಲಿನಲ್ಲಿ ಅಥವಾ ತುಂಬಾ ಚಳಿ/ಮಳೆಯಲ್ಲಿ ಓಡಾಡುವುದು ಅಥವಾ ಕೆಲಸ ಮಾಡುವುದು.
- ಅಪಘಾತ, ಪೆಟ್ಟು ಬೀಳುವುದು, ಕೆಳಗೆ ಬೀಳುವುದು ಇತ್ಯಾದಿಗಳು ಸಹ ಸಂಧಿಗಳನ್ನು ದುರ್ಬಲಗೊಳಿಸುತ್ತವೆ.
- ಸತತವಾಗಿ ವಾಂತಿ, ಬೇಧಿ ಆಗುವಿಕೆ, ರಕ್ತಸ್ರಾವಗಳು ಸಹ ಸಂಧಿಯ ಆರೋಗ್ಯವನ್ನು ಹಾಳುಮಾಡುತ್ತವೆ.
- ಧೂಮಪಾನ, ಮದ್ಯಪಾನಗಳಂಥ ದುರಭ್ಯಾಸವು ಪ್ರಮುಖ ಕಾರಣವಾಗಬಲ್ಲದು.

ಮೇಲೆ ಹೇಳಿದ ಎಲ್ಲಾ ಕಾರಣಗಳಿಂದ ವಾತಾದಿ ದೋಷಗಳು ದೇಹದಲ್ಲಿ ಹೆಚ್ಚಾಗಿ ಅಥವಾ ಹಾಳಾಗಿ, ಅವುಗಳು ಸಂಧಿಗಳಲ್ಲಿ ಸೇರಿಕೊಂಡು ನೋವನ್ನುಂಟುಮಾಡಿ ಅನೇಕ ರೀತಿಯ ವಿಕೃತಿಗಳನ್ನು ಪ್ರಾರಂಭ ಮಾಡುತ್ತವೆ. ಆದರೆ ಎಲ್ಲರೂ ಈ ನೋವನ್ನು ಅನುಭವಿಸಬೇಕಾಗಿಲ್ಲ, ನಾವು ದಿನನಿತ್ಯ ಸೇವಿಸುವ ಆಹಾರ– ವಿಹಾರಗಳಲ್ಲಿಯೇ ಕೊಂಚ ಬದಲಾವಣೆಗಳನ್ನು ತಂದುಕೊಂಡರೆ ನಮ್ಮ ಸಂಧಿಗಳನ್ನು ಸದಾ ಸದೃಢವಾಗಿರಿಸಿಕೊಳ್ಳಬಹುದು.

ಈಗ ಆಯುರ್ವೇದೋಕ್ತ ಸಂಧಿರಕ್ಷಕ ಸೂತ್ರಗಳ ಬಗ್ಗೆ ಸ್ವಲ್ಪ ಗಮನಹರಿಸೋಣ:

ಮೊಟ್ಟ ಮೊದಲನೇ ಸೂತ್ರವೆಂದರೆ ಆಹಾರದಲ್ಲಿ ಶಿಸ್ತು. ಹಸಿವನ್ನು ತಡೆದು ತಡೆದು ಆಹಾರ ಸೇವಿಸುವುದು ಸಂಧಿರೋಗಗಳಿಗೆ ಪ್ರಮುಖವಾದ ಕಾರಣ. ಆದ್ದರಿಂದ ಮೂರು ಆಹಾರ ಕಾಲಗಳನ್ನು ನಿಗದಿತ ಸಮಯಕ್ಕೆ ಪಾಲಿಸಿ, ಹಸಿವಿಗೆ ತಕ್ಕಂತೆ ಆಹಾರವನ್ನು ಸೇವಿಸಬೇಕು.

ಆಹಾರದಲ್ಲಿ ಕಡ್ಡಾಯವಾಗಿ ಜಿಡ್ಡಿನ ಬಳಕೆ ಇರಲೇಬೇಕು. ಕನಿಷ್ಠಪಕ್ಷ ಒಂದು ಚಮಚ ತುಪ್ಪವನ್ನಾದರೂ ಪ್ರತಿ ಆಹಾರದಲ್ಲೂ ಸೇವಿಸಬೇಕು. ಒಣ ಆಹಾರಗಳಾದ ಕಾಳು, ಒಣ ರೊಟ್ಟಿ, ಆಲೂಗಡ್ಡೆ ಇತ್ಯಾದಿಗಳನ್ನು ಬಳಸಬೇಕಾದರೆ ಎಣ್ಣೆ, ತುಪ್ಪ ಅಥವಾ ಬೆಣ್ಣೆಯನ್ನು ಹಾಕಿಕೊಂಡು ಸೇವಿಸುವುದರಿಂದ ತೊಂದರೆ ಕಡಿಮೆಯಾಗುತ್ತದೆ.

ಅತಿಯಾದ ಖಾರ ಮತ್ತು ಒಗರು ರಸಗಳನ್ನು, ಕಹಿರಸಗಳನ್ನು ತ್ಯಜಿಸಿ ಷಡ್ರಸದಿಂದ ಸಂತುಲಿತವಾದ ಭೋಜನ ಪದ್ಧತಿಯನ್ನು ಪಾಲಿಸಬೇಕು.

ಎಲ್ಲದಕ್ಕಿಂತ ಬಹಳ ಮುಖ್ಯವಾದ ದಿನಚರಿ ಎಂದರೆ, ಇಡೀ ಮೈಗೆ ಎಣ್ಣೆ ಹಚ್ಚಿ ಸ್ನಾನ ಮಾಡುವುದು. ಇದನ್ನು ಆಯುರ್ವೇದದಲ್ಲಿ ಅಭ್ಯಂಗವೆಂದು ಕರೆಯುತ್ತಾರೆ. ಇದು ಸರ್ವಶ್ರೇಷ್ಠ ಸಂಧಿರಕ್ಷಕ. ನಾವು ಆಗಲೇ ತಿಳಿದುಕೊಂಡ ಹಾಗೆ ಎಲ್ಲಾ ಸಂಧಿಗಳಲ್ಲೂ ಜಿಡ್ಡಿನ ಒಂದು ದ್ರವವಿರುತ್ತದೆ. ಈ ದ್ರವವು ಒಣಗದೆ ಸದಾ ಉತ್ತಮ ಪ್ರಮಾಣದಲ್ಲಿದ್ದು, ಸಂಧಿಗಳನ್ನು ರಕ್ಷಿಸಬೇಕಾದರೆ ಅಭ್ಯಂಗವೆಂಬ ಬಾಹ್ಯ ಸ್ನೇಹನ ಬಹುಮುಖ್ಯ. ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಎಳ್ಳೆಣ್ಣೆ ಅಥವಾ ಕೊಬ್ಬರಿ ಎಣ್ಣೆಯನ್ನು ಬೆಚ್ಚಗೆ ಮಾಡಿ ಇಡೀ ಮೈಗೆ ಸವರಿಕೊಂಡು 5 ನಿಮಿಷಗಳ ನಂತರ ಸ್ನಾನ ಮಾಡುವುದರಿಂದ ಸಂಧಿಗಳು ಸದಾ ಬಲಿಷ್ಠವಾಗಿರುತ್ತದೆ. ಹೀಗೆ ಮಾಡುವುದರಿಂದ ಎಷ್ಟೇ ಶಾರೀರಿಕ ಶ್ರಮವಿದ್ದರೂ ದೇಹಕ್ಕೆ ಅದನ್ನು ನಿಭಾಯಿಸುವ ಶಕ್ತಿ ಬರುತ್ತದೆ.

ಹಿತಮಿತವಾದ ವ್ಯಾಯಾಮವು ಸಂಧಿಗಳಿಗೆ ಸದಾ ಕ್ಷೇಮಕರ. ಆಯುರ್ವೇದ ನುಡಿಯುವಂತೆ ನಾವು ಮಾಡುವ ವ್ಯಾಯಾಮ ನಮ್ಮ ಅರ್ಧಶಕ್ತಿಗಿಂತ ಮೀರಿದರೆ ತೊಂದರೆ ತಪ್ಪಿದ್ದಲ್ಲ. ಸದಾ ನಮ್ಮ ದೈಹಿಕ ಶಕ್ತ್ಯಾನುಸಾರ ವ್ಯಾಯಾಮ ಮಾಡುವುದು ಒಳ್ಳೆಯದು.

ಇನ್ನು ರಾತ್ರಿ ನಿದ್ದೆಯ ಮಹತ್ವವನ್ನು ಹೇಳಬೇಕಾಗಿಯೇ ಇಲ್ಲ, ರಾತ್ರಿ ಮಾಡುವ ನಿದ್ದೆಯು ನಮ್ಮೆಲ್ಲರನ್ನು ಸಲಹುವ ಮಾತೆಯಂತೆ. ಸಂಧಿಶೂಲವಿರಲಿ, ತಲೆನೋವಿರಲಿ, ಮಾನಸಿಕ ಕಿರಿಕಿರಿಯಿರಲಿ, ಜ್ವರವೇ ಇರಲಿ, ಸರ್ವರೋಗಕ್ಕೂ ನಿದ್ದೆಯೇ ಮದ್ದು. ಹಾಗಾಗಿ ರಾತ್ರಿ ಸಮಯದಲ್ಲಿ ಬೇಗ ಮಲಗಿ ಸೂರ್ಯೋದಯದ ಮುನ್ನ ಏಳುವುದು ಸದಾ ಸ್ವಾಸ್ಥ್ಯರಕ್ಷಕ.

ಮಲಪ್ರವೃತ್ತಿ ಸರಿಯಾಗಿ ಆಗದಿದ್ದರೂ ಸಂಧಿಗಳಲ್ಲಿನ ನೋವು ಹೆಚ್ಚುವುದು. ಆದ್ದರಿಂದ, ಪ್ರತಿನಿತ್ಯವೂ ಬೆಳಗ್ಗೆ ಎದ್ದ ಕೂಡಲೇ ಯಾವುದೇ ಬಾಹ್ಯ ಪ್ರಚೋದನೆ ಇಲ್ಲದೆ ಸರಾಗವಾಗಿ ಮಲಪ್ರವೃತ್ತಿಯಾಗುವಂತೆ ನೋಡಿಕೊಳ್ಳತಕ್ಕದ್ದು.

ವೃತ್ತಿ ಸಮಯದಲ್ಲಿ ನಾವು ಕುಳಿತುಕೊಳ್ಳುವ ಭಂಗಿಯೂ ಸಂಧಿ ಸ್ವಾಸ್ಥ್ಯಕ್ಕೆ ಬಹಳ ಮುಖ್ಯ. ಲ್ಯಾಪ್‌ಟಾಪ್ ಬಳಸುವಾಗ, ಕಂಪ್ಯೂಟರ್‌ನಲ್ಲಿ ಕೆಲಸ ಮಾಡುವಾಗ, ಮೊಬೈಲ್ ಫೋನನ್ನು ಉಪಯೋಗಿಸುವಾಗ ಅಥವಾ ಡೆಸ್ಕ್ ವರ್ಕ್ ಮಾಡುವಾಗ ಬೆನ್ನು–ಕತ್ತು– ತಲೆ ನೇರವಾಗಿಸಿಕೊಂಡು ಮೊಣಕಾಲುಗಳನ್ನು ನೇರವಾಗಿರಿಸಿ, ಮೊಣಕೈಗೆ ಶ್ರಮವಾಗದಂತೆ ಕುಳಿತುಕೊಂಡು ಕೆಲಸ ಮಾಡುವುದು ಒಳ್ಳೆಯದು.

ಒಟ್ಟಾರೆ, ಚರಕರು ಹೇಳುವಂತೆ– 'ಸರ್ವಮನ್ಯಂ ಪರಿತ್ಯಜ್ಯ ಶರೀರಮನುಪಾಲಯೇತ್', ಅಂದರೆ ಬೇರೆ ಎಲ್ಲ ಕೆಲಸಗಳನ್ನೂ ಬದಿಗಿರಿಸಿ ಮೊಟ್ಟಮೊದಲು ನಮ್ಮ ಶರೀರದ ಪಾಲನೆಯನ್ನು ಮಾಡತಕ್ಕದ್ದು! ಅದರಲ್ಲೂ ವಿಶೇಷವಾಗಿ ನಿತ್ಯವೂ ಸಂಧಿಗಳ ಪರಿಪಾಲನೆ ಮಾಡಲೇಬೇಕು!

ಯುಗಾಂತರ

ರವೀ ಸಜಂಗದ್ದೆ

ಅಂಚೆಗೂ ಸ್ಮಾರ್ಟ್ ಯೋಗ, ಬಂತು ಡಿಜಿಪಿನ್ ಯುಗ!

21ನೇ ಶತಮಾನವು 'ತಂತ್ರಜ್ಞಾನ ಯುಗ'. ದೈನಂದಿನ ಜೀವನದಲ್ಲಿ ಉಪಯೋಗಿಸುವ ಬಹುತೇಕ ವಸ್ತುಗಳು, ಸೇವೆಗಳು ಮತ್ತು ಪಾವತಿ ವಿಧಾನಗಳು ತಂತ್ರಜ್ಞಾನದ ಒತ್ತಾಸೆಯೊಂದಿಗೆ 'ಸ್ಮಾರ್ಟ್' ಆಗುತ್ತಿವೆ. ಈಗ ಮನೆಯಲ್ಲೇ ಕುಳಿತಿದ್ದು ಆಧುನಿಕ ತಂತ್ರಜ್ಞಾನದ ನೆರವಿನಿಂದ ದೇಶ–ವಿದೇಶದ ಯಾವುದೇ ಮೂಲೆಯಲ್ಲಿರುವವರಿಗೆ ಹಣ, ಆಡಿಯೋ–ವಿಡಿಯೋ ಕಳಿಸಬಹುದಾಗಿದೆ, ಸಂವಹಿಸಬಹುದಾಗಿದೆ. ಅಮೆಜಾನ್, ಫ್ಲಿಪ್‌ಕಾರ್ಟ್ ಮುಂತಾದ ಆನ್‌ಲೈನ್ ಮಳಿಗೆಗಳಿಂದ ಬೇಕಾದುದನ್ನು ಖರೀದಿಸಿ ಮನೆಗೆ ಬರುವಂತೆ ಮಾಡಬಹುದಾಗಿದೆ. ನಗರವಾಸಿಗಳಾಗಿದ್ದರಂತೂ ತಿಂಡಿ–ತಿನಿಸುಗಳನ್ನೂ ಆರ್ಡರ್ ಮಾಡಬಹುದು. ಅಷ್ಟರಮಟ್ಟಿಗೆ ತಂತ್ರಜ್ಞಾನವು ನಮ್ಮ ಬದುಕಲ್ಲಿ 'ಸ್ಮಾರ್ಟ್' ಆಗಿ ಹಾಸುಹೊಕ್ಕಾಗಿದೆ.

ಈ ಅಂಶಗಳ ಜತೆಗಿನ ಮತ್ತೊಂದು ತಂತ್ರಜ್ಞಾನ ಆಧರಿತ, ಜನೋಪಯೋಗಿ 'ಸ್ಮಾರ್ಟ್' ವಿಚಾರವೆಂದರೆ 'ಡಿಜಿಪಿನ್' (ಡಿಜಿಟಲ್ ಪೋಸ್ಟಲ್ ಇಂಡೆಕ್ಸ್ ನಂಬರ್). ಈ ವಿನೂತನ 'ವಿಳಾಸಕ್ರಾಂತಿ'ಯನ್ನು ಆರಂಭಿಸುವುದರೊಂದಿಗೆ ಭಾರತವು ಸ್ಮಾರ್ಟ್ ವಿಳಾಸಗಳತ್ತ ಕ್ರಾಂತಿಕಾರಿ ಹೆಜ್ಜೆಯಿಟ್ಟಿದೆ. ಈ ನಿಖರ ಡಿಜಿಟಲ್ ವಿಳಾಸ ವ್ಯವಸ್ಥೆಯನ್ನು ಭಾರತೀಯ ಅಂಚೆ ವಿಭಾಗವು ಇತ್ತೀಚೆಗೆ ಆರಂಭಿಸಿದೆ. ಅಂಚೆ ಮತ್ತು ಸರಕುಗಳನ್ನು ದೇಶಾದ್ಯಂತ ತಲುಪಿಸುವ ಸದ್ಯದ ಆಧಾರಸ್ತಂಭವಾಗಿದ್ದು 1972ರಿಂದ ಜಾರಿಯಲ್ಲಿರುವ ಆರು ಅಂಕಿಗಳ ಪಿನ್‌ಕೋಡ್ ಮುಂದಿನ ದಿನಗಳಲ್ಲಿ ಬದಲಾಗಿ, 10 ವಿಶಿಷ್ಟ ಸಂಖ್ಯಾಕ್ಷರಗಳ (alpha numeric) 'ಡಿಜಿಪಿನ್' ತಂತ್ರಜ್ಞಾನ ವ್ಯವಸ್ಥೆ ರಾಷ್ಟ್ರಾದ್ಯಂತ ಹಂತಹಂತವಾಗಿ ಜಾರಿಯಾಗಲಿದೆ.

ಐಐಟಿ ಹೈದರಾಬಾದ್ ಮತ್ತು ಇಸ್ರೋದ 'ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಸೆಂಟರ್' (NRSC) ಸಂಸ್ಥೆಗಳು ಒಟ್ಟಾಗಿ 'ಜಿಯೋ ಕೋಡ್ ಗ್ರಿಡ್' ಆಧರಿತ ಡಿಜಿಪಿನ್ ಉಪಕ್ರಮವನ್ನು ಅಭಿವೃದ್ಧಿಪಡಿಸಿವೆ. ಇದು ಜಿಪಿಎಸ್ ಮತ್ತು ಜಿಎನ್‌ಎಸ್‌ಎಸ್ (ಗ್ಲೋಬಲ್ ನ್ಯಾವಿಗೇಷನ್ ಸೆಟಲೈಟ್ ಸಿಸ್ಟಮ್) ತಂತ್ರಜ್ಞಾನ ವ್ಯವಸ್ಥೆ ನೀಡುವ ವಿವರಗಳನ್ನು ಬಳಸಿ ಕಾರ್ಯ ನಿರ್ವಹಿಸುತ್ತದೆ. ಮೂಲಸೌಕರ್ಯ ಮತ್ತು ಅಂಚೆ ವ್ಯವಸ್ಥೆಯನ್ನು ಕರಾರುವಾಕ್ಕಾಗಿ ನಿರ್ವಹಿಸುವಲ್ಲಿ ಇದು ಮಹತ್ತರ ಪಾತ್ರ ವಹಿಸಲಿದೆ.

ಏನಿದು ಡಿಜಿಪಿನ್?: ಡಿಜಿಪಿನ್ ರಚನೆಯೇ ಒಂದು ವಿಶಿಷ್ಟ ವಿಚಾರ. ಇದರಲ್ಲಿ ದೇಶದ ಭೂಪ್ರದೇಶವನ್ನು 3.8 ಮೀ. ಉದ್ದ ಮತ್ತು 3.8 ಮೀ. ಅಗಲದ ಲಕ್ಷಾಂತರ ಚೌಕಗಳಾಗಿ ವಿಭಜಿಸಿ ಅಂಥ ಪ್ರತಿ ಚೌಕಕ್ಕೂ ಒಂದೊಂದು ವಿಶಿಷ್ಟ ಕ್ರಮಸಂಖ್ಯೆ ನೀಡಲಾಗಿದೆ. ಉದಾಹರಣೆಗೆ, ನಾವು ವಾಸವಿರುವ ಸ್ಥಳ/ಕಟ್ಟಡದ ಸುತ್ತಲಿನ ಕೆಲವಷ್ಟು ಅಡಿ ಜಾಗವನ್ನು ಹತ್ತನೆಯ ಅಂಕಿಯು ಸೂಚಿಸುತ್ತದೆ. ಈ ಹತ್ತು ಅಂಕಿಗಳು 2, 3, 4, 5, 6, 7, 8, 9, C, J, K, L, M, P, F, T ಎಂಬ 16 ಸಂಖ್ಯಾಕ್ಷರಗಳ ಪೈಕಿ ಯಾವುದಾದರೊಂದು ಆಗಿರುತ್ತದೆ.

ಮೊದಲಿಗೆ ಭಾರತ ದೇಶದ ಭೂಭಾಗವನ್ನು 16 ವಿವಿಧ ವಿಭಾಗಗಳಾಗಿ ವಿಂಗಡಿಸಿ, ಒಂದೊಂದು ಭಾಗವನ್ನೂ ಮತ್ತೊಮ್ಮೆ ಇದೇ 16 ಸಂಖ್ಯೆಗಳ ವಿಭಾಗಗಳನ್ನಾಗಿ ವಿಭಜಿಸಲಾಗುತ್ತದೆ. ಹೀಗೆ ನಿರಂತರ ಹತ್ತು ಬಾರಿ ಮಾಡಿ ಒಂದೊಂದು ನಿಗದಿತ ಸಂಖ್ಯೆಯನ್ನು ಆ ಸ್ಥಳಕ್ಕೆ ನೀಡಿದಾಗ, ಸಂಖ್ಯಾಕ್ಷರಗಳು ಒಂದೊಕ್ಕೊಂದು ಸೇರುತ್ತಾ ಹೋಗುತ್ತವೆ. ಮೊದಲ ಅಂಕಿ 1000 ಕಿ.ಮೀ. ವ್ಯಾಪ್ತಿಯಷ್ಟು ಪ್ರದೇಶವನ್ನು ಸೂಚಿಸಿದರೆ, 2ನೇ ಅಂಕಿ 250 ಕಿ.ಮೀ. ವ್ಯಾಪ್ತಿಗೆ ನಿಯೋಜಿತವಾಗಿರುತ್ತವೆ. ಇದೇ ರೀತಿ 3ನೇ (62.5 ಕಿ.ಮೀ.), 4ನೇ (15.6 ಕಿ.ಮೀ.), 5ನೇ (3.9 ಕಿ.ಮೀ.), 6ನೇ (1 ಕಿ.ಮೀ.), 7ನೇ (250 ಮೀ.), 8ನೇ (60 ಮೀ.), 9ನೇ (15 ಮೀ.) ಹಾಗೂ 10ನೇ (3.8 ಮೀ) ಅಂಕಿಗಳು ಪೂರ್ವನಿಯೋಜಿತ ವ್ಯಾಪ್ತಿಯನ್ನು ಸೂಚಿ ಸುತ್ತವೆ. ಉದಾಹರಣೆಗೆ ನಮ್ಮ ನೆಲೆಯು 4 ಮೀ. ವ್ಯಾಪ್ತಿಯಲ್ಲಿ ಇದ್ದರೆ, ಪಕ್ಕದ ಮನೆಯ ವಿಳಾಸದ ಡಿಜಿಪಿನ್‌ನ ಮೊದಲ 9 ಮತ್ತು ನಮ್ಮ ನೆಲೆಯ ಡಿಜಿಪಿನ್‌ನಲ್ಲಿನ ಮೊದಲ 9 ಸಂಖ್ಯಾಕ್ಷರಗಳು ಒಂದೇ ಆಗಿದ್ದು, ಕೊನೆಯ ಸಂಖ್ಯಾಕ್ಷರ ಮಾತ್ರ ಭಿನ್ನವಾಗಿರುತ್ತದೆ.

ಈ ಅಂಕಿಗಳು ಕೂಡ ಒಂದು ವಿಭಾಗದ ಮಧ್ಯಮ ಕ್ರಮಾಂಕ ದಿಂದ ಮೊದಲ್ಗೊಂಡು ಅಪ್ರದಕ್ಷಿಣಾಕಾರವಾಗಿ ಸಾಗುತ್ತವೆ. ಹೀಗೆ ನಿರ್ಧರಿತವಾದ ಸಂಖ್ಯಾಕ್ಷರಗಳು ಒಂದು ಪ್ರದೇಶದ 'ಜಿಯೋ ಲೊಕೇಶನ್' ಅನ್ನು ನಿಖರವಾಗಿ ಹೇಳುತ್ತವೆ. ಹಿಂದೆ ಕೂಡ ಇಂಥ ಕೆಲವು ಯತ್ನಗಳು ಖಾಸಗಿ ವಲಯದಿಂದ ನಡೆದಿದ್ದವು; ಆದರೆ ಅವ್ಯಾವುವೂ ಯಶಸ್ವಿಯಾಗಲಿಲ್ಲ ಮತ್ತು ಅವನ್ನು ಸಾರ್ವಜನಿಕ ಬಳಕೆಗೆ ತೆರೆದಿರಲಿಲ್ಲ.

ಸದ್ಯ ಇರುವ ಪಿನ್‌ಕೋಡ್, ದೊಡ್ಡದೊಂದು ಭೂಪ್ರದೇಶಕ್ಕೆ/ಆ ಭಾಗದಲ್ಲಿ ಕಾರ್ಯನಿರ್ವಹಿಸುವ ಅಂಚೆ ಕಚೇರಿಯ ವ್ಯಾಪ್ತಿಗೆ ಮೀಸಲಾಗಿದೆ. ಮೊದಮೊದಲು ಪಿನ್‌ಕೋಡ್, ಬೀದಿಸಂಖ್ಯೆಯ ವಿವರಗಳಿದ್ದರೆ ಅಂಚೆ/ಪಾರ್ಸಲ್ ತಲುಪಿಸಲು ಸಾಕಾಗುತ್ತಿತ್ತು. ದಿನಗಳೆದಂತೆ ನಗರಗಳು ವಿಸ್ತಾರವಾಗಿ ಬೀದಿಗಳು ಹೆಚ್ಚಾದವು. ಲೇಔಟ್‌ಗಳ ಹೆಸರುಗಳು, ರಸ್ತೆಯ ಹೆಸರು, ಮುಖ್ಯರಸ್ತೆ/ಅಡ್ಡರಸ್ತೆ ಸಂಖ್ಯೆ, ಅಂತಸ್ತಿನ ವಿವರ ಎಲ್ಲವನ್ನೂ ಪಿನ್‌ಕೋಡ್ ಜತೆಗೆ ವಿಳಾಸದಲ್ಲಿ ಸೇರಿಸಬೇಕಾದ ಅನಿವಾರ್ಯತೆ ಎದುರಾಯಿತು. ಇಷ್ಟಿದ್ದೂ ಕೆಲವೊಂದು ಪ್ರದೇಶ ಮತ್ತು ವಿಳಾಸಗಳನ್ನು ನಿಖರವಾಗಿ ತಲುಪಲಾಗದೆ, ಹಲವಾರು ಅಂಚೆ/ಪಾರ್ಸಲ್‌ಗಳು ವಿತರಣೆಯಾ ಗದೇ ಅಂಚೆ ಕಚೇರಿಗಳಲ್ಲಿ ಧೂಳು ತಿನ್ನುತ್ತಿವೆ. ವಿಳಾಸ ಸಿಗದ ಕಾರಣಕ್ಕೆ ಅವು ಮೂಲವಿಳಾಸಕ್ಕೆ ಮರಳಿಸಲ್ಪಡುವ ಪ್ರಕ್ರಿಯೆ ಈಗಿನ ನಮ್ಮ ಅಂಚೆ ವ್ಯವಸ್ಥೆಯಲ್ಲಿ ಸ್ವಾಭಾವಿಕ. ಡಿಜಿಪಿನ್ ವ್ಯವಸ್ಥೆಯು ಇಂಥ ಅವ್ಯವಸ್ಥೆಯನ್ನು ಸಂಪೂರ್ಣ ಹೋಗಲಾಡಿಸುವ ವಿಶ್ವಾಸವಿದೆ.

ಹೀಗೆ ದಕ್ಕುತ್ತೆ ಡಿಜಿಪಿನ್

ನಾವಿರುವ ಪ್ರದೇಶದ ಡಿಜಿಪಿನ್ ಅರಿಯಲು/ಪಡೆಯಲು ಕೇಂದ್ರ ಸರಕಾರವು https://dac.indiapost.gov.in/mydigipin/home ಎಂಬ ಜಾಲತಾಣವನ್ನು ಸಿದ್ಧಪಡಿಸಿದೆ. ಇದಲ್ಲದೆ Know Your DIGIPIN ಮತ್ತು Know Your PINCODE ಎಂಬ ಎರಡು ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳನ್ನು ಬಿಡುಗಡೆ ಮಾಡಿದೆ. ಈ ಪೈಕಿ ಯಾವುದೇ ಮಾರ್ಗದಲ್ಲಿ ನಮ್ಮ ಪ್ರದೇಶದ ಡಿಜಿಪಿನ್ ಪಡೆಯಬಹುದು. ಯಾವುದೇ ಸ್ಪಷ್ಟ ವಿಳಾಸವಿಲ್ಲದ ಮನೆ/ಪ್ರದೇಶಗಳೂ ಈ ತಂತ್ರಜ್ಞಾನದಿಂದ ನಿಖರ ವಿಳಾಸವನ್ನು ಹೊಂದಬಹುದು.

ದೇಶಾದ್ಯಂತ ಲೊಕೇಶನ್ ಆಧರಿತ ಸೇವೆಗಳು ಮತ್ತಷ್ಟು ಸ್ಮಾರ್ಟ್ ಆಗಿ ಸುಲಭಗೊಳ್ಳಲು ಡಿಜಿಪಿನ್ ನೆರವಾಗಲಿದೆ. ಡಿಜಿಪಿನ್ ಸಹಾಯದಿಂದ ಇನ್ನು ಮುಂದೆ ತುರ್ತು ಸೇವೆಗಳು, ಆಂಬುಲೆನ್ಸ್, ಅಗ್ನಿಶಾಮಕ ಮತ್ತು ಪೊಲೀಸ್ ವ್ಯವಸ್ಥೆಗಳು ತ್ವರಿತವಾಗಿ, ನಿಖರ ವಾಗಿ ನಿರ್ದಿಷ್ಟ ವಿಳಾಸಗಳನ್ನು ತಲುಪಬಹುದು. ವಿವಿಧ ಯೋಜ ನೆಗಳ ಅನುಷ್ಠಾನಕ್ಕೆ, ಪರಿಹಾರ ಕಾರ್ಯಾಚರಣೆಗಳಿಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಡಿಜಿಪಿನ್ ವ್ಯವಸ್ಥೆಯನ್ನು ಪರಿಣಾಮ ಕಾರಿಯಾಗಿ ಬಳಸಬಹುದು. ಡಿಜಿಪಿನ್ ಪಡೆಯಲು ನಾವು ನೀಡುವ ಮಾಹಿತಿಯು ಗೌಪ್ಯವಾಗಿರಲಿದ್ದು, ನೀಡಿದ ವಿವರಗಳಲ್ಲಿ ಜಿಪಿಎಸ್ ಲೊಕೇಶನ್ ಮಾತ್ರ ವಿವಿಧೆಡೆ ಬಳಕೆಯಾಗಲಿದೆ.

''ಹೆಸರು/ಸಂಪರ್ಕ ಸಂಖ್ಯೆಯನ್ನು ಸಾರ್ವಜನಿಕವಾಗಿ ಬಳಸುವುದಿಲ್ಲ, ಆ ಮಾಹಿತಿ ಸೋರಿಕೆಯಾಗಲಾರದು'' ಎಂಬ ಭರವಸೆಯನ್ನು ಕೇಂದ್ರ ಸರಕಾರ ನೀಡಿದೆ. ಇಷ್ಟೆಲ್ಲಾ ಗೌಪ್ಯತಾ ಒಪ್ಪಂದದ ಅಂಶಗಳಿದ್ದರೂ ಡಿಜಿಪಿನ್ ಎಂಬುದು 'ಓಪನ್ ಸೋರ್ಸ್' ವ್ಯವಸ್ಥೆಯ ತಂತ್ರಜ್ಞಾನ. ಹಾಗಾಗಿ ಇಲ್ಲಿರುವ ಅಂಕಿ–ಅಂಶಗಳನ್ನು ಯಾರು ಬೇಕಾದರೂ ಬಳಸಿ ಒಂದಷ್ಟು ಕೆಡಿಸುವ, ಮಾಹಿತಿ ಸೋರಿಕೆಯಾಗುವ ಆತಂಕ ಇದ್ದೇ ಇದೆ. ಹಾಗಾಗಿ ಗೌಪ್ಯತೆ ಕಾಪಾಡುವ ನಿಟ್ಟಿನಲ್ಲಿನ ಸೂಕ್ತ ಮಾರ್ಗಸೂಚಿಗಳನ್ನು ಹೊರತರುವ ಕೆಲಸಕ್ಕೂ ಸರಕಾರ ಮುಂದಾಗಬೇಕು.

ಮುಂದೇನಾಗಬಹುದು?: ದೇಶದ ಯಾವುದೇ ಮೂಲೆಗೆ, ಸಾಗರದಷ್ಟಿರುವ ನಗರಗಳ ಮನೆಗಳು ಮತ್ತು ಕಚೇರಿ ಕಟ್ಟಡಗಳಿಗೆ ಅಂಚೆ ಮತ್ತಿತರ ಪಾರ್ಸಲ್‌ಗಳನ್ನು ನಿಖರವಾಗಿ ತಲುಪಿಸುವಲ್ಲಿ ಈ ವ್ಯವಸ್ಥೆ ಖಂಡಿತ ನೆರವಾಗಲಿದೆ. ಲಭ್ಯ ಮಾಹಿತಿಗಳ ಪ್ರಕಾರ, ಈ ವ್ಯವಸ್ಥೆಯು ಈಗಿರುವ ಆರು ಅಂಕಿಗಳ ಪಿನ್‌ಕೋಡ್ ವ್ಯವಸ್ಥೆಯನ್ನು ಬದಲಿಸುವುದಿಲ್ಲ ಅಥವಾ ಮೂಲೆಗುಂಪಾಗಿಸುವುದಿಲ್ಲ; ಬದಲಿಗೆ ದೇಶದೊಳಗಿನ ಅಷ್ಟೂ ವಿಳಾಸಗಳಿಗೆ ನಿಖರ ವಿವರಗಳನ್ನು ಸೇರಿಸಿ ವಿಳಾಸಗಳನ್ನು ಮತ್ತಷ್ಟು ಸ್ಪಷ್ಟವಾಗಿಸಲಿದೆ. ತನ್ಮೂಲಕ ಗ್ರಾಹಕರು ತಮ್ಮ ಅಂಚೆ/ಪಾರ್ಸಲ್/ಸರಕುಗಳನ್ನು ಕ್ಲುಪ್ತ ಸಮಯಕ್ಕೆ ಕಳುಹಿಸಲು/ಸ್ವೀಕರಿಸಲು ಸಾಧ್ಯವಾಗಲಿದೆ.

ನಮ್ಮ ಬಂಧು–ಮಿತ್ರರ ಮೊಬೈಲ್ ಸಂಖ್ಯೆಯನ್ನು ನೆನಪಿಟ್ಟುಕೊಳ್ಳುವಂತೆಯೇ, ನಮ್ಮ ನೆಲೆಯ ಡಿಜಿಪಿನ್ ಅನ್ನು ನಾವು ಸರಿಯಾಗಿ, ಸದಾಕಾಲ ನೆನಪಿಟ್ಟುಕೊಳ್ಳಬಹುದು. ನಮ್ಮ ನೆಚ್ಚಿನ ಸ್ಥಳಗಳ ಬಗ್ಗೆ ನಮಗಿರುವ ಬಾಂಧವ್ಯವನ್ನು ಈ ಡಿಜಿಪಿನ್ ಜತೆಗೆ ಬೆಳೆಸಬಹುದು. ಇನ್ಯಾಕೆ ತಡ? ನಿಮ್ಮ ನಿಮ್ಮ ಪ್ರದೇಶಗಳ ಡಿಜಿಪಿನ್ ತಿಳಿದುಕೊಂಡು ಬಳಸಲು ಶುರುಮಾಡಿ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಆಲಮಟ್ಟಿ ಎತ್ತರ: ಇಷ್ಟು ವರ್ಷ ಕಾದಿದ್ದೇ ಮುಳುವಾಯ್ತೇ?

ಕ್ರಿಯಾಲೋಪ
ರಾಘವ ಶರ್ಮ ನಿಡ್ಲೆ
vveditoped@gmail.com

ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರಕ್ಕೆ ಒಳಪಟ್ಟ ಕೃಷ್ಣಾ ನದಿ ನೀರು ಹಂಚಿಕೆ ವ್ಯಾಜ್ಯದ ಕುರಿತು ಕೃಷ್ಣಾ ನ್ಯಾಯಾಧಿಕರಣ 2010ರಲ್ಲಿ ಐತೀರ್ಪು ಪ್ರಕಟಿಸಿ 15 ವರ್ಷಗಳೇ ಕಳೆದಿವೆ. ದುರಂತ ಎಂದರೆ, ಐತೀರ್ಪಿನಲ್ಲಿ ಅನುಮೋದಿಸಿದಂತೆ, ಆಲಮಟ್ಟಿ ಜಲಾಶಯದ ಎತ್ತರವನ್ನು 519 ಮೀಟರ್‌ನಿಂದ 524 ಮೀ.ಗೆ ಏರಿಸಲು ನಮಗೆ ಇಂದಿಗೂ ಸಾಧ್ಯವಾಗಿಲ್ಲ. ನ್ಯಾಯಾಧಿಕರಣದ ಐತೀರ್ಪಿನ ಬಗ್ಗೆ ಸ್ಪಷ್ಟೀಕರಣ ಕೋರಿ ಮೂರೂ ರಾಜ್ಯಗಳು ಅದೇ ನ್ಯಾಯಾಧಿಕರಣಕ್ಕೆ ಸಲ್ಲಿಸಿದ್ದ ಅರ್ಜಿಗಳೂ ಇತ್ಯರ್ಥಗೊಂಡಿವೆ. ಹೀಗಿದ್ದರೂ, ಆಲಮಟ್ಟಿ ಜಲಾಶಯದ ಎತ್ತರ ಮಾತ್ರ ಏರಲೇ ಇಲ್ಲ.

ಕೆಲ ದಿನಗಳ ಹಿಂದೆ ದೇವೇಂದ್ರ ಫಡ್ನವಿಸ್ ನೇತೃತ್ವದ ಮಹಾರಾಷ್ಟ್ರ ಸರಕಾರ ಆಲಮಟ್ಟಿ ಜಲಾಶಯದ ಎತ್ತರವನ್ನು ಏರಿಸುವುದಕ್ಕೆ ತಗಾದೆ ತೆಗೆದು, ರಾಜ್ಯದ ಸಾಂಗ್ಲಿ ಮತ್ತು ಕೊಲ್ಹಾಪುರದಲ್ಲಿ ಉಂಟಾಗುವ ಪ್ರವಾಹಕ್ಕೆ ಈ ಜಲಾಶಯವೇ ಕಾರಣ ಎಂದು ದೂರಿದ್ದಾರೆ. ಅಂದರೆ, ಆಲಮಟ್ಟಿ ಜಲಾಶಯದ ಎತ್ತರವನ್ನು 524 ಮೀ.ಗೆ ಏರಿಸಲು ಮಹಾರಾಷ್ಟ್ರದ ವಿರೋಧವಿದೆ ಎಂಬುದನ್ನು ಅಧಿಕೃತಗೊಳಿಸಿದ್ದಾರೆ.

ಕೃಷ್ಣಾ ನ್ಯಾಯಾಧಿಕರಣದ 2013ರ ಸ್ಪಷ್ಟೀಕರಣ ತೀರ್ಪುಗಳನ್ನು ಪ್ರಶ್ನಿಸಿ ಮೂರೂ ರಾಜ್ಯಗಳ ಸಿವಿಲ್ ಅಪೀಲ್‌ಗಳು ಸುಪ್ರೀಂಕೋರ್ಟ್ ಕಡತಗಳಲ್ಲಿ ಈಗಲೂ ಧೂಳು ತಿನ್ನುತ್ತಿವೆ. ಸಿವಿಲ್ ಅಪೀಲ್‌ಗಳ ಬಗ್ಗೆ ಈ ಹಿಂದೆ ಹಲವು ಸುದೀರ್ಘ ವಿಚಾರಣೆಗಳು ನಡೆದಿದ್ದರೂ, ಸುಪ್ರೀಂ ಕೋರ್ಟ್‌ನ ಅಂತಿಮ ತೀರ್ಪು ಇನ್ನೂ ಹೊರಬೀಳದಿರುವುದು ರಾಜ್ಯದ ಕೃಷ್ಣಾ ಕಣಿವೆ ಭಾಗದ ಜನರ ಗೋಳನ್ನು ಹೆಚ್ಚಿಸುತ್ತಲೇ ಇದೆ. ಸುಪ್ರೀಂ ಕೋರ್ಟ್‌ನ ನಿವೃತ್ತ ಸಿಜೆಐ ಡಿ.ವೈ. ಚಂದ್ರಚೂಡ್ ಅವರು ಸಿಜೆಐ ಆಗುವ ಮುನ್ನ ನ್ಯಾ.ಎ.ಎಸ್. ಬೋಪಣ್ಣ ಜತೆಗಿದ್ದ ನ್ಯಾಯಪೀಠದಲ್ಲಿ ಅಧಿಸೂಚನೆ ಪ್ರಕಟಿಸಬೇಕೆಂಬ ಕರ್ನಾಟಕ, ಮಹಾರಾಷ್ಟ್ರದ ಬೇಡಿಕೆ ಕುರಿತ ಅರ್ಜಿಯ ವಿಚಾರಣೆ ನಡೆಸಿದ್ದರು. ನ್ಯಾ. ಚಂದ್ರಚೂಡ್ ಮಹಾರಾಷ್ಟ್ರದವರು ಮತ್ತು ನ್ಯಾ. ಬೋಪಣ್ಣ ಕರ್ನಾಟಕದವರಾಗಿದ್ದರಿಂದ ಮೂರ್ನಾಲ್ಕು ವಿಚಾರಣೆಗಳ ಬಳಿಕ ಎರಡೂ ನ್ಯಾಯಮೂರ್ತಿಗಳಿಗೆ ಅನಾಮಧೇಯ ಪತ್ರಗಳು, ಇ–ಮೇಲ್‌ಗಳು ಬಂದಿದ್ದವು. ಅವುಗಳಲ್ಲಿ ಈ ಪ್ರಕರಣದ ವಿಚಾರಣೆ ನಡೆಸುತ್ತಿರುವುದಕ್ಕೆ ಬಹಳ ಕೆಟ್ಟ ರೀತಿಯಲ್ಲಿ ಟೀಕೆಗಳನ್ನು ಮಾಡಲಾಗಿತ್ತು. ಇದರಿಂದ ಬೇಸರಗೊಂಡಿದ್ದ ನ್ಯಾಯಮೂರ್ತಿಗಳು, ತಾವು ವಿಚಾರಣೆ ನಡೆಸುವುದಿಲ್ಲ ಎಂದು ಹಿಂದೆ ಸರಿದಿದ್ದರು. ನಂತರದಲ್ಲಿ, ನ್ಯಾ. ಸೂರ್ಯಕಾಂತ್ ಮತ್ತು ನ್ಯಾ. ಬಾಲಸುಬ್ರಹ್ಮಣ್ಯಂ ವಿಚಾರಣೆ ನಡೆಸಲು ಮುಂದಾಗಿ, ಮೂರ್ನಾಲ್ಕು ಸುದೀರ್ಘ ವಿಚಾರಣೆಗಳು ನಡೆದವು. ಆದರೆ, ನ್ಯಾ. ಬಾಲಸುಬ್ರಹ್ಮಣ್ಯಂ ಸೇವೆಯಿಂದ ನಿವೃತ್ತರಾದರು. ಹೀಗಾಗಿ, ಮತ್ತೆ ಕೃಷ್ಣಾ ಜಲವ್ಯಾಜ್ಯ ಕೋರ್ಟ್ ಕಡತಗಳೊಳಗೆ ಕೂತುಬಿಟ್ಟಿತು. 2023ರ ಬಳಿಕ ಕೃಷ್ಣಾ ಕೇಸಿನ ವಿಚಾರಣೆ ನಡೆದೇ ಇಲ್ಲ. ಕೃಷ್ಣಾ ಕಣಿವೆ ಜನರು ಕೋರ್ಟುಗಳತ್ತ ಆಸೆಗಣ್ಣಿನಿಂದ ನೋಡುತ್ತ ಕಾದು ಕುಳಿತದ್ದು ಬಿಟ್ಟರೆ ಇದಕ್ಕೊಂದು ತಾರ್ಕಿಕ ಅಂತ್ಯ ಸಿಗಲಿಲ್ಲ.

ಜಲವ್ಯಾಜ್ಯಗಳನ್ನು ಕಣಿವೆ ರಾಜ್ಯಗಳು ಮಾತುಕತೆ ಮೂಲಕ ಇತ್ಯರ್ಥಪಡಿಸಬೇಕು ಎನ್ನುವುದು ಹಾಲಿ ಕೇಂದ್ರ ಸರಕಾರದ ಆಶಯವಾಗಿದ್ದರೂ, ಅವು ಮಾತುಕತೆ ಅಥವಾ ಸಂಧಾನದ ಮೂಲಕ ಬಗೆಹರಿಯುವುದಿಲ್ಲ ಎನ್ನುವುದು ಈ ಹಿಂದೆ ಹಲವು ಬಾರಿ ಸಾಬೀತಾಗಿದೆ. ಹೀಗಿರುವಾಗ, ಜನರು ಕೋರ್ಟುಗಳಿಂದಲೇ ನ್ಯಾಯವನ್ನು ನಿರೀಕ್ಷಿಸುತ್ತಾರೆ. ಸರಕಾರಗಳ ಮಧ್ಯೆ ಮಾತುಕತೆ ಎನ್ನುವುದು ಬರೀ ಪ್ರಕ್ರಿಯೆಯ ಭಾಗವಾಗಿ ಉಳಿದುಬಿಟ್ಟಿದೆ.

ಕೃಷ್ಣಾ ಐತೀರ್ಪಿನ ಅಧಿಸೂಚನೆ ಪ್ರಕಟಿಸಬೇಕು ಎಂದು ಕರ್ನಾಟಕ ಸರಕಾರ ಕೇಂದ್ರದ ಮೇಲೆ ಒತ್ತಡ ಹೇರುತ್ತಿದ್ದರೂ, ಆಂಧ್ರ, ತೆಲಂಗಾಣದ ವಿರೋಧದಿಂದಾಗಿ ಕೇಂದ್ರವು ಅಧಿಸೂಚನೆಗೆ ಮನಸ್ಸು ಮಾಡಿಲ್ಲ. ಅಧಿಸೂಚನೆ ಪ್ರಕಟಿಸಿ ಎಂದು ಕೇಂದ್ರಕ್ಕೆ ಕರ್ನಾಟಕದ ಸಿಎಂಗಳು, ಸಚಿವರು ಹತ್ತಾರು ಬಾರಿ ಮನವಿ ನೀಡಿ, ಕೇಂದ್ರ ಸಚಿವರೊಂದಿಗೆ ಫೋಟೋ ತೆಗೆಸಿಕೊಂಡಿದ್ದಾರಾದರೂ ಫಲಿತಾಂಶ ಮಾತ್ರ ಶೂನ್ಯ. ಅಧಿಸೂಚನೆ ಪ್ರಕಟವಾದಲ್ಲಿ, ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳ ಭಾಗ್ಯದ ಬಾಗಿಲು ತೆರೆದಂತಾಗಲಿದೆ.

2023ರಲ್ಲಿ ಈ ಬಗ್ಗೆ ಸುಪ್ರೀಂಕೋರ್ಟ್‌ಗೆ ವಿವರಿಸಿದ್ದ ರಾಜ್ಯದ ಹಿರಿಯ ವಕೀಲರಾದ ಶ್ಯಾಮ್ ದಿವಾನ್ ಮತ್ತು ಮೋಹನ್ ಕಾತರಕಿ, ದೇಶದ ಹಲವು ಭಾಗಗಳು ಈಗ ಬರಗಾಲಕ್ಕೆ ತುತ್ತಾಗಿವೆ. ಕರ್ನಾಟಕ ಕೂಡ ಇದರಿಂದ ಹೊರತಾಗಿಲ್ಲ. ಕೃಷ್ಣಾ ನದಿ ವ್ಯಾಪ್ತಿಯ ಪ್ರದೇಶಗಳು ಬರಪೀಡಿತ ಪ್ರದೇಶಗಳಾಗಿದ್ದು, ಸೂಕ್ತ ಆದ್ಯತೆ ನೀಡಬೇಕು. ಕೃಷ್ಣಾ ನದಿ ನೀರು ಬಳಕೆಗೆ ಸಂಬಂಧಿಸಿ ಮೂಲಸೌಕರ್ಯ ಪೂರ್ಣಗೊಂಡಿದೆ ಮತ್ತು ಸಿದ್ಧವಾಗಿದೆ. ಇದರಿಂದ ನ್ಯಾಯಾಧಿಕರಣದ ತೀರ್ಪಿನ ಅಡಿಯಲ್ಲಿ ಹಂಚಿಕೆಯಾದ ನೀರನ್ನು ಬಿಡುಗಡೆ ಮಾಡಬಹುದು. ಇವೆಲ್ಲವೂ ತೆರಿಗೆದಾರರ ದೊಡ್ಡ ಮೊತ್ತದ ಹಣವನ್ನು ಒಳಗೊಂಡಿದೆ. ವಿನಾಕಾರಣ ಕೃಷ್ಣಾ ನದಿ ನೀರನ್ನು ಬಂಗಾಳ ಕೊಲ್ಲಿಗೆ ಹರಿಯಬಿಟ್ಟು ಏಕೆ ವ್ಯರ್ಥಗೊಳಿಸಬೇಕು ಎಂದು ಗಮನಸೆಳೆದಿದ್ದರು. ಆದರೆ, ಈ ವಿಚಾರಗಳ ಗಂಭೀರತೆ ನ್ಯಾಯಾಲಯಗಳಿಗೆ ಇನ್ನೂ ಅರ್ಥವಾದಂತಿಲ್ಲ.

ಜಲಾಶಯದ ಮಟ್ಟ ಏರಿಸಬೇಕು

ಜಲವ್ಯಾಜ್ಯ ವಿಚಾರಗಳಲ್ಲಿ ತಮಿಳುನಾಡು, ಗೋವಾದಂಥ ರಾಜ್ಯಗಳು ಪ್ರದರ್ಶಿಸುವ ಆತ್ಮವಿಶ್ವಾಸ, ದಿಟ್ಟತನ ಮತ್ತು ಹಠಮಾರಿ ಧೋರಣೆಯನ್ನು ಕರ್ನಾಟಕದ ರಾಜಕಾರಣಿಗಳು (ಬಿಜೆಪಿ ಮತ್ತು ಕಾಂಗ್ರೆಸ್) ಪ್ರದರ್ಶಿಸುವುದೇ ಇಲ್ಲ. ದಿಲ್ಲಿ ದೊರೆಗಳ ಮುಂದೆ ಅವರದ್ದು ಮಹಾಮೌನ. ಆಲಮಟ್ಟಿ ಜಲಾಶಯದ ಎತ್ತರ ಏರಿಸುವ ಕಾಮಗಾರಿ ಆರಂಭಿಸುವ ದೃಢ ನಿರ್ಧಾರವನ್ನು ಕೈಗೊಳ್ಳುವ ಅವಕಾಶಗಳನ್ನು ಕಾಂಗ್ರೆಸ್, ಬಿಜೆಪಿ ಸರಕಾರಗಳು ಕೈಚೆಲ್ಲಿ ಕುಳಿತಿವೆ. ಯಾವಾಗ ಆ ಧೈರ್ಯ ಬರುತ್ತದೆ ಎನ್ನುವುದೇ ಮಿಲಿಯನ್ ಡಾಲರ್ ಪ್ರಶ್ನೆ.

ನ್ಯಾಯಾಧಿಕರಣದ ಐತೀರ್ಪನ್ನೇ ಆಧಾರವಾಗಿಟ್ಟುಕೊಂಡು, ಜಲಾಶಯದ ಎತ್ತರ ಏರಿಸಲು ಈಗಲಾದರೂ ಮುಂದಾಗಬೇಕು ಎಂದು ರಾಜ್ಯ ಕಾನೂನು ತಂಡದ ವಕೀಲರು ಅನೇಕ ಬಾರಿ ಹೇಳಿದ್ದರು. 2018ರಲ್ಲಿ ಅಂದಿನ ರಾಜ್ಯ ಕಾನೂನು ತಂಡದ ಮುಖ್ಯಸ್ಥರಾಗಿದ್ದ ಫಾಲಿ ನಾರಿಮನ್ ಅವರು, ಎತ್ತರ ಏರಿಸುವ ಕಾಮಗಾರಿ ಶುರುಮಾಡುವಂತೆ ಸಿಎಂ ಮತ್ತು ಜಲ ಸಂಪನ್ಮೂಲ ಸಚಿವರಿಗೆ ಮೌಖಿಕ ಸಲಹೆ ನೀಡಿದ್ದರು. 2022ರಲ್ಲಿ ಅಂದಿನ ಸಿಎಂ ಬಸವರಾಜ ಬೊಮ್ಮಾಯಿ ಅವರಿಗೆ ಹಿರಿಯ ವಕೀಲ ಮೋಹನ್ ಕಾತರಕಿ ಅವರೂ ಇದೇ ಸಲಹೆ ಕೊಟ್ಟಿದ್ದರು.

> ### ಕಣ್ಣೀರಿಗೂ ಬೆಲೆ ಇಲ್ಲ
>
> **2010ರಲ್ಲಿ ನ್ಯಾ. ಬ್ರಜೇಶ್ ಕುಮಾರ್ ನೇತೃತ್ವದ ನ್ಯಾಯಾಧಿಕರಣ ಆಲಮಟ್ಟಿ ಜಲಾಶಯದ ಎತ್ತರದ ಹೆಚ್ಚಳಕ್ಕೆ ಅನುಮತಿ ನೀಡಿದ್ದಲ್ಲದೆ, ಕರ್ನಾಟಕಕ್ಕೆ 911 ಟಿಎಂಸಿ ನೀರಿನ ಹಂಚಿಕೆ ನಿಗದಿಪಡಿಸಿದ್ದಾಗ ನ್ಯಾಯಾಧಿಕರಣದ ಕೊಠಡಿಯಿಂದ ಹೊರಬಂದಿದ್ದ ಹಿರಿಯ ವಕೀಲ ಮೋಹನ್ ಕಾತರಕಿ ಅವರ ಕಣ್ಣಾಲಿಗಳು ಒದ್ದೆಯಾಗಿ, ಬಿಕ್ಕಿ ಅತ್ತಿದ್ದರು. ದಶಕಗಳ ಹೋರಾಟಕ್ಕೆ ನ್ಯಾಯ ಸಿಕ್ಕಿತು ಎಂದು ಕೃಷ್ಣಾ ಕಣಿವೆ ರೈತರು, ಜನರೂ ಸಂಭ್ರಮಿಸಿದ್ದರು. ಇದಾಗಿ, 15 ವರ್ಷಗಳಾದರೂ, ಐತೀರ್ಪನ್ನು ನೈಜರೂಪದಲ್ಲಿ ಅನುಭವಿಸುವ ಭಾಗ್ಯ ನಮ್ಮದಾಗಿಲ್ಲ!**

ಕೆಲ ದಿನಗಳ ಹಿಂದೆ ಬೆಂಗಳೂರಿನಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಜಲ ಸಚಿವ ಡಿ.ಕೆ. ಶಿವಕುಮಾರ್ ಅವರ ಜತೆ ರಾಜ್ಯದ ಕಾನೂನು ತಂಡ ಸಭೆ ನಡೆಸಿದ್ದಾಗಲೂ, ''ಆಲಮಟ್ಟಿ ವಿಷಯದಲ್ಲಿ ನಾವು ಸುಪ್ರೀಂಕೋರ್ಟ್ ಅಥವಾ ಕೇಂದ್ರ ಸರಕಾರದ ಅನುಮೋದನೆಗಾಗಿ ಏಕೆ ಕಾಯುತ್ತಿದ್ದೇವೆ? ಜಲಾಶಯದ ಕ್ರೆಸ್ಟ್ ಗೇಟ್‌ಗಳಿಗೆ ಸ್ಕಿನ್ ಪ್ಲೇಟ್‌ಗಳನ್ನು ಅಳವಡಿಸೋಣ. ಆದರೆ, ಸದ್ಯದ ಮಟ್ಟಿಗೆ ನೀರು ಸಂಗ್ರಹದ ಮಿತಿಯನ್ನು 519 ಮೀಟರ್‌ಗೆ ಇರಿಸಿ, ಕೋರ್ಟು ಹೇಳಿರುವ ಪ್ರಮಾಣದಷ್ಟೇ ನೀರನ್ನು ಬಳಸಿಕೊಳ್ಳೋಣ'' ಎಂದು ಮೋಹನ್ ಕಾತರಕಿ ತಮ್ಮ ನಿಲುವನ್ನು ಖಚಿತಪಡಿಸಿದ್ದರು.

ಆಲಮಟ್ಟಿ ವಿಷಯದಲ್ಲಿ ದೇವೇಂದ್ರ ಫಡ್ನವಿಸ್‌ರದ್ದು ಮೊಸಳೆ ಕಣ್ಣೀರು. ಸಾಂಗ್ಲಿ ಮತ್ತು ಕೊಲ್ಹಾಪುರ ಭಾಗದ ಜನರ ಒತ್ತಡಕ್ಕೆ ಮಣಿದು, ಪ್ರವಾಹಕ್ಕೆ ಆಲಮಟ್ಟಿ ಜಲಾಶಯ ಕಾರಣ ಎಂದು ಬೊಬ್ಬಿರಿದಿದ್ದಾರೆ. ಸುಪ್ರೀಂಕೋರ್ಟ್ ವಿಚಾರಣೆ ಸಂದರ್ಭದಲ್ಲೂ ಇದನ್ನು ಪ್ರಸ್ತಾಪಿಸದಿದ್ದ ಮಹಾರಾಷ್ಟ್ರ ಸರಕಾರ, ಈಗ ಆಲಮಟ್ಟಿ ಮೇಲೆ ಕೆಂಗಣ್ಣು ಬೀರಿರುವುದರ ಹಿಂದೆ ಒಲ್ಲೆಕೆ ರಾಜಕಾರಣದ ಕರಿನೆರಳಿರುವುದು ಸ್ಪಷ್ಟ.

2020ರಲ್ಲಿ ಶಿವಸೇನೆಯ ಉದ್ಧವ್ ಠಾಕ್ರೆ ಮುಖ್ಯಮಂತ್ರಿಯಾಗಿದ್ದಾಗ ನೀರಾವರಿ ತಜ್ಞ ಮತ್ತು ಮಹಾರಾಷ್ಟ್ರದ ನಿವೃತ್ತ ಮುಖ್ಯ ಕಾರ್ಯದರ್ಶಿ ನಂದಕುಮಾರ್ ವಡ್ನೆರೆ ನೇತೃತ್ವದ ಏಳು ಸದಸ್ಯರ ಸಮಿತಿ ಎರಡೂ ರಾಜ್ಯಗಳಲ್ಲಿನ ಪ್ರವಾಹ ಮಾದರಿಗಳು ಮತ್ತು ನದಿ ಜಲಾನಯನ ಪ್ರದೇಶವನ್ನು ಅಧ್ಯಯನ ಮಾಡಿತ್ತು. ಸಿಎಂ ಠಾಕ್ರೆ ಅವರಿಗೆ ಸಲ್ಲಿಸಿದ್ದ ವರದಿಯಲ್ಲಿ, ''ಸಾಂಗ್ಲಿ ಮತ್ತು ಕೊಲ್ಹಾಪುರದಲ್ಲಿ ಪದೇ ಪದೆ ಸಂಭವಿಸುವ ಪ್ರವಾಹಗಳು ಆಲಮಟ್ಟಿ ಮತ್ತು ಹಿಪ್ಪರಗಿ ಜಲಾಶಯಗಳ ನೀರಿನ ಸಂಗ್ರಹಣೆಗೆ ಸಂಬಂಧಿಸಿಲ್ಲ'' ಎಂದು ಸ್ಪಷ್ಟವಾಗಿ ತಿಳಿಸಲಾಗಿತ್ತು. ನದಿ ಜಲಾನಯನ ಪ್ರದೇಶದಲ್ಲಿ ಅತಿಕ್ರಮಣ, ಸಾಂಗ್ಲಿ ಮತ್ತು ಕೊಲ್ಹಾಪುರದಲ್ಲಿ ಕಟ್ಟಡಗಳ ಅಕ್ರಮ, ಅವೈಜ್ಞಾನಿಕ ನಿರ್ಮಾಣವೇ ಇದಕ್ಕೆ ಕಾರಣ ಎಂದು ದೂಷಿಸಿರುವುದು ಇಲ್ಲಿ ಉಲ್ಲೇಖಾರ್ಹ. ಹೀಗಿದ್ದಾಗ, ಏಕಾಏಕಿಯಾಗಿ ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವಿಸ್‌ಗೆ ಇದಕ್ಕೆಲ್ಲಾ ಆಲಮಟ್ಟಿಯೇ ಕಾರಣ ಎಂದು ಅನ್ನಿಸಿರುವುದೇಕೆ?

ಆಲಮಟ್ಟಿ ಎತ್ತರ ಹೆಚ್ಚಳವಾದಲ್ಲಿ ಕೆಲ ಹಳ್ಳಿಗಳ ಜನರು ಸ್ಥಳಾಂತರಗೊಳ್ಳಬೇಕಾಗುತ್ತದೆ. ಭೂಸ್ವಾಧೀನ, ಪುನರ್ವಸತಿ ಹಾಗೂ ಇತರೆ ಸಂಬಂಧಿ ಕೆಲಸಗಳನ್ನು ಪೂರ್ಣಗೊಳಿಸಲು 1 ಲಕ್ಷ ಕೋಟಿ ರು. ಹಣದ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ. ಗ್ಯಾರಂಟಿ ಯೋಜನೆಗಳ ಮಧ್ಯೆ, ಆಲಮಟ್ಟಿ ಜಲಾಶಯ ಎತ್ತರ ಹೆಚ್ಚಿಸಲು ಕಾಂಗ್ರೆಸ್ ಸರಕಾರಕ್ಕೆ 'ಆರ್ಥಿಕ ಶಕ್ತಿ' ಇದೆಯೋ ಇಲ್ಲವೋ ಗೊತ್ತಿಲ್ಲ. ಹಾಗಂತ, ಮಹಾರಾಷ್ಟ್ರದ ವಿರೋಧ ಇದೆ ಎಂದು ಮತ್ತೆ 'ಮೌನಿ'ಯಂತೆ ಕೂತರೆ ನಷ್ಟ ನಮಗೇ ವಿನಾ, ಆ ರಾಜ್ಯಗಳಿಗಲ್ಲ.

ಜೂನ್ 18ರಂದು ಕಣಿವೆ ರಾಜ್ಯಗಳ ಜತೆ ಕೇಂದ್ರ ಸರಕಾರ ಸಭೆ ನಡೆಸಲಿದೆ ಎಂಬ ಮಾತುಗಳಿದ್ದವು. ಆದರೆ ಯಾವುದೇ ಮಾತುಕತೆ ನಡೆದಿಲ್ಲ. ಹಿಂದಿನ ಉದಾಹರಣೆಗಳನ್ನು ನೋಡಿದರೆ ರಾಜ್ಯಗಳ ಜತೆಗಿನ ಸಭೆಯಲ್ಲಿ ಒಮ್ಮತದ ನಿರ್ಧಾರ ಹೊರಬೀಳುವ ಬಗ್ಗೆ ಅನುಮಾನವಿದೆ. ಹೀಗಿದ್ದರೂ, ಸುಪ್ರೀಂ ಕೋರ್ಟ್ ತೀರ್ಪಿಗೆ ಮುನ್ನ ಅಧಿಸೂಚನೆ ಪ್ರಕಟವಾಗಬೇಕು ಎಂಬ ಕರ್ನಾಟಕದ ನಿಲುವಿಗೆ ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು ಒಪ್ಪಿದರೆ ಅದಕ್ಕಿಂತ ದೊಡ್ಡ ಅಚ್ಚರಿ ಬೇರೊಂದಿರದು.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 158

ಸಮಾಚಾರ ಸಣ್ಣದಲ್ಲ

ಶುಭಾಂಶು ಶುಕ್ಲಾ ಯಾನ ಮತ್ತೆ ವಿಳಂಬ

ದೆಹಲಿ: ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್ಎಸ್) ಕಳುಹಿಸುವ ಮಹತ್ವಾಕಾಂಕ್ಷೆಯ 'ಆ್ಯಕ್ಸಿಯಂ4' ಮಿಷನ್ ಮತ್ತೆ ಮುಂದೂಡಿಕೆಯಾಗಿದೆ. ಜೂನ್ 22ರ ಭಾನುವಾರ ನಡೆಯಲಿರುವ ಉಡಾವಣೆಯಿಂದ ಹಿಂದೆ ಸರಿಯಲು ನಾಸಾ ನಿರ್ಧರಿಸಿದ್ದು, ಮುಂಬರುವ ದಿನಗಳಲ್ಲಿ ಹೊಸ ಉಡಾವಣಾ ದಿನಾಂಕವನ್ನು ನಿಗದಿಪಡಿಸಲಿದೆ ಎಂದು ಆಕ್ಸಿಯಮ್ ಸ್ಪೇಸ್ ಹೇಳಿಕೆಯಲ್ಲಿ ತಿಳಿಸಿದೆ. ಜೂನ್ 11ರಂದು ಫ್ಲಾರಿಡಾದಲ್ಲಿರುವ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಸ್ಪೇಸ್ ಎಕ್ಸ್‌ನ ಫಾಲ್ಕನ್ 9 ರಾಕೆಟ್ ಅನ್ನು ಉಡಾವಣೆ ಮಾಡಬೇಕಿತ್ತು. ಆದರೆ, ರಾಕೆಟ್‌ನಲ್ಲಿ ಇಂಧನ ಸೋರುತ್ತಿದ್ದ ಕಾರಣ ಕೊನೆಯ ಕ್ಷಣದಲ್ಲಿ ಉಡಾವಣೆಯನ್ನು ರದ್ದು ಮಾಡಲಾಗಿತ್ತು.

198 ಮೃತದೇಹದ ಗುರುತು ಪತ್ತೆ

ಅಹಮದಾಬಾದ್: ಏರ್ ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟವರ ಪೈಕಿ ಈವರೆಗೆ ಒಟ್ಟು 215 ಮಂದಿ ಗುರುತು ಪತ್ತೆಯಾಗಿದ್ದು, 198 ಮೃತದೇಹಗಳನ್ನು ಸಂಬಂಧಪಟ್ಟ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಒಟ್ಟು 215 ಡಿಎನ್ಎ ವರದಿಗಳು ಮ್ಯಾಚ್ ಆಗಿವೆ. ಈ ಪೈಕಿ 198 ಮೃತದೇಹಗಳನ್ನ ಹಸ್ತಾಂತರಿಸಲಾಗಿದೆ. ಈ ಪೈಕಿ 149 ಭಾರತೀಯರು, 7 ಪೋರ್ಚುಗೀಸ್, 32 ಬ್ರಿಟಿಷ್ ಮತ್ತು ಒಬ್ಬ ಕೆನಡಾ ಪ್ರಜೆಯ ಮೃತದೇಹಗಳು ಪತ್ತೆಯಾಗಿವೆ ಎಂದು ಅಹಮದಾಬಾದ್ ಸಿವಿಲ್ ಹಾಸ್ಪಿಟಲ್ ಅಧೀಕ್ಷಕ ರಾಕೇಶ್ ಜೋಶಿ ತಿಳಿಸಿದ್ದಾರೆ.

ಟೆಲಿಗ್ರ್ಯಾಂ ಸಿಇಒ ಆಸ್ತಿ 100 ಮಕ್ಕಳಿಗೆ ಹಂಚಿಕೆ

ವಾಷಿಂಗ್ಟನ್: ಟೆಲಿಗ್ರ್ಯಾಮ್ ಸಂಸ್ಥಾಪಕ ಮತ್ತು ಸಿಇಒ ಪಾವೆಲ್ ಡುರೋವ್ ತಮ್ಮ 13.9 ಶತಕೋಟಿ ಡಾಲರ್ ಮೌಲ್ಯದ ಸಂಪತ್ತನ್ನು ತಮ್ಮ 100 ಮಕ್ಕಳಿಗೆ ಬಿಟ್ಟು ಕೊಡಲು ನಿರ್ಧರಿಸಿದ್ದಾರೆ. ಫ್ರಾನ್ಸ್‌ನ ಲೆ ಪಾಯಿಂಟ್ ನಿಯತಕಾಲಿಕೆಗೆ ನೀಡಿದ ಸಂದರ್ಶನದಲ್ಲಿ, 40 ವರ್ಷದ ಟೆಕ್ ಉದ್ಯಮಿ ತಮ್ಮ ಯೋಜನೆಯ ವಿವರಗಳನ್ನು ಬಹಿರಂಗಪಡಿಸಿದ್ದಾರೆ.

ತಮ್ಮ ನಿಗೂಢ ಸಾರ್ವಜನಿಕ ವ್ಯಕ್ತಿತ್ವಕ್ಕೆ ಹೆಸರಾದ ಡುರೊವ್, ಮೂರು ವಿಭಿನ್ನ ಮಹಿಳೆಯರೊಂದಿಗೆ ಆರು ಮಕ್ಕಳಿಗೆ ಜೈವಿಕ ತಂದೆಯಾಗಿದ್ದೇನೆ ಎಂದು ಹೇಳಿದ್ದಾರೆ. ಕಳೆದ 15 ವರ್ಷಗಳಿಂದ, ಬಿಲಿಯ ನೇರ್ ವೀರ್ಯ ದಾನ ಮಾಡುತ್ತಿದ್ದಾರೆ. ಇದರ ಪರಿ ಣಾಮವಾಗಿ 100ಕ್ಕೂ ಹೆಚ್ಚು ಮಕ್ಕಳ ಜನನವಾಗಿದೆ. ನನ್ನ ಮಕ್ಕಳ ನಡುವೆ ನನಗೆ ಯಾವುದೇ ವ್ಯತ್ಯಾಸವಿಲ್ಲ. ಅವರೆಲ್ಲರೂ ನನ್ನ ಮಕ್ಕಳು ಮತ್ತು ಎಲ್ಲರಿಗೂ ಒಂದೇ ರೀತಿಯ ಹಕ್ಕುಗಳಿರುತ್ತವೆ. ಎಂದು ಪಾವೆಲ್ ಡುರೋವ್ ಹೇಳಿದ್ದಾರೆ.

ಇಂದಿನಿಂದ ಜುಲೈ 15ರ ತನಕ 38 ಅಂತಾರಾಷ್ಟ್ರೀಯ ಮಾರ್ಗ ಕಡಿತ, ಸುರಕ್ಷತೆ ಬಿಗಿಗೊಳಿಸಿದ ಟಾಟಾ ಸಂಸ್ಥೆ

ಒಂದೇ ದಿನ ಏರ್ ಇಂಡಿಯಾದ 9 ವಿಮಾನ ಹಾರಾಟ ರದ್ದು

ದೆಹಲಿ: ಅಹಮದಾಬಾದ್ ವಿಮಾನ ದುರಂತದ ಬಳಿಕ ಎಚ್ಚೆತ್ತುಕೊಂಡಿರುವ ಏರ್ ಇಂಡಿಯಾ ಸಂಸ್ಥೆ ಈಗ ತನ್ನ ಎಲ್ಲ ವಿಮಾನಗಳ ತಾಂತ್ರಿಕ ಪರಿಶೀಲನೆಗೆ ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಶುಕ್ರವಾರ ದೇಶಾದ್ಯಂತ 8 ವಿಮಾನಗಳ ಹಾರಾಟ ರದ್ದುಗೊಳಿಸಿದೆ. ಜೊತೆಗೆ ಜೂನ್ 21 ಮತ್ತು ಜುಲೈ 15 ರ ನಡುವೆ ವಾರಕ್ಕೆ 38 ಅಂತರರಾಷ್ಟ್ರೀಯ ವಿಮಾನಗಳನ್ನು ಕಡಿತಗೊಳಿಸುವುದಾಗಿ ಮತ್ತು ಮೂರು ವಿದೇಶಿ ಮಾರ್ಗಗಳಲ್ಲಿ ಸೇವೆಗಳನ್ನು ಸ್ಥಗಿತಗೊಳಿಸುವುದಾಗಿ ಏರ್ ಇಂಡಿಯಾ ತಿಳಿಸಿದೆ.

3 ವಿದೇಶಿ ತಾಣಗಳಲ್ಲಿ ವಿಮಾನ ಸಂಚಾರ ಇರುವುದಿಲ್ಲ ಎಂದು ಏರ್ ಇಂಡಿಯಾ ತಿಳಿಸಿದೆ. ಇದೇ ವೇಳೆ ದೆಹಲಿ- ಪುಣೆ ನಡುವಣ ಏರ್ ಇಂಡಿಯಾ ವಿಮಾನಕ್ಕೆ ಶುಕ್ರವಾರ ಹಕ್ಕಿ ಡಿಕ್ಕಿ ಬಡಿದಿದ್ದು ಪ್ರಯಾಣ ರದ್ದು ಮಾಡಲಾಗಿದೆ.

ಜೂ.12ರ ಅಹಮದಾಬಾದ್ ವಿಮಾನ ದುರಂತದ ಬಳಿಕ ಏರ್ ಇಂಡಿಯಾ ವಿಮಾನಗಳಲ್ಲಿ ಒಂದಿಲ್ಲೊಂದು ದೋಷಗಳು ಕಾಣಿಸಿಕೊಳ್ಳುತ್ತಲೇ ಇದೆ. ಹೀಗಾಗಿ ವಿಮಾನಗಳಲ್ಲಿನ ತಾಂತ್ರಿಕ ಸಮಸ್ಯೆ ಹಾಗೂ ಇನ್ನಿತರ ಪರಿಶೀಲನೆ ನಡೆಸಲು ಮುಂದಾಗಿದೆ. ಜೂನ್ 20ರಂದು ಏರ್ ಇಂಡಿಯಾದ ಎಂಟು ದೇಶೀಯ ಹಾಗೂ ಅಂತಾರಾಷ್ಟ್ರೀಯ ವಿಮಾನಗಳನ್ನು ರದ್ದುಗೊಳಿಸಲಾಗಿದೆ.

ಯಾವ ಯಾವ ವಿಮಾನಗಳು ರದ್ದು?: ಅಂತಾರಾಷ್ಟ್ರೀಯ ವಿಮಾನಗಳಾದ ಎಐ 906 ದುಬೈನಿಂದ ಚೆನ್ನೈಗೆ, ಎಐ308 ದೆಹಲಿಯಿಂದ ಮೆಲ್ಬೋರ್ನ್‌ಗೆ, ಎಐ309 ಮೆಲ್ಬೋರ್ನ್‌ನಿಂದ ದೆಹಲಿಗೆ, ಎಐ2204 ದುಬೈನಿಂದ ಹೈದರಾಬಾದ್‌ಗೆ ಹಾಗೂ ದೇಶೀಯ ವಿಮಾನಗಳಾದ ಎಐ874 ಪುಣೆಯಿಂದ ದೆಹಲಿಗೆ, ಎಐ456 ಅಹಮದಾಬಾದ್‌ನಿಂದ ದೆಹಲಿಗೆ, ಎಐ2872 ಹೈದರಾಬಾದ್‌ನಿಂದ ಮುಂಬೈಗೆ, ಎಐ571 ಚೆನ್ನೈನಿಂದ ಮುಂಬೈಗೆ ಸಂಚರಿಸಬೇಕಿದ್ದ ವಿಮಾನಗಳು ರದ್ದಾಗಿವೆ. ಹೀಗಾಗಿ ಪ್ರಯಾಣಿಕರಿಗೆ ಟಿಕೆಟ್ ರದ್ದತಿ ಹಾಗೂ ಮರುಹೊಂದಿಕೆ, ಸಂಪೂರ್ಣ ಮರುಪಾವತಿ ನೀಡುವುದಾಗಿ ತಿಳಿಸಿದೆ.

ಇದಲ್ಲದೆ ಉತ್ತರ ಅಮೆರಿಕ, ಯುರೋಪ್, ಆಸ್ಟ್ರೇಲಿಯಾ ಮತ್ತು ದೂರದ ಪೂರ್ವ ನಗರಗಳನ್ನು ಸಂಪರ್ಕಿಸುವ 16 ಅಂತಾರಾಷ್ಟ್ರೀಯ ಮಾರ್ಗಗಳಲ್ಲಿ ವಿಮಾನಯಾನ ಸ್ಥಗಿತಗೊಳ್ಳಲಿದೆ. ಜೊತೆಗೆ ಉತ್ತರ ಅಮೆರಿಕಾದ ಮಾರ್ಗಗಳಾದ ದೆಹಲಿ-ಟೊರೊಂಟೊ, ದೆಹಲಿ-ವ್ಯಾಂಕೋವರ್, ದೆಹಲಿ-ಸ್ಯಾನ್ ಫ್ರಾನ್ಸಿಸ್ಕೊ, ದೆಹಲಿ-ಚಿಕಾಗೊ ಮತ್ತು ದೆಹಲಿ-ವಾಷಿಂಗ್ಟನ್‌ಗೆ ವಿಮಾನ ಸಂಚಾರ ಕಡಿಮೆಯಾಗಲಿದೆ.

ದೆಹಲಿ-ನೈರೋಬಿ, ಅಮೃತಸರ-ಲಂಡನ್ ಮತ್ತು ಗೋವಾ-ಲಂಡನ್ ಮಾರ್ಗಗಳಲ್ಲಿ ಜು.15 ರವರೆಗೆ ವಿಮಾನಯಾನ ಸ್ಥಗಿತಗೊಳ್ಳಲಿದೆ. ವಾರಕ್ಕೆ ನಾಲ್ಕು ವಿಮಾನಗಳನ್ನು ಹೊಂದಿರುವ ದೆಹಲಿ-ನೈರೋಬಿ ಮಾರ್ಗ, ವಾರಕ್ಕೆ ತಲಾ ಮೂರರಂತೆ ವಿಮಾನಗಳನ್ನು ಹೊಂದಿರುವ ಅಮೃತಸರ-ಲಂಡನ್ (ಗ್ಯಾಟ್ವಿಕ್) ಹಾಗೂ ಗೋವಾ (ಮೋಪಾ)-ಲಂಡನ್ (ಗ್ಯಾಟ್ವಿಕ್) ಮಾರ್ಗಗಳಲ್ಲಿ ವಿಮಾನ ಸಂಚರಿಸುವುದಿಲ್ಲ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ. ಏರ್ ಇಂಡಿಯಾ ವಿಮಾನ ಅಪಘಾತದ ನಂತರದಿಂದ ಈವರೆಗೆ 60 ವಿಮಾನಗಳು ರದ್ದಾಗಿದ್ದು, ವಿಮಾನ ದುರಂತದ ನಂತರ ವಿಮಾನಗಳ ಪರಿಶೀಲನೆ ಹಾಗೂ ತನಿಖಾ ದೃಷ್ಟಿಯಿಂದ ಈ ಬೆಳವಣಿಗೆ ನಡೆದಿದೆ. ಮುಂದಿನ ದಿನಗಳಲ್ಲಿ ವಿಮಾನಗಳ ಪರಿಶೀಲನೆ ಹೆಚ್ಚಾಗಲಿದೆ ಎಂದು ಸಂಸ್ಥೆ ತಿಳಿಸಿದೆ. ಹೆಚ್ಚಿನ ವಿವರಗಳಿಗೆ http://airindia.com/in/en/manage/flight&status.html ವೆಬ್ ಸೈಟ್ ಅಥವಾ 011 69329333, 011 69329999 ಈ ಗ್ರಾಹಕ ಸೇವಾ ಸಂಖ್ಯೆಗಳಿಗೆ ಕರೆ ಮಾಡಬಹುದು ಟಾಟಾ ಸಂಸ್ಥೆ ತಿಳಿಸಿದೆ.

ಏರ್ ಇಂಡಿಯಾ ಬುಕಿಂಗ್ ಕುಸಿತ

ಬೆಂಗಳೂರು: ಅಹಮದಾಬಾದ್ ಅಪಘಾತದ ನಂತರ, ಏರ್ ಇಂಡಿಯಾ ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರ್ಗಗಳಲ್ಲಿ ಬುಕಿಂಗ್‌ಗಳ ಪ್ರಮಾಣದಲ್ಲಿ ಶೇಕಡಾ 20 ರಷ್ಟು ಕುಸಿದಿದ್ದು, ಟಿಕೆಟ್ ದರಗಳು ಕೂಡ ಶೇಕಡಾ 15 ರಷ್ಟು ಇಳಿಕೆಯಾಗಿವೆ. ಭಾರತೀಯ ಪ್ರವಾಸ ನಿರ್ವಾಹಕರ ಸಂಘದ (ಐಎಟಿಒ) ಅಧ್ಯಕ್ಷ ರವಿ ಗೋಸೈನ್ ಈ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದು, ನಮ್ಮ ಅಂದಾಜಿನ ಪ್ರಕಾರ ಅಂತರರಾಷ್ಟ್ರೀಯ ಮಟ್ಟದಲ್ಲಿ ಶೇಕಡಾ 18 ರಿಂದ 22 ಮತ್ತು ದೇಶೀಯವಾಗಿ ಶೇಕಡಾ 10 ರಿಂದ 12 ರಷ್ಟು ಕುಸಿತ ಕಂಡುಬಂದಿದೆ ಎಂದು ಹೇಳಿದ್ದಾರೆ. ಇದೇ ವೇಳೆ ದೇಶೀಯವಾಗಿ ಟಿಕೆಟ್ ಬೆಲೆಗಳು ಶೇಕಡಾ 8 ರಿಂದ 12 ರಷ್ಟು ಕಡಿಮೆಯಾಗಿದೆ. ವಿಶೇಷವಾಗಿ ಏರ್ ಇಂಡಿಯಾ, ಇಂಡಿಗೊ ಮತ್ತು ಅಕಾಸದಂತಹ ಕಡಿಮೆ-ವೆಚ್ಚದ ವಿಮಾನಯಾನ ಸಂಸ್ಥೆಗಳೊಂದಿಗೆ ಸ್ಪರ್ಧಿಸುವ ಮಾರ್ಗಗಳಲ್ಲಿ ದರ ಕಡಿತವಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ, ಯುರೋಪ್ ಮತ್ತು ಆಗ್ನೇಯ ಏಷ್ಯಾಕ್ಕೆ ದರಗಳು ಶೇಕಡಾ 10 ರಿಂದ 15 ರಷ್ಟು ಕಡಿಮೆಯಾಗಿದೆ.

ಹಕ್ಕಿ ಡಿಕ್ಕಿ; ಪ್ರಯಾಣ ರದ್ದು

ದೆಹಲಿ: ಪುಣೆಯಿಂದ ರಾಷ್ಟ್ರ ರಾಜಧಾನಿ ದೆಹಲಿಗೆ ತೆರಳಬೇಕಿದ್ದ ಏರ್ ಇಂಡಿಯಾ ವಿಮಾನಕ್ಕೆ ಶುಕ್ರವಾರ ಹಕ್ಕಿ ಡಿಕ್ಕಿ ಹೊಡೆದಿದೆ. ವಿಮಾನವು ಪುಣೆಯಲ್ಲಿ ಸುರಕ್ಷಿತವಾಗಿ ಇಳಿದು ದೆಹಲಿಗೆ ಮರಳಲು ಸಿದ್ಧತೆ ನಡೆಸುತ್ತಿದ್ದಾಗ ಈ ಡಿಕ್ಕಿ ಸಂಭವಿಸಿದೆ. ಹಾರಲು ನಿಗದಿಯಾಗಿದ್ದ ಎಐ 2470 ವಿಮಾನವು ಪುಣೆಯಲ್ಲಿ ಸುರಕ್ಷಿತವಾಗಿ ನಿಲ್ದಾಣದಲ್ಲಿ ಇಳಿದು ಹಿಂದಿರುವಾಗ ಈ ಘಟನೆ ಸಂಭವಿಸಿದೆ. ವಿಮಾನವನ್ನು ಸಂಪೂರ್ಣವಾಗಿ ತಪಾಸಣೆಗೆ ಒಳಪಡಿಸಲಾಗುತ್ತಿದೆ ಎಂದು ಏರ್ ಇಂಡಿಯಾ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಈ ಅಡಚಣೆಯಿಂದ ತೊಂದರೆಗೊಳಗಾದ ಪ್ರಯಾಣಿಕರಿಗೆ ಏರ್ ಇಂಡಿಯಾ ಕ್ಷಮೆಯಾಚಿಸಿದೆ. ನಮ್ಮ ಪ್ರಯಾಣಿಕರು ಮತ್ತು ಸಿಬ್ಬಂದಿಯ ಸುರಕ್ಷತೆಯು ನಮ್ಮ ಪ್ರಮುಖ ಆದ್ಯತೆಯಾಗಿದೆ. ಆದ್ದರಿಂದ ವಿಮಾನವನ್ನು ರದ್ದುಗೊಳಿಸಲಾಗಿದೆ ಎಂದು ಸಂಸ್ಥೆ ಹೇಳಿದೆ. ಪ್ರಯಾಣವನ್ನು ಮುಂದೂಡಲು ಆಯ್ಕೆ ಮಾಡುವವರಿಗೆ ವಿಮಾನಯಾನ ಸಂಸ್ಥೆಯು ಪೂರ್ಣ ಮರುಪಾವತಿ ನೀಡುತ್ತೇವೆ ಎಂದು ಏರ್ ಇಂಡಿಯಾ ಹೇಳಿದೆ.

ಬೆಂಗಳೂರು-ಸೂರತ್ ವಿಮಾನದಲ್ಲಿ ದುರ್ವರ್ತನೆ, 2 ಗಂಟೆ ಪ್ರಯಾಣ ವಿಳಂಬ

ವಿಮಾನ ಪತನ ಆವಾಜ್: ವೈದ್ಯೆಯ ಬಂಧನ

ಬೆಂಗಳೂರು: ಬೆಂಗಳೂರಿನಿಂದ ಸೂರತ್‌ಗೆ ತೆರಳುತ್ತಿದ್ದ ಏರ್ ಇಂಡಿಯಾ ವಿಮಾನದಲ್ಲಿ ವಿಮಾನ ಸಿಬ್ಬಂದಿ ಜೊತೆಗೆ ಅನುಚಿತವಾಗಿ ವರ್ತಿಸಿದ್ದಲ್ಲದೆ ವಿಮಾನ ಪತನ ಗೊಳಿಸುವ ಬೆದರಿಕೆ ಹಾಕಿದ ಹಿನ್ನೆಲೆಯಲ್ಲಿ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎ) ವೈದ್ಯೆ ಯೊಬ್ಬರನ್ನು ಏರ್ ಇಂಡಿಯಾ ವಿಮಾನದಿಂದ ಕೆಳಗಿಳಿಸಿ, ಪೊಲೀಸರಿಗೆ ಒಪ್ಪಿಸಿದದ ಘಟನೆ ಗುರುವಾರ ನಡೆದಿದೆ. ವೈದ್ಯೆ ಮೋಹನ್‌ಭಾಯಿ (36) ಎಂಬುವವರು ಬ್ಯಾಗ್ ಅನ್ನು ಸೀಟಿನ ಮೇಲಿನ ಕಂಪಾ ರ್ಟ್‌ಮೆಂಟ್‌ನಲ್ಲಿ ಇಡಲು ನಿರಾಕರಿಸಿದ್ದಲ್ಲದೆ, ವಿಮಾನದ ಸಿಬ್ಬಂದಿಯನ್ನು ನಿಂದಿಸಿ, ವಿಮಾನವನ್ನು ಪತನಗೊಳಿಸುವುದಾಗಿ ಬೆದರಿಕೆ ಹಾಕಿದ್ದಾರೆ. ಈ ಹಿನ್ನೆಲೆಯಲ್ಲಿ ಕೆಐಎಯ ಭದ್ರತಾ ವಿಭಾಗದ ಅಸೋಸಿಯೇಟ್ ಮ್ಯಾನೇ ಜರ್ ಅಗ್ನಿಮಿತ್ರ ಬಹಿನಿಪತಿ (39) ಬಿಐಎಎಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪೊಲೀಸರು ಮಹಿ ಳೆಯನ್ನು ಬಂಧಿಸಿ, ನ್ಯಾಯಾಲಯದ ಮುಂದೆ ಹಾಜರುಪಡಿಸಿದರು. ಬಳಿಕ ಮಹಿಳೆಗೆ ಜಾಮೀನು ನೀಡಲಾಯಿತು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಆಗಿದ್ದೇನು...?

ಆಯುರ್ವೇದ ವೈದ್ಯೆ ಮೋಹನ್‌ಭಾಯಿ ಎರಡು ಬ್ಯಾಗ್‌ಗಳನ್ನು ಹಿಡಿದು ಚೆಕ್ ಇನ್ ಕೌಂಟರ್ ಅನ್ನು ದಾಟಿದ್ದರು. ಬಳಿಕ ಒಂದು ಬ್ಯಾಗ್ ಅನ್ನು ಸಿಬ್ಬಂದಿ ಕ್ಯಾಬಿನ್ ಬಳಿ ಇಟ್ಟಿದ್ದು, ಮತ್ತೊಂದು ಬ್ಯಾಗ್ ಅನ್ನು ತನ್ನ ಸೀಟ್ ಹತ್ತಿರ ಒಯ್ದಿದ್ದಾರೆ. ಈ ವೇಳೆ ಬ್ಯಾಗ್ ಅನ್ನು ಸೀಟಿನ ಮೇಲಿನ ಕಂಪಾರ್ಟ್‌ಮೆಂಟ್‌ನಲ್ಲಿ ಇಡಲು ಸಿಬ್ಬಂದಿ ಮನವಿ ಮಾಡಿದ್ದಾರೆ. ವೈದ್ಯೆ ಇದಕ್ಕೆ ನಿರಾಕರಿ ಸಿದ್ದು, ಬ್ಯಾಗ್ ಅನ್ನು ಕ್ಯಾಬಿನ್ ಬಳಿಯೇ ಇಟ್ಟು ಕೊಳ್ಳುವಂತೆ ಪಟ್ಟು ಹಿಡಿದಿದ್ದಾರೆ. ಇತರ ಪ್ರಯಾಣಿಕರು ಆಕೆಗೆ ಸಮಾಧಾನ ಮಾಡಲು ಪ್ರಯತ್ನಿಸಿದರೂ, ಅವರ ಮೇಲೂ ಕೂಗಾಡಿ ದ್ದಾರೆನ್ನಲಾಗಿದೆ. ಬ್ಯಾಗನ್ನು ಬದಿಗೆ ಸರಿಸಿದರೆ ವಿಮಾನ ಪತನಗೊಳ್ಳುವಂತೆ ಮಾಡುತ್ತೇನೆ ಎಂದೂ ಬೆದರಿಸಿದ್ದಾರೆಂದು ದೂರಲಾಗಿದೆ.

5ನೇ ತಲೆಮಾರಿನ 40 ಸ್ಟೆಲ್ತ್ ಫೈಟರ್ ಜೆಟ್ ಪೂರೈಸಲು ಚೀನಾ ಮೆಗಾ ಡೀಲ್

ಪಾಕಿಸ್ತಾನಕ್ಕೆ ಚೀನಾ ಸ್ಟೆಲ್ತ್ ಫೈಟರ್ ಜೆಟ್

ಬೀಜಿಂಗ್: ಭಾರತವು ತನ್ನದೇ ಆದ ಸ್ಟೆಲ್ತ್ ಫೈಟರ್ ಜೆಟ್ ನಿರ್ಮಿಸುವ ಯೋಜನೆಗೆ ಇತ್ತೀಚೆಗೆ ಅನುಮೋದನೆ ನೀಡಿದೆ. ಇದರ ಬೆನ್ನಲ್ಲೇ ಚೀನಾ ದೇಶವು ಪಾಕಿಸ್ತಾನಕ್ಕೆ 5ನೇ ತಲೆಮಾರಿನ 40 ಜೆ-35 ಸ್ಟೆಲ್ತ್ ಫೈಟರ್ ಜೆಟ್ ಪೂರೈಸಲು ಮುಂದಾಗಿದೆ. ಈ ಮೂಲಕ ಸ್ಟೆಲ್ತ್ ತಂತ್ರಜ್ಞಾನ ನಿರ್ವಹಿಸುವ ಕೆಲವೇ ದೇಶಗಳ ಗುಂಪಿಗೆ ಸೇರಲು ಪಾಕ್ ಸಜ್ಜಾಗಿದೆ.

5ನೇ ತಲೆಮಾರಿನ ಸ್ಟೆಲ್ತ್ ಫೈಟರ್ ಜೆಟ್ ನಿರ್ಮಿಸುವ ಯೋಜನೆಗೆ ಕೆಲ ದಿನಗಳ ಹಿಂದೆಯಷ್ಟೇ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅನುಮೋದನೆ ನೀಡಿದ್ದರು. ಇದು ಅವಳಿ-ಎಂಜಿನ್ ಹೊಂದಿರುವ 5ನೇ ತಲೆಮಾರಿನ ಮಿಲಿಟರಿ ವಿಮಾನವಾಗಿದೆ. ಈ ಯೋಜನೆಯನ್ನು ಎಚ್ಎಎಲ್ ಸಂಸ್ಥೆಗೆ ನೀಡಲಾಗಿದೆ. ಆದರೆ ಈ ವಿಮಾನ ವಾಯುಪಡೆಗೆ ಸೇರಿಸಿಕೊಳ್ಳಲು ಕನಿಷ್ಠ ಒಂದು ದಶಕ ಬೇಕಾಗುತ್ತದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಎಎಂಸಿಎ 2035ರ ವೇಳೆಗೆ ಭಾರತ ಸ್ಟೆಲ್ತ್ ಫೈಟರ್ ಜೆಟ್ ನಿರ್ಮಿಸುವ ಯೋಜನೆ ಪೂರ್ಣಗೊಳ್ಳಲಿದೆ.

ಈ ಕುರಿತು ರಕ್ಷಣಾ ವಿಶ್ಲೇಷಕ ಗ್ರೂಪ್ ಕ್ಯಾಪ್ಟನ್ ಅಜಯ್ ಅಹ್ಲಾವತ್ ಮಾತನಾಡಿದ್ದು, ಪಾಕಿಸ್ತಾನದ ಫೈಟರ್ ಪೈಲಟ್‌ಗಳ ಒಂದು ಟೀಮ್ 6 ತಿಂಗಳಿಗಿಂತ ಹೆಚ್ಚು ಸಮಯದಿಂದ ಚೀನಾದಲ್ಲಿದೆ. ಸ್ಟೆಲ್ತ್ ಜೆಟ್ ಅನ್ನು ಸೇನೆಗೆ ಸೇರ್ಪಡೆಗೊಳಿಸುವುದಕ್ಕೂ ಮುನ್ನವೇ ತರಬೇತಿ ಪಡೆದುಕೊಳ್ಳಲಾಗುತ್ತಿದೆ. ಚೀನಾ FC-31 ಜೆ-35ನ ರೂಪಾಂತರವಾಗಿದೆ ಎಂದು ತಿಳಿಸಿದ್ದಾರೆ.

ಏನಿದು ಸ್ಟೆಲ್ತ್ ತಂತ್ರಜ್ಞಾನ ?

ಸ್ಟೆಲ್ತ್ ತಂತ್ರಜ್ಞಾನ ಅಂದ್ರೆ, ಕಡಿಮೆ ಕಣ್ತಪ್ಪಿಸುವ ತಂತ್ರಜ್ಞಾನ. ಶತ್ರು ದೇಶದ ರಾಡಾರ್, ಸೋನಾರ್‌ಗಳ ಕಣ್ತಪ್ಪಿಸಿ ಈ ಯುದ್ಧ ವಿಮಾನಗಳ ಮೂಲಕ ದಾಳಿ ನಡೆಸಬಹುದು. ಮುಖ್ಯವಾಗಿ ಮಿಲಿಟರಿ ವ್ಯವಸ್ಥೆಗಳಾದ ಫೈಟರ್ ಜೆಟ್, ಹಡಗು ಮತ್ತು ಕ್ಷಿಪಣಿಗಳಿಗೆ ಈ ತಂತ್ರಜ್ಞಾನವನ್ನು ಅಳವಡಿಸಲಾಗುತ್ತದೆ.

ಉನ್ನತಾಧಿಕಾರ ಸಮಿತಿ ಪುನರ್ರಚಿಸಿದ ಫಡ್ನವಿಸ್ ಸರಕಾರ

ಗಡಿ ತಂಟೆ ಇತ್ಯರ್ಥಕ್ಕೆ ಮಹಾ ಸಮಿತಿ

ಮುಂಬೈ: ಕರ್ನಾಟಕದೊಂದಿಗಿನ ರಾಜ್ಯದ ಗಡಿ ವಿವಾದವನ್ನು ಪರಿಹರಿಸಲು ಮಹಾರಾಷ್ಟ್ರ ಸರ್ಕಾರವು ಉನ್ನತಾಧಿಕಾರ ಸಮಿತಿಯನ್ನು ಪುನರಚಿಸಿದೆ. ಗಡಿ ವಿವಾದಕ್ಕೆ ಸಂಬಂಧಿಸಿದ ನಿರ್ಣಾಯಕ ನಿರ್ಧಾರಗಳನ್ನು ಪಕ್ಷಾತೀತ ಮತ್ತು ಪ್ರತಿನಿಧಿ ಸಂಸ್ಥೆಯಿಂದ ಒಮ್ಮತದಿಂದ ತೆಗೆದುಕೊಳ್ಳಬೇಕಾಗಿರುವುದರಿಂದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ನೇತೃತ್ವದ ಸಮಿತಿಯನ್ನು ಪುನರಚಿಸಲಾಗಿದೆ ಎಂದು ಸರಕಾರದ ನಿರ್ಣಯದಲ್ಲಿ ತಿಳಿಸಲಾಗಿದೆ.

ಮಹಾರಾಷ್ಟ್ರದಲ್ಲಿ ಹೊಸ ಸರ್ಕಾರಗಳು ಅಧಿಕಾರ ವಹಿಸಿಕೊಂಡಂತೆ ಸಮಿತಿಯನ್ನು ಪುನರಚಿಸಲಾಗುತ್ತಿದೆ. ಹಿಂದಿನ ಮಹಾಯುತಿ ಮೈತ್ರಿಕೂಟವು ಏಕನಾಥ್ ಶಿಂಧೆ ಅವರನ್ನು ಮುಖ್ಯಮಂತ್ರಿಯಾಗಿ ನೇಮಿಸಿದ ನಂತರ, ನವೆಂಬರ್ 22, 2022 ರಂದು ಇದೇ ರೀತಿಯ ಹೊಸ ಸಮಿತಿ ರಚಿಸಿತ್ತು. ಹೊಸ ಸಮಿತಿಯಲ್ಲಿ ಡಿಸಿಎಂಗಳಾದ ಶಿಂಧೆ, ಅಜಿತ್ ಪವಾರ್ ಮತ್ತು ಮಾಜಿ ಸಿಎಂಗಳಾದ ನಾರಾಯಣ್ ರಾಣೆ, ಶರದ್ ಪವಾರ್ ಮತ್ತು ಪೃಥ್ವಿರಾಜ್ ಚವಾಣ್ ಕೂಡ ಸೇರಿದ್ದಾರೆ. ಎನ್‌ಸಿಪಿ ಶಾಸಕರಾದ ರೋಹಿತ್ ಪಾಟೀಲ್ ಮತ್ತು ಜಯಂತ್ ಪಾಟೀಲ್, ಸಚಿವರಾದ ಚಂದ್ರಕಾಂತ್ ಪಾಟೀಲ್, ಶಂಭುರಾಜ್ ದೇಸಾಯಿ, ಪ್ರಕಾಶ್ ಅಬಿತ್ತರ್, ಸುರೇಶ್ ಖಾಡೆ, ಬಿಜೆಪಿ ಶಾಸಕರಾದ ಸುಧೀರ್ ಗಾಡ್ಗಿಳ್, ಸಚಿನ್ ಕಲ್ಯಾಣ್ ಶೆಟ್ಟಿ, ವಿಧಾನಸಭೆ ಮತ್ತು ಪರಿಷತ್ತಿನ ವಿರೋಧ ಪಕ್ಷದ ನಾಯಕರು ಸಮಿತಿಯ ಇತರ ಸದಸ್ಯರಲ್ಲಿ ಸೇರಿದ್ದಾರೆ.

ಕರ್ನಾಟಕ ಸರ್ಕಾರ
ಮೈಸೂರು ಮಹಾನಗರಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ,
ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು.

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್-6/ 323 /2025-26 ದಿನಾಂಕ:-20-06-2025

ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಪಾಲಿಕೆ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗೆ ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

				ಸಂಜೆ 4.30 ಗಂಟೆ ನಂತರ	ಬೆಳಿಗ್ಗೆ 11.00 ಗಂಟೆ	ಬೆಳಿಗ್ಗೆ 11.30 ಗಂಟೆ ನಂತರ
ಕ್ರ ಸಂ	ವಿವರ	ಕಾಮಗಾರಿ ಸಂಖ್ಯೆ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಕೆ.ಪಿಪಿ ಮೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ
1	Kw-1	1	5.64	23.06.2025	07.07.2025	08.07.2025
2	Kc-7	3	7.00	23.06.2025	07.07.2025	08.07.2025
3	EOI	1	-	23.06.2025	07.07.2025	08.07.2025

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/-
ಕಾರ್ಯಪಾಲಕ ಅಭಿಯಂತರರು
ನೀಸ & ಒಚ (ಪೂರ್ವ) ವಿಭಾಗ
ಮೈಸೂರು ಮಹಾನಗರ ಪಾಲಿಕೆ,
ಮೈಸೂರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ-5/.ಟೆಂಡರ್.ಅಧಿಸೂಚನೆ/2025-26/1672 ದಿನಾಂಕ:20.06.2025

:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಇಂಜೀಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಲಯದಿಂದ MP and MLC Lad 8443 (ಠೇವಣಿ)ಯಲ್ಲಿ (03) ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ ಇಂಡೆಂಟ್ ಸಂಖ್ಯೆ: 22266 ಮತ್ತು 22269-Work reserved for SC Category and 22339-Gen 2) ಕಾಮಗಾರಿ ಅಂದಾಜು ಮೊತ್ತ: **ಕನಿಷ್ಠ ರೂ. 20.00 ಲಕ್ಷಗಳು ಗರಿಷ್ಠ ರೂ. 87.00 ಲಕ್ಷಗಳು,** 3) ಗುತ್ತಿಗೆದಾರರ ಅರ್ಹತೆ ವಿವರ: ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ನಾಲ್ಕನೆ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು, 4) ಇ ಎಮ್ ಡಿ ಮೊತ್ತ: ಕನಿಷ್ಠ ರೂ. 32,000.00 ಗರಿಷ್ಠ ರೂ. 92,500.00, 5) ಪ್ರೀ ಬಿಡ್ ಮೀಟಿಂಗ್: 27.06.2025 (11.00 ಗಂಟೆ), 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಠೀಕರಣ ಕೋರುವ ಕೊನೆಯ ದಿನಾಂಕ: 30.06.2025 (16.00 ಗಂಟೆ), 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 01.07.2025 (16.30 ಗಂಟೆ), 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02.07.2025 (16.30 ಗಂಟೆ), 9) ಆರ್ಥಿಕ ಬಿಡ್ ತೆರೆಯುವ ದಿನಾಂಕ: 03.07.2025 (16.30 ಗಂಟೆ), 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜೀಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 11) ಸೂಚನೆ: ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು, 12) ಅಂತರ್ಜಾಲ ತಾಣದ ವಿಳಾಸ: WWW.e-proc.Karnatak.gov.in, 13) ಗಮನಿಸಬೇಕಾದ ಅಂಶಗಳು: **ಟಿಪ್ಪಣಿ:** 1) ಈ ಕೆಳಗೆ ಸಹಿ ಮಾಡಿರುವವರು ಯಾವೂದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ . 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವೂದೆ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯೂನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ,ಇಲಾಖೆ,ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/233/ಕೆ.ಎಸ್.ಎಂ.ಸಿ.&ಎ/2025-26

ಮೋದಿ ಭಾಗಿ, ಮೈಸೂರಿನ ಯೋಗ ದಾಖಲೆ ಮುರಿಯಲು ಚಂದ್ರಬಾಬು ಸರಕಾರ ಸಿದ್ಧತೆ

ಯೋಗ ಗಿನ್ನೆಸ್ ದಾಖಲೆಗೆ ಆಂಧ್ರ ಸಜ್ಜು

ಅಮರಾವತಿ: ವಿಶ್ವಯೋಗ ದಿನದ ಅಂಗವಾಗಿ ಆಂಧ್ರಪ್ರದೇಶ ಶನಿವಾರ ಆಯೋಜಿಸಿರುವ ಬೃಹತ್ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಬಂದರು ನಗರಿ ವಿಶಾಖಪಟ್ಟಣಂನ ಆರ್‌ಕೆ ಬೀಚ್‌ನಿಂದ ಭೋಗಪುರಂವರೆಗೆ 26 ಕಿ.ಮೀ ಉದ್ದದ ಕಾರಿಡಾರ್‌ನಲ್ಲಿ ಈ ಕಾರ್ಯ ಕ್ರಮ ನಡೆಯಲಿದ್ದು, 3 ಲಕ್ಷಕ್ಕೂ ಹೆಚ್ಚು ಜನರು ಏಕಕಾಲದಲ್ಲಿ ಯೋಗ ಮಾಡಲು ಅವಕಾಶವಿದೆ. ಈ ಮೂಲಕ ಚಂದ್ರಬಾಬು ನಾಯ್ಡು ಸರಕಾರ ಹೊಸ ಗಿನ್ನೆಸ್ ದಾಖಲೆ ಸ್ಥಾಪಿಸಲು ಮುಂದಾಗಿದೆ.

ಈ ಹಿಂದೆ ಅಂತಾರಾಷ್ಟ್ರೀಯ ಯೋಗ ದಿನದಂದು ಲಕ್ಷಕ್ಕೂ ಹೆಚ್ಚು ಯೋಗಪಟುಗಳ ಮೂಲಕ ಯೋಗ ತಾಲೀಮು ನಡೆಸಿ ಸಾಂಸ್ಕೃತಿಕ ನಗರಿ ಮೈಸೂರು ಮಾಡಿದ್ದ ದಾಖಲೆಯನ್ನು ಮುರಿದು ಹೊಸ ದಾಖಲೆ ಮುರಿಯಲು ಆಂಧ್ರ ಸರಕಾರ ಮುಂದಾಗಿದೆ.

ಬೆಳಿಗ್ಗೆ 6:30 ರಿಂದ 8:00 ಗಂಟೆಯವರೆಗೆ ನಡೆಯಲಿರುವ ಈ ಕಾರ್ಯಕ್ರಮವನ್ನು ಗಿನ್ನೆಸ್ ವಿಶ್ವ ದಾಖಲೆ ಸೇರಿದಂತೆ ಹಲವಾರು ದಾಖಲೆಗಳನ್ನು ಸ್ಥಾಪಿಸುವ ಮತ್ತು ಮನ್ನಣೆ ಪಡೆಯುವ ರೀತಿಯಲ್ಲಿ ಆಯೋಜಿಸಲಾಗುವುದು ಎಂದು ಮುಖ್ಯಮಂತ್ರಿ ಎನ್ ಚಂದ್ರಬಾಬು ನಾಯ್ಡು ಹೇಳಿದ್ದಾರೆ. ಜೂನ್ 21 ರಂದು ವಿಶಾಖಪಟ್ಟಣಂನಲ್ಲಿ ಮಾತ್ರವಲ್ಲದೆ ರಾಜ್ಯಾದ್ಯಂತ ಏಕಕಾಲದಲ್ಲಿ ಚಟುವಟಿಕೆಗಳನ್ನು ಆಯೋಜಿಸುವ ಮೂಲಕ ಹಲವಾರು ಲಕ್ಷ ಜನರನ್ನು ಸಜ್ಜುಗೊಳಿಸುವ ಮೂಲಕ ಆಂಧ್ರಪ್ರದೇಶ ಸರಕಾರವು ಯೋಗದಲ್ಲಿ ದಾಖಲೆಗಳ ಸರಮಾಲೆಯನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ. ವಿಶ್ವದಾದ್ಯಂತ ಹಲವಾರು ದೇಶಗಳು ಆಚರಿಸುವ 11 ನೇ ಅಂತರರಾಷ್ಟ್ರೀಯ ಯೋಗ ದಿನವನ್ನು 'ಒಂದು ಭೂಮಿಗಾಗಿ, ಒಂದು ಆರೋಗ್ಯಕ್ಕಾಗಿ' ಎಂಬ ಥೀಮ್ ನೊಂದಿಗೆ ಆಚರಿಸಲಾ ಗುತ್ತಿದೆ. ಸುಮಾರು 25,000 ಬುಡಕಟ್ಟು ವಿದ್ಯಾರ್ಥಿಗಳು 108 ನಿಮಿಷಗಳ ಕಾಲ ಸೂರ್ಯ ನಮಸ್ಕಾರಗಳನ್ನು ಪ್ರದರ್ಶಿಸಲಿದ್ದಾರೆ.



ಏಕಕಾಲದಲ್ಲಿ ಸೂರ್ಯ ನಮಸ್ಕಾರಗಳನ್ನು ಪ್ರದರ್ಶಿಸುವ ಅತಿ ದೊಡ್ಡ ಸಮೂಹ ಮತ್ತು ಅತಿ ಹೆಚ್ಚು ಜನರ ದಾಖಲೆಗಳನ್ನು ನಿರ್ಮಿಸುವುದು ಇದರ ಉದ್ದೇಶವಾಗಿದೆ ಎಂದು ನಾಯ್ಡು ಹೇಳಿದ್ದಾರೆ. ರಾಜ್ಯಾದ್ಯಂತ ಒಂದು ಲಕ್ಷ ಕೇಂದ್ರಗಳಲ್ಲಿ ಯೋಗ ಅವಧಿಗಳನ್ನು ಆಯೋಜಿಸುವುದು ಮತ್ತು ವಿಶಾಖಪಟ್ಟಣದಲ್ಲಿ ಯೋಗ ಚಟುವಟಿಕೆಗಳಲ್ಲಿ ಭಾಗವಹಿಸಲು ಐದು ಲಕ್ಷ ಜನರನ್ನು ಆಕರ್ಷಿಸುವುದು ಸರ್ಕಾರದ ಗುರಿಯಾಗಿದೆ. ವಿಶಾಖಪಟ್ಟಣಂನ ಆರ್‌ಕೆ ಬೀಚ್‌ನಿಂದ ಭೋಗಪುರಂವರೆಗಿನ 26 ಕಿಮೀ ವ್ಯಾಪ್ತಿಯಲ್ಲಿ ವಿಸ್ತಾರವಾದ ವ್ಯವಸ್ಥೆಗಳನ್ನು ಮಾಡಲಾಗಿದೆ. ಏಕಕಾಲದಲ್ಲಿ 3.19 ಲಕ್ಷ ಜನರು ಯೋಗ ಮಾಡಬಹುದು ಎಂದು ಚಂದ್ರಬಾಬು ನಾಯ್ಡು ಹೇಳಿದರು. ರಾಜ್ಯದ ಯೋಗ ದಿನದ ಚಟುವಟಿಕೆಗಳಲ್ಲಿ ಭಾಗವಹಿಸಲು 2.39 ಕೋಟಿ ಮಂದಿ ನೋಂದಣಿ ಮಾಡಿಕೊಂಡಿದ್ದಾರೆ ಎಂದು ಅವರು ಹೇಳಿದರು.ಯೆ ೀಗ ದಿನದ ಪೂರ್ವಭಾವಿಯಾಗಿ, ದಕ್ಷಿಣ ರಾಜ್ಯವು ಯೋಗಾಂಧ್ರ ಅಭಿಯಾನವನ್ನು ಪ್ರಾರಂಭಿಸಿದೆ.

ಸೈಬರ್ ಇತಿಹಾಸದ ಅತಿ ದೊಡ್ಡ ಕನ್ನ | ಗ್ರಾಹಕರ ಪಾಸ್ ವರ್ಡ್ ಲೀಕ್, ಬ್ಯಾಂಕ್ ಖಾತೆಗೂ ಅಪಾಯ |

ಗೂಗಲ್, ಆ್ಯಪಲ್ 1600 ಕೋಟಿ ಪಾಸ್‌ವರ್ಡ್ ಕಳವು

ದೆಹಲಿ: ಗೂಗಲ್ ಮತ್ತು ಆಪಲ್ ಖಾತೆಗಳನ್ನು ಹೊಂದಿರುವ ಬಳಕೆದಾರರ ಪಾಸ್‌ವರ್ಡ್‌ಗಳು ಸೇರಿದಂತೆ 16 ಬಿಲಿಯನ್‌ಗಿಂತಲೂ ಹೆಚ್ಚು ಲಾಗಿನ್ ವಿವರಗಳು ಸೋರಿಕೆಯಾಗಿವೆ. ಇದು ತಂತ್ರಜ್ಞಾನ ಇತಿಹಾಸದಲ್ಲಿಯೇ ಅತಿ ದೊಡ್ಡ ಡೇಟಾ ಸೋರಿಕೆಗಳಲ್ಲಿ ಒಂದು ಎನ್ನಲಾಗಿದೆ. ಇದರಿಂದ ವಿಶ್ವದೆಲ್ಲೆಡೆ ಗ್ರಾಹಕರ ಖಾತೆ ಹ್ಯಾಕ್ ಮಾಡುವ ಅಥವಾ ಬ್ಯಾಂಕ್ ಖಾತೆಗಳಿಗೆ ಕನ್ನ ಹಾಕುವ ಅತಿ ದೊಡ್ಡ ಅಪಾಯ ಇದೆ ಎಂದು ಸೈಬರ್ ತಜ್ಞರು ಎಚ್ಚರಿಸಿದ್ದಾರೆ.

ಸೈಬರ್ ನ್ಯೂಸ್ ಮತ್ತು ಫೋರ್ಬ್ಸ್ ವರದಿಗಳ ಪ್ರಕಾರ,ಆನ್‌ಲೈನ್‌ನಲ್ಲಿ ನಡೆದ ಬೃಹತ್ ಡೇಟಾ ಉಲ್ಲಂಘನೆಯು 1600 ಕೋಟಿಗಿಂತಲೂ ಹೆಚ್ಚು ಪಾಸ್‌ವರ್ಡ್‌ಗಳನ್ನು ಬಹಿರಂಗಪಡಿಸಿದೆ. ಇದು ಇಂಟರ್ನೆಟ್ ಇತಿಹಾಸದಲ್ಲಿ ಅತಿದೊಡ್ಡ ಭದ್ರತಾ ಸೋರಿಕೆಗಳಲ್ಲಿ ಒಂದಾಗಿದೆ. ಈ ಸೋರಿಕೆ ಲಕ್ಷಾಂತರ ಬಳಕೆದಾರರ ವೈಯಕ್ತಿಕ ಡೇಟಾ ಸುರಕ್ಷತೆ ಮೇಲೆ ಪರಿಣಾಮ ಬೀರಲಿದ್ದು,

ಜಾಗತಿಕವಾಗಿ ವ್ಯಾಪಕವಾದ ಫಿಶಿಂಗ್ ಹಗರಣಗಳು, ವ್ಯಕ್ತಿಯ ಗುರುತಿನ ಕಳವು ಮತ್ತು ಖಾತೆ ಹ್ಯಾಕಿಂಗ್‌ಗೆ ಕಾರಣವಾಗಬಹುದು ಎಂದು ಹೇಳಲಾಗಿದೆ.

ಸೋರಿಕೆಯಾದ ಡೇಟಾವು Google, Facebook ಮತ್ತು Telegram ನಂತಹ ಇಮೇಲ್ ಮತ್ತು ಸಾಮಾಜಿಕ ಮಾಧ್ಯಮ ಪ್ಲಾಟ್ ಫಾರ್ಮ್‌ಗಳಿಂದ GitHub ನಲ್ಲಿನ ಡೆವಲಪರ್ ಖಾತೆಗಳು ಮತ್ತು ಕೆಲವು ಸರ್ಕಾರಿ ಪೋರ್ಟಲ್ ವರೆಗೆ ವ್ಯಾಪಕ ಶ್ರೇಣಿಯ ಸೇವೆಗಳಿಗೆ ಲಾಗಿನ್ ಮಾಹಿತಿಯನ್ನು ಒಳಗೊಂಡಿದೆ. ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ ಲಿಂಕ್ ಅನ್ನು ತೋರಿಸುವ ಸ್ವರೂಪದಲ್ಲಿ ಆಯೋಜಿಸಲಾಗಿದೆ. ನಂತರ ಬಳಕೆದಾರರ ಹೆಸರು ಮತ್ತು ಪಾಸ್ ವರ್ಡ್ ಅನ್ನು ನೀಡಲಾಗುತ್ತದೆ, ಇದು ಸೈಬರ್ ಕಳ್ಳರಿಗೆ ಬಳಸಲು ಸುಲಭವಾಗುತ್ತದೆ.

ಈ ಡೇಟಾವು ಕಾರ್ಪೊರೇಟ್ ಮತ್ತು ಡೆವಲಪರ್ ಪ್ಲಾಟ್‌ಫಾರ್ಮ್‌ಗಳ VPN ಲಾಗಿನ್‌ಗಳನ್ನು ಒಳಗೊಂಡಿರುವ ಸಾಧ್ಯತೆಯಿದೆ. ಈ ಲಾಗಿನ್ ಐಡಿಗಳು ಸೈಬರ್ ಕಳ್ಳರ ಕೈಗಳಿಗೆ ಸಿಕ್ಕಿದರೆ ಮೆಗಾ ಡಿಜಿಟಲ್ ಯುದ್ಧ ಪ್ರಾರಂಭವಾಗಬಹುದು ಎಂದು ತಜ್ಞರು ಹೇಳಿದ್ದಾರೆ. ಇಮೇಲ್ ಐಡಿ ಮತ್ತು ಇತರ ವೈಯಕ್ತಿಕ ಮಾಹಿತಿಯಂತಹ ವಿವರಗಳನ್ನು ಹೊಂದಿರುವುದು ಫಿಶಿಂಗ್ ದಾಳಿಯ ಮೂಲಕ ಅಮಾಯಕರನ್ನು ಬಳಸಿಕೊಳ್ಳಲು ಹ್ಯಾಕರ್‌ಗಳಿಗೆ ಸುಲಭವಾಗಿಸುತ್ತದೆ. ಇದು ಇಂಟರ್ನೆಟ್‌ನಲ್ಲಿ ಆ ವ್ಯಕ್ತಿಯ ಡಿಜಿಟಲ್ ಪ್ರೊಫೈಲ್ ಅನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

ಡಿಜಿಟಲ್ ವಾರ್

ತಜ್ಞರು ಈ ಉಲ್ಲಂಘನೆಯನ್ನು ಜಾಗತಿಕ ಸೈಬರ್ ಅಪರಾಧದ ನೀಲನಕ್ಷೆ ಎಂದು ಕರೆಯುತ್ತಿದ್ದಾರೆ. ಶತಕೋಟಿ ಲಾಗಿನ್ ವಿವರಗಳನ್ನು ಹೊಂದಿರುವ ಸುಮಾರು 30 ದೊಡ್ಡ ಡೇಟಾ ಸೆಟ್‌ಗಳನ್ನು ಸಂಗ್ರಹಿಸಲಾಗಿದೆ ಎಂದು ನಂಬಲಾಗಿದೆ. ಈ ಭಯಾನಕ ಉಲ್ಲಂಘನೆಯ ಕುರಿತು ವಿವರಗಳನ್ನು ಫೋರ್ಬ್ಸ್ ವರದಿಯಲ್ಲಿ ಹಂಚಿಕೊಳ್ಳಲಾಗಿದೆ. ವೆಬ್ ಸರ್ವರ್‌ನಲ್ಲಿ ಅಸುರಕ್ಷಿತವಾಗಿ ಬಿದ್ದಿರುವ 18.4 ಕೋಟಿಗಿಂತಲೂ ಹೆಚ್ಚು ದಾಖಲೆಗಳನ್ನು ಹೊಂದಿರುವ ಡೇಟಾಬೇಸ್ ಬಗ್ಗೆ ವರದಿ ಪ್ರಸ್ತಾಪಿಸಿದೆ.

ಸಮಾಚಾರ ಸಣ್ಣದಲ್ಲ

ಜಯನಗರ ಸುತ್ತ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಿಮ್ಹಾನ್ಸ್, ಜಯದೇವ ಮತ್ತು ಪದ್ಮನಾಭನಗರ ಉಪಕೇಂದ್ರ, ನಿರ್ವಹಣಾ ಕಾಮಗಾರಿ ನಿಮಿತ್ತ ಶನಿವಾರ ಬೆಳಗ್ಗೆ 10 ರಿಂದ ಮಧ್ಯಾಹ್ನ 5 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ರಾಜೀವ್ ಗಾಂಧಿ, ಸಂಜಯ್ ಗಾಂಧಿ, ಇಂಧಿರಾ ಗಾಂಧಿ ಆಸ್ಪತ್ರೆ, ಜಯನಗರ 1, 2, 3, 4, 9ನೇ ಟಿ ಬ್ಲಾಕ್, ಸೋಮೇಶ್ವರನಗರ, ವಿಲ್ಸನ್ ಗಾರ್ಡನ್, ಬನ್ನೇರುಘಟ್ಟ ರಸ್ತೆ, ಆರ್‌ವಿ ರಸ್ತೆ, ಎನ್‌ಎಸ್ ಪಾಳ್ಯ, ಅನಂತ ಲೇಔಟ್, ಬಿಳೆಕಳ್ಳಿ ಮೇನ್ ರೋಡ್, ಜಯದೇವ ಆಸ್ಪತ್ರೆ, ರಂಕ ಕಾಲೋನಿ, ಶೋಭ ಅಪಾರ್ಟ್‌ಮೆಂಟ್, ವೆಗಾಸಿಟಿ ಮಾಲ್, ಬನ್ನೇರುಗಟ್ಟ ಮುಖ್ಯ ರಸ್ತೆ, ಕೆಇಬಿ ಕಾಲೋನಿ, ಗುರಪ್ಪನ ಪಾಳ್ಯ, ಬಿಟಿಎಮ್ ಮೊದಲನೇ ಹಂತ, ಬನಗಿರಿನಗರ, ಪಾಪಯ್ಯ ಗಾರ್ಡನ್, ಬಿಎನ್‌ಎಂ ಕಾಲೇಜ್, ಬಿಡಿಎ ಕಾಂಪ್ಲೆಕ್ಸ್, ದೇವಗಿರಿ ದೇವಸ್ಥಾನ, ಬಿಎಸ್‌ಎನ್‌ಎಲ್ ಕಚೇರಿ, ಚನ್ನಮ್ಮನಕೆರೆ ಅಚ್ಚುಕಟ್ಟು, ಮಂಜುನಾಥ ಕಾಲೋನಿ, ರಾಜೀವ್ ನಗರ, ಸಿಂಡಿಕೇಟ್ ಬ್ಯಾಂಕ್ ಕಾಲೋನಿ, ಪದ್ಮನಾಭನಗರ, ಮಹಾರಾಜ ಆಸ್ಪತ್ರೆ, ಶ್ರವಂತಿ ಅಪಾರ್ಟ್‌ಮೆಂಟ್, ಕದಿರೇನಹಳ್ಳಿ, ಟೀಚರ್ಸ್ ಕಾಲೋನಿ, ಉಮಾ ಮಹೇಶ್ವರಿ ದೇವಸ್ಥಾನ 15ರಿಂದ 17ನೇ ಡಿ ಕ್ರಾಸ್ ವರೆಗೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಇರುವುದಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಹಿಂದು ಧರ್ಮದಲ್ಲಿ ಮಹಿಳೆಯರಿಗೆ ಮಹತ್ವ

ಬೆಂಗಳೂರು: ರಕ್ಷಾ ಫೌಂಡೇಷನ್ 13ನೇ ವರ್ಷದ ವಾರ್ಷಿಕೋತ್ಸವದಲ್ಲಿ ಸುಮಂಗಲಿಯರಿಂದ ಲಲಿತಾ ಸಹಸ್ರನಾಮ ಪೂಜೆ ಕಾರ್ಯಕ್ರಮ ಮತ್ತು ಧರ್ಮಗುರುಗಳಿಂದ ಆಶೀರ್ವಚನ ಏರ್ಪಡಿಸಲಾಗಿತ್ತು. ಚಂದ್ರಗುಪ್ತಮೌರ್ಯ (ಶಾಲಿನಿ) ಆಟದ ಮೈದಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಂತ್ರಾಲಯ ಮಠದ ಸುಭುದೇಂದ್ರ ತೀರ್ಥ ಸ್ವಾಮೀಜಿ, ಸುಪ್ರಿಂಕೋರ್ಟ್ ನ್ಯಾಯಧೀಶರಾದ ಅರವಿಂದ್ ಕುಮಾರ್, ಸಂಸದ ತೇಜಸ್ವಿ ಸೂರ್ಯ, ರಕ್ಷಾ ಫೌಂಡೇಸನ್ ಸಂಸ್ಥಾಪಕರಾದ ಸಿ.ಕೆ. ರಾಮಮೂರ್ತಿ, ಶಾಸಕ ಸತೀಶ್ ರೆಡ್ಡಿ, ಬಿಬಿಎಂಪಿ ಮಾಜಿ ಸದಸ್ಯರಾದ ನಾಗರತ್ನ ರಾಮಮೂರ್ತಿ ಚಾಲನೆ ನೀಡಿದರು. ಸುಭುದೇಂದ್ರ ತೀರ್ಥ ಸ್ವಾಮೀಜಿ ಮಾತನಾಡಿ, ಪ್ರತಿವರ್ಷ ಶ್ರೀ ಲಲಿತಾ ಸಹಸ್ರನಾಮ ಕಾರ್ಯಕ್ರಮ ಯಶ್ವಸಿಯಾಗಿ ಅಚರಿಸಿಕೊಂಡು ಬರುತ್ತಿದ್ದು, ಇದು ಶ್ರೇಷ್ಠವಾದ ಕಾರ್ಯ.ಶ್ರೀ ಲಲಿತಾ ತಾಯಿಯಿಂದ ಎಲ್ಲರಿಗೂ ಆಶೀರ್ವಾದ, ಕೃಪೆ ಎಲ್ಲರಿಗೂ ಸಿಗಬೇಕು. ಭಾರತೀಯ ಸನಾತನ ಸಂಸ್ಕೃತಿ ವಿಶ್ವ ಶೇಷ್ಠವಾದದ್ದು. ನಮ್ಮ ಧರ್ಮದಲ್ಲಿ ಮಹಿಳೆಯರಿಗೆ ವಿಶೇಷ ಮಾನ್ಯತೆ ನೀಡಲಾಗಿದೆ. ಸನಾತನ ಹಿಂದೂ ಪರಂಪರೆಯಲ್ಲಿ ಮಹಿಳೆಯರಿಗೆ ದೇವಸ್ಥಾನ ಪ್ರವೇಶ, ಪೂಜೆ ಮಾಡುವ ಹಕ್ಕು ನೀಡಲಾಗಿದೆ ಎಂದರು.

ಪರಾರಿಯಾಗಿದ್ದ ಸಜಾ ಬಂಧಿ ಅರೆಸ್ಟ್

ಬೆಂಗಳೂರು: ತಾಯಿಗೆ ಅನಾರೋಗ್ಯದ ಹಿನ್ನೆಲೆಯಲ್ಲಿ ತುರ್ತು ಪೆರೋಲ್ ರಜೆ ಪಡೆದು ಅವಧಿ ಮುಗಿದ ಬಳಿಕ ಜೈಲಿಗೆ ಹೋಗದೇ ತಲೆಮರೆಸಿಕೊಂಡಿದ್ದ ಸಜಾ ಬಂಧಿಯನ್ನ ಬಂಧಿಸಿ ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಜೈಲಿಗಟ್ಟಿದ್ದಾರೆ. ಮೊಹಮ್ಮದ್ ಇದ್ರಿಸ್ (30) ಬಂಧಿತ ಕೈದಿ. ಬೊಮ್ಮನಹಳ್ಳಿ ಸಿಂಗಸಂದ್ರ ನಿವಾಸಿಯಾಗಿರುವ ಅಪರಾಧಿಯು ತನ್ನ ತಾಯಿಗೆ ಹುಷಾರಿಲ್ಲ ಎಂದು ಕಾರಣ ನೀಡಿ ಏ.18 ರಿಂದ ಮೇ 17ರವರೆಗೆ 30 ದಿನಗಳ ಕಾಲ ಪೆರೋಲ್ ರಜೆ ಪಡೆದು ಹೊರಬಂದಿದ್ದ. ರಜೆ ಅವಧಿ ಮುಗಿದ ಬಳಿಕ ನೇರವಾಗಿ ಜೈಲಿಗೆ ಬರದೇ ತಲೆಮರೆಸಿಕೊಂಡಿದ್ದ. ಈ ಬಗ್ಗೆ ಜೈಲಾಧಿಕಾರಿಗಳು ನೀಡಿದ ದೂರಿನ ಮೇರೆಗೆ ಅಪರಾಧಿಯನ್ನು ತಮಿಳುನಾಡಿನ ಕೃಷ್ಣಗಿರಿಯಲ್ಲಿ ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೂಲತಃ ಕೃಷ್ಣಗಿರಿ ಜಿಲ್ಲೆಯವನಾದ ಅಪರಾಧಿಯು ವಂಚನೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಈತನ ಅಪರಾಧ ಕೃತ್ಯ ಸಾಬೀತಾಗಿದ್ದರಿಂದ ನ್ಯಾಯಾಲಯವು ಐದು ವರ್ಷ ಜೈಲು ಶಿಕ್ಷೆ ಹಾಗೂ ಪ್ರತ್ಯೇಕ ಐದು ಪ್ರಕರಣಗಳಲ್ಲಿ ಒಟ್ಟು 40 ಲಕ್ಷ ದಂಡ ವಿಧಿಸಿ ಆದೇಶಿಸಿತ್ತು. ಶಿಕ್ಷಾ ಅವಧಿ ಪೂರ್ಣಗೊಂಡರೂ ದಂಡ ಪಾವತಿಸದ ಕಾರಣ ಜೈಲಿನಲ್ಲಿ ಉಳಿದುಕೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಪೆರೋಲ್ ರಜೆ ಮುಗಿದ ಬಳಿಕ ನೇರವಾಗಿ ಜೈಲಿಗೆ ಬರದೇ ರೈಲು ಮೂಲಕ ಮುಂಬೈಗೆ ಪರಾರಿಯಾಗಿದ್ದ. ಏಜೆನ್ಸಿಯೊಂದರಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸಕ್ಕೆ ಸೇರಿಕೊಂಡ ಕೆಲ ದಿನಗಳ ಬಳಿಕ ಉದ್ಯೋಗ ತೊರೆದು, ಚೆನ್ನೈಗೆ ತೆರಳಿದ್ದ.

{ ಪ್ರಿಯಾಂಕ್ ಖರ್ಗೆ } ಸಚಿವ

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕವು ದೇಶವನ್ನು ಮುನ್ನೆಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಭಾರತದಲ್ಲೇ ತಯಾರಿಸಿ ವಿಕಸಿತ ಭಾರತ ಎಂದೆಲ್ಲಾ ಹೇಳುತ್ತಾರೆ. ಆದರೆ ವಿದೇಶಾಂಗ ಸಚಿವಾಲಯದ ಈ ನಡೆಯಿಂದ ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆಯಾಗಿದೆ.

ಅಪಾಯಕಾರಿ ವೃಕ್ಷ, ಕೊಂಬೆ ತೆರವಿಗೆ ಸಚಿವ ಖಂಡ್ರೆ ಸೂಚನೆ

ರಸ್ತೆ ಬದಿಯ ಮರದ ಸುತ್ತಲೂ ಹಾಕಲಾಗಿದ್ದ ಕಾಂಕ್ರೀಟ್ ತೆರವು ಮಾಡುವ ಮೂಲಕ ವೃಕ್ಷಗಳ ಸಂರಕ್ಷಣಾ ಕಾರ್ಯಕ್ಕೆ ಅರಣ್ಯ ಸಚಿವರಿಂದ ಚಾಲನೆ

ಬೆಂಗಳೂರು: ಗಾಳಿ, ಮಳೆಗೆ ಮರ ಹಾಗೂ ಕೊಂಬೆಗಳು ಬಿದ್ದು ಪ್ರಾಣಹಾನಿ, ಆಸ್ತಿ ಹಾನಿ ಆಗುತ್ತಿದ್ದು, ಮಳೆಗಾಲಕ್ಕೆ ಮೊದಲೇ ಅಪಾಯಕಾರಿ ವೃಕ್ಷ ಗುರುತಿಸಿ ಕೊಂಬೆಗಳನ್ನು ಕತ್ತರಿಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ಅರಣ್ಯಾಧಿಕಾರಿಗಳಿಗೆ ಸೂಚಿಸಿದರು.

ನಗರದ ಕಂಟೋನ್ಮೆಂಟ್ ಬಳಿ ಶುಕ್ರವಾರ ರಸ್ತೆ ಬದಿಯ ಮರದ ಸುತ್ತಲೂ ಹಾಕಲಾಗಿದ್ದ ಕಾಂಕ್ರೀಟ್ ತೆರವು ಮಾಡುವ ಮೂಲಕ ವೃಕ್ಷಗಳ ಸಂರಕ್ಷಣಾ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಳೆ, ಗಾಳಿಗೆ ಟೊಳ್ಳು ಮರಗಳು ಮತ್ತು ಬೇರು ಕಚ್ಚದ ಮರಗಳು ಧರಾಶಾಯಿ ಆಗುತ್ತವೆ. ಇದಕ್ಕೆ ಕಾರಣ ಬೇರಿಗೆ ನೀರು ಇಳಿಯದಂತೆ ಹಾಕಲಾಗಿರುವ ಕಾಂಕ್ರೀಟ್, ಕಲ್ಲಿನ ಚಪ್ಪಡಿ, ಟೈಲ್ಸ್ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈ ಬಗ್ಗೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ತೀರ್ಪು ನೀಡಿದ್ದು, ಸರಕಾರ ಈ ಸಂಬಂಧ ಅಧಿಕೃತ ಆದೇಶವನ್ನು ಹೊರಡಿಸಿದೆ. ಗುರುವಾರ ಬಿಬಿಎಂಪಿ ವಿಶೇಷ ಆಯುಕ್ತರು ಮರದ ಸುತ್ತ ಇರುವ ಕಾಂಕ್ರೀಟ್ ತೆರವಿಗೆ ಆದೇಶ ಮಾಡಿದ್ದು, ಇನ್ನು ಮುಂದೆ ರಸ್ತೆ ಬದಿ ಸಸಿ ನೆಡುವಾಗ ಒಂದು ಮೀಟರ್ ಸುತ್ತಳತೆಯಲ್ಲಿ ಮಣ್ಣು ಇರುವುದನ್ನು ಖಾತ್ರಿ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಬಿಬಿಎಂಪಿ ಮತ್ತು ರಾಜ್ಯದ ಎಲ್ಲ ನಗರಗಳ ಸ್ಥಳೀಯ ಸಂಸ್ಥೆಗಳು ಮತ್ತು ಹೆದ್ದಾರಿ ಪ್ರಾಧಿಕಾರ,

ಇತ್ತೀಚೆಗೆ ಮರದ ಕೊಂಬೆ ಬಿದ್ದು ಗಾಯಗೊಂಡಿದ್ದ 29 ವರ್ಷದ ಅಕ್ಷಯ್ ಮೃತಪಟ್ಟಿರುವುದು ಬೇಸರದ ಸಂಗತಿಯಾಗಿದೆ. ರಸ್ತೆ ಬದಿಯಲ್ಲಿರುವ ಮರಗಳ ಬುಡದ ಸುತ್ತ ಕಾಂಕ್ರಿಟ್‌ನಿಂದ ಕೂಡಿದ್ದು, ಬುಡಗಳು ಗಟ್ಟಿಯಾಗಿ ಬೇರೂರದಂತಾಗಿದೆ. ಈ ಕಾರಣದಿಂದಾಗಿ ಹೆಚ್ಚು ಮಳೆಯಾದ ಸಂದರ್ಭದಲ್ಲಿ ಬೃಹದಾಕಾರದ ಮರಗಳು ಧರೆಗುರುಳುತ್ತಿವೆ. ಮಳೆಗಾಲಕ್ಕೆ ಮೊದಲೇ ಅಪಾಯಕಾರಿ ವೃಕ್ಷ ಗುರುತಿಸಿ ಅದರ ಕೊಂಬೆಗಳನ್ನು ಕತ್ತರಿಸಲು ಅರಣ್ಯಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

– **ಈಶ್ವರ ಖಂಡ್ರೆ**, ಅರಣ್ಯ ಸಚಿವ

ರಸ್ತೆ ಬದಿಯ ಅಪಾಯಕಾರಿ ಮರಗಳ ರೆಂಬೆ, ಕೊಂಬೆಗಳ ತೆರವು ಕಾರ್ಯಾಚರಣೆ ಸ್ಥಳಕ್ಕೆ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಭೇಟಿ ನೀಡಿ ತೆರವು ಕಾರ್ಯಾಚರಣೆ ವೀಕ್ಷಿಸಿದರು.

ಅಕ್ರಮವಾಗಿ ಮರ ಕಡಿಯದಂತೆ ಮನವಿ

ಬೆಂಗಳೂರು ಒಂದು ಕಾಲದಲ್ಲಿ ನಿವೃತ್ತರ ಸ್ವರ್ಗ, ಉದ್ಯಾನ ನಗರ ಎಂದು ಖ್ಯಾತವಾಗಿತ್ತು. ಆದರೆ ಇಂದು ಎಲ್ಲಿ ನೋಡಿದರೂ ಮುಗಿಲೆತ್ತರ ಕಟ್ಟಡಗಳೇ ಕಾಣುತ್ತವೆ. ಪ್ರತಿಯೊಬ್ಬರಿಗೂ ಆಮ್ಲ ಜನಕ ಬೇಕು, ಆದರೆ ಮನೆಯ ಮುಂದೆ ಗಿಡ ಇರಬಾರದು. ಇದರ ಎಲೆ ಉದುರಿದರೆ ಮನೆ ಮುಂದೆ ಕಸ ಆಗುತ್ತದೆ ಎನ್ನುತ್ತಾರೆ. ಇನ್ನು ಮನೆಯ ಸೌಂದರ್ಯಕ್ಕೆ ಅಥವಾ ಅಂಗಡಿಗಳ ಫಲಕ ಕಾಣುವುದಿಲ್ಲ ಎಂದು ಮರ ಕಡಿಯುವ ಪ್ರವೃತ್ತಿ ಹೆಚ್ಚುತ್ತಿದೆ. ಮನೆಗಳ ಮುಂದೆ ಇರುವ ಗಿಡಗಳ ಸುತ್ತ ಕಾಂಕ್ರೀಟ್ ಹಾಕಬಾರದು, ಮರಗಳನ್ನು ಅಕ್ರಮವಾಗಿ ಕಡಿಯಬಾರದು ಎಂದು ಸಚಿವ ಈಶ್ವರ್ ಖಂಡ್ರೆ ಮನವಿ ಮಾಡಿದರು.

ತೋಟಗಾರಿಕೆ ಇಲಾಖೆ ಹಾಗೂ ಅರಣ್ಯ ಇಲಾಖೆಯ ಸಾಮಾಜಿಕ ಅರಣ್ಯ ವಿಭಾಗ ತಾನು ಈಗಾಗಲೇ ನೆಟ್ಟಿರುವ ಗಿಡ ಮರಗಳ ಸುತ್ತ ಇರುವ ಕಾಂಕ್ರೀಟ್, ಡಾಂಬರು ತೆರವಿಗೆ ಕ್ರಮ ವಹಿಸಬೇಕು. ವೃಕ್ಷ ಪ್ರಾಧಿಕಾರ ಸಭೆಗಳನ್ನು ನಿಯಮಿತವಾಗಿ ನಡೆಸಿ, ಅಪಾಯಕಾರಿ ಮರಗಳನ್ನು ಗುರುತಿಸಿ, ಅವುಗಳ ರೆಂಬೆ, ಕೊಂಬೆ ತೆರವಿಗೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು. ಒಬ್ಬ ಮನುಷ್ಯ ನೆಮ್ಮದಿಯಿಂದ ಉಸಿರಾಡಲು 7 ಮರ ಇರಬೇಕು ಎಂದು ತಜ್ಞರು ಹೇಳುತ್ತಾರೆ. ಆದರೆ ಇಂದು ಬೆಂಗಳೂರು ಕಾಂಕ್ರೀಟ್ ಕಾಡಾಗಿದ್ದು, ಇಲ್ಲಿ 7 ಜನರಿಗೆ 1 ಮರವೂ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಪ್ರತಿಯೊಬ್ಬರೂ ವೃಕ್ಷ ಸಂರಕ್ಷಣೆ ಮತ್ತು ಸಂವರ್ಧನೆಗೆ ಮುಂದಾಗಬೇಕು ಎಂದು ಸಚಿವರು ತಿಳಿಸಿದರು.

ಸಣ್ಣಸಾಲ: ಗ್ರಾಹಕರಿಗಾಗಿ ಸಹಾಯವಾಣಿ ಆರಂಭ

ಬೆಂಗಳೂರು: ಸಣ್ಣ ಹಣಕಾಸು ಕ್ಷೇತ್ರದ ಬಲವರ್ಧನೆ ಮತ್ತು ಸಾಲ ಪಡೆದ ಗ್ರಾಹಕರ ರಕ್ಷಣೆ ವಿಷಯಗಳಿಗೆ ಸಂಬಂಧಿಸಿದಂತೆ ಆರ್‌ಬಿಐ ಸಹಾಯವಾಣಿ ಆರಂಭಿಸಿದೆ.

ಬೆಂಗಳೂರಿನಲ್ಲಿ ಗುರುವಾರ ನಡೆದ ಸಾಲ ವಸೂಲಾತಿ ಸಮಸ್ಯೆ, ಸಾಲಗಾರರು ಎದುರಿಸುತ್ತಿರುವ ಒತ್ತಡ ಮತ್ತು ಇನ್ನಿತರ ಸನ್ನಿವೇಶಗಳ ಹಿನ್ನೆಲೆ ಆರ್‌ಬಿಐ, ಸಣ್ಣ ಹಣಕಾಸು ಕ್ಷೇತ್ರದಲ್ಲಿ ಸ್ವಯಂ ನಿಯಂತ್ರಣ ಒಕ್ಕೂಟ ರಾಷ್ಟ್ರೀಯ ಸಭೆಯಲ್ಲಿ ಸಾ ಧನ್‌ನ ಕಾರ್ಯನಿರ್ವಾಹಕ ನಿರ್ದೇಶಕ ಜಿ.ಜಿ.ಮಾಮ್ಮೆನ್ ಮಾತನಾಡಿ, ಜವಾಬ್ದಾರಿಯುತ ಸಾಲ ವಿತರಣೆ ಮತ್ತು ಗ್ರಾಹಕ ರಕ್ಷಣೆ ಆರ್ಥಿಕ ಸಮಗ್ರತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಗ್ರಾಹಕ ದೂರುಗಳನ್ನು ಸೂಕ್ತ ರೀತಿಯಲ್ಲಿ ಪರಿಶೀಲಿಸಿ ವಿಲೇವಾರಿ ಮಾಡುವುದು ಅತಿ ಮುಖ್ಯ. ಪ್ರತಿ ಹಂತದಲ್ಲಿಯೂ ಗ್ರಾಹಕರ ದೂರುದುಮ್ಮಾನ ಮತ್ತು ಅನಿಸಿಕೆಗಳಿಗೆ ಕಿವಿ ಕೊಡಬೇಕು. ದೇಶದ ಒಟ್ಟು ಸಾಲ ವ್ಯವಸ್ಥೆಯಲ್ಲಿ ಸಣ್ಣ ಹಣಕಾಸು ನೆರವಿನ ಪಾಲು ಕೇವಲ ಶೇ.3 ರಷ್ಟು, ಆದರೆ ಅದು ಬೀರುವ ಪರಿಣಾಮ ಅಗಾಧ. ಹಾಗಾಗಿ ಗ್ರಾಹಕರ ಅಗತ್ಯತೆ ಅರ್ಥ ಮಾಡಿಕೊಂಡು, ತಂತ್ರಜ್ಞಾನ ಪರಿಹಾರ ಬಳಸಿಕೊಂಡು ಮಾನವ ಸ್ಪರ್ಶವನ್ನು ಸಾಲ ವಿತರಣೆಯಲ್ಲಿ ಅನುಸರಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಸಣ್ಣ ಹಣಕಾಸು ಕ್ಷೇತ್ರದ ಬಲವರ್ಧನೆ ಮತ್ತು ಸಾಲ ಪಡೆದ ಗ್ರಾಹಕರ ರಕ್ಷಣೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ 1800 121 1322 ಸಹಾಯವಾಣಿಗೆ ಚಾಲನೆ ನೀಡಲಾಯಿತು. ಸಹಾಯವಾಣಿಯು ಪ್ರಸ್ತುತ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿದ್ದು ಶೀಘ್ರದಲ್ಲೇ ಹತ್ತು ಪ್ರಾದೇಶಿಕ ಭಾಷೆಗಳಿಗೆ ವಿಸ್ತರಿಸಲಾಗುತ್ತಿದೆ. ಸಾಲಗಾರರು ತಮ್ಮ ಸಮಸ್ಯೆಗಳಿಗೆ ಈ ಸಹಾಯವಾಣಿ ಬಳಸಬಹುದಾಗಿದೆ.

ನಟ ಅನಿರುದ್ದ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಶುಕ್ರವಾರ ಭೇಟಿ ಮಾಡಿ ಕನಕಪುರ ರಸ್ತೆಯಲ್ಲಿರುವ ಕಗ್ಗಲೀಪುರ ಕೆರೆಯನ್ನು ಶುದ್ಧೀಕರಿಸಲು ಹಾಗೂ ಬೆಂಗಳೂರು ನಗರದಲ್ಲಿ ಮೂಲ ಸೌಕರ್ಯ ಕಲ್ಪಿಸಲು ಮನವಿ ಸಲ್ಲಿಸಿದರು.

ವಸತಿ ಮೀಸಲಾತಿ ಗ್ರಾಮೀಣ ಭಾಗದಿಂದ ನಗರ ಭಾಗಕ್ಕೆ ವರ್ಗಾವಣೆ: ಡಿಸಿಎಂ ಡಿ.ಕೆ.ಶಿವಕುಮಾರ್

ಎಚ್.ಡಿ.ಕುಮಾರಸ್ವಾಮಿ ಗೆಲ್ಲುವುದೂ ಇಲ್ಲ, ಅವರ ಸರಕಾರ ಬರುವುದೂ ಇಲ್ಲ

ಬೆಂಗಳೂರು: ಕುಮಾಸ್ವಾಮಿ ಅವರ ಸರಕಾರ ಅಧಿಕಾರಕ್ಕೆ ಬರುತ್ತದೆಯೇ? ಅವರ ಸರಕಾರ ಬರುವುದೂ ಇಲ್ಲ, ಗೆಲ್ಲುವುದೂ ಇಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕುಮಾರಸ್ವಾಮಿ ಬಿಜೆಪಿ-ಜೆಡಿಎಸ್ ಮೈತ್ರಿ ಸರಕಾರ ಬರುತ್ತದೆ. ಎಲ್ಲ ತಯಾರಾಗಿ ಎಂದು ಹೇಳಿದ್ದರು. ಆಗ ಅದಕ್ಕೆ ನಾನು ಉಡುಗೊರೆ ನೀಡುತ್ತೇನೆ ಎಂದು ಹೇಳಿದ್ದೆ ಎಂದು ವ್ಯಂಗ್ಯವಾಡಿದರು.

ಯಾರ ಅವಕಾಶವನ್ನು ನಾವು ಕಿತ್ತುಕೊಂಡಿಲ್ಲ: ಗ್ರಾಮೀಣ ಭಾಗದಲ್ಲಿ ಅಲ್ಪಸಂಖ್ಯಾತ ಫಲಾನುಭವಿಗಳು ಕಡಿಮೆ ಇರುವ ಕಾರಣಕ್ಕೆ ವಸತಿ ಸಚಿವರು ಮನೆ ಹಂಚಿಕೆ ಮೀಸಲಾತಿ ನಗರ ಪ್ರದೇಶಕ್ಕೆ ವರ್ಗಾವಣೆ ಮಾಡಿದ್ದಾರೆ. ನಾವು ಯಾರ ಸೌಲಭ್ಯಗಳನ್ನು ಕಿತ್ತು ಅಲ್ಪಸಂಖ್ಯಾತರಿಗೆ ನೀಡುತ್ತಿಲ್ಲ. ಸಾಚಾರ್ ವರದಿಗೆ ಅನುಗುಣವಾಗಿ ಗ್ರಾಮೀಣ ಪ್ರದೇಶಕ್ಕೂ ಶೇ.10 ರಷ್ಟು ಮೀಸಲಾತಿ ನೀಡಲಾಗುತ್ತಿತು. ಆದರೆ ಗ್ರಾಮೀಣ ಭಾಗದಲ್ಲಿ ಕಡಿಮೆ ಸಂಖ್ಯೆಯಲ್ಲಿ ಅಲ್ಪಸಂಖ್ಯಾತರು ಇರುವ ಕಾರಣಕ್ಕೆ ಸೌಲಭ್ಯ ರದ್ದಾಗುತ್ತಿತ್ತು. ನಾವೇನೂ ಹೊಸದಾಗಿ ಮೀಸಲಾತಿ ಸೃಷ್ಟಿ ಮಾಡಿ ನೀಡುತ್ತಿಲ್ಲ. ಪರಿಶಿಷ್ಟ ವರ್ಗ ಮತ್ತು ಜಾತಿಗಳಲ್ಲಿ ಶೇ.90 ರಷ್ಟು ಜನರಿಗೆ ಅನುಕೂಲ ಮಾಡಿಕೊಡಲಾಗಿದೆ. ಹೊಸದಾಗಿ ಮನೆ ಬೇಕಾಗಿರುವವರು ಅಡಿಪಾಯ ಹಾಕಿದರೆ ಮಾತ್ರ ಅವರಿಗೆ ಅನುಕೂಲ ಮಾಡಲು ಸಾಧ್ಯ. ಅಡಿಪಾಯ ಹಾಕದೆ ಹಣ ನೀಡಲು ಸಾಧ್ಯವಿಲ್ಲ ಎಂದರು.

ಮನುಷ್ಯತ್ವದ ದಾರಿದ್ರ್ಯ ಇದೆ: ಎಚ್‌ಡಿಕೆ

2028ಕ್ಕೆ ಜೆಡಿಎಸ್ -ಬಿಜೆಪಿ ಸರಕಾರಕ್ಕೆ ಅಧಿಕಾರಕ್ಕೆ ಬಂದರೆ ನಾನೇ ಬಟ್ಟೆ ಹೊಲಿಸಿಕೊಡ್ತೀನಿ ಎಂದು ಡಿಸಿಎಂ ಡಿಕೆಶಿ ನೀಡಿರುವ ಅಹಂಕಾರದ ಹೇಳಿಕೆಗೆ ತಿರುಗೇಟು ಕೊಟ್ಟ ಕುಮಾರಸ್ವಾಮಿ, ನನಗೆ ಅಂತಹ ದಾರಿದ್ರ್ಯ ಇನ್ನೂ ಬಂದಿಲ್ಲ. ಆ ವ್ಯಕ್ತಿಯಿಂದ ಬಟ್ಟೆ ಹೊಲಿಸಿಕೊಳ್ಳುವಷ್ಟು ದಾರಿದ್ರ್ಯವನ್ನು ಈ ನಾಡಿನ ಜನತೆ ನನಗೆ ಕೊಟ್ಟಿಲ್ಲ. ದಾರಿದ್ರ್ಯ ಇರುವುದು ಅವರಿಗೆ. ಮನುಷ್ಯತ್ವದ ದಾರಿದ್ರ್ಯ ಅವರಿಗೆ ಇದೆ. ಜನರಿಂದ ಕೊಳ್ಳೆ ಹೊಡೆದ ಆ ಪಾಪದ ಹಣದಿಂದ ನಾನು ಬಟ್ಟೆ ಹೊಲಿಸಿಕೊಳ್ಳಬೇಕಾ? ನನಗೆ ಬಟ್ಟೆ ಬೇಕಾದರೆ ನಾಡಿನ ಜನರಿದ್ದಾರೆ, ನನ್ನನ್ನು ಇಲ್ಲಿಯವರೆಗೂ ಬೆಳೆಸಿರುವ ಅವರೇ ತಂದು ಕೊಡುತ್ತಾರೆ. ಆ ವ್ಯಕ್ತಿಯ ಪಾಪದ ಹಣ, ಲೂಟಿ ಹೊಡೆದಿರುವ ಹಣದಿಂದ ಬಟ್ಟೆ ತರಿಸಿಕೊಳ್ಳಬೇಕಾ? ಎಂದು ಡಿಸಿಎಂ ವಿರುದ್ಧ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.



ಸಾಂಪ್ರದಾಯಿಕ ನೇಕಾರಿಕೆಗೆ ರಾಜ್ಯ ಸರಕಾರದ ಉತ್ತೇಜನ

ಬೆಂಗಳೂರು: ಸ್ಪರ್ಧಾತ್ಮಕ ಮತ್ತು ತಂತ್ರಜ್ಞಾನ ಯುಗದಲ್ಲಿ ಪಾರಂಪರಿಕ ಉದ್ಯೋಗ ಉಳಿಸಿ ಬೆಳೆಸುವ ಅಗತ್ಯವಿದ್ದು, ಸಾಂಪ್ರದಾಯಿಕ ನೇಕಾರಿಕೆಗೆ ಸರಕಾರ ಉತ್ತೇಜನ ನೀಡಲಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ಚರಕ ಮತ್ತು ದೇಸಿ ಟ್ರಸ್ಟ್ ಸಂಯುಕ್ತವಾಗಿ ಚರ್ಚ್ ಸ್ಟ್ರೀಟ್‌ನ ಸಮಗತಾ ಸಭಾಂಗಣದಲ್ಲಿ ಆಯೋಜಿಸಿರುವ ಎರಡು ದಿನಗಳ ಕೊಡು-ಕೊಳ್ಳುವವರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಔದ್ಯೋಗಿಕ ಬೆಳವಣಿಗೆ ಮತ್ತು ವೈಜ್ಞಾನಿಕ ಬೆಳವಣಿಗೆ ಮುಖ್ಯವಾದರೂ ಪ್ರಕೃತಿ ಸಂರಕ್ಷಣೆಯೊಂದಿಗೆ ಈ ಚಟುವಟಿಕೆಗಳನ್ನು ನಿರ್ಲಕ್ಷ್ಯ ಮಾಡಬಾರದು. ಹೆಗ್ಗೋಡಿನ ಚರಕ ಸಂಸ್ಥೆ ಸಾಂಪ್ರದಾಯಿಕ ನೇಕಾರಿಕೆ ಉಳಿಸಿ ಬೆಳೆಸಲು ಶ್ರಮಸುತ್ತಿದ್ದು, ಸಂಸ್ಥೆಗೆ ಸರಕಾರ ಅಗತ್ಯ ನೆರವು ಸಹಕಾರ ನೀಡಲು ಬದ್ಧವಿದೆ ಎಂದು ಹೇಳಿದರು.

ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮ ಹಾಗೂ ಕೈಮಗ್ಗ ಅಭಿವೃದ್ಧಿ ನಿಗಮ ಎರಡನ್ನೂ ವಿಲೀನಗೊಳಿಸಿ ಏಕ ನಿಗಮ ಸ್ಥಾಪಿಸಲು ಸರಕಾರ ಚಿಂತನೆ ನಡೆಸಿದೆ. ನೇಕಾರ ಸಮುದಾಯ ತೀವ್ರ ಸಂಕಷ್ಟದಲ್ಲಿದೆ. ಎರಡರೆಡು ನಿಗಮಗಳಿಂದ ನೇಕಾರರ ಸಮಸ್ಯೆಗಳಿಗೆ ಸ್ಪಂದಿಸಲು ಸಾಧ್ಯವಾಗದಿರುವುದು ಮನಗಂಡು ಸರಕಾರ ಈ ತೀರ್ಮಾನಕ್ಕೆ ಬಂದಿದೆ. ಕೈಮಗ್ಗದ ಬಟ್ಟೆಗಳನ್ನು ಸರಕಾರದ ಇಲಾಖೆಗಳು ಖರೀದಿಸಬೇಕೆಂಬ ನಿಯಮ ಇದೆ. ಆದರೆ, ಕೆಲವು ಇಲಾಖೆ ಅಧಿಕಾರಿಗಳ ಹಾಗೂ ಸಚಿವರ ಇಚ್ಛಾಶಕ್ತಿಯ ಕೊರತೆಯಿಂದ ಇದಕ್ಕೆ ಚಾಲನೆ ಸಿಕ್ಕಿಲ್ಲ. ಇವರಿಗೆ ಮನವರಿಕೆ ಮಾಡುವ ಕೆಲಸ ನಡೆದಿದೆ. ಕೃಷಿಗೆ ನೀಡುತ್ತಿದ್ದ ನೆರವಿನ ಪ್ರಮಾಣ ಕಡಿಮೆ ಮಾಡಿದ್ದು, ಇದು ಕೃಷಿ ಕ್ಷೇತ್ರದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಭವಿಷ್ಯದಲ್ಲಿ ನಬಾರ್ಡ್ ಮೂಲಕ ನೇಕಾರರಿಗೆ ಹೆಚ್ಚಿನ ಅನುದಾನ ಕೊಡಿಸಲು ಪ್ರಯತ್ನಿಸಲಾಗುವುದು ಎಂದರು.

ಮಹಾತ್ಮ ಗಾಂಧಿ ವಸ್ತ್ರೋದ್ಯಮಕ್ಕೆ ಚಾಲನೆ

ಕೈಮಗ್ಗ ಮತ್ತು ಜವಳಿ ಇಲಾಖೆ ಅಭಿವೃದ್ಧಿ ಆಯುಕ್ತೆ ಕೆ.ಜ್ಯೋತಿ ಮಾತನಾಡಿ, ಸರಕಾರ ಮಹಾತ್ಮ ಗಾಂಧಿ ವಸ್ತ್ರೋದ್ಯಮ ಯೋಜನೆ ರೂಪಿಸಿದ್ದು, ಇದರಲ್ಲಿ ಕೈಮಗ್ಗ ನೇಕಾರರನ್ನೇ ಷೇರುದಾರರನ್ನಾಗಿ ಮಾಡಿಕೊಳ್ಳಲಾಗುತ್ತಿದೆ. ಸರಕಾರ 2 ವರ್ಷದ ಹಿಂದೆ ಈ ಯೋಜನೆ ಘೋಷಿಸಿತ್ತು. ಆದರೆ, ಅದಕ್ಕೆ ಚಾಲನೆ ಸಿಕ್ಕಿರಲಿಲ್ಲ. ಈಗ ಮಹಾತ್ಮ ಗಾಂಧಿ ವಸ್ತ್ರೋದ್ಯಮ ಕೋಶ ಎಂಬ ಲಿಮಿಟೆಡ್ ಕಂಪನಿ ಆರಂಭಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕೃಷಿ ಹೊಂಡ ನಿರ್ಮಾಣದಲ್ಲಿ ದಾಖಲೆ

ಕೃಷಿ ಪ್ರಗತಿಯಾದರೆ ಮಾತ್ರ ದೇಶದ ಆರ್ಥಿಕತೆ ವೃದ್ಧಿ: ಸಿಎಂ ಅಭಿಮತ

ಬೆಂಗಳೂರು: ಕೃಷಿಯಿಂದಲೇ ಅತಿ ಹೆಚ್ಚು ಉದ್ಯೋಗ ಸೃಷ್ಟಿಯಾಗುತ್ತದೆ. ಕೃಷಿ ಪ್ರಗತಿ ಆದರೆ ಮಾತ್ರ, ದೇಶದ ಆರ್ಥಿಕತೆ ಪ್ರಗತಿ ಹೊಂದುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜಿಕೆವಿಕೆ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮ ಉದ್ಘಾಟಿಸಿ ಸಾಧಕ ರೈತರನ್ನು ಪುರಸ್ಕರಿಸಿ ಮಾತನಾಡಿ, ಶೇ.70 ರಷ್ಟು ಗ್ರಾಮೀಣ ಭಾರತ ಕೃಷಿ ಮೇಲೆ ಅವಲಂಭಿತವಾಗಿದೆ. ಆಹಾರ ಉತ್ಪಾದನೆಯಲ್ಲಿ ದೇಶ ಸ್ವಾವಲಂಭಿ, ಸ್ವಾಭಿಮಾನಿ ಆಗಲು ಕೃಷಿಕ ಸಮುದಾಯ, ರೈತ ಸಮುದಾಯ ಕಾರಣ ಎಂದರು.

ಕೃಷಿ ಅಧಿಕಾರಿಗಳು ರೈತರ ಅಭಿಪ್ರಾಯ ಪಡೆದು, ರೈತರ ಅನುಭವ ಆಧಾರಿತ ತಂತ್ರಜ್ಞಾನ ಅಳವಡಿಸಿಕೊಳ್ಳಲು ಸಹಕಾರ ನೀಡಬೇಕು. ಕೃಷಿ ಇಲಾಖೆಯ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು ಎಂದು ಸೂಚನೆ ನೀಡಿದರು.

ಸಾಮಾಜಿಕ ನ್ಯಾಯ, ವರ್ಗ ರಹಿತ ಸಮಾಜ ಆಗಬೇಕಾದರೆ ರೈತರಿಗೆ ಆರ್ಥಿಕವಾಗಿ ಶಕ್ತಿ ನೀಡಬೇಕು. ಇಲ್ಲದಿದ್ದರೆ ಬದಲಾವಣೆ ಸಾಧ್ಯವಿಲ್ಲ. ಸಾಮಾಜಿಕ ಬದಲಾವಣೆ ದಿಕ್ಕಿನಲ್ಲಿ ನಾವು ಗ್ಯಾರಂಟಿಗಳನ್ನು ರೂಪಿಸಿ ಜಾರಿ ಮಾಡಿದೆವು. ಇದರಿಂದ ರಾಜ್ಯ ದಿವಾಳಿ ಆಗುತ್ತದೆ ಎಂದು ಪ್ರಧಾನಿ ಮೋದಿ ಸುಳ್ಳು ಹೇಳಿದ್ದರು. ಸತ್ಯ ಏನು ಎಂದು ನಾಡಿನ ಜನತೆಗೆ ಮನವರಿಕೆಯಾಗಿದೆ ಎಂದರು.

ನಾವು ಜಾರಿಗೆ ತಂದಿದ್ದ ಕೃಷಿ ಭಾಗ್ಯ ಯೋಜನೆ ನಮ್ಮ ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರಕಾರ ಸ್ಥಗಿತಗೊಳಿಸಿತ್ತು. ಈಗ ನಾವೇ ಅಧಿಕಾರಕ್ಕೆ ಬಂದು ಮತ್ತೆ ಜಾರಿ ಮಾಡಿದ್ದೇವೆ. ಇಲ್ಲಿಯವರೆಗೂ 24000 ಕೃಷಿ ಹೊಂಡ ನಿರ್ಮಿಸಿ ದಾಖಲೆ ಮಾಡಲಾಗಿದೆ. ನಾನೂ ರೈತ ಕುಟುಂಬದಿಂದ ಬಂದವನು, ಕೃಷಿ ಬದುಕು-ರೈತರ ಬದುಕು, ಗ್ರಾಮೀಣ ಬದುಕಿನ ಕಷ್ಟ ನಷ್ಟಗಳು ನನಗೆ ಗೊತ್ತಿದೆ. ಹೀಗಾಗಿ ರೈತರ ಪರವಾಗಿ ಸರಕಾರ ಮುಂದೆ ಬಂದ ಎಲ್ಲಾ ಪ್ರಸ್ತಾವನೆಗಳಿಗೂ ಮಂಜೂರಾತಿ ನೀಡುತ್ತಿದ್ದೇವೆ.

ರೈತರಿಗೆ ಹೆಚ್ಚು ಒತ್ತು ಕೊಡುವ ಕೆಲಸ ಮಾಡುತ್ತಿದ್ದೇವೆ. ಅದರಲ್ಲೂ ಸಾವ ಯವ ಕೃಷಿಗೆ ಹೆಚ್ಚಿನ ಒತ್ತು ನೀಡುತ್ತಿದ್ದೇವೆ ಎಂದರು.

ಪಂಪ್‌ಸೆಟ್‌ಗಳಿಗೆ 19 ಸಾವಿರ ಕೋಟಿ ಸಬ್ಸಿಡಿ

ರೈತರ ಪಂಪ್‌ಸೆಟ್‌ಗಳಿಗೆ ವರ್ಷಕ್ಕೆ ನಮ್ಮ ಸರಕಾರ 19000 ಕೋಟಿ ಸಬ್ಸಿಡಿ ನೀಡುತ್ತಿದೆ. ಕೃಷಿ ನೀರಾವರಿಗೆ 26000 ಕೋಟಿ ನೀಡಿದ್ದೇವೆ. ಆರ್ಥಿಕತೆ ದಿವಾಳಿಯಾಗಿದ್ದರೆ ಇಷ್ಟು ದೊಡ್ಡ ಮಟ್ಟದಲ್ಲಿ ರೈತಪರ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಲು ಸಾಧ್ಯವಿತ್ತೇ ಎಂದು ಪ್ರಶ್ನಿಸಿದರಲ್ಲದೆ, ಇಂಥಾ ಹೊತ್ತಲ್ಲಿ ರೈತ ಸಾಧಕರನ್ನು ಗುರುತಿಸಿ ಕರೆದು ಸನ್ಮಾನಿಸುತ್ತಿರುವುದು ಅತ್ಯಂತ ಪ್ರೋತ್ಸಾಹದಾಯಕ. ಸಮಗ್ರ ಕೃಷಿ ಮಾಡದ ಹೊರತು ಕೃಷಿ ಲಾಭದಾಯಕವಲ್ಲ. ಜನಸಂಖ್ಯೆ ಬೆಳೆಯುತ್ತಿದೆ. ನಮ್ಮ ರಾಜ್ಯದಲ್ಲಿ ರಾಜಸ್ಥಾನದ ನಂತರ ಅತಿ ಹೆಚ್ಚು ಒಣ ಕೃಷಿ ಭೂಮಿ ಹೆಚ್ಚು ಹೊಂದಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ವಸತಿ ಯೋಜನೆಗಳಲ್ಲಿ ಕೇಂದ್ರದ ಮಾದರಿ ಅನುಕರಣೆ: ಸಚಿವ ಜಮೀರ್ ಅಹಮದ್

ಬೆಂಗಳೂರು: ವಸತಿ ಯೋಜನೆಗಳಲ್ಲಿ ಕೇಂದ್ರದ ಮಾದರಿ ಅನುಸರಿಸಲಾಗುತ್ತಿದೆ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ಈ ಕುರಿತು ಹೇಳಿಕೆ ನೀಡಿರುವ ಅವರು, ಅಲ್ಪಸಂಖ್ಯಾತ ಸಮುದಾಯಕ್ಕೆ ಶೇ.15 ರಷ್ಟು ಮೀಸಲು ನಿರ್ಧಾರ ಈಗ ಕೈಗೊಂಡ ತೀರ್ಮಾನ ವಲ್ಲ. 2019 ರಲ್ಲಿ ಸಮ್ಮಿಶ್ರ ಸರಕಾರದಲ್ಲಿ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ರಚಿಸಿದ್ದ ಸಂಪುಟ ಉಪ ಸಮಿತಿ ಶಿಫಾರಸು ಮಾಡಿತ್ತು. ಸಾಚಾರ್ ಸಮಿತಿ ವರದಿ ಪ್ರಕಾರ ಕೇಂದ್ರ ಸರಕಾರದಲ್ಲಿ ಈಗಾಗಲೇ ವಸತಿ ಯೋಜನೆಗಳಲ್ಲಿ ಶೇ.15 ರಷ್ಟು ಮೀಸಲಾತಿ ಅಲ್ಪಸಂಖ್ಯಾತ ಸಮುದಾಯಕ್ಕೆ ಇದೆ. ಅದೇ ರೀತಿ ರಾಜ್ಯದಲ್ಲೂ ನೀಡಬೇಕು ಎಂಬ ಬೇಡಿಕೆ ಇತ್ತು. ಹೀಗಾಗಿ ಕೇಂದ್ರದ ಮಾದರಿಯನ್ನೇ ಅನುಸರಿಸಲಾಗಿದೆ ಎಂದು ತಿಳಿಸಿದ್ದಾರೆ.

2019 ರಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರು ಸಮ್ಮಿಶ್ರ ಸರಕಾರದಲ್ಲಿ ಮುಖ್ಯಮಂತ್ರಿ ಆಗಿದ್ದಾಗ ರಚಿಸಿದ್ದ ಸಂಪುಟ ಉಪ ಸಮಿತಿ ಶಿಫಾರಸು ಮಾಡಿದನ್ನು, ಇದೀಗ ಸಂಪುಟದ ಮುಂದೆ ಬಂದು ಒಪ್ಪಿಗೆ ದೊರೆತಿದೆ. ಈಗಾಗಲೇ ಇದ್ದ ಶೇ.10 ರಷ್ಟು ಮೀಸಲಾತಿ ಪ್ರಮಾಣ ಶೇ.15 ಕ್ಕೆ ಹೆಚ್ಚಿಸಲಾಗಿದೆ. ಅಲ್ಪಸಂಖ್ಯಾತ ಸಮುದಾಯದಲ್ಲಿ ಹೆಚ್ಚಿನ ಬಡ ಕುಟುಂಬಗಳಿದ್ದು ವಸತಿ ರಹಿತರ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸುವ ಬೇಡಿಕೆ ಇತ್ತು. 2021 ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗವು ಸಹ ಶೇ.15 ರಷ್ಟು ಮೀಸಲಾತಿ ಜಾರಿಗೊಳಿಸಬೇಕು ಎಂದು ತಿಳಿಸಿತ್ತು. ಇದೆಲ್ಲ ವಾಸ್ತವ ಅಂಶ ತಿಳಿಯದೆ ಪ್ರತಿಪಕ್ಷಗಳು ಅನಗತ್ಯ ಟೀಕೆ ಮಾಡುತ್ತಿರುವುದು ಶೋಭೆ ತರುವುದಿಲ್ಲ ಎಂದು ಸಚಿವರು ಬೇಸರ ವ್ಯಕ್ತಪಡಿಸಿದ್ದಾರೆ.

ಭ್ರಷ್ಟಾಚಾರ, ಕಮಿಷನ್ ಹಾವಳಿಗೆ ರಾಜ್ಯ ತತ್ತರ

ಬೆಂಗಳೂರು: ರಾಜ್ಯ ಸರಕಾರ ಪ್ರತೀ ಹಂತದಲ್ಲಿಯೂ ಕಮೀಶನ್ ಹಾವಳಿ ಹಾಗೂ ಭ್ರಷ್ಟಾಚಾರ ಮಿತಿಮೀರಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಈ ಸರಕಾರದಲ್ಲಿ ಏನು ನಡೆಯುತ್ತಿದೆ ಎಂಬುದಕ್ಕೆ ಮುಖ್ಯಮಂತ್ರಿ ಸಲಹೆಗಾರ ಬಿ.ಆರ್.ಪಾಟೀಲ್ ಅವರು ಹೇಳಿರುವ ಮಾತುಗಳೇ ಸಾಕ್ಷಿ. ವಸತಿ ಇಲಾಖೆಯಲ್ಲಿ ಕಮಿಷನ್ ಹಾವಳಿ ಎಷ್ಟಿದೆ ಎಂಬ ವಿಚಾರವಾಗಿ ಆಡಿಯೊ ವೈರಲ್ ಆಗಿದೆ. ಇದರಿಂದ ನನಗೆ ಯಾವುದೇ ಆಶ್ಚರ್ಯ ಆಗಿಲ್ಲ. ಅದು ನಿರಂತರವಾಗಿ ನಡೆಯುತ್ತಿದೆ. ಸೈಟ್ ಕೊಡಬೇಕಾದರೆ, ದುಡ್ಡು ಕೊಡಬೇಕಾದರೆ ಕಮಿಷನ್ ನಡೆಯುತ್ತಿದೆ. ಸರಕಾರದ ಎಲ್ಲ ಇಲಾಖೆಗಳಲ್ಲಿಯೂ ಇದು ನಡೆಯುತ್ತಿದೆ ಎಂದರು.

ಸಚಿವ ಕೃಷ್ಣ ಭೈರೇಗೌಡ ಏನು ಹೇಳಿದ್ದಾರೆ ಎಂಬುದನ್ನು ಗಮನಿಸಿದ್ದೇನೆ. ಯಾವ ಯಾವುದಕ್ಕೆ ಎಷ್ಟೆಷ್ಟು ರೇಟ್ ಫಿಕ್ಸ್ ಮಾಡಿದ್ದಾರೆ ಎಂದು ಅವರು ನೇರವಾಗಿ ಹೇಳಿದ್ದಾರೆ. ತಮ್ಮ ಇಲಾಖೆಗಳಲ್ಲಿ ಏನೆಲ್ಲಾ ನಡೆಯುತ್ತಿದೆ ಎಂಬುದು ಆಯಾ ಇಲಾಖೆಯ ಮಂತ್ರಿಗಳಿಗೆ ಗೊತ್ತಿದೆ. ಕೃಷ್ಣಭೈರೇಗೌಡರ ಇಲಾಖೆಯಲ್ಲಿ ಯಾವ ರೀತಿ ಕೆಲಸ ನಡೆಯುತ್ತಿದೆ ಎಂದು ಅವರೇ ಹೇಳಿದ್ದಾರೆ. ಈ ಸರಕಾರ ಯಾವ ರೀತಿ ನಡೆಯುತ್ತಿದೆ

ಕೇತಗಾನಹಳ್ಳಿ ಭೂಮಿ ವಿಷಯ ಸಂಬಂಧ ಕಾನೂನು ಹೋರಾಟ ಮಾಡುತ್ತಿದ್ದೇನೆ. ಕಾನೂನು ವ್ಯಾಪ್ತಿಯಲ್ಲಿ ನಾನು ಮೊದಲೇ ಹೇಳಿದ್ದೇನೆ. ರಾಜ್ಯ ಸರಕಾರ ರಾಜಕೀಯ ದುರುದ್ದೇಶದಿಂದ ಕಿರುಕುಳ ನೀಡುತ್ತಿದೆ. ಅದು 40 ವರ್ಷಗಳ ಹಿಂದೆ ಖರೀದಿ ಮಾಡಿದ ಭೂಮಿ. ಅಲ್ಲಿ ಯಾವುದೇ ರೀತಿಯ ಒತ್ತುವರಿ ಆಗಿಲ್ಲ. ಸರಕಾರ ರಾಜಕೀಯ ದ್ವೇಷ ಮಾಡಿಕೊಂಡು ಹೊರಟಿದೆ. ಅದು ಕಾನೂನು ವ್ಯಾಪ್ತಿಯಲ್ಲಿ ನ್ಯಾಯಾಲಯದಲ್ಲಿ ತೀರ್ಮಾನ ಆಗುತ್ತದೆ.

-**ಎಚ್.ಡಿ.ಕುಮಾರಸ್ವಾಮಿ** ಕೇಂದ್ರ ಸಚಿವ

ಜಯಶ್ರೀ ಕಾಲ್ಕುಂದ್ರಿ, ಬೆಂಗಳೂರು

ಯೋಗಕ್ಕೀಗ ಸುಯೋಗ

ವಿಶ್ವಸಂಸ್ಥೆಯು ಜೂನ್ 21ರಂದು ಅಂತಾರಾಷ್ಟ್ರೀಯ ಯೋಗ ದಿನವನ್ನಾಗಿ ಆಚರಿಸಲು ಘೋಷಣೆ ಮಾಡಿದ ದಿನದಿಂದ ಭಾರತ ಮಾತ್ರವಲ್ಲ, ವಿಶ್ವದೆಲ್ಲೆಡೆ ಯೋಗದ ಕಂಪು ಪಸರಿಸಿದೆ. ವಿಶ್ವದ ಪ್ರಮುಖ ನಗರಗಳಲ್ಲಿ ಯೋಗ ಪ್ರದರ್ಶನಗಳನ್ನು ನಡೆಸಲಾಗುತ್ತದೆ. ಇಷ್ಟು ಮಾತ್ರವಲ್ಲ, ಯೋಗದಿಂದ ಜನತೆಯನ್ನು ನಿರೋಗಿಗಳಾಗುವ ದಿಶೆಯಲ್ಲಿ, ಕೇಂದ್ರದ ಆಯುಷ್ ಮಂತ್ರಾಲಯವು ಕಾರ್ಯೋನ್ಮುಖವಾಗಿದೆ. ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿಗಳಾದ ಅಂಟೋನಿಯೋ ಗುಟೆರಸ್ ಅವರು, 'ಯೋಗ ಜನರನ್ನು ಒಗ್ಗೂಡಿಸುತ್ತದೆ. ದೇಹ ಮತ್ತು ಮನಸ್ಸನ್ನು ಬೆಸೆಯು ತ್ತದೆ. ಶಿಸ್ತು ಮತ್ತು ಶಾಂತಿಯನ್ನು ಕಾಪಾಡಿಕೊಳ್ಳಲು, ಮಾರ್ಗ ದರ್ಶಕವಾಗಿದೆ. ಮಾನವೀಯತೆ



ಮತ್ತು ಪ್ರಕೃತಿಯನ್ನು ಸಂಗಮಿಸುವ ಯೋಗ, ಬಲ, ಸೌಹಾರ್ದ ಮತ್ತು ಶಾಂತಿಗೆ ಮೂಲವಾಗಿದೆ. ವಿಶ್ವ ವಿಘಟನೆಯಾಗುತ್ತಿರುವ ಈ ಸಂದರ್ಭಕ್ಕೆ, ಪ್ರಾಚೀನ ಅಭ್ಯಾಸವಾದ ಯೋಗ ಮದ್ದಾಗಿದೆ' ಎಂದು ಅಭಿಪ್ರಾಯಪಡುತ್ತಾರೆ. ವಿಶ್ವದ ಬೇರೆ ಬೇರೆ ದೇಶಗಳಲ್ಲಿ ಭಾರತೀಯ ಮೂಲದ ಯೋಗ ಜನಪ್ರಿಯವಾಗಿದೆ. ಯೋಗದ ಮಹತ್ವ, ವೇದ, ಉಪನಿಷತ್ತು, ಭಗವದ್ಗೀತೆ ಹೀಗೆ ಇನ್ನೂ ಅನೇಕ ಧಾರ್ಮಿಕ ಗ್ರಂಥಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದೆ.

ಐಹಿಕ ಕಾಮನೆಗಳಿಂದ ಮನಸ್ಸನ್ನು ವಿಮೋಚನೆಗೊಳಿಸುವ ಯೋಗವು, ಪ್ರಪಂಚಕ್ಕೆ ಭಾರತದ ಕೊಡುಗೆ ಯೆಂಬುದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆ ತರುವಂತಹ ವಿಷಯ. ಪತಂಜಲಿ ಮುನಿಗಳು ಯೋಗದ ಪಿತಾಮಹರೆನಿಸಿದ್ದಾರೆ. ಸಂಸ್ಕೃತ ಪದ ವಾದ ಯೋಗದ ಮೂಲ ಪದ ಯುಜ ಎನ್ನಲಾಗಿದೆ. ಪತಂಜಲಿ ಮುನಿಗಳು, ಯೋಗ ಸಂಸ್ಥಾಪಕರು ಮಾತ್ರ ವಲ್ಲ, ಆಧ್ಯಾತ್ಮಿಕ ಚಿಂತಕರಾಗಿದ್ದರು. ಪತಂಜಲಿ ಯೋಗ ಸೂತ್ರ, ಹಿಂದೂ ತತ್ವಶಾಸ್ತ್ರದ ಪರಮ ಪವಿತ್ರ ಗ್ರಂಥವೆಂದೇ ಪರಿಗಣಿಸಲಾಗುತ್ತದೆ. 2014ರಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿಯವರಿಂದ ವಿಶ್ವಸಂಸ್ಥೆಯ ಮಹಾಸಭೆಯಲ್ಲಿ, ಜೂನ್ 21ರಂದು ಅಂತಾರಾಷ್ಟ್ರೀಯ ಯೋಗ ದಿವಸವೆಂದು ಘೋಷಿಸಬೇಕೆಂಬ ಪ್ರಸ್ತಾಪಕ್ಕೆ ಮನ್ನಣೆ ದೊರೆತು, ಭಾರತದ ಯೋಗದ ಹಿರಿಮೆಯ ಮುಕುಟಕ್ಕೆ ಗರಿ ಮೂಡಿರುವದು ನಿಜಕ್ಕೂ ಪ್ರಶಂಶಾರ್ಹ. ಜೂನ್ 21ರಂದು ಅತ್ಯಂತ ಹೆಚ್ಚು ಸಮಯ ಹಗಲಿರುವ ದಿನವೂ ಹೌದು. ಆರೋಗ್ಯಪೂರ್ಣ ಬದುಕು ಯಾರಿಗೆ ಬೇಡ? ಇಂದಿನ ನಿರಂತರ ಬದಲಾವಣೆಯ ವೇಗದಲ್ಲಿ, ನವೀನತೆ, ವೈವಿಧ್ಯ ಮತ್ತು ಐಹಿಕ ಸುಖಗಳನ್ನು ಅರಸುತ್ತಾ ಬರುತ್ತಿ ರುವ ಮಾನವನನ್ನು ಅನೇಕ ರೀತಿಯ ಚಿಂತೆ, ಒತ್ತಡ ಗಳು ಸುತ್ತುವರಿದಿವೆ. ಆಧುನಿಕ ಜೀವನಶೈಲಿ, ಮಾನವ ನನ್ನು ಅನಾರೋಗ್ಯ ಮಾತ್ರವಲ್ಲ, ಕಷ್ಟ-ಕಾರ್ಪಣ್ಯಗಳ ಸಮುದ್ರದಲ್ಲಿ ಓಲಾಡುವಂತೆ ಮಾಡಿದೆ ಎನ್ನಬಹುದು. ಒತ್ತಡಗಳಿಂದ ಮಾನವನ ಮನಸ್ಸು, ದೇಹಗಳೆರಡೂ ಕುಸಿಯುತ್ತಿವೆ. ನಮ್ಮ ಪೂರ್ವಜರು, ಸ್ವಸ್ಥ ಮನಸ್ಸು, ದೇಹಾರೋಗ್ಯ ಹಾಗೂ ಆಧ್ಯಾತ್ಮಿಕ ಸಾಧನೆಗಾಗಿ ಸಂಶೋಧಿಸಿದ ಯೋಗಶಾಸ್ತ್ರದಲ್ಲಿ ಬಳಲಿ ಬೆಂಡಾದ ಮಾನವನ ನೋವು, ಅಶಾಂತಿಗಳಿಗೂ ಸಂಪೂರ್ಣ ಪರಿಹಾರವಿದೆ, ನುರಿತ ವೈದ್ಯರಿಂದಲೂ ಗುಣಪಡಿಸಲಾಗದ ಶಾರೀರಿಕ ಮತ್ತು ಮಾನಸಿಕ ವ್ಯಾಧಿಗಳಿಂದ ಬಳಲುತ್ತಿರುವ ಜನಸಾಮಾನ್ಯರು, ಈ ಸಮಸ್ಯೆಯ ಪರಿಹಾರಕ್ಕಾಗಿ ಯೋಗಾಭ್ಯಾಸದ ಮೊರೆ ಹೋಗುತ್ತಿದ್ದಾರೆ. ಲಿಂಗ, ವಯಸ್ಸು, ಜಾತಿ ಮತ್ತು ಧರ್ಮಗಳನ್ನು ಮೀರಿ ಜನತೆ ಯೋಗದ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ತಪೋಬಲದಂತೆ ಸತತ ಯೋಗಾಭ್ಯಾಸದಿಂದಲೂ ಒಬ್ಬ ವ್ಯಕ್ತಿಯು ಅತ್ಯಂತ ಸೂಕ್ಷ್ಮರೂಪವನ್ನು ಪಡೆದು ಅದೃಶ್ಯನಾಗಬಹುದಾಂತಹ ಶಕ್ತಿಯನ್ನು ಪಡೆಯಬಹುದು ಎನ್ನಲಾಗಿದೆ.

ನಾವು ಸೇವಿಸುವ ಆಹಾರ, ಜೀವಕೋಶಗಳನ್ನು ತಲುಪಿ, ದೇಹದ ಅಂಗಗಳು, ಉತ್ತಮ ಕಾರ್ಯಕ್ಷಮತೆಯನ್ನು ಹೊಂದಿರುವುದೇ ಆರೋಗ್ಯವೆಂಬ ಭಾವನೆ ಜನಸಾಮಾನ್ಯರಲ್ಲಿ ಮನೆಮಾಡಿದೆ. ಶಾರೀರಿಕ ಆರೋಗ್ಯದ ಜತೆಗೆ, ಉತ್ತಮ ಮಾನಸಿಕ ಸ್ಥಿತಿಯೂ ಪೂರಕವಾಗಿದ್ದಾಗ ಮಾತ್ರ ಬದುಕು ಸುಗಮವಾಗಿ ಸಾಗಬಲ್ಲದು. ಯೋಗದ ದೃಷ್ಟಿಯಲ್ಲಿ, ಪ್ರತಿ ವ್ಯಕ್ತಿ, ಶಾರೀರಿಕ-ಮಾನಸಿಕ ಆರೋಗ್ಯಗಳ ಜತೆಗೆ ಆಧ್ಯಾತ್ಮಿಕವಾಗಿಯೂ ಆರೋಗ್ಯವಾಗಿದ್ದರೆ ಮಾತ್ರ ಆರೋಗ್ಯಪೂರ್ಣನೆನಿಸಿಕೊಳ್ಳುತ್ತಾನೆ ಎನ್ನಲಾಗಿದೆ. ರೋಗ ನಿವಾರಣೆಯಲ್ಲಿ ಯೋಗದ ಪಾತ್ರ ವಿಶಿಷ್ಟವೆನಿಸಿದೆ. ವರ್ತಮಾನದ ವ್ಯಾಧಿಗಳು ಮಾತ್ರವಲ್ಲ, ಮುಂದೆ ಕಾಡಲಿರುವ ರೋಗಗಳನ್ನು ನಿಗ್ರಹಿಸುವ ಮಾಂತ್ರಿಕ ಶಕ್ತಿ ಯೋಗಕ್ಕಿದೆ. ಯೋಗವೆಂಬುದು ರೋಗ ಸಂಸ್ಕಾರವನ್ನೇ ಕಿತ್ತು ಬಿಸಾಡುವಷ್ಟು ಪ್ರಬಲ ಅಸ್ತ್ರವೆನಿಸಿದೆ. ಯೋಗದ ಒಂದು ಭಾಗವೇ ಯೋಗಾಸನವೆನ್ನಬಹುದು. ಮನಸ್ಸಿನಿಂದ ಯಾವುದೇ ಸಾಧನೆ ಮಾಡಬೇಕೆಂದರೆ ಮೊದಲು ದೇಹವನ್ನು ಸುಸ್ಥಿತಿಯಲ್ಲಿರಿಸಿಕೊಳ್ಳುವು ಅಗತ್ಯ. ಯೋಗವೆಂದರೆ ಧ್ಯಾನವೆಂದು ಸಂತವ್ಯಾಸರು ನುಡಿಯುತ್ತಾರೆ. ದೀರ್ಘ ಧ್ಯಾನ ಮುದ್ರೆಗಳಿಂದ ಮನಸ್ಸಿಗೆ ಅನಿರ್ವಚನೀಯ ಶಾಂತಿ ದೊರೆತು, ಆತ್ಮ ಮತ್ತು ಪರಮಾತ್ಮಗಳೆರಡೂ ಒಂದೇ ಎನಿಸುತ್ತವೆ. ಅಜ್ಞಾನ, ಐಭೋಗದ ಲಾಲಸೆ, ಕಳವಳ, ಆತಂಕಗಳು ಮರೆಯಾಗಿ ನೆಮ್ಮದಿಯ ಭಾವ ಮೂಡುತ್ತದೆ. ಧ್ಯಾನವನ್ನು ದಿನದಲ್ಲಿ ಒಂದು ಬಾರಿ ಅಥವಾ ಎರಡು ಬಾರಿ (ಸುಮಾರು 20 ನಿಮಿಷಗಳ ಕಾಲ) ಮಾಡುವದರಿಂದ ಹಲವಾರು ಪ್ರಯೋಜನಗಳಿವೆ. ಧ್ಯಾನದಿಂದ ಕ್ರಿಯಾಶೀಲತೆ, ಏಕಾಗ್ರತೆ, ಚುರುಕುತನ, ನೆನಪಿನ ಶಕ್ತಿ ಮತ್ತು ದೈಹಿಕ ಶಕ್ತಿಗಳನ್ನು ಹೆಚ್ಚಿಸಿಕೊಳ್ಳಬಹುದು. ಅತ್ಯಂತ ಆತಂಕಭರಿತ ಸನ್ನಿವೇಶಗಳು ಎದುರಾದಾಗ, ಧ್ಯಾನದ ಮೂಲಕ ಮನಸ್ಸಿನಲ್ಲಿ ಮೂಡುವ ಇತ್ಯಾತ್ಮಕ ಭಾವನೆಗಳನ್ನು ನಿರ್ವಹಣೆ ಮಾಡಲು ಸಾಧ್ಯ. ಇಷ್ಟು ಮಾತ್ರವಲ್ಲ, ದೀರ್ಘಕಾಲದಿಂದ ಕಾಡುವ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳೆನಿಸಿದ ಮೈಗ್ರೇನ್, ಖಿನ್ನತೆ, ಮಾದಕದ್ರವ್ಯ ವ್ಯಸನ, ನಿದ್ರಾರಾಹಿತ್ಯಗಳನ್ನು

ನಿವಾರಿಸಿಕೊಳ್ಳಬಹುದು. ಯೋಗವೆಂದರೆ ಯೋಗವೂ ಹೌದು, ಅದೇ ರೀತಿ ಪ್ರಾಣಾಯಾಮವೂ ಹೌದು. ನಮ್ಮ ಉಸಿರಿನಲ್ಲಿ ಪ್ರಾಣ ಶಕ್ತಿ ಹರಿಯುತ್ತದೆ. ಈ ಪ್ರಾಣ ಶಕ್ತಿಯನ್ನು ವ್ಯವಸ್ಥಿತವಾಗಿ ನಿಯಂತ್ರಿಸುವದರಿಂದ ದೇಹದಲ್ಲಿ ಹರಿಯುವ ಚೈತನ್ಯವನ್ನೂ ಕ್ರಮಬದ್ಧಗೊಳಿಸಬಹುದು. ಯೋಗವು ಎಂಟು ಅಂಗಗಳನ್ನು ಹೊಂದಿದೆ. ಅದೇ ಅಷ್ಟಾಂಗ ಯೋಗ. ಪ್ರಾಚೀನ ಋಷಿ-ಮುನಿಗಳು ಪ್ರತಿಪಾದಿಸಿದ ಎಂಟು ಯೋಗ ಸೂತ್ರಗಳೆಂದರೆ, ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ. ಯಮಸೂತ್ರದಲ್ಲಿ, ಪಾಲಿಸಬೇಕಾದ ನಿಯಮಗಳೆಂದರೆ, ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹಗಳು. ಯಾವುದೇ ಕಾಲದಲ್ಲಿ ಯಾರಿಗೂ ನೋವುಂಟು ಮಾಡದಿರುವದು ಅಹಿಂಸೆ, ಕೆಲಸ-ಕಾರ್ಯಗಳಲ್ಲಿ ಯಥಾರ್ಥತೆ ತೋರುವದು ಸತ್ಯ, ಧರ್ಮರಹಿತ ಹಣವನ್ನು ಗಳಿಸದಿರುವದು ಅಸ್ತೇಯ, ಧರ್ಮಾನುಸಾರ ವಿವಾಹವಾದ ಸಂಗಾತಿಗೆ ನಿಷ್ಟೆಯಿಂದಿರುವದು ಬ್ರಹ್ಮಚರ್ಯ ಮತ್ತು ಅಗತ್ಯಕ್ಕಿಂತಲೂ ಹೆಚ್ಚಾಗಿ ಏನನ್ನೂ ಸ್ವೀಕರಿಸದಿರುವದು. ಅಪರಿಗ್ರಹಗಳು ಯಮ ನಿಯಮಗಳೆನಿಸಿವೆ. ಪತಂಜಲಿ ಮುನಿಗಳ ಉಪದೇಶಾಮೃತದಂತೆ, ಈ ಐದೂ ನಿಯಮಗಳನ್ನು ಪರಿಪಾಲಿಸಿದ ಮನುಜ ದೇವಮಾನವನೆನುಸುತ್ತಾನೆ. ಮಾನವನ ದೇಹವೇ ದೇಗುಲವೆನಿಸಿದೆ. ಇದರಲ್ಲಿ ಪ್ರಾಣ ಸ್ವರೂಪನಾದ ಭಗವಂತ ನೆಲೆಸಿರುವದರಿಂದ. ಈ ದೇಹವನ್ನು ಶುಚಿಗೊಳಿಸಿಕೊಳ್ಳುವುದರ ಜತೆಗೆ ಋಣಾತ್ಮಕ ಭಾವನೆಗಳನ್ನು ಹೊರತಳ್ಳಬೇಕು. ಮನಸ್ಸಿನಿಂದ ಸಾಧನೆ ಮಾಡಲು ದೇಹದ ಆರೋಗ್ಯವೂ ಅತಿ ಮುಖ್ಯ. ದೇಹವನ್ನು ವಿವಿಧ ಭಂಗಿಗಳಲ್ಲಿ ತಿರುಗಿಸಿ, ಯೋಗಾಸನ ಮಾಡುವುದರಿಂದ ದೇಹದಲ್ಲಿ, ರಕ್ತದ ಪರಿಚಲನೆ ಸರಿಯಾಗುವುದರೊಂದಿಗೆ, ವಾತ-ಶೀತ-ಪಿತ್ತಗಳು ಸಮಸ್ಥಿತಿಯಲ್ಲಿರುತ್ತವೆ. ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯಗಳು ಸಮತೋಲನದಲ್ಲಿರುತ್ತವೆ. ಈ ನಿಯಮಗಳ ಪಾಲನೆಯೇ ಮಹಾವ್ರತ ಎನಿಸಿದೆ. ಪ್ರಾಥಮಿಕವಾಗಿ ಗುರುಮುಖದಿಂದಲೇ ಯೋಗಾಸನಗಳನ್ನು ಕಲಿಯುವದು ಸೂಕ್ತ, ಅಭ್ಯಾಸದಿಂದ ಆಸನ ಸ್ಥಿರವಾಗಿರಬೇಕು ಮತ್ತು ನೋವುರಹಿತವಾಗಿರಬೇಕು, ಎಲ್ಲ ಆಸನಗಳನ್ನು ಅಭ್ಯಸಿಸುತ್ತಾ ಹೋದರೆ, ಆಧ್ಯಾತ್ಮ ವಿದ್ಯೆ ಗೋಚರವಾಗುತ್ತದೆ. ಭಗವಂತನಲ್ಲಿ ಶ್ರದ್ಧೆ-

ಭಕ್ತಿಗಳು ಮೂಡಿ ಮನಸ್ಸು ಸದಾ ಪ್ರಸನ್ನ ಚಿತ್ತವಾಗಿರುತ್ತದೆ. ಪತಂಜಲಿ ಮುನಿಗಳ ಪ್ರಕಾರ, ಯೋಗಾಸನವೆಂದರೆ, ಯೋಗಾಭ್ಯಾಸಿಯು ಧೃಡ ಮತ್ತು ಆರಾಮ ಸ್ಥಿತಿಯಲ್ಲಿ ಕುಳಿತುಕೊಳ್ಳುವ ಭಂಗಿ ಎಂದು ವ್ಯಾಖ್ಯಾನಿಸಿದ್ದಾರೆ. ಯೋಗದ ವಿವಿಧ ಆಸನಗಳನ್ನು ದೇಹದ ಭಾಗಗಳಿಗೆ ವ್ಯಾಯಾಮವಾಗುವಂತೆ ವಿನ್ಯಾಸಗೊಳಿಸಲಾಗಿದೆ. ಜನಪ್ರಿಯ ಯೋಗಾಸನಗಳೆಂದರೆ, ಸೂರ್ಯ ನಮಸ್ಕಾರ, ಭುಜಂಗಾಸನ, ವೀರಭದ್ರಾಸನ, ಶೀರ್ಷಾಸನ, ಮತ್ತು ತಾಡಾಸನಗಳು.

ಯೋಗಾಸನಗಳನ್ನು ನಿರಂತರ ಮಾಡುವದರಿಂದ ರಕ್ತ ಪರಿಚಲನೆ ಉತ್ತಮವಾಗಿ, ಸ್ನಾಯು ಬಲ ಸುಧಾರಿಸುವುದರೊಂದಿಗೆ ದೈಹಿಕ ಸಾಮರ್ಥ್ಯ ಹೆಚ್ಚುತ್ತದೆ ಮತ್ತು ಉತ್ತಮ ನಿದ್ರೆ ಬರುತ್ತದೆ. ಯೋಗಾಭ್ಯಾಸಗಳಿಗೂ ಮತ್ತು ವ್ಯಾಯಾಮಗಳಿಗೂ ಹಲವಾರು ಅಂತರಗಳಿವೆ. ಯೋಗಾಭ್ಯಾಸಗಳನ್ನು ಮಾಡುವಾಗ ಮಿತವಾದ ಶಕ್ತಿ ವ್ಯಯವಾದರೆ, ವ್ಯಾಯಾಮಗಳನ್ನು ಮಾಡುವಾಗ ಹೆಚ್ಚಿನ ಶಕ್ತಿಯ ವ್ಯಯವಾಗುತ್ತದೆ. ಯೋಗಾಭ್ಯಾಸ ಗಳು ಆಯಾಸವನ್ನುಂಟು ಮಾಡದೆ, ದೇಹವನ್ನು ಹಗುರವಾಗಿಸುತ್ತದೆ. ಇದಕ್ಕೆ ವಿಪರೀತವಾಗಿ ವ್ಯಾಯಾಮಗಳು, ಆಯಾಸದ ಜತೆಗೆ ದೈಹಿಕ ಅಸ್ವಸ್ಥತೆ ಯನ್ನುಂಟು ಮಾಡುತ್ತವೆ. ಯೋಗಾಭ್ಯಾಸಗಳಿಗೆ ವಯಸ್ಸು ತಡೆಗೋಡೆಯಾಗಲಾರದು. ವಯಸ್ಸು ಹೆಚ್ಚಾದಂತೆ ವ್ಯಾಯಾಮಗಳನ್ನು ಮಾಡುವುದು ಕಷ್ಟ ವೆನಿಸುತ್ತದೆ. ಯೋಗಾಸನಗಳು, ಶಾರೀರಕ, ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯ ಸುಧಾರಣೆಯ ಗುರಿ ಹೊಂದಿದರೆ, ವ್ಯಾಯಾಮಗಳು ಶಾರೀರಿಕ ಮತ್ತು ಮಾನಸಿಕ ಆರೋಗ್ಯ ಸುಧಾರಣೆಯ ಗುರಿ ಹೊಂದಿವೆ. ಇಂದಿನ ದಿನಗಳಲ್ಲಿ ವಿಶ್ವದಾದ್ಯಂತ ಸುಮಾರು ಐದು ಕೋಟಿಗೂ ಮಿಕ್ಕ ಜನರು ಯೋಗಾಭ್ಯಾಸ ಮಾಡುತ್ತಿ ದ್ದಾರೆ. ಗಮನಾರ್ಹ ವಿಷಯವೆಂದರೆ, ಅಮೆರಿಕದಲ್ಲಿ ಯೋಗ ವಾಣಿಜ್ಯ ಉದ್ಯಮವಾಗಿದೆ. ಯೋಗ ಸಾಧನೆಗೆ ಪೂರಕವಾಗಿರುವ ಯೋಗ ಪ್ಯಾಂಟ್ಸ್, ಯೋಗ ಮ್ಯಾಟ್, ಯೋಗ ಕ್ಲಬ್ಗಳು ಹೀಗೆ ಎಲ್ಲವೂ ವಾಣಿಜ್ಯೀಕರಣಗೊಂಡಿವೆ. ಶಾಲೆಗಳಲ್ಲಿ, ಯೋಗಾ ಭ್ಯಾಸವನ್ನು ಕಡ್ಡಾಯಗೊಳಿಸುವುದು ಸೂಕ್ತ. ಶಾಲೆ ಗಳಲ್ಲಿ ಯೋಗ ಕಡ್ಡಾಯವಾದರೆ ಸ್ವಸ್ಥ ಸಮಾಜದ ನಿರ್ಮಾಣವಾಗುತ್ತದೆ. ಸರಿಯಾದ ಆಸನಗಳನ್ನು ಸರಿಯಾದ ಕ್ರಮಗಳಲ್ಲಿ ಮಾಡುವುದರಿಂದ ಮಕ್ಕಳಲ್ಲಿ ದೇಹಾಲಸ್ಯ ದೂರವಾಗಿ ಲವಲವಿಕೆ, ಉತ್ಸಾಹ, ಶುದ್ಧ ರಕ್ತ ಪರಿಚಲನೆ, ಉದ್ವೇಗರಹಿತ ಶಾಂತ ಮನಸ್ಥಿತಿ ಮೂಡುತ್ತವೆ. ಯೋಗವನ್ನು ಕುರಿತು ಕೆಲವರಲ್ಲಿ, ಭಯ ಮತ್ತು ಭ್ರಮೆಗಳು ಮನೆ ಮಾಡಿವೆ. ಅಂತರಂಗದ ಕನ್ನಡಿಯಾದ ಯೋಗ ಹಿಂದೂ ಧರ್ಮವನ್ನು ಪ್ರಚುರಪಡಿಸುತ್ತದೆ ಎಂಬ ಅಪಾದನೆ, ಆಕ್ಷೇಪ, ಆರೋಪಗಳು ತೇಲಿ ಬರುತ್ತಿರುವುದು ವಿಪರ್ಯಾಸದ ಸಂಗತಿ. ಯೋಗ ಸಾಧನೆ ಚಿಂತನೆಯನ್ನಾಧರಿಸಿದ್ದೇ ಹೊರತು ಧರ್ಮವನ್ನಾಧರಿಸಿದ್ದಲ್ಲವೆಂಬ ಮಾತಿನಲ್ಲಿ ಸತ್ಯಾಂಶವಿಲ್ಲದಿಲ್ಲ. ಯೋಗ ವ್ಯಕ್ತಿಯ ವಿಕಸನಕ್ಕೆ ಸಾಧನವೆಂದು ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ್ದಾರೆ. ಆರೋಪ-ಪ್ರತ್ಯಾರೋಪಗಳೇನೇ ಇರಲಿ, ಯೋಗಾಭ್ಯಾಸದ ಜನಪ್ರಿಯತೆ ಹೆಚ್ಚುತ್ತಲೇ ಇರುವುದು ಸಮಾಧಾನಕರ ಸಂಗತಿ. ಪ್ರಧಾನಿ ಮೋದಿಯವರು, ಅಭಿಪ್ರಾಯ ಪಡುವಂತೆ, ಭಿಯೋಗ ಪ್ರೀತಿಯನ್ನು ಧಾರೆಯೆರೆಯುತ್ತದೆ. ಯೋಗದ ಮೂಲಕ ಏಕ ಭಾರತ, ಶ್ರೇಷ್ಠ ಭಾರತ ಎಂಬುದನ್ನು ಜಗತ್ತಿನ ಮುಂದೆ ನಾವು ಸಾದರಪಡಿಸಬಹುದು. ವಿಶ್ವಾದ್ಯಂತ ಜನರು ಸ್ವಪ್ರೇರಣೆಯಿಂದ ಭಾಗಿಯಾಗಿರುವುದು ಯೋಗ ಶಕ್ತಿಯ ವಿಸ್ತರಣಶೀಲತೆಯನ್ನು ತೋರುತ್ತದೆ. ಹೀಗಾಗಿಯೇ 'ವಸುಧೈವ ಕುಟುಂಬಕಮ್'ಗಾಗಿ ಯೋಗ ಅವಶ್ಯವಾಗಿದೆ. ಯೋಗಾಭ್ಯಾಸಗಳಿಂದ ಜಾಗತಿಕ ಆರೋಗ್ಯ ಸಮಸ್ಯೆಗಳು ಪರಿಹಾರವಾಗಿ, ವಿಶ್ವದೆಲ್ಲೆಡೆ ಜನತೆ ಆರೋಗ್ಯವಂತರಾಗಲೆಂಬ ಸದಾಶಯ ಭಾರತೀಯರದು.

ಇಂದು ವಿಶ್ವ ಸಂಗೀತ ದಿನವೂ ಹೌದು

ಇಂದು ವಿಶ್ವ ಯೋಗ ದಿನಾಚರಣೆ ಅಲ್ಲದೆ, ವಿಶ್ವ ಸಂಗೀತ ದಿನವೂ ಹೌದು. ಪ್ರತಿ ವರ್ಷ ಜೂನ್ 21ರಂದು ವಿಶ್ವ ಸಂಗೀತ ದಿನವನ್ನು ಆಚರಿಸಲಾಗುತ್ತದೆ. ಈ ದಿನವನ್ನು ಫ್ರಾನ್ಸ್‌ನಲ್ಲಿ 1982ರಲ್ಲಿ ಪ್ರಾರಂಭಿಸಲಾಯಿತು. ಈಗ ಪ್ರಪಂಚದಾದ್ಯಂತ ಈ ದಿನವನ್ನು ಆಚರಿಸಲಾ ಗುತ್ತಿದೆ. ಸಂಗೀತದ ಚೈತನ್ಯ ಮತ್ತು ಮಹತ್ವ ವನ್ನು ಗೌರವಿಸಲು ಇಂದು ವೃತ್ತಿಪರ ಮತ್ತು ಹವ್ಯಾಸಿ ಸಂಗೀತಗಾರರು ಸಾರ್ವಜನಿಕರಿಗಾಗಿ ಸಂಗೀತ ಕಚೇರಿಗಳನ್ನು ನಡೆಸುವುದು ರೂಢಿಯಲ್ಲಿದೆ.

3ನೇ ಜಾಗತಿಕ ಯುದ್ಧಕ್ಕೆ ಇರಾನ್-ಇಸ್ರೇಲ್ ಮುನ್ನುಡಿ

ಇರಾನ್-ಇಸ್ರೇಲ್ ನಡುವೆ ನಿರಂತವಾಗಿ ಯುದ್ಧ ನಡೆಯುತ್ತಿದೆ. ಉಭಯ ದೇಶಗಳು ಆಗಸದಿಂದ ಬೆಂಕಿ ಉಗುಳುತ್ತಿವೆ. ಕ್ಷಿಪಣಿ ದಾಳಿಗೆ 2 ದೇಶಗಳಲ್ಲೂ ಅಪಾರ ಪ್ರಮಾಣದ ಸಾವು ನೋವು ಸಂಭವಿಸಿದೆ. ಯುದ್ಧ ನಿಲ್ಲಿಸಿ ಎನ್ನುತ್ತಿರುವ ದೊಡ್ಡಣ್ಣ ಅಮೆರಿಕದ ಮಾತಿಗೆ ಸೊಪ್ಪು ಹಾಕುತ್ತಿಲ್ಲ. ಸದ್ಯ 8ನೇ ದಿನಕ್ಕೆ ಯುದ್ಧ ಕಾಲಿಟ್ಟಿದ್ದು, 3ನೇನೇ ಜಾಗತಿಕ ಯುದ್ಧ ನಡೆಯುವ ಲಕ್ಷಣಗಳು ದಟ್ಟವಾಗಿವೆ. ಇರಾನ್, ಇಸ್ರೇಲ್ ನಡುವೆ ಯುದ್ಧ ಯಾಕೆ? ಇರಾನ್‌ಗೆ ಪರೋಕ್ಷವಾಗಿ ಬೆಂಬಲಕ್ಕೆ ನಿಂತಿರುವ ಉಗ್ರ ಸಂಘಟನೆಗಳು ಯಾವು ಎನ್ನುವ ಸಂಪೂರ್ಣ ಮಾಹಿತಿ ಇಲ್ಲಿದೆ.

ಆಪ್ತಮಿತ್ರರೂ ಈಗ ಶತ್ರುಗಳು

ಒಂದು ಕಾಲದಲ್ಲಿ ಇರಾನ್ ಹಾಗೂ ಇಸ್ರೇಲ್ ಆಪ್ತಮಿತ್ರ ರಾಷ್ಟ್ರಗಳು. 1948ರಲ್ಲಿ ಇಸ್ರೇಲ್ ಸ್ಥಾಪನೆಯಾದಾಗ, ಮುಸ್ಲಿಂ ಬಹುಸಂಖ್ಯಾತ ಪಶ್ಚಿಮ ಏಷ್ಯಾದ ದೇಶಗಳು ಇಸ್ರೇಲ್ ಅನ್ನು ಒಂದು ದೇಶ ಎಂದು ಗುರುತಿಸಲು ನಿರಾಕರಿಸಿದವು. ಆದಾಗ್ಯೂ, ಶಿಯಾ ಮುಸ್ಲಿಂ

ಬಹುಸಂಖ್ಯಾತ ಇರಾನ್ ಮತ್ತು ಟರ್ಕಿ ಇಸ್ರೇಲ್ ಅನ್ನು ದೇಶವಾಗಿ ಗುರುತಿಸಿ ದವು. ಇದಕ್ಕೆ ಒಂದು ಕಾರಣ 2 ದೇಶಗಳು ಅಮೆರಿಕದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದವು. ಆ ಸಮಯದಲ್ಲಿ, ಇರಾನ್ ಅನ್ನು ಶಾ ಮೊಹಮ್ಮದ್ ರೆಜಾ ಪಹೂವಿ ಆಳುತ್ತಿದ್ದರು. ಶೀತಲ ಸಮರದ ಸಮಯದಲ್ಲಿ ಇರಾನ್, ಯುನೈಟೆಡ್ ಸ್ಟೇಟ್ಸ್ ಪ್ರಮುಖ ಮಿತ್ರ ರಾಷ್ಟ್ರವಾಗಿತ್ತು. ಮುಂದಿನ ಎರಡು ದಶಕಗಳ ಕಾಲ, ಮಾಜಿ ಇಸ್ರೇಲ್ ಪ್ರಧಾನಿ ಡೇವಿಡ್ ಬೆನ್-ಗುರಿಯನ್ ತಮ್ಮ ಪರಿಧಿ ಸಿದ್ಧಾಂತದ ಮೂಲಕ ಅರಬ್ ಅಲ್ಲದ ದೇಶಗಳೊಂದಿಗೆ ಮೈತ್ರಿ ಮಾಡಿ ಕೊಳ್ಳಲು ಪ್ರಯತ್ನಿಸಿದರು. ಇಸ್ರೇಲ್ ಇರಾನ್, ಟರ್ಕಿ ಮತ್ತು ಇಥಿಯೋಪಿಯಾದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿತ್ತು. ಎಲ್ಲವೂ ಚೆನ್ನಾಗಿ ನಡೆಯುತ್ತಿರುವಾಗ, 1979 ರಲ್ಲಿ ಇರಾನ್‌ನಲ್ಲಿ ಇಸ್ಲಾಮಿಕ್ ಕ್ರಾಂತಿಯ ನಂತರ ಇಸ್ರೇಲ್‌ನೊಂದಿಗಿನ ಇರಾನ್ ಸಂಬಂಧಗಳು ಬದಲಾದವು ಶಾ ಮೊಹಮ್ಮದ್ ತನ್ನ ಸ್ಥಾನವನ್ನು ಕಳೆದುಕೊಂಡರು. ಅಯತೊಲ್ಲಾ ಅಲಿ ಖಮೇನಿ ನೇತೃತ್ವದಲ್ಲಿ ಇರಾನ್ ಇಸ್ಲಾಮಿಕ್ ಗಣರಾಜ್ಯವಾಗಿ ಸ್ಥಾಪಿಸಲ್ಪಟ್ಟಿತು. ಎರಡೂ ದೇಶ ಗಳ ಇಸ್ಲಾಮಿಕ್ ಅಂಶಗಳು ಮತ್ತು ಪ್ಯಾಲೆಸ್ತೀನ್ ಪರ ಇರಾನ್ ವಕಾಲತ್ತು ವಹಿಸಿದ್ದು ಇಬ್ಬರ ನಡುವಿನ ಗೆಳೆತನ ಹಗೆತನಕ್ಕೆ ತಿರುಗಿತು. ಇರಾನ್, ಇಸ್ರೇಲಿ ಪಾಸ್‌ಪೋರ್ಟ್‌ಗಳನ್ನು ಸ್ವೀಕರಿಸಲು ನಿರಾಕರಿಸಿತು. ಇರಾನ್, ಇಸ್ರೇಲ್ ಅನ್ನು 'ಇಸ್ಲಾಂನ ಶತ್ರು'ಮತ್ತು ಪುಟ್ಟ ದೆವ್ವ ಎಂದು ಬಣ್ಣಿಸಿತು.

ಇಸ್ರೇಲ್‌ಗೆ ಕ್ಯಾನ್ಸರ್ ಗೆಡ್ಡೆ ಎಂದಿದ್ದ ಖಮೇನಿ

2020ರ ಡಿಸೆಂಬರ್ ತಿಂಗಳಲ್ಲಿ ಇರಾನ್ ಪ್ರಸ್ತುತ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ, ಇಸ್ರೇಲ್ ಅನ್ನು ಕ್ಯಾನ್ಸರ್ ಗೆಡ್ಡೆ'' ಎಂದು ಬಣ್ಣಿಸಿದರು ಮತ್ತು ಅದನ್ನು ತೆಗೆದುಹಾಕಬೇಕೆಂದು ಕರೆ ನೀಡಿದರು. 2023ರಲ್ಲಿ ಇಸ್ರೇಲ್ ಮೇಲೆ ಹಮಾಸ್ ದಾಳಿಯೊಂದಿಗೆ ಈ ಪ್ರದೇಶದಲ್ಲಿ ಉದ್ವಿಗ್ನತೆ ಪ್ರಾರಂಭವಾಯಿತು.

ಅಭಿವೃದ್ಧಿ ರಾಷ್ಟ್ರದ ಮೇಲೆ ಇರಾನ್ ಕೆಂಗಣ್ಣು

ಬ್ರಿಟನ್ ಮತ್ತು ಅಮೆರಿಕದ ಜತೆಗೆ ಇಸ್ರೇಲ್ ನಿಕಟ ಸಂಬಂಧ ಹೊಂದಿರುವುದು ಇರಾನ್ ಕೆಂಗಣ್ಣು ಬೀರಿತು. ಆಧುನಿಕತೆಯ ಕಡೆಗೆ ಮುಖಮಾಡಿದ್ದ ಇರಾನ್, ಪಾಶ್ಚಿಮಾತ್ಯ ದೇಶಗಳನ್ನು ಶತ್ರುಗಳಂತೆ ನೋಡಲು ಶುರುಮಾಡಿತು. ಡೆತ್ ಟು ಅಮೆರಿಕ ಎಂಬ ಸಾಲುಗಳನ್ನು ಈಗ ತಾನೆ ಮಾತು ಕಲಿಯುತ್ತಿದ್ದ ಇರಾನಿನ ಮಕ್ಕಳು ತೊದಲಲು ಪ್ರಾರಂಭಿಸಿದರು. ಸೇನಾ ಬಲ, ಆರ್ಥಿಕತೆ ಮತ್ತು ತಂತ್ರಜ್ಞಾನದಲ್ಲಿ ವೇಗವಾಗಿ ಬೆಳೆಯುತ್ತಾ ಮಧ್ಯಪ್ರಾಚ್ಯದ ಚಿತ್ರಣವನ್ನು ಬದಲಿಸುತ್ತಿದ್ದ ಇಸ್ರೇಲ್ ದೇಶವನ್ನು ಸದೆಬಡಿಯುವತ್ತ ಇರಾನ್ ತನ್ನ ಗುರಿಯನ್ನು ಕೇಂದ್ರೀಕರಿಸಿತು.

ಇರಾನ್ ಮೇಲೆ ಭಯೋತ್ಪಾದಕ ದಾಳಿ

ಇರಾನ್ ಯುರೇನಿಯಂ ಪದಾರ್ಥವನ್ನು ಸಮೃದ್ಧಗೊಳಿಸುತ್ತಿರುವ ವೇಗವು ಇಸ್ರೇಲ್ ಮತ್ತು ಅಮೆರಿಕದ ಆತಂಕಕ್ಕೆ ಕಾರಣವಾಯಿತು.ಇಸ್ರೇಲ್ ದೇಶವನ್ನು ತನ್ನ ಬಾಡಿಗೆ ಸಂಘಟನೆಗಳಾದ ಹೌತಿ, ಹಮಾಸ್ ಮತ್ತು ಹೆಜ್ಬುಲ್ಲಾಗಳ ಮೂಲಕ ನಿಯಂತ್ರಿಸಲು ಪ್ರಯತ್ನಿಸುತ್ತಿದ್ದ ಇರಾನ್ ಇದೇ ಭಯೋತ್ಪಾದಕ ಸಂಘಟನೆಗಳ ಮೂಲಕ 2023ರ ಅಕ್ಟೋಬರ್ 7ರಂದು ಇಸ್ರೇಲ್ ನಾಗರಿಕರ ಮೇಲೆ ಅಮಾನುಷ ದಾಳಿ ನಡೆಸಿತ್ತು. ಇದಕ್ಕೆಲ್ಲ ಪ್ರತೀಕಾರ ತೀರಿಸಲು ಇಸ್ರೇಲ್, ಇರಾನ್ ವಿರುದ್ಧ ಯುದ್ಧ ಪ್ರಾರಂಭಿಸಿತು.

ಇರಾನ್ ಮಿತ್ರರೆಲ್ಲ ಮೌನ

ಇಸ್ರೇಲ್‌ಇರಾನ್ ಸಂಘರ್ಷ ನಿಲ್ಲುವ ಲಕ್ಷಣ ಕಾಣುತ್ತಿಲ್ಲ. ಇರಾನ್ ಮೇಲೆ ಇಸ್ರೇಲ್ ಹಲವು ದಿಕ್ಕಿನಿಂದ ದಾಳಿ ನಡೆಸುತ್ತಿದೆ. ಇರಾನ್ ಸರ್ವೋಚ್ಚ ನಾಯಕ ಆಯಾತೊಲ್ಲಾ ಅಲಿ ಖಮೇನಿ ಅವರ ಎಡಗೈ, ಬಲಗೈನಂತಿದ್ದವರು, ಯುದ್ಧತಂತ್ರಗಳಲ್ಲಿ ನೆರವು ನೀಡುತ್ತಿದ್ದವರು ದಾಳಿಯಲ್ಲಿ ಅಸುನೀಗಿದ್ದಾರೆ. ಪರಮಾಪ್ತ ರಾಷ್ಟ್ರಗಳಾದ ರಷ್ಯಾ, ಚೀನಾ, ಉತ್ತರ ಕೊರಿಯಾ ನಿರ್ಣಾಯಕ ಸಂದರ್ಭದಲ್ಲಿ ನೆರವಿಗೆ ಬಂದಿಲ್ಲ. ಜಿ7 ಶೃಂಗಸಭೆಯಲ್ಲಿ ಇಸ್ರೇಲ್ ಪರವಾದ ಅಭಿಪ್ರಾಯ ಕೇಳಿ ಬಂದಿದೆ. ರಷ್ಯಾ, ಚೀನಾ ಸೇರಿದಂತೆ ಹಲವು ರಾಷ್ಟ್ರಗಳು ಇಸ್ರೇಲ್ ದಾಳಿಯನ್ನು ಖಂಡಿಸಿವೆಯೇ ವಿನಾ, ಸಮರದಲ್ಲಿ ಇರಾನ್‌ಗೆ ಶಕ್ತಿ ತುಂಬುವ ಕೆಲಸ ಮಾಡಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ, ಪಶ್ಚಿಮ ಏಷ್ಯಾದಲ್ಲಿ ಇರಾನ್‌ಗೆ ಎಲ್ಲ ರೀತಿಯಲ್ಲೂ ಬೆಂಬಲ ನೀಡುತ್ತಿದ್ದ ಹಲವು ಬಂಡುಕೋರ ಸಂಘಟನೆಗಳು ಮಾತನಾ ಡುತ್ತಿಲ್ಲ. ಹೀಗಾಗಿ, ಯುದ್ಧದಲ್ಲಿ ಇರಾನ್‌ಗೆ ಯಾರಿಂದಲೂ ಬೆಂಬಲ ಸಿಗದಂತೆ ಆಗಿದೆ. ಇರಾನ್‌ಗೆ ಸದಾ ಬೆಂಬಲ ನೀಡುತ್ತಿದ್ದ ಲೆಬನಾನ್‌ನ ಹಿಜ್ಬುಲ್ಲಾ, ಪ್ಯಾಲೆಸ್ಟೀನ್‌ನ ಹಮಾಸ್, ಯೆಮನ್‌ನ ಹುಥಿ ಮತ್ತು ಇರಾಕ್‌ನ ಶಿಯಾ ಬಂಡುಕೋರ ಸಂಘಟನೆಗಳು ಮೌನವಹಿಸಿವೆ.

ಆಪರೇಷನ್ ರೈಸಿಂಗ್ ಲಯನ್

ಇರಾನ್ ಹೆಡೆಮುರಿ ಕಟ್ಟಲು ಇಸ್ರೇಲ್ ಪಡೆಗಳು ಆಪರೇಷನ್ ರೈಸಿಂಗ್ ಮೂಲಕ ಕ್ಷಿಪಣಿ ದಾಳಿ ನಡೆಸಿದೆ. ಈವರೆಗೆ ಇಸ್ರೇಲ್ ದಾಳಿಗೆ ಇರಾನ್‌ನಲ್ಲಿ 650ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ. ಇರಾನ್ ಪರಮಾಣು ಕೇಂದ್ರಗಳನ್ನು ಗುರಿಯಾಗಿಸಿ ಇಸ್ರೇಲ್ ದಾಳಿ ಮಾಡುತ್ತಿದೆ. ಇರಾನಿನ ನತಾಂಜ್ ಎಂಬ ಪರಮಾಣು ಕೇಂದ್ರ ನಾಶಪಡಿಸುವ ಗುರಿಯನ್ನು ಇಸ್ರೇಲ್ ಹೊಂದಿದೆ. ಇಸ್ರೇಲ್ ದಾಳಿಗೆ ಪ್ರತಿಯಾಗಿ ಇರಾನ್ ಕೂಡ ಇಸ್ರೇಲ್ ಮೇಲೆ ಡ್ರೋನ್ ಮತ್ತು ಕ್ಷಿಪಣಿಗಳ ಸುರಿಮಳೆ ಸುರಿಸಿದೆ. ಸೌದಿ ಅರೇಬಿಯಾ ಮತ್ತು ಜೋರ್ಡಾನ್ ದೇಶಗಳು ತಮ್ಮ ವಾಯು ಪ್ರದೇಶದಲ್ಲಿ ಈ ದಾಳಿಯನ್ನು ಹಿಮ್ಮೆಟ್ಟಿಸಲು ಇಸ್ರೇಲಿಗೆ ಬೆಂಬಲ ನೀಡುತ್ತಿರುವುದು ರಹಸ್ಯವಾಗಿ ಉಳಿದಿಲ್ಲ.

ಭಾರತಕ್ಕೆ ನಷ್ಟ?

2 ದೇಶಗಳ ನಡುವಿ ಯುದ್ಧ ಭಾರತಕ್ಕೆ ದೊಡ್ಡ ಪೆಟ್ಟು. ಭಾರತದೊಂದಿಗೆ ಇರಾನ್ ಹಾಗೂ ಇಸ್ರೇಲ್ ಉತ್ತಮ ಬಾಂಧವ್ಯ ಹೊಂದಿವೆ. ಸದ್ಯ ಭಾರತ ತಟಸ್ಥ ನೀತಿಯನ್ನು ಅನುಸರಿಸುತ್ತಿದೆ. ಉದ್ಯಮದ ಹಿತದೃಷ್ಟಿಯಿಂದ ಉಭಯ ದೇಶಗಳು ಭಾರತಕ್ಕೆ ಲಾಭದಾಯಕ. ಇರಾನಿನ ಚಾಬಹಾರ್ ಬಂದರಿನಲ್ಲಿ ಭಾರತವು ಹೂಡಿಕೆ ಮಾಡಿದೆ. ಇರಾನಿನಿಂದ ತೈಲವನ್ನು ಭಾರತವು ತರಿಸಿಕೊಳ್ಳುತ್ತದೆ. ಅದೇ ರೀತಿ ಇಸ್ರೇಲ್ ಜತೆಗೆ ರಕ್ಷಣಾ ಸಾಮಗ್ರಿಗಳನ್ನು ಕೊಳ್ಳುವ ಒಪ್ಪಂದ ಗಳನ್ನು ಮಾಡಿಕೊಂಡಿದೆ. ಪಾಕಿಸ್ತಾನದ ಜತೆಗೆ ಭಾರತದ ಸಂಬಂಧವು ಸೂಕ್ತ ರೀತಿಯಲ್ಲಿ ಇಲ್ಲದಿ ದ್ದರೂ ಸೌದಿ, ಕತಾರ್, ಅರಬ್ ಎಮಿರೇಟ್ಸ್ ಜತೆಗೆ ಭಾರತದ ಬಾಂಧವ್ಯವು ಉತ್ತಮವಾಗಿದೆ. ಯುದ್ಧದ ಪರಿಸ್ಥಿತಿ ಮುಂದುವರಿದರೆ ರೆಡ್ ಸೀ ಪ್ರದೇಶದಲ್ಲಿ ಭಾರತದ ಕಾರ್ಗೋ ಹಡಗುಗಳು ಸಂಚರಿಸಲು ತೊಂದರೆಯಾಗುವ ಕಾರಣ ಹಲವು ಮಾರುಕಟ್ಟೆಗಳು ಹೊಡೆತವನ್ನು ಎದುರಿಸಲಿವೆ. ಭಾರತಕ್ಕೆ ಆಮದು ಆಗುವ ಕಚ್ಚಾತೈಲ ದರ ದುಬಾರಿ ಆಗಲಿದೆ. ಪೆಟ್ರೋಲ್, ಡಿಸೇಲ್ ಬೆಲೆ ಇನ್ನಷ್ಟು ಹೆಚ್ಚಳ ಆಗುವ ಸಾಧ್ಯತೆ ಇದೆ.

ಖಮೇನಿ ಭಾರತ ಮೂಲ, ರಾಜ್ಯದ ನಂಟು

ಇರಾನ್‌ನ ಪರಮೋಚ್ಚ ನಾಯಕ ಅಯತೊಲ್ಲಾ ಖಮೇನಿ 1986ರಲ್ಲಿ ಗೌರಿಬಿದನೂರು ಸಮೀಪದ ಅಲೀಪುರಕ್ಕೆ ಭೇಟಿ ನೀಡಿದ ಸಂದರ್ಭದ ಚಿತ್ರ.

ಖಮೇನಿಯ ತಾತ, ಸಯ್ಯದ್ ಅಹ್ಮದ್ ಮುಸಾವಿ, 19ನೇ ಶತಮಾನದ ಆರಂಭದಲ್ಲಿ ಉತ್ತರ ಪ್ರದೇಶದ ಬರಾಬಂಕಿ ಬಳಿಯ ಕಿಂತೂರ್ ಗ್ರಾಮದಲ್ಲಿ ಜನಿಸಿದ್ದರು. ಕಿಂತೂರ್ ಶಿಯಾ ವಿದ್ವತ್‌ಗೆ ಕೇಂದ್ರವಾಗಿತ್ತು. ಬಳಿಕ ಅವರು ಇರಾಕ್‌ನ ನಜಾಫ್‌ಗೆ ತೆರಳಿ, 1834ರಲ್ಲಿ ಇರಾನ್‌ನ ಖೊಮೇನ್ ನಗರದಲ್ಲಿ ನೆಲೆಸಿದರು. ಖಮೇನಿಗೂ ನಮ್ಮ ರಾಜ್ಯಕ್ಕೂ ನಂಟಿದೆ. 1986ರಲ್ಲಿ ಅಯಾ ತೊಲ್ಲಾ ಖಮೇನಿ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ಸಮೀಪದ ಅಲೀಪುರಕ್ಕೆ ಭೇಟಿ ನೀಡಿದ್ದರು. ಇದು ಇರಾನ್ ಮತ್ತು ಅಲೀಪುರದ ಬಾಂಧವ್ಯಕ್ಕೆ ಸಾಕ್ಷಿ. ಖಮೇನಿ ಹೆಸರಲ್ಲಿ ಅಲೀಪುರದಲ್ಲಿ ಆಸ್ಪತ್ರೆ ಇದೆ. ಇದರ ಉದ್ಘಾಟನೆಗಾಗಿಯೇ ಖಮೇನಿ ಗ್ರಾಮಕ್ಕೆ ಬಂದಿದ್ದರು.

ಇರಾನ್ ಬೆನ್ನಿಗಿದ್ದ ಸಂಘಟನೆಗಳು ಮೌನ

ಇಸ್ರೇಲ್ ದಾಳಿಗೆ ಗುರುವಾರ ಇರಾನ್ ಪ್ರತಿದಾಳಿ ನಡೆಸಿದೆ. ದಕ್ಷಿಣ ಇಸ್ರೇಲ್‌ನಾ ಸರೋಕಾ ವೈದ್ಯಕೀಯ ಕೇಂದ್ರದ ಕಟ್ಟಡದ ಮೇಲೆ ಇರಾನ್ ಕ್ಷಿಪಣಿ ದಾಳಿ ಮಾಡಿದೆ. ಸರ್ವಶಕ್ತ ಇಸ್ರೇಲ್ ವಿರುದ್ಧ ಇರಾನ್ ಏಕಾಂಗಿ ಕಾದಾಟ ನಡೆಸಿದೆ. ಇರಾನ್ ಬೆನ್ನಿಗೆ ನಿಂತಿದ್ದ ಉಗ್ರ ಸಂಘಟನೆಗಳು ಮೌನ ವಹಿಸಿವೆ.

ಹಮಾಸ್

ಇಸ್ರೇಲ್ ವಿರುದ್ಧ ಸದಾ ಕೆಂಡ ಕಾರುವ ಹಮಾಸ್ ಸಂಘಟನೆ, 2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ದಾಳಿ ನಡೆಸಿತ್ತು. ಆ ಬಳಿಕ ಆರಂಭವಾದ ಸಂಘರ್ಷ ಇನ್ನೂ ನಿಂತಿಲ್ಲ. ಕಳೆದ ವಾರ ಇಸ್ರೇಲ್, ಇರಾನ್ ಮೇಲೆ ದಾಳಿ ಆರಂಭಿಸಿದ ಬಳಿಕ, ಹಮಾಸ್ ಸಂಘಟನೆ ಇರಾನ್ ಪರವಾಗಿ ಮಾತನಾಡಿಲ್ಲ. ಇಸ್ರೇಲ್‌ನ ನಿರಂತರ ದಾಳಿಯಿಂದ ಹಮಾಸ್‌ನ ಶಕ್ತಿ ಕುಂದಿದೆ. ಅದರ ಪ್ರಮುಖ ನಾಯಕರು (ಇಸ್ಮಾಯಿಲ್ ಹನಿಯಾ ಮತ್ತು ಯಾಹ್ಯಾ ಸಿನ್ವಾರ್) ಹತ್ಯೆಯಾಗಿದ್ದಾರೆ. ಈಗ ಸಂಘಟನೆಯಲ್ಲಿ ಮುಂಚೂಣಿಯಲ್ಲಿರುವ ಖಲೀದ್ ಮಾಶಲ್ ಕತಾರ್‌ನಲ್ಲಿದ್ದಾನೆ ಎಂದು ಹೇಳಲಾಗಿದೆ. ಈ ಬಂಡುಕೋರ ಸಂಘಟನೆ ಹೊಂದಿದ್ದ ಸುರಂಗ ಮಾರ್ಗ, ನಿಯಂತ್ರಣ ಕೇಂದ್ರಗಳು, ರಾಕೆಟ್ ತಯಾ ರಿಕಾ ಘಟಕಗಳು ಸೇರಿದಂತೆ ಇನ್ನಿತರ ಸೇನಾ ಮೂಲಸೌಕರ್ಯಗಳು ಇಸ್ರೇಲ್ ದಾಳಿಯಲ್ಲಿ ನಾಶವಾಗಿವೆ.

ಹಿಜ್ಬುಲ್ಲಾ

ಇಸ್ರೇಲ್‌ನ ನೆರೆರಾಷ್ಟ್ರ ಲೆಬನಾನ್‌ನಲ್ಲಿ ಸಕ್ರಿಯವಾಗಿರುವ ಶಿಯಾ ಬಂಡುಕೋರ ಸಂಘಟನೆ ಹಿಜ್ಬುಲ್ಲಾ ಇರಾನ್‌ನ ಪರಮಾಪ್ತ. ಇಸ್ರೇಲ್‌ಇರಾನ್ ಘರ್ಷಣೆಯಲ್ಲಿ ಇದು ಮೌನವಾಗಿದೆ. ಬಲಿಷ್ಠ ವಾಗಿದ್ದ ಈ ಬಂಡುಕೋರರ ಸಾಮರ್ಥ್ಯ ಈಗ ಕುಂದಿ ಹೋಗಿದೆ. ಕಳೆದ ವರ್ಷ ಈ ಸಂಘಟನೆಯನ್ನು ಗುರಿಯಾಗಿಸಿಕೊಂಡು ಇಸ್ರೇಲ್ ನಡೆಸಿದ್ದ ಎರಡು ತಿಂಗಳ ಯುದ್ಧದಲ್ಲಿ ಹಿಜ್ಬುಲ್ಲಾ ಬಂಡುಕೋರರಿಗೆ ಸೇರಿದ ಶಸ್ತ್ರಾಸ್ತ್ರಗಳು, ಸಂವಹನ, ನಿಯಂತ್ರಣ ಕೇಂದ್ರಗಳು ಧ್ವಂಸಗೊಂಡಿವೆ. ಈಗ ಲೆಬನಾನ್ ಸರಕಾರವು ಇಸ್ರೇಲ್‌ಇರಾನ್ ಸಂಘರ್ಷದಲ್ಲಿ ಭಾಗಿಯಾಗುವುದರ ವಿರುದ್ಧ ಸಂಘಟನೆಯ ಮುಖಂಡರನ್ನು ಎಚ್ಚರಿಸಿದೆ.

ಹುಥಿ

ಯೆಮನ್‌ನ ಹುಥಿ ಬಂಡುಕೋರ ಸಂಘಟನೆಯನ್ನೂ ಇರಾನ್ ಬೆಂಬಲಿ ಸುತ್ತಾ ಬಂದಿದೆ. ಇತ್ತೀಚಿನ ತಿಂಗಳಲ್ಲಿ ಇರಾನ್ ಪರವಾಗಿ ಇಸ್ರೇಲ್‌ನತ್ತ ಹಲವು ಕ್ಷಿಪಣಿಗಳ ಮೇಲೆ ದಾಳಿ ನಡೆಸಿತ್ತು. ಅಲ್ಲದೇ, ಹೊರ್ಮುಜ್ ಜಲ ಸಂಧಿ ಮಾರ್ಗವಾಗಿ ಸಾಗುವ ಸರಕು ಸಾಗಣೆ ಹಡಗುಗಳ ಮೇಲೆ ದಾಳಿ ನಡೆ ಸುತ್ತಾ, ಅವುಗಳ ಸಂಚಾರಕ್ಕೆ ಅಡ್ಡಿಪಡಿಸುತ್ತಾ ಅಮೆರಿಕ ಸೇರಿದಂತೆ ವಿವಿಧ ರಾಷ್ಟ್ರಗಳಿಗೆ ಸರಕು ಸಾಗಾಣಿಕೆಗೆ ತಡೆ ಒಡ್ಡಿತ್ತು. ಈ ವರ್ಷದ ಮಾರ್ಚ್, ಏಪ್ರಿಲ್‌ನಲ್ಲಿ ಅಮೆರಿಕವು ಈ ಸಂಘಟನೆಯ ನೆಲೆಯನ್ನು ಗುರಿಯಾಗಿಸಿ ಕೊಂಡು ದಾಳಿ ನಡೆಸಿ ನಾಶಪಡಿಸಿದ ನಂತರ ಈಗ ಅದು ಸುಮ್ಮನಾಗಿದೆ. ಹುಥಿ ಬಂಡುಕೋರರು ಈಗಲೂ ಇರಾನ್ ಅನ್ನು ಬೆಂಬಲಿಸುತ್ತಿದ್ದರಾದರೂ, ಅವರಿನ್ನೂ ಈ ಯುದ್ಧದ ಭಾಗವಾಗಿಲ್ಲ

ಇರಾಕ್ ತಟಸ್ಥ

ಇರಾಕಿನಲ್ಲಿರುವ ಶಸ್ತ್ರಸಜ್ಜಿತ ಶಿಯಾ ತೀವ್ರವಾದಿ ಸಂಘಟನೆಗಳು ಇರಾನ್ ಜತೆ ಉತ್ತಮ ಬಾಂಧವ್ಯ ಹೊಂದಿವೆ. ಈಗ ನಡೆಯುತ್ತಿರುವ ಯುದ್ಧದಲ್ಲಿ ಅಮೆರಿಕ ಮಧ್ಯಪ್ರವೇಶಿಸಿದರೆ, ದಾಳಿ ನಡೆಸುವುದಾಗಿ ಕತೇಬ್ ಹಿಜ್ಬುಲ್ಲಾ ಎಂಬ ಸಂಘಟನೆ ಎಚ್ಚರಿಸಿದೆ. ಆದರೆ, ಇರಾಕ್ ಸರ್ಕಾರ ತಟಸ್ಥ ನಿಲುವನ್ನು ಹೊಂದಿದ್ದು, ಯಾವುದೇ ದಾಳಿಗೆ ತನ್ನ ನೆಲವನ್ನು ಬಳಸದಂತೆ ಇರಾನ್ ಆಡಳಿತವನ್ನು ಕೇಳಿಕೊಂಡಿದೆ ಎಂದು ವರದಿಯಾಗಿದೆ.

ಸಿರಿಯಾದಿಂದಲೂ ಸಿಕ್ಕಿಲ್ಲ ಬೆಂಬಲ

ಸಿರಿಯಾದಲ್ಲಿ ಹಿಂದೆ ಅಧಿಕಾರದಲ್ಲಿದ್ದ ಬಷರ್ ಅಲ್‌ಅಸಾದ್ ಆಡಳಿತ ಸದಾ ಇರಾನ್ ಬೆನ್ನಿಗೆ ನಿಲ್ಲುತ್ತಿತ್ತು. ಹಿಜ್ಬುಲ್ಲಾ ಸಂಘಟನೆಗೆ ಅಗತ್ಯವಾದ ನೆರವನ್ನೂ ನೀಡುತ್ತಿತ್ತು. ಕಳೆದ ವರ್ಷ ಇಸ್ರೇಲ್‌ಹಿಜ್ಬುಲ್ಲಾ ಘರ್ಷಣೆ ಮುಗಿದ ಎರಡು ವಾರಗಳಲ್ಲಿ ಸಿರಿಯಾದಲ್ಲಿ ಅಸಾದ್ ಆಡಳಿತ ಪತನಗೊಂಡಿತ್ತು. ಹೊಸ ಸರ್ಕಾರ ಮತ್ತು ಇರಾನಿನ ಸಂಬಂಧ ಮೊದಲಿನಂತಿಲ್ಲ. ಹಾಗಾಗಿ, ಅಲ್ಲಿಂದಲೂ ನೆರವು ಸಿಗುತ್ತಿಲ್ಲ.

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ



ಚಿತ್ತವಿಹಾರ

ಎಲ್ಲವೂ ಬದಲಾವಣೆಗೊಳಪಡುತ್ತದೆ

• ಮಹಾದೇವ ಬಸರಕೋಡ

ಬದುಕಿನಲ್ಲಿ ಸುಂದರವಾದ ಕನಸುಗಳನ್ನು ಕಾಣುತ್ತೇವೆ. ಅವುಗಳು ನನಸಾದಾಗ ತುಂಬ ಸಂಭ್ರಮಿಸುತ್ತೇವೆ ನಮಗೆ ಇಷ್ಟವಾದ ಸಂಗತಿಗಳನ್ನು ಪಡೆದುಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಲೇ ಇರುತ್ತೇವೆ. ಅವುಗಳು ನಮಗೆ ಕೈಗೆ ಎಟುಕಿದಾಗ, ಅವುಗಳು ಶಾಶ್ವತ ಎಂಬ ಭ್ರಮೆಯಲ್ಲಿ ತೇಲಾಡುತ್ತಿರುತ್ತೇವೆ. ಆದರೆ ಅದೇ, ನನಸುಗಳಾದ ಕನಸುಗಳು, ಇಷ್ಟವಾದ ಸಂಗತಿಗಳು ಕೆಲವು ಬಾರಿ ಅಡ್ಡಿ ಆತಂಕಗಳನ್ನು, ಕಷ್ಟಗಳನ್ನು, ನೋವುಗಳನ್ನು ತರಬಲ್ಲವು ಎಂಬ ಸಂಗತಿ ನಮ್ಮ ಗಮನಕ್ಕೆ ಬಾರದೇ ಹೋಗುತ್ತದೆ. ಎಲ್ಲವೂ ಬದಲಾವಣೆಗೆ ಒಳಪಡುತ್ತದೆ ಎಂಬ ವಾಸ್ತವವನ್ನು ಮರೆತುಬಿಡುತ್ತೇವೆ. ಇದು ನಮ್ಮ ಬದುಕಿನ ದುಃಖಕ್ಕೆ ಕಾರಣವಾಗುತ್ತದೆ.

ಸಂತರೊಬ್ಬರು ತೀರ್ಥಯಾತ್ರೆ ಮಾಡುತ್ತ ಒಂದು ದಿನ ಒಂದು ಊರಿನಲ್ಲಿ ತಂಗಿದರು. ಗೃಹಸ್ಥನೊಬ್ಬ ಅವರನ್ನು ಭೇಟಿಯಾಗಿ ಗುರುಗಳೇ, ನನಗೆ ಮದುವೆಯಾಗಿ ಬಹುದಿನಗಳ ನಂತರ ನನ್ನ ಹೆಂಡತಿ ಗರ್ಭಿಣಿಯಾಗಿದ್ದಾಳೆ. ದಯವಿಟ್ಟು ನನಗೆ ಗಂಡು ಮಗುವಾಗುವಂತೆ ಆಶೀರ್ವದಿಸಿ ಎಂದ. ಸಂತರು ಒಂದಷ್ಟು ನಕ್ಕರು. ಕಣ್ಮುಚ್ಚಿ ಭಗವಂತನನ್ನು ಪ್ರಾರ್ಥಿಸಿದರು. ನಂತರ ಚಿಂತಿಸದಿರು, ನನಗೆ ಗಂಡು ಮಗುವೇ ಆಗಲಿ ಎಂದು ಸಂಕಲ್ಪ ಮಾಡಿ ಭಗವಂತನನ್ನು ನಿಷ್ಠೆಯಿಂದ ನಿತ್ಯವೂ ಸ್ಮರಿಸು, ಖಂಡಿತವಾಗಿಯೂ ನಿನಗೆ ಗಂಡು ಮಗುವೇ ಆಗುತ್ತದೆ ಎಂದರು. ಸಂತರ ಮಾತಿನಂತೆ ಆತನು ನಡೆದುಕೊಂಡ. ಕೆಲವು ದಿನಗಳ ನಂತರ ಆತನ ಹೆಂಡತಿ ಗಂಡು ಮಗುವಿಗೆ ಜನ್ಮ ನೀಡಿದಳು. ಗೃಹಸ್ಥ ತುಂಬ ಸಂತೋಷ ಪಟ್ಟ. ಸಂತರನ್ನು ಸ್ಮರಿಸಿದ. ದೇವರಿಗೆ ಕಾಣಿಕೆ ಅರ್ಪಿಸಿದ. ಊರಿಗೆಲ್ಲ ಔತಣ ಏರ್ಪಡಿಸಿದ. ಸ್ವರ್ಗ ಮೂರೇ ಗೇಣು ಎನ್ನುವಂತೆ ನಿತ್ಯವೂ ಸಂಭ್ರಮಿಸುತ್ತಿದ್ದ.

ಬಹುದಿನಗಳ ಸಂತರು ತಮ್ಮ ತೀರ್ಥಯಾತ್ರೆ ಮುಗಿಸಿ, ಅದೇ ಊರಿನ ಮೂಲಕ ತೆರಳುತ್ತಿದ್ದಾಗ ಅವರಿಗೆ ಹಿಂದೆ ಭೇಟಿಯಾಗಿದ್ದ ಗೃಹಸ್ಥನ ನೆನಪಾಯಿತು. ಅಲ್ಲಿನ ಜನರನ್ನು ಅವನನ್ನು ಕುರಿತು ವಿಚಾರಿಸಿದರು. ಅವನಿಗೆ ಗಂಡು ಮಗುವಾಯಿತೇ? ಎಂದು ಪ್ರಶ್ನಿಸಿದರು. ತಾವು ಹೇಳಿದಂತೆ ಅವನಿಗೆ ಗಂಡು ಮಗುವೇ ಆಯಿತು. ಆದರೆ ಅವನೀಗ ಈಗ ಜೈಲಿನಲ್ಲಿ ಬಂಧಿಯಾಗಿದ್ದಾನೆ ಎಂದರು ಆಶ್ಚರ್ಯದಿಂದ ಜೈಲಿನಲ್ಲಿದ್ದಾನೆಯೇ ಏಕೆ? ಎಂದು ಪ್ರಶ್ನಿಸಿದರು. ಗುರುಗಳೇ ತಮ್ಮ ಮಾತಿನಂತೆ ಅವನಿಗೆ ಗಂಡು ಮಗುವೇ ಆಯಿತು. ಅವನು ಬೆಳದು ದೊಡ್ಡವನೂ ಆದ. ಆದರೆ ಕೆಲವು ದಿನಗಳ ಹಿಂದೆ ಅವನ ಗಂಡು ಮಗ ಕುಡಿದ ಅಮಲಿನಲ್ಲಿದ್ದಾಗ ಒಬ್ಬನನ್ನು ಕೊಂದು ತಪ್ಪಿಸಿಕೊಂಡು ಓಡಿಹೋದ. ಇದರಿಂದಾಗಿ ಗೃಹಸ್ಥನನ್ನು ಜೈಲಿಗೆ ತಳ್ಳಿದ್ದಾರೆ. ಈಗ ಅವನು ತುಂಬಾ ಚಿಂತಾಕ್ರಾಂತನಾಗಿದ್ದಾನೆ. ನಿತ್ಯವೂ ಸಂಕಟ ಅನುಭವಿಸುತ್ತಿದ್ದಾನೆ. ತನಗೆ ಗಂಡು ಮಗ ಹುಟ್ಟಿದ್ದೇ ತಪ್ಪಾಯಿತು ಎಂದು ಪರಿತಪಿಸುತ್ತಿದ್ದಾನೆ ಎಂದರು.

ಜಗದ ಸ್ವಭಾವವೇ ದ್ವಂದ್ವವಾಗಿದೆ. ಬದುಕಿನಲ್ಲಿ ಕೇವಲ ಸಂತಸ, ಸಂಭ್ರಮ, ನಲಿವುಗಳನ್ನೆ ನಿರೀಕ್ಷಿಸಲಾಗದು. ಅವುಗಳ ಬೆನ್ನ ಹಿಂದೆಯೇ ನೋವು, ನಿರಾಶೆ, ಹತಾಶೆಗಳು ಕೂಡ ಹಗಲನ್ನು ರಾತ್ರಿಯು ಹಿಂಬಾಲಿಸುವಂತೆ, ಬೆಂಬತ್ತಿ ಬರುತ್ತಲೇ ಇರುತ್ತೇವೆ. ಹೊಗಳಿಗೆಯನ್ನು ನಾವು ಬಯಸುವುದಾದರೆ ತೆಗಳಿಕೆಯನ್ನು ಕೇಳುವ ತಾಳ್ಮೆ ನಮಗಿರಬೇಕು. ಸಂತೆಯ ಸಂಭ್ರಮವನ್ನು ಅನುಭವಿಸಬೇಕೆಂದರೆ ಅಲ್ಲಿನ ಶಬ್ದವನ್ನು ಕೂಡ ಸಹಿಸಿಕೊಳ್ಳುವ ಸಂಯಮ ನಮ್ಮಲ್ಲಿರಬೇಕು ಎಂಬ ಅರಿವು ಮಾತ್ರವೇ ಬದುಕು ಸುಂದರಗೊಳ್ಳಬಲ್ಲದು.

ಭೂಮಿಯನು ರಕ್ಷಿಸಲು ಯೋಗ!

• ಶಿವಣ್ಣ ಗಾಣಗಟ್ಟೆ

ಈ ವರ್ಷದ ವಿಶ್ವ ಯೋಗ ದಿನದ ಧ್ಯೇಯವಾಕ್ಯವು ಭೂಮಿಯ ಆರೋಗ್ಯವನ್ನು ರಕ್ಷಿಸುವ ಕಾಳಜಿಯನ್ನು ಹೊಂದಿದೆ. ಜಗತ್ತಿನ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಭೀಕರ ಯುದ್ಧದ ಹಿನ್ನೆಲೆಯಲ್ಲಿ, ಈ ಭೂಮಿಯನ್ನು ಆರೋಗ್ಯಕರವಾಗಿ ರಕ್ಷಿಸುವುದು ನಮ್ಮೆಲ್ಲರ ಹೊಣೆಯಾಗಿದೆ ಎಂದು ಈ ವರ್ಷದ ವಿಶ್ವ ಯೋಗ ದಿನವು ಒತ್ತಿ ಹೇಳುತ್ತಿದೆ.

ಯೋಗ ಮಾಡಿ ರೋಗ ದೂರ ತಳ್ಳಿ ಎಂಬ ಮಾತು ಜಗಜನಿತವಾಗಿದ್ದು, ಯೋಗವು ದಿನ ಕಳೆದಂತೆ ತನ್ನ ಮಹತ್ವ ಹಾಗೂ, ಪ್ರಭಾವವನ್ನ ಭಾರತದಿಂದ ಕಡಲಾಚೆಯ ನೂರಾರು ದೇಶಗಳಿಗೆ ಹಬ್ಬಿಸಿದೆ. ಪ್ರತಿವರ್ಷ ಜೂನ್ 21ರಂದು ಜಗತ್ತಿನಾದ್ಯಂತ ಸದೃಢ ಮನಸ್ಸು ಮತ್ತು ಸದೃಢ ಆರೋಗ್ಯಯುತ ದೇಹದ ನಿರ್ಮಾಣಕ್ಕಾಗಿ ವಿಶ್ವ ಯೋಗ ದಿನವನ್ನು ಆಚರಿಸುತ್ತಿದ್ದಾರೆ.

ಜಂಜಾಟಗಳಿಂದ ತುಂಬಿದ, ಸಂಕೀರ್ಣ ಜೀವನ ಶೈಲಿಯನ್ನು ಹೊಂದಿರುವ ಇಂದಿನ ಜನಾಂಗ, ಚಿಕ್ಕ ವಯಸ್ಸಿನಲ್ಲಿಯೇ, ಹೃದಯ ಸ್ತಂಭನ, ಡಯಾಬಿಟಿಸ್ ನಂತಹ ಅಸಾಂಕ್ರಾಮಿಕ ರೋಗಗಳಿಗೆ ತುತ್ತಾಗಿ ಜೀವದುಸಿರು ಚೆಲ್ಲುತ್ತಿದ್ದಾರೆ; ಇಂತಹ ಸಂದರ್ಭದಲ್ಲಿ ಪ್ರತಿದಿನ ಮಾಡುವ ಯೋಗ ಆರೋಗ್ಯಯುತ ಜೀವನಕ್ಕೆ ಮದ್ದಾಗಿ ಜಗತ್ತಿಗೆ ಹೊಸ ಭರವಸೆಯಾಗಿ ಪ್ರಾಮುಖ್ಯತೆ ಪಡೆದಿದೆ.

ಅಷ್ಟಾಂಗ ಯೋಗ

ಅಂದಹಾಗೆ ಇಡೀ ಜಗತ್ತಿಗೆ ಯೋಗದ ಪರಿಚಯ ಮಾಡಿದ ದೇಶ ನಮ್ಮ ಭಾರತ; ಅಷ್ಟಾಂಗ ಯೋಗವನ್ನು ರೂಪಿಸಿದವರು ಪತಂಜಲಿಯವರು. ಅವರು ಬರೆದ ಯೋಗ ಸೂತ್ರಗಳು ಎಂಬ ಕೃತಿ ನಾಲ್ಕು ಅಧ್ಯಾಯಗಳನ್ನು ಹೊಂದಿದ್ದು 195 ಸೂತ್ರಗಳ ಮೂಲಕ ಯೋಗವನ್ನ ವಿವರಿಸುತ್ತದೆ. ಪತಂಜಲಿ ಅವರ ಅಷ್ಟಾಂಗ ಯೋಗವು, ಅದು ಯಮ (ನೈತಿಕ ನಿಯಮಗಳು), ನಿಯಮ (ವೈಯಕ್ತಿಕ ಶಿಸ್ತು), ಆಸನ (ದೇಹದ ನಿಯಂತ್ರಣ), ಪ್ರಾಣಾಯಾಮ , ಪ್ರತ್ಯಾಹಾರ (ಇಂದ್ರಿಯಗಳ ಹಿಮ್ಮೆಟ್ಟಿಸುವಿಕೆ), ಧಾರಣ (ಏಕಾಗ್ರತೆ), ಧ್ಯಾನ ಎಂಬ ಎಂಟು ಹಂತದ ಯೋಗಗಳನ್ನ ಒಳಗೊಂಡಿದೆ.

ಯೋಗಾಭ್ಯಾಸವು ಇಪ್ಪತ್ತನೆಯ ಶತಮಾನದಲ್ಲೇ ಪಾಶ್ಚಾತ್ಯ ದೇಶಗಳನ್ನು ತಲುಪಿತ್ತು; ಅಲ್ಲಿನ ಜನರು ಯೋಗಾಭ್ಯಾಸವನ್ನು ಅಭ್ಯಾಸ ಮಾಡಿ, ಇದರಿಂದ ಆರೋಗ್ಯ ಉತ್ತಮವಾಗುತ್ತದೆ ಎಂದು ಕಂಡುಕೊಂಡರು. ದೇಹದ ತೂಕ ಇಳಿಸಲು, ದೇಹಕ್ಕೆ ಅಂದ ತುಂಬಲು, ಆರೋಗ್ಯದ ಸಮಸ್ಯೆಗಳನ್ನು ದೂರವಿಡಲು ಯೋಗಾಭ್ಯಾಸವನ್ನು ಕಲಿಯುವ ಪ್ರವೃತ್ತಿಯು ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ನಮ್ಮ ದೇಶದ ವಿವಿಧ ನಗರಗಳಲ್ಲಿ, ಪಟ್ಟಣಗಳಲ್ಲಿ ಆರಂಭವಾಯಿತು. ಬಾಬಾ ರಾಮದೇವ್ ಅವರು ದೂರದರ್ಶನದ ಮೂಲಕ ಸಾಮೂಹಿಕ ಯೋಗಾಭ್ಯಾಸವನ್ನು ಹೇಳಿಕೊಟ್ಟು, ಯೋಗಾಭ್ಯಾಸವು ಹಳ್ಳಿ ಹಳ್ಳಿಗಳನ್ನು ತಲುಪುವಂತೆ ಮಾಡಿದರು.

ಯುದ್ಧ ನಿಲ್ಲಿಸಲು ಯೋಗ!

ಇಂದು ಆಚರಣೆಗೊಳ್ಳುತ್ತಿರುವ ವಿಶ್ವ ಯೋಗ ದಿನದ ಧ್ಯೇಯ ವಾಕ್ಯ 'ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ' (ಯೋಗಾ ಫಾರ್ ಒನ್ ಅರ್ತ್, ಒನ್ ಹೆಲ್ತ್); ಆರೋಗ್ಯದ ಜೊತೆ ಭೂಮಿಯ ಸ್ವಾಸ್ಥ್ಯವನ್ನು ರಕ್ಷಿಸುವ ಸುಸ್ಥಿರ ಅಭಿವೃದ್ಧಿಯ ಪ್ರಾಮುಖ್ಯತೆಯನ್ನು ಈ ವರ್ಷದ ಯೋಗ ದಿನ ಎತ್ತಿ ತೋರಿಸಿದೆ. ಜಗತ್ತಿನ ಹಲವು ಭಾಗಗಳಲ್ಲಿ ನಡೆಯುತ್ತಿರುವ ವಿನಾಶಕಾರಿ ಯುದ್ಧದ ಹಿನ್ನೆಲೆಯಲ್ಲಿ ಈ ವರ್ಷದ ಯೋಗ ದಿನದ ಧ್ಯೇಯವಾಕ್ಯವ ಇನ್ನಷ್ಟು ಅರ್ಥವನ್ನು ಪಡೆದುಕೊಂಡಿದೆ.

ವಿಶ್ವ ಯೋಗ ದಿನ

ಯೊಗಾಭ್ಯಾಸದ ಮಹತ್ವವನ್ನು ವಿಶ್ವಕ್ಕೆ ಸಾರಲು, ಭಾರತದ ಪ್ರಧಾನ ಮಂತ್ರಿಗಳು, 2014 ಸೆಪ್ಟೆಂಬರ್ 27ರಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ವಿಶ್ವ ಯೋಗ ದಿನವನ್ನು ಆಚರಿಸಲು ಪ್ರಸ್ತಾವನೆಯನ್ನು ನೀಡಿದರು.ಈ ಪ್ರಸ್ತಾವನೆಯನ್ನು ಆಧರಿಸಿ ವಿಶ್ವಸಂಸ್ಥೆಯು ಡಿಸೆಂಬರ್ 11 2014ರಂದು ಯುಎನ್ ಸಾಮಾನ್ಯ ಸಭೆಯು177 ಸದಸ್ಯರೊಂದಿಗೆ ಈ ನಿರ್ಧಾರವನ್ನು ಅಂಗೀಕರಿಸಿತು. ವಿಶ್ವ ಯೋಗದಿನ ಆಚರಣೆಗೆ ಜೂನ್ 21 ನಿಗದಿ ಮಾಡಿದ್ದರ ಹಿನ್ನೆಲೆಯನ್ನ ನೋಡುವುದಾದರೆ, ಅಂದು ಅತಿ ದೀರ್ಘ ಹಗಲನ್ನು ಹೊಂದಿರುವ ದಿನ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಒಪ್ಪಿಗೆಯ ನಂತರ ವಿಶ್ವ ಯೋಗ ದಿನವನ್ನು ಮೊದಲ ಬಾರಿಗೆ 2015 ಜೂನ್ 21ರಂದು ನವದೆಹಲಿಯ ರಾಜ ಪಥದಲ್ಲಿ ಪ್ರಧಾನಮಂತ್ರಿಯ ನೇತೃತ್ವದಲ್ಲಿ ನಡೆಯಿತು. ಭಾರತದ ಅಂದಿನ ರಾಷ್ಟ್ರಪತಿಗಳಾದಂತಹ ಪ್ರಣಬ್ ಮುಖರ್ಜಿ ಸೇರಿದಂತೆ ವಿಶ್ವದ ವಿವಿಧ ದೇಶಗಳ 112 ಪ್ರತಿನಿಧಿಗಳು ಸೇರಿದ್ದರು.

39,985 ಜನರು ಒಂದೇ ವೇದಿಕೆಯಲ್ಲಿ ಸಮೂಹ ಯೋಗಾಭ್ಯಾಸ ಮಾಡಿದ್ದರಿಂದ ಗಿನ್ನಿಸ್ ದಾಖಲೆಗೆ ಸೇರ್ಪಡೆಯಾಯಿತು!

ಸಾಮರಸ್ಯಕ್ಕಾಗಿ ಯೋಗಾಭ್ಯಾಸ

ಪ್ರತಿ ವರ್ಷ ಸಾಮೂಹಿಕವಾಗಿ ವಿಶ್ವದಾದ್ಯಂತ ನಡೆಯುವ ಯೋಗವು ಪ್ರತಿಬಾರಿ ಒಂದೊಂದು ಧ್ಯೇಯ ವಾಕ್ಯದಡಿ ಆಚರಿಸಲಾಗುತ್ತದೆ. ಮೊದಲ ಬಾರಿ 2015 ರಲ್ಲಿ 'ಸಾಮರಸ್ಯ ಮತ್ತು ಶಾಂತಿಗಾಗಿ ಯೋಗ' ಎಂಬ ಧ್ಯೇಯ ವಾಕ್ಯದಡಿ ಆಚರಿಸಲಾಯಿತು. ಅಂದಿನಿಂದಲೂ ಪ್ರತಿವರ್ಷ ಒಂದೊಂದು ಧ್ಯೇಯವಾಕ್ಯದೊಂದಿಗೆ ವಿಭಿನ್ನ ಸ್ಥಳಗಳಲ್ಲಿ ವಿಶ್ವಯೋಗ ದಿನವನ್ನು ಆಚರಿಸಲಾಗುತ್ತದೆ.

ಯೋಗಾಭ್ಯಾಸದ ಪ್ರಯೋಜನಗಳನ್ನ ಮೂರು ವಿಭಾಗಗಳಾಗಿ ನೋಡಬಹುದು.

1. ಶಾರೀರಿಕ ಪ್ರಯೋಜನಗಳು ಇಲ್ಲಿ ನಮಗೆ ಯೋಗದಿಂದ ದೇಹದ ಲವಲವಿಕೆ ಹೆಚ್ಚಾಗುತ್ತದೆ, ರೋಗ ಪ್ರತಿರೋಧಕ ಶಕ್ತಿ ಬೆಳೆಯುತ್ತದೆ, ರಕ್ತದ ಒತ್ತಡ ಕಡಿಮೆಯಾಗುತ್ತದೆ, ನಿದ್ರಾಹೀನತೆಯನ್ನು ಹೊಡೆದೋಡಿಸುತ್ತದೆ.

2. ಮಾನಸಿಕ ಪ್ರಯೋಜನಗಳು ಮಾನಸಿಕ ಒತ್ತಡ ಕಡಿಮೆಯಾಗುತ್ತದೆ, ಏಕಾಗ್ರತೆ ಸುಧಾರಿಸುತ್ತದೆ, ಮಾನಸಿಕ ತುಮಲ ಮತ್ತು ಚಿಂತೆಗಳು ದೂರವಾಗುತ್ತವೆ, ಮಾನಸಿಕ ದೌರ್ಬಲ್ಯಗಳು ಕಡಿಮೆಯಾಗುತ್ತವೆ, ಆನಂದ ಮತ್ತು ಉತ್ಸಾಹ ಭರಿತ ಮನಸ್ಸು ನಿರ್ಮಾಣವಾಗುತ್ತದೆ.

3. ಸಾಮಾಜಿಕ ಮತ್ತು ಆಧ್ಯಾತ್ಮಿಕ ಪ್ರಯೋಜನಗಳು

ಎಲ್ಲರ ಮಾನಸಿಕ ಒಳನೋಟ ಸುಧಾರಣೆಯಾಗಿ ಜಾಗತಿಕ ಶಾಂತಿಗೆ ಕಾರಣವಾಗುತ್ತದೆ.

ವರ್ಷದಿಂದ ವರ್ಷಕ್ಕೆ ಯೋಗದ ಮಹತ್ವ ಪ್ರಭಾವ ಹೆಚ್ಚಾಗುತ್ತಾ ಸಾಗುತ್ತಿದೆ, ಪ್ರತಿಯೊಬ್ಬರು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ಯೋಗದತ್ತ ತಮ್ಮ ಮುಖ ಮಾಡುತ್ತಿದ್ದಾರೆ.

ಸಹನೆ ಬೇಕು ದಿನಚರಿಯಲಿ

ಗ್ರಹಗತಿಯ ತಿದ್ದುವನೆ ಜೋಯಿಸನು ಜಾತಕದಿ
ವಿಹಿತವಾಗಿಹುದದರ ಗತಿ ಸೃಷ್ಟಿ ವಿಧಿಯಿಂ
ಸಹಿಸಿದಲ್ಲದೆ ಮುಗಿಯದಾವ ದಶೆ ಬಂದೊಡಂ
ಸಹನೆ ವಜ್ರದ ಕವಚ – ಮಂಕುತಿಮ್ಮ॥

ಜ್ಯೋತಿಷಿಯು ಜಾತಕದಲ್ಲಿ ಮಾತ್ರವೇ ನಮ್ಮ ಗ್ರಹಗತಿಯನ್ನು ತಿದ್ದಬಹುದಲ್ಲದೆ, ನಿಜವಾದ ಗ್ರಹಗಳ ಗತಿಯನ್ನು ಆತನು ತಿದ್ದಿ ಬದಲಾವಣೆ ಮಾಡುತ್ತಾನೆಯೇ? ಅದು ಎಂದಿಗೂ ಸಾಧ್ಯವಿಲ್ಲ. ಹಾಗೆಯೇ ನಮ್ಮ ಜೀವನದಲ್ಲಿ ಏನು ನಡೆಯಬೇಕೋ! ಏನು ಆಗಬೇಕೋ! ಅವೆಲ್ಲವೂ ಜರುಗಿಯೇ ಜರುಗುತ್ತವೆ. ಇದನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಯಾವುದೇ ದಶೆ ಬಂದು ಒಳಿತಾದರೂ, ಕೆಡುಕಾದರೂ, ನೋವು, ದುಃಖ ಉಣ್ಣುವಾಗಲೂ ಸಹ ನಮ್ಮಲ್ಲಿ ಸಹನೆ ಎಂಬುದಿರಬೇಕು. ನಮ್ಮಲ್ಲಿರುವ ಸಹನೆಯೇ ನಮಗೆ ವಜ್ರದ ಕವಚವಾಗಿ ನಮ್ಮನ್ನು ಕಾಪಾಡುತ್ತದೆ ಎಂಬ ಲೋಕಜ್ಞಾನವನ್ನು ಈ ಪದ್ಯದಲ್ಲಿ ಹೇಳಿದ್ದಾರೆ.

ನಮಗೆ ಕಷ್ಟಗಳು, ಸಮಸ್ಯೆಗಳು ಎದುರಾದಾಗ ನಾವುಗಳು ನಮ್ಮ ಜಾತಕವನ್ನಿಡಿದುಕೊಂಡು ಜ್ಯೋತಿಷಿಯ ಮುಂದೆ ಹಾಜರಾಗಿ, ನಮ್ಮ ಜಾತಕವನ್ನು ಅವನಿಗೆ ನೀಡಿ, ಅವನಲ್ಲಿ ನಮ್ಮ ಗ್ರಹಗತಿಯೇ ಸರಿಯಾಗಿಲ್ಲ, ತಾವು ಇದನ್ನು ಸರಿಪಡಿಸಿಕೊಡಿ ಎಂದು ಒರಲುತ್ತೇವೆ. ಆಗ ಜ್ಯೋತಿಷಿಯು, ಅದೇನೋ ಕೂಡಿ, ಕಳೆದು ನಮಗೊಂದು ಪರಿಹಾರವನ್ನು ಹೋಮದ ಮುಖಾಂತರವೋ, ಮಂತ್ರ – ತಂತ್ರದ ಮುಖಾಂತರವೋ ಪರಿಹಾರವನ್ನು ಸೂಚಿಸುತ್ತಾನೆ. ಇಂಥಹ ಕಾರ್ಯಗಳು ಕೇವಲ ನಮ್ಮ ಮನಸ್ಸಿನ ಸಮಾಧಾನಕ್ಕೇ ಹೊರತು ಬೇರೇನೂ ಅಲ್ಲ. ನಮ್ಮ ಸಮಾಧಾನಕ್ಕೆ, ನಮ್ಮ ಖುಷಿಗೆ ಜ್ಯೋತಿಷಿಯು ನಮ್ಮ ಜಾತಕದಲ್ಲಿ ಗ್ರಹಗಳ ಗತಿಯನ್ನು ತಿದ್ದಬಹುದೇ ಹೊರತು, ನಿಜವಾದ ಗ್ರಹಗಳ ಗತಿಯನ್ನು ಅವನಿಂದ ತಿದ್ದಲು ಸಾಧ್ಯವೇ? ಅದು ಎಂದಿಗೂ ಸಾಧ್ಯವಿರದ ಮಾತು. ಅಂತೆಯೇ ಬೀಜದೊಳಗೆ ಒಂದು ದೊಡ್ಡ ಮರದ ಗುಣಗಳು ಹೇಗೆ ಇರುತ್ತವೆಯೋ ಹಾಗೆ ನಮ್ಮ ಪೂರ್ವ ಕರ್ಮಗಳು, ಧರ್ಮಗಳು ನಮ್ಮನ್ನು ಅನುಸರಿಯೇ ಇರುತ್ತವೆ. ನಾವುಗಳು ಆ ಸಮಯ ಎಂಬುವ ವಿಧಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಸಮಯ ಎಂಬುವ ವಿಧಿಯು ನಮ್ಮನ್ನು ಬುಗುರಿ ಆಡಿಸಿದಂತೆ ಆಡಿಸುತ್ತಾ ಇರುವಾಗ, ಆ ಸಮಯಕ್ಕೆ ತಕ್ಕಂತೆ ನಮಗೆ ದಶೆಗಳು ಬಂದೊದಗುತ್ತವೆ. ಅಂತಹ ದಶೆಗಳಿಂದ ಒಳಿತೂ ಆಗಬಹುದು ಹಾಗೆಯೇ ಕೇಡೂ ಉಂಟಾಗಬಹುದು. ಇಂಥಹ ಅದ್ಯಾವ ದಶೆ ಬಂದರೂ ಸಹ ನಾವು ನಮ್ಮ ಸಹನೆ, ಸಂಯಮಗಳನ್ನು ಬಿಟ್ಟುಕೊಡದೆ, ಸ್ಥಿತಪ್ರಜ್ಞರಾಗಿ ಈ ವ್ಯವಸ್ಥೆಯಲ್ಲಿ ಬಂದಿದ್ದನ್ನು ಗಟ್ಟಿತನದ ಹೃದಯದಲ್ಲಿ ನಿಂತು ಎದುರಿಸಿದಾಗ ನಮ್ಮ ಬದುಕು ಉತ್ತಮವಾಗುತ್ತದೆ. ಇದನ್ನೇ ಈ ಪದ್ಯದಲ್ಲಿ 'ಸಹನೆ ವಜ್ರದ ಕವಚ' ಎಂದು ಹೇಳಿರುವುದು. ಆದುದರಿಂದ ಜೀವನದಲ್ಲಿ ಸಂತೋಷ ಬಂದಾಗ ಅತಿಯಾಗಿ ಹಿಗ್ಗುವಿಕೆ, ದುಃಖ ಬಂದಾಗ ಕುಗ್ಗುವಿಕೆಯು ತರವಲ್ಲವಾದುದು. ನಮ್ಮ ನಮ್ಮ ಸಹನೆ, ಸಂಯಮ, ಸ್ಥಿತ ಪ್ರಜ್ಞತೆಯು ನಮ್ಮನ್ನು ಉತ್ತಮವಾಗಿಸುತ್ತದೆ ಎಂದು ಪೂಜ್ಯ ಡಿವಿಜಿಯವರು ಈ ಪದ್ಯದಲ್ಲಿ ಹೇಳಿದ್ದಾರೆ.

ಇಂದು ಜಗತ್ತಿನ ನಾನಾ ಕಡೆ ಯುದ್ಧ ನಡೆಯುತ್ತಿದೆ; ಅಲ್ಲಲ್ಲಿ ದ್ವೇಷದ ಹೋರಾಟ ನಡೆಯುತ್ತಿದೆ; ಇಂಥಹ ವಿಪ್ಲವತೆಗೆಲ್ಲ ಕಾರಣವು ಮನುಜನಲ್ಲಿ ಸಹನೆಯ ಕೊರತೆಯೇ ಮುಖ್ಯವಾಗಿ ಕಾಣುತ್ತದೆ. ಮನುಷ್ಯನಲ್ಲಿ ಸಹನೆ, ಸಂಯಮ ಎಂಬುದೊಂದಿದ್ದರೆ ಈ ಜಗತ್ತಿನಲ್ಲಿ ಯಾವ ಅನ್ಯಾಯ, ಅಕ್ರಮಗಳೂ ನಡೆಯುವುದಿಲ್ಲ. ಕೋಪದ ಕೈಗೆ ಬುದ್ಧಿಯನ್ನು ಕೊಟ್ಟಾಗ ವಿಘಟನೆಗಳು ಜರುಗಿ ನಮ್ಮನ್ನು ಪ್ರಪಾತಕ್ಕೆ ತಳ್ಳಿ ಬಿಡುತ್ತವೆ. ಇವುಗಳನ್ನೆಲ್ಲವನ್ನೂ ಮೆಟ್ಟಿ ನಿಲ್ಲಬೇಕೆಂದರೆ ಸಹನೆಯನ್ನು ನಾವು ಗಳಿಸಲೇಬೇಕು. ಏನಾಗಬೇಕೆಂದಿದೆಯೋ ಅದು ಜರುಗಿಯೇ ಜರುಗುತ್ತದೆ. ಅದು ಒಳ್ಳೆಯದಾದರೂ ಆಗಬಹುದು, ಕೆಟ್ಟದಾದರೂ ಆಗಬಹುದು. ಯಾವುದಕ್ಕೂ ಹಿಗ್ಗದೆ, ಕುಗ್ಗದೆ ನಾವು ಸಹನೆಯನ್ನು ಗಳಿಸಿಕೊಂಡರೆ ಅದೇ ನಮ್ಮ ಜೀವನದ ವಜ್ರಕವಚವಾಗಿ ನಮ್ಮನ್ನು ಕಾಪಾಡುತ್ತದೆ. ಆದುದರಿಂದ ಈ ಕಾಲಘಟ್ಟಕ್ಕೆ ಬಲು ಸೂಕ್ತವಾದ ಪದ್ಯ ಇದಾಗಿದೆ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಹನಿ ಮಳೆ

ಹೊಲದಲ್ಲೇ ಯೋಗ!

ಎಲ್ಲಾರು ಮಾಡಿದರು ಯೋಗಾಭ್ಯಾಸ
ಬಗಲಲ್ಲಿ ಸಿಕ್ಕಿಸಿ ಯೋಗಾ ಮ್ಯಾಟ!
ನಮ್ಮೂರ ಬೋರೇಗೌಡ ಮಂದಹಾಸ
ಸದಾ ಹೊಲಗದ್ದೆಗಳಲ್ಲೇ ಓಡಾಟ!

• ಅಜಯ್ ಅಂಚೆಪಾಳ್ಯ

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಲಕ್ಷ್ಯ ಕೊಡು (4)
3. ಚರ್ಮದ ನವೆ (3)
5. ರಾಜೀವನಲ್ಲಿರುವ ಅಸು (2)
6. ವಾಲಿಯ ಮಗನ ಹೆಸರು (3)
9. ಅಸಲಿಯಲ್ಲದ್ದು (3)
11. ನೂರು ಕಾಲುಗಳುಳ್ಳದ್ದು (4)
12. ಆತುರ (3)
14. ಜಲದಲ್ಲಿ ಜನಿಸಿದ್ದು (3)
16. ನನ್ನದೆಂಬ ಭಾವನೆ (4)
17. ಖುಷಿ (3)
19. ಸರದ ನಡುವಿನ ಮಾಲೆ (3)
21. ನೋವಿಗೆ ಪರಿಹಾರ (2)
23. ಧೈರ್ಯಶಾಲಿ (3)
24. ವಿನಂತಿ ಪತ್ರ (4)

ಮೇಲಿಂದ ಕೆಳಕ್ಕೆ

1. ಧೈರ್ಯವುಳ್ಳವನು (3)
2. ಸಂಪತ್ತು (2)
3. ವನದಲ್ಲಿ ಪದ್ಯ (3)
4. ಗಾಂಧೀಜಿ ಇದನ್ನು ಬಳಸುತ್ತಿದ್ದರು (3)
6. ಮುಖವು ಮೇಲಾಗಿ ಮಲಗಿರುವ ಸ್ಥಿತಿ (3)
7. ಹತ್ತು ವರ್ಷಗಳ ಅವಧಿ (3)
8. ಶಾಂತಗೊಳ್ಳುವಿಕೆ (5)
10. ಕಲ್ಲಿನಂತೆ ನಿಷ್ಠುರ (3)
13. ಋತುಗಳ ರಾಜ (3)
14. ಸಾರಹೀನವಾದದ್ದು (3)
15. ಹೊಟ್ಟೆಯೂ ಆಗಬಲ್ಲ ಒಂದು ಜೀರ್ಣಾಂಗ (3)
17. ಹೇಳಿ ಕಳುಹಿಸಿದ ಮಾತು (3)
18. ಮರವನ್ನೇರಿತೆ ಯುದ್ಧ? (3)
20. ಕಾಯ್ದಿರಿಸಿದ್ದು (3)
22. ಬಾಯಾರಿಕೆ (2)

ಕರೆದ ಕೂಡಲೇ ಕಾಪಾಡುವ ತುಳಜಾ ಭವಾನಿ

• ರೂಪಾ ಗುರುರಾಜ್

ಮಹಾರಾಷ್ಟ್ರದ ಸಹ್ಯಾದ್ರಿ ಪರ್ವತ ಶ್ರೇಣಿಯ ಯಮುನಾಚಲ ಪರ್ವತದ ಮಧ್ಯ ಭಾಗದಲ್ಲಿ ಇರುವ ತುಳಜಾಪುರದಲ್ಲಿ ನೆಲೆಸಿರುವ ತಾಯಿ ತುಳಜಾ ಭವಾನಿ. ತುಳಜಾಪುರ ಬಹಳ ಹಿಂದೆ ಸುತ್ತಮುತ್ತ ದಟ್ಟಾರಣ್ಯದಿಂದ ತುಂಬಿತ್ತು. ಸ್ಕಂದ ಪುರಾಣದ ಪ್ರಕಾರ ಈ ಅರಣ್ಯದಲ್ಲಿ 'ಕದ್ರುಮ' ಮಹರ್ಷಿಗಳು ತಪಸ್ಸು ಆಚರಿಸುತ್ತಾ ನೆಲೆಸಿದ್ದರು. ಇವರ ಪತ್ನಿ ಅನುಭೂತಿ ಪಾರ್ವತಿಯ ಅಂಶದವಳು.

ಕದ್ರುಮರು ತಪಸ್ಸಿನಲ್ಲಿ ನಿರತರಾಗಿದ್ದ ಸಮಯದಲ್ಲೇ ಅವರಿಗೆ ಅಕಾಲ ಮರಣ ಸಂಭವಿಸುತ್ತದೆ. ಆಗ ಅವರ ಪತ್ನಿ ಅನುಭೂತಿ ಗರ್ಭವತಿ. ಸತಿ ಧರ್ಮದಂತೆ, ಸತಿ ಸಹಗಮನ ಮಾಡಿಕೊಳ್ಳಲು ಅವಳು, ಕದ್ರ್ರುಮ ಮಹರ್ಷಿಗಳ ಚಿತೆಯಲ್ಲಿ ಧುಮುಕಲು ಹೊರಟಿದ್ದಳು. ಆ ಸಮಯಕ್ಕೆ ಪಾರ್ವತಿ ದೇವಿ ಪ್ರತ್ಯಕ್ಷಳಾಗಿ, ಗರ್ಭವತಿಯಾದ ನೀನು ಸಹಗಮನ ಮಾಡುವುದು ತಪ್ಪು ನಾನು ನಿನ್ನನ್ನು ರಕ್ಷಿಸುತ್ತೇನೆ. ಈಗ ನೀನು ಹಿಮಾಲಯದ ಮೇರು ಪರ್ವತಕ್ಕೆ ಹೋಗಿ ಅಲ್ಲಿ ತಪಸ್ಸು ಮಾಡು. ನನ್ನ ಶಕ್ತಿಯನ್ನು ನಿನಗೆ ಧಾರೆ ಎರೆಯುತ್ತೇನೆ ಎಂದು ಹೇಳಿದ ಮೇಲೆ ಅನುಭೂತಿ ತಪಸ್ಸು ಮಾಡಲು ಮೇರು ಪರ್ವತಕ್ಕೆ ಹೋಗುತ್ತಾಳೆ. ತಪಸ್ಸಿನಲ್ಲಿ ನಿರತಳಾದಾಗ ಆ ಪ್ರದೇಶದ ಸಮೀಪ ವಿದ್ದ 'ಕುಕುರ' ಎಂಬ ರಾಕ್ಷಸ ಅವಳ ಸೌಂದರ್ಯಕ್ಕೆ ಮಾರುಹೋಗಿ ಅವನನ್ನು ವರಿಸಲು ಪೀಡಿಸುತ್ತಾನೆ.

ಈ ರಾಕ್ಷಸ ಯಾರಿಂದಲೂ ತನಗೆ ಸಾವು ಬರಬಾರದೆಂದು ಬ್ರಹ್ಮನಿಂದಲೇ ವರ ಪಡೆದವನು. ಇಂತಹ ರಾಕ್ಷಸನನ್ನು ಸಂಹಾರ ಮಾಡಲು ಅನುಭೂತಿ, ತಾಯಿ ಪಾರ್ವತಿಯ ಮೊರೆ ಹೋಗುತ್ತಾಳೆ. ಪಾರ್ವತಿ ಕೊಟ್ಟ ಮಾತಿನಂತೆ 10 ಕೈಗಳನ್ನು ಹೊತ್ತು 'ಅಂಬಾ ಭವಾನಿ' ರೂಪದಲ್ಲಿ ಸಿಂಹವನ್ನೇರಿ ಪ್ರತ್ಯಕ್ಷಳಾದಳಾಗಿ ರಾಕ್ಷಸನನ್ನು ಸಂಹರಿಸಿ 'ತುಳಜಾ ಭವಾನಿ' ರೂಪದಲ್ಲಿ ಅಲ್ಲೇ ನೆಲೆಸಿದಳು.

ಹೀಗೆ ಭಕ್ತಳ ಕರೆಗೆ ತಕ್ಷಣ ಒಗೊಟ್ಟು ಬಂದ ದೇವಿಗೆ ತುಳಜಾಭವಾನಿ ಎಂಬ ಹೆಸರು ಬಂದಿತು. 'ತುಳಜಾ' ಎಂದರೆ ತ್ವರಿತವಾಗಿ ಎಂದು ಅರ್ಥ. ತುಳಜಾ ಭವಾನಿ ಮಹಾರಾಷ್ಟ್ರದ ಹಲವಾರು ರಾಜವಂಶದವರೆಗೆ ಮನೆ ದೇವತೆಯಾಗಿದ್ದಾಳೆ. ಅದೇ ರೀತಿ ಛತ್ರಪತಿ ಶಿವಾಜಿ ಮಹಾರಾಜನ ಮನೆದೇವರು ತುಳಜಾಭವಾನಿಯಾಗಿದ್ದು, ಶಿವಾಜಿಯು ದೇವಿಯ ಪರಮ ಭಕ್ತನಾಗಿದ್ದನು. ಶಿವಾಜಿಯ ಭಕ್ತಿಗೆ ಮೆಚ್ಚಿ ದೇವಿ ಪ್ರತ್ಯಕ್ಷಳಾಗಿ ಅಧರ್ಮದ ವಿರುದ್ಧ ಹೋರಾಡಿ ಧರ್ಮದ ಮೇಲೆ ಜಯಸಾಧಿಸು ಎಂದು ಹರಸಿ ಸ್ವತ: ಶಿವಾಜಿಗೆ ಖಡ್ಗವನ್ನು ಕೊಟ್ಟಿದ್ದಾಳೆ ಎಂಬ ನಂಬಿಕೆ ಇದೆ. ತುಳಜಾ ಭವಾನಿ ವಿಗ್ರಹ ಸಾಲಿಗ್ರಾಮದಿಂದ ಮಾಡಲ್ಪಟ್ಟ ಸ್ವಯಂಭೂ ವಿಗ್ರಹ. ಶಿವಾಜಿ ಯಾವುದೇ ಯುದ್ಧಕ್ಕೆ ಹೊರಟಾಗಲೂ ದೇವಿಗೆ ನಮಸ್ಕರಿಸಿ ಯುದ್ಧವನ್ನು ಮಾಡಿ ಜಯಿಸಿಕೊಂಡು ಬರುತ್ತಿದ್ದನು.

ದೇವಾಲಯದ ಹೊರಗಿನ ಗೋಡೆಗಳನ್ನು ಕೋಟೆಯಂತೆ ಕಟ್ಟಲಾಗಿದೆ. ಸಮೀಪವೆ ಕಲ್ಲೋಲತೀರ್ಥ, ವಿಷ್ಣು ತೀರ್ಥ, ಗೋಮುಖ ತೀರ್ಥ ಎಂಬ ಮೂರು ತೀರ್ಥಗಳ ಸರೋವರವಿದೆ. ಈ ತೀರ್ಥದಲ್ಲಿ ಸ್ನಾನ ಮಾಡಿದರೆ ಸಕಲ ಚರ್ಮ ವ್ಯಾಧಿಗಳು ನಿವಾರಣೆಯಾಗುತ್ತದೆ ಎಂಬ ನಂಬಿಕೆ ಇದೆ. ತುಳಜಾ ಭವಾನಿ ದೇವಸ್ಥಾನದ ಹಿಂಭಾಗದಲ್ಲಿ ದುಂಡನೆಯ ಕಲ್ಲನ್ನು ಇರಿಸಲಾಗಿದೆ. ಇದಕ್ಕೆ 'ಚಿಂತಾಮಣಿ' ಕಲ್ಲು ಎಂದು ಹೇಳುತ್ತಾರೆ ಇಷ್ಟಾರ್ಥಗಳನ್ನು ಮನಸಿನಲ್ಲಿ ಬೇಡಿಕೊಂಡು ಆ ಕಲ್ಲ ಮೇಲೆ ಕೈ ಇಟ್ಟರೆ, ಕೈ ಇಟ್ಟ ಕಲ್ಲು ಬಲಭಾಗಕ್ಕೆ ತಿರುಗಿದರೆ ಹಿಡಿದ ಕೆಲಸಕ್ಕೆ ಜಯ ದೊರೆಯುತ್ತದೆ ಎಂದೂ, ಎಡಭಾಗಕ್ಕೆ ತಿರುಗಿದರೆ ಆಗದೆಂದು ನಂಬಿಕೆ. ಛತ್ರಪತಿ ಶಿವಾಜಿ ಮಹಾರಾಜ ಯಾವುದೇ ಮುಖ್ಯ ಕೆಲಸ ಕಾರ್ಯಗಳು ಅಥವಾ ಯುದ್ಧಕ್ಕೆ ಹೊರಟಾಗ, ಈ ಕಲ್ಲಿನ ಮೂಲಕ ಪ್ರಶ್ನೆಯನ್ನು ಕೇಳಿಕೊಂಡೆ ಹೋಗುತ್ತಿದ್ದನಂತೆ.

ದೇವಸ್ಥಾನದ ಮುಂಭಾಗದಲ್ಲಿ ಕಲ್ಲಿನ ಮಂಚವಿದೆ ಅಲ್ಲಿ ದೇವಿ ಮಲಗುತ್ತಿದ್ದಳು ಎನ್ನುತ್ತಾರೆ. ವಿಜಯದಶಮಿ ದಿನ ರಾಕ್ಷಸರನ್ನು ಸಂಹಾರ ಮಾಡಿ ಈ ಮಂಚದಲ್ಲಿ ಮಲಗುತ್ತಾಳೆ, ನಂತರ ಶೀಗೆ ಹುಣ್ಣಿಮೆಗೆ ದೇವಿ ಎಚ್ಚರಗೊಳ್ಳುತ್ತಾಳೆ. ಎಂಬ ನಂಬಿಕೆ ಇದ್ದು, ವಿಜಯದಶಮಿ ದಿನ ದೇವಾಲಯದ ಬಾಗಿಲು ಹಾಕಿದರೆ ಸೀಗೆ ಹುಣ್ಣಿಮೆ ದಿನ ತೆಗೆಯಲಾಗುತ್ತದೆ. ಆ ದಿನ ದೇವಿಯ ದರ್ಶನಕ್ಕಾಗಿ ಲಕ್ಷಾಂತರ ಭಕ್ತರು ತಮ್ಮ ಊರುಗಳಿಂದಲೇ ಪಾದಯಾತ್ರೆ ಮಾಡುತ್ತಾ ಬಂದು ದೇವಿಯ ದರ್ಶನ ಪಡೆಯುತ್ತಾರೆ. ದೇವಾಲಯಕ್ಕೆ ಬರುವ ಭಕ್ತರು ಮೊದಲು ದೇವಿ ಮಲಗುವ ಪಲ್ಲಂಗವನ್ನು ನೋಡಿ ನಮಸ್ಕರಿಸಿ, ನಂತರ ದೇವಿಯ ದರ್ಶನ ಮಾಡುವುದು ಇಲ್ಲಿಯ ಪದ್ಧತಿ. ಈ ತಾಯಿ ಸಕಲರನ್ನೂ ಪೊರೆಯಲಿ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಕೃಷ್ಣೆಯ ನಡುವೆ ನಾರದಗಡ್ಡಾ

• ವೀರಣ್ಣ ಕಲಕೇರಿ ಕೆಂಭಾವಿ

ರಾಯಚೂರಿನಿಂದ ಸುಮಾರು 30 ಕಿಮಿ ಅಂತರದಲ್ಲಿ ಇರುವ ನಾರದಗಡ್ಡಾ ದ್ವೀಪ ತಲುಪಲು ಚಂದ್ರಬಂಡಾ, ನಾಗನದೊಡ್ಡಿ, ಯಾಪಲದಿನ್ನಿ, ಪುರದಿಪಾಡು ಗ್ರಾಮಗಳ ಮಾರ್ಗವಾಗಿ ಸಾಗಬೇಕು. ದ್ವೀಪ ತಲುಪಲು ದೋಣಿಗಳ ವ್ಯವಸ್ಥೆ ಇರುತ್ತದೆ. ದ್ವೀಪದ ಸುತ್ತಲೂ ಹರಿಯುವ ನದಿಯ ಒಂದು ದಡ ತೆಲಂಗಾಣ ರಾಜ್ಯ ಇನ್ನೊಂದು ದಡ ಕರ್ನಾಟಕ. ರಾಯಚೂರು ಜಿಲ್ಲೆಯ ಪುರದಿಪಾಡು ಗ್ರಾಮಗಳಿಂದ ನಾರದಗಡ್ಡಾ ತಲುಪಲು ಅನುಕೂಲವಿದೆ.

ನಾರದ ಮುನಿ ಹಾಗೂ ಚನ್ನಬಸವಣ್ಣ ಎರಡೂ ದೇವಾಲಯಗಳು ಒಂದೆ ಒಳಾಂಗಣದಲ್ಲಿವೆ. ನಾರದ ಮುನೀಶ್ವರ ಹಾಗೂ ಚನ್ನಬಸವ ಸ್ವಾಮಿಜಿ ಎರಡೂ ದೇವಾಲಗಳಿಗೂ ಪೂಜಾ ಕೈಂಕರ್ಯ ಪಕ್ಕದ ತೆಲಂಗಾಣದ ನೆಟ್ಟಂಪಾಡು ಗ್ರಾಮದ ಜಂಗಮರಿಂದ ನಡೆಯತ್ತಲಿದೆ. ಚನ್ನಬಸವೇಶ್ವರ ಸ್ವಾಮಿಗಳ ತಪೋವನವಾದ ಈ ನಾರದ ಗಡ್ಡಾ ಸುಮಾರು 150 ಎಕರೆ ವಿಸ್ತಾರವಾಗಿ ಹರಡಿಕೊಂಡು ಸುತ್ತಲೂ ಕೃಷ್ಣಾ ನೀರಿನಿಂದ ಆವೃತ್ತಗೊಂಡಿದ್ದು ಇಲ್ಲಿನ ನೋಟ ವಿಶೇಷ. ಶಿವರಾತ್ರಿಯ ಐದನೇ ದಿನ ಇಲ್ಲಿನ ಚನ್ನಬಸವ ಸ್ವಾಮೀಜಿಯ ರಥೋತ್ಸವ ಅದ್ದೂರಿಯಾಗಿ ನಡೆಯಲಿದೆ.

ಸುಮಾರು ಎಂಟು ನೂರು ವರ್ಷಗಳ ಹಿಂದೆ ಚನ್ನಬಸವ ಸ್ವಾಮೀಜಿಗಳು ಈ ದ್ವೀಪ ಸೇರಿ ಇಲ್ಲಿಯೇ ನೆಲೆನಿಂತು ತಪಸ್ಸನ್ನು ಆಚರಿಸಿದರು ಮತ್ತು ಜನರ ಕಷ್ಟ ನಿವಾರಿಸಿದರು ಎಂಬ ಪ್ರತೀತಿ ಇದೆ. ಅವರು ತಪಸ್ಸು ಮಾಡಿದ ಸ್ಥಳ, ಜೀವಂತ ಸಮಾಧಿ ಸ್ಥಳ ಎರಡೂ ಪ್ರತ್ಯೇಕವಾಗಿದ್ದು, ತಪಸ್ವಿ ಚನ್ನಬಸವಣ್ಣನವರ ಮಂದಿರ ಇಲ್ಲಿದೆ.

ನೀವೂ ಬರೆಯಬಹುದು

ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಟೆನಿಸ್ ಟೂರ್ನಿಗೆ ಬೆಂಗಳೂರು ಆತಿಥ್ಯ

ಬೆಂಗಳೂರು: ಪ್ರತಿಷ್ಠಿತ ಬಿಲ್ಲೀ ಜೀನ್ ಕಿಂಗ್ ಕಪ್ ಪ್ಲೇ ಆಫ್‌ನ ಜಿ ಗುಂಪಿನ ಪಂದ್ಯಗಳ ಆತಿಥ್ಯವನ್ನು ಬೆಂಗಳೂರು ವಹಿಸಲಿದೆ. ಇದೇ ನವೆಂಬರ್ 14ರಿಂದ ಈ ಪಂದ್ಯಗಳು ನಡೆಯಲಿದ್ದು, ಭಾರತ ತಂಡವು, ಸ್ಲೊವೇನಿಯಾ ಮತ್ತು ನೆದರ್ಲೆಂಡ್ಸ್ ತಂಡಗಳ ಜತೆ ಜಿ ಗುಂಪಿನಲ್ಲಿದೆ. ಈ ವಿಭಿನ್ನ ಮಾದರಿಯ ಟೆನಿಸ್ ಟೂರ್ನಿಯಲ್ಲಿ 21 ತಂಡಗಳು ಭಾಗಹಿಸುತ್ತಿದ್ದು ಏಳು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಏಳು ರಾಷ್ಟ್ರಗಳು ಒಂದೊಂದು ಗುಂಪಿನ ಪಂದ್ಯಗಳ ಆತಿಥ್ಯ ವಹಿಸುತ್ತಿವೆ. ಲಂಡನ್‌ನಲ್ಲಿ ಗುರುವಾರ ಡ್ರಾ ನಡೆದಿದ್ದು, ಪಂದ್ಯಗಳು ನಡೆಯುವ 7 ತಾಣಗಳ ಹೆಸರನ್ನು ಅಧಿಕೃತವಾಗಿ ಪ್ರಕಟಿಸಲಾಯಿತು. ಮೂರು ದಿನಗಳ ಪ್ಲೇ ಆಫ್ ಪಂದ್ಯಗಳು ನವೆಂಬರ್ 16ರಂದು ಕೊನೆಗೊಳ್ಳಲಿವೆ. ಭಾರತ ಪ್ಲೇ ಆಫ್‌ಗೆ ನೇರ ಅರ್ಹತೆ ಪಡೆದಿದೆ. ಪುಣೆಯಲ್ಲಿ ನಡೆದ ಏಷ್ಯಾ ಒಷಾನಿಯಾ ಒಂದನೇ ಗುಂಪಿನಲ್ಲಿ ತೋರಿದ ಅಮೋಘ ನಿರ್ವಹಣೆಯಿಂದ ಭಾರತ ಅವಕಾಶ ಪಡೆದಿದೆ. ಭಾರತದ ಜೊತೆಗೆ ನ್ಯೂಜಿಲೆಂಡ್ ಸಹ ಅರ್ಹತೆ ಗಳಿಸಿದೆ.

ಜಿಂಬಾಂಬ್ವೆ 2 ಟೆಸ್ಟ್ ಸರಣಿಗೆ ತೆಂಬ ಅಲಭ್ಯ

ದೆಹಲಿ: ಜಿಂಬಾಂಬ್ವೆ ವಿರುದ್ಧದ 2 ಟೆಸ್ಟ್ ಸರಣಿಗಳಿಂದ ದಕ್ಷಿಣ ಆಫ್ರಿಕಾ ನಾಯಕ ತೆಂಬ ಬವುಮಾ ಹೊರಗುಳಿಯಲಿದ್ದಾರೆ. ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್ ಆಸ್ಟ್ರೇಲಿಯಾ ವಿರುದ್ಧದ ಫೈನಲ್ ಪಂದ್ಯದ ವೇಳೆ ಗಾಯಗೊಂಡಿದ್ದ ತೆಂಬಾ ಇನ್ನೂ ಚೇತರಿಸಿಕೊಂಡಿಲ್ಲ.

ಆಗಾಗಿ ಜಿಂಬಾಂಬ್ವೆ ವಿರುದ್ಧ 2 ಟೆಸ್ಟ್‌ಗಳಿಗೆ ಗೈರಾಗಲಿದ್ದಾರೆ. ದಕ್ಷಿಣ ಆಫ್ರಿಕಾ ಟೆಸ್ಟ್ ತಂಡವನ್ನು ಕೇಶವ್ ಮಹರಾಜ್ ನಾಯಕರಾಗಿ ಮುನ್ನಡೆಸಲಿದ್ದಾರೆ. ತೆಂಬ ಅವರಿಗೆ ಇನ್ನೂ ಹೆಚ್ಚಿನ ವೈದ್ಯಕೀಯ ಪರೀಕ್ಷೆ ಮಾಡಬೇಕಿದೆ. ಐಡನ್ ಮಾರ್ಕ್ರಮ್ ಮತ್ತು ಕಾಗಿಸೋ ರಬಾಡಾ ವಿಶ್ರಾಂತಿಯಲ್ಲಿರುವ ಕಾರಣ ಐದು ಮಂದಿ ಹೊಸಬರಿಗೆ ಆಡುವ ಅವಕಾಶ ಸಿಗಲಿದೆ. 2ನೇ ಟೆಸ್ಟ್ ಸರಣಿಗೆ ಲುಂಗಿನಿ ಎನ್‌ಗಿಡಿ ಲಭ್ಯರಾಗಲಿದ್ದಾರೆ. ನಾಯಕ ಬವುಮಾ, ದಕ್ಷಿಣ ಆಫ್ರಿಕಾವನ್ನು ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಫೈನಲ್ ಗೆಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಆಸ್ಟ್ರೇಲಿಯಾ ಪಂದ್ಯದ ವೇಳೆ ಸಿಂಗಲ್ ರನ್ ಓಡುವಾಗ ಗಾಯಗೊಂಡಿದ್ದರು. ಕೊಂಚ ಚೇತರಿಸಿಕೊಂಡು ಟೀ ವಿರಾಮದ ತನಕ ಬ್ಯಾಟಿಂಗ್ ಮಾಡಿದ್ದರು. ವೈದ್ಯರ ಸಲಹೆ ಮೇರೆಗೆ ಆಟ ಮುಂದುವರಿಸುವುದನ್ನು ನಿಲ್ಲಿಸಿದ್ದರು.

ನಾಯಕ ಗಿಲ್, ಯಶಸ್ವಿ ಜೈಸ್ವಾಲ್ ಶತಕ ವೈಭವ

ರಿಷಭ್ ಪಂತ್ ಅರ್ಧ ಶತಕ | ಮೊದಲ ಟೆಸ್ಟ್‌ನಲ್ಲಿ ಆಂಗ್ಲರ ಮುಂದೆ ಯಂಗ್ ಇಂಡಿಯಾ ಭರ್ಜರಿ ಆಟ

ಲೀಡ್ಸ್: ಆರಂಭಿಕ ಯಶಸ್ವಿ ಜೈಸ್ವಾಲ್ ಹಾಗೂ ನಾಯಕ ಶುಭ್‌ಮನ್ ಗಿಲ್ ಶತಕದ ಬೆಂಬಲದೊಂದಿಗೆ ಟೀಮ್ ಇಂಡಿಯಾ, ಆತಿಥೇಯ ಇಂಗ್ಲೆಂಡ್ ವಿರುದ್ಧ ಲೀಡ್ಸ್‌ನಲ್ಲಿ ನಡೆಯುತ್ತಿರುವ ಪ್ರಥಮ ಟೆಸ್ಟ್ ಪಂದ್ಯದ ಮೊದಲ ದಿನದಾಟದಲ್ಲಿ 3 ವಿಕೆಟ್ ನಷ್ಟಕ್ಕೆ 359 ರನ್ ದಾಖಲಿಸಿ ಸುಸ್ಥಿತಿಯಲ್ಲಿದೆ.

ಆಂಗ್ಲರ ನೆಲದಲ್ಲಿ ಆಡಿದ ಮೊದಲ ಪಂದ್ಯದಲ್ಲೇ ಜೈಸ್ವಾಲ್ ಶತಕ (101 ರನ್, 16 ಬೌಂಡರಿ, 1 ಸಿಕ್ಸ್) ದಾಖಲಿಸಿ ಮಿಂಚಿದರೆ, ನಾಯಕ ಶುಭ್‌ಮನ್ ಗಿಲ್ ನಾಯಕನಾಗಿ ಮೊದಲ ಪಂದ್ಯದಲ್ಲೇ ಭರ್ಜರಿ ಶತಕ (127* ರನ್, 14 ಬೌಂಡರಿ, 1 ಸಿಕ್ಸ್) ಗಳಿಸಿ ಮಿಂಚಿದರು. ಉಪನಾಯಕ ರಿಷಭ್ ಪಂತ್ ಅರ್ಧ ಶತಕ (65) ದಾಖಲಿಸಿ ಸಮರ್ಥ ಬೆಂಬಲ ನೀಡಿದರು.

ಇಂಗ್ಲೆಂಡ್ ವಿರುದ್ಧದ 5 ಟೆಸ್ಟ್ ಮ್ಯಾಚ್‌ಗಳ ಪೈಕಿ ಲೀಡ್ಸ್ ಮೈದಾನದಲ್ಲಿ ಶುಕ್ರವಾರ ಆರಂಭಗೊಂಡ ಮೊದಲ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಭಾರತಕ್ಕೆ ಆರಂಭಿಕರಾದ ಯಶಸ್ವಿ ಜೈಸ್ವಾಲ್ ಹಾಗೂ ಕೆ.ಎಲ್.ರಾಹುಲ್ ಉತ್ತಮ ಬುನಾದಿ ಹಾಕಿಕೊಟ್ಟರು. ಕ್ರೀಸ್‌ನಲ್ಲಿ ಬಲವಾಗಿ ನಿಂತ ಇಬ್ಬರು, 24.5 ಓವರ್ ನಷ್ಟಕ್ಕೆ 91 ರನ್‌ಗಳ ಜತೆಯಾಟ ನೀಡಿದರು. 78 ಬಾಲ್‌ಗಳಿಗೆ 8 ಫೋರ್ ಸಹಿತ 42 ರನ್ ಗಳಿಸಿದ ಕೆ.ಎಲ್.ರಾಹುಲ್, ಬ್ರೆಡನ್ ಕಾರ್ಸ್‌ಗೆ ವಿಕೆಟ್ ಒಪ್ಪಿಸಿ ಪೆವಿಲಿಯನ್‌ಗೆ ಮರಳಿದರು.

ಸೊನ್ನೆ ಸುತ್ತಿದ ಸಾಯಿ ಸುದರ್ಶನ್: ಪದಾರ್ಪಣೆ ಪಂದ್ಯದಲ್ಲಿ ಸಾಯಿ ಸುದರ್ಶನ್ ಅವರಿಗೆ ಭಾರೀ ನಿರಾಸೆ ಉಂಟಾಯಿತು. ಕೆ.ಎಲ್. ರಾಹುಲ್ ಔಟಾದ ನಂತರ ಬ್ಯಾಟಿಂಗ್‌ಗೆ ಬಂದಿದ್ದ ಸಾಯಿ ಸುದರ್ಶನ್ 4 ಬಾಲ್ ಎದುರಿಸಿ ಸೊನ್ನೆ ಸುತ್ತಿ ಔಟಾದರು. ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ ಸಾಯಿ ಸುದರ್ಶನ ಅವರ ವಿಕೆಟ್ ಪಡೆದರು. ಆದರೆ ನಂತರ ಬಂದ ನಾಯಕ ಶುಭ್‌ಮನ್ ಗಿಲ್ ನಾಯಕನ ಆಟ ಪ್ರದರ್ಶಿಸಿದರು.

ಆರಂಭದಲ್ಲಿ ಜೈಸ್ವಾಲ್‌ಗೆ ಉತ್ತಮ ಬೆಂಬಲ ನೀಡಿ ಶತಕ ಗಳಿಸಲು ಗಿಲ್ ಆಸರೆಯಾದರು. ಊಟದ ವಿರಾಮದ ಬಳಿಕ ಮೊದಲ ಎಸೆತದಲ್ಲಿಯೇ ಜೈಸ್ವಾಲ್ ಬೆನ್‌ಸ್ಟೋಕ್ಸ್ ಎಸೆತದಲ್ಲಿ ಬೌಲ್ಡ್ ಆದರು. ಬಳಿಕ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಗಿಲ್, ಬೌಂಡರಿಗಳ ಸುರಿಮಳೆಯೊಂದಿಗೆ ಶತಕ ದಾಖಲಿಸಿದರು.

ಮೂವರು ಕನ್ನಡಿಗೆ ಸ್ಥಾನ

ಟೀಂ ಇಂಡಿಯಾ ಪರ ಆಡುವ 11ರ ಬಳಗದಲ್ಲಿ ಮೂವರು ಕನ್ನಡಿಗರು ಸ್ಥಾನ ಗಿಟ್ಟಿಸಿಕೊಂಡಿದ್ದಾರೆ. ಕನ್ನಡಿಗ ಕೆ.ಎಲ್. ರಾಹುಲ್, ಪ್ರಸಿದ್ಧ ಕೃಷ್ಣ ಹಾಗೂ ಕರುಣ್ ನಾಯರ್ ತಂಡದಲ್ಲಿದ್ದಾರೆ. 8 ವರ್ಷಗಳ ಬಳಿಕ ಕರುಣ್ ನಾಯರ್ ಟೆಸ್ಟ್‌ನಲ್ಲಿ ತಂಡವನ್ನು ಸೇರಿಕೊಂಡಿದ್ದಾರೆ.

ವಿಮಾನ ದುರಂತದಲ್ಲಿ ಮಡಿದವರಿಗೆ ಶ್ರದ್ಧಾಂಜಲಿ

ಭಾರತ-ಇಂಗ್ಲೆಂಡ್ ನಡುವಣ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಆಟಗಾರರು ತೋಳಿಗೆ ಕಪ್ಪು ಪಟ್ಟಿ ಧರಿಸಿ ಅಹಮದಾಬಾದ್ ವಿಮಾನ ದುರಂತದಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಪಂದ್ಯ ಆರಂಭಕ್ಕೂ ಮೊದಲು ಮೈದಾನದ ಅಂಪೈರ್‌ಗಳು ಸೇರಿದಂತೆ ಉಭಯ ತಂಡಗಳ ಅಟಗಾರರು ಒಂದು ನಿಮಿಷ ಮೌನಾಚರಣೆ ಮಾಡಿದರು.

ಜೈಸ್ವಾಲ್, ಗಿಲ್ ದಾಖಲೆ

ಇಂಗ್ಲೆಂಡ್ ವಿರುದ್ಧ ಲೀಡ್ಸ್ ಮೈದಾನದಲ್ಲಿ ಆರಂಭಿಕರಾಗಿ ಕಣಕ್ಕಿಳಿದ ಯಶಸ್ವಿ ಜೈಸ್ವಾಲ್ ಆಕರ್ಷಕ ಶತಕ ದಾಖಲಿಸಿದರು. ಎದುರಿಸಿದ (159 ಬಾಲ್‌ಗಳಲ್ಲಿ 16 ಬೌಂಡರಿ, 1 ಸಿಕ್ಸರ್ ಸಹಿತ 101 ರನ್ ಕಲೆಹಾಕಿದರು. ಈ ಮೂಲಕ ಇಂಗ್ಲೆಂಡ್ ನೆಲದಲ್ಲಿ ಟೆಸ್ಟ್‌ನಲ್ಲಿ ಮೊದಲ ಶತಕ ದಾಖಲಿಸಿದರು. ತಮ್ಮ ಕೆರಿಯರ್‌ನ 19 ನೇ ಟೆಸ್ಟ್ ಪಂದ್ಯದಲ್ಲಿ ಯಶಸ್ವಿ ಜೈಸ್ವಾಲ್ 4ನೇ ಶತಕ ಇದಾಗಿತ್ತು. ನಾಯಕನಾಗಿ ಟೆಸ್ಟ್ ಆಡಿದ ಮೊದಲ ಪಂದ್ಯದಲ್ಲಿ ಶತಕ (127) ದಾಖಲಿಸುವ ಮೂಲಕ ಶುಭ್‌ಮನ್ ಗಿಲ್ ಕೂಡ ಹೊಸ ದಾಖಲೆ ಬರೆದರು.

ಪೆಟ್ರಾ ಕ್ವಿಟೋವಾ ಟೆನಿಸ್‌ಗೆ ವಿದಾಯ

ಲಂಡನ್: 2 ಬಾರಿ ಚಾಂಪಿಯನ್ ಆಗಿದ್ದ ಜೆಕ್ ಗಣರಾಜ್ಯದ ಟೆನ್ನಿಸ್ ಆಟಗಾರ್ತಿ ಪೆಟ್ರಾ ಕ್ವಿಟೋವಾ ಈ ವರ್ಷಾಂತ್ಯಕ್ಕೆ ನಿವೃತ್ತಿ ಘೋಷಿಸುವುದಾಗಿ ಹೇಳಿಕೊಂಡಿದ್ದಾರೆ. ಜೀವನದ ಎಲ್ಲ ಹಂತಗಳ ನಂತರ ಹೊಸ ಅಧ್ಯಾಯಕ್ಕೆ ಸಮಯ ಬರುತ್ತದೆ. ಆ ಸಮಯ ನನಗೆ ಈಗ ಬಂದಿದೆ. ವೃತ್ತಿಪರ ಆಟಗಾರ್ತಿಯಾಗಿ 2025 ನನ್ನ ಕೊನೆಯ ವರ್ಷವಾಗಲಿದೆ ಎಂದು ಕ್ವಿಟೋವಾ ಪೋಸ್ಟ್ ಮಾಡಿದ್ದಾರೆ.

2023ರಲ್ಲಿ ಕೊನೆಯ ಸಲ ವಿಂಬಲ್ಡನ್ ಆಡಿದ್ದರು. 2011 ಮತ್ತು 2014ರಲ್ಲಿ ವಿಂಬಲ್ಡನ್ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಜಯಿಸಿದ್ದರು. ಈ ಬಾರಿಯ ವಿಂಬಲ್ಡನ್‌ಗೆ ವೈಲ್ಡ್‌ಕಾರ್ಡ್ ಪ್ರವೇಶ ಲಭಿಸಿದೆ. ಅವರು ತಾಯಿಯಾದ 17 ತಿಂಗಳ ವಿರಾಮದ ಬಳಿಕ, ಕಳೆದ ಫೆಬ್ರವರಿಯಲ್ಲಿ ಮತ್ತೆ ಸ್ಪರ್ಧಾತ್ಮಕ ಟೆನಿಸ್‌ಗೆ ಮರಳಿದ್ದರು. ಯುಎಸ್‌ಓಪನ್ ಟೂರ್ನಿಯ ವೇಳೆ ವಿದಾಯ ಹೇಳಲು ಯೋಚನೆ ಮಾಡಿದ್ದಾರೆ.

2016 ರಲ್ಲಿ ಕ್ವಿಟೋವಾ ಅವರ ಮನೆಗೆ ನುಗ್ಗಿದ ದರೋಡೆಕೋರ ಚಾಕುವಿನಿಂದ ಇರಿದ ಪರಿಣಾಮ ಅವರ ಎಡಗೈಯಲ್ಲಿನ ಸ್ನಾಯುರಜ್ಜುಗಳು ಮತ್ತು ನರಗಳನ್ನು ಹಾನಿಗೊಳಿಸಿತ್ತು. ಇದು ಅವರ ಟೆನಿಸ್ ವೃತ್ತಿಜೀವನಕ್ಕೆ ಭಾರೀ ಹಾನಿ ಮಾಡಿತ್ತು. ಇದಾದ ಬಳಿಕ ಅವರು 2019 ರಲ್ಲಿ ಆಸ್ಟ್ರೇಲಿಯನ್ ಓಪನ್ ಫೈನಲ್ ತಲುಪಿದ್ದರು. 2020 ರಲ್ಲಿ ನಡೆದ ಗ್ರ್ಯಾಂಡ್ ಸ್ಲಾಮ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದರು. ಮೊದಲ ಮಗುವಿನ ಜನನದ ನಂತರ ಟೆನ್ನಿಸ್‌ನಿಂದ ಕ್ವಿಟೋವಾ ದೂರ ಉಳಿದಿದ್ದರು. 2024ರಲ್ಲಿ ಒಂದು ಟೂರ್ನಿಯನ್ನು ಕೂಡ ಆಡಿರಲಿಲ್ಲ. ವಿದಾಯ ಘೋಷಣೆಯಲ್ಲಿ ತಮ್ಮ 19 ವರ್ಷದ ಟೆನ್ನಿಸ್ ಪಯಣವನ್ನು ಮೆಲುಕು ಹಾಕಿದ್ದಾರೆ.

ರಣಜಿ: ಕರ್ನಾಟಕ ತಂಡಕ್ಕೆ ಕರುಣ್ ವಾಪಸ್?

ಮುಂಬೈ: ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಕನ್ನಡಿಗ ಕರುಣ್ ನಾಯರ್ ಮುಂದಿನ ಬಾರಿ ಕರ್ನಾಟಕ ತಂಡದ ಪರ ಆಡಲಿದ್ದಾರೆ ಎನ್ನಲಾಗುತ್ತಿದೆ. ಇಬ್ಬರು ಸ್ಟಾರ್ ಆಟಗಾರರನ್ನು ವಿದರ್ಭ ಕಳೆದುಕೊಳ್ಳುವ ಸಾಧ್ಯತೆ ಇದೆ. ವಿದರ್ಭ ತಂಡದ ಕರುಣ್ ನಾಯರ್ ಮತ್ತು ಜಿತೇಶ್ ಶರ್ಮಾ ತಂಡದಿಂದ ಹೊರನಡೆಯಲು ನಿರ್ಧರಿಸಿದ್ದಾರೆ ಎನ್ನಲಾಗಿದೆ. ವಿದರ್ಭ ರಣಜಿ ಟ್ರೋಫಿಯಲ್ಲಿ ಚಾಂಪಿಯನ್, ವಿಜಯ್ ಹಜಾರೆ ಟ್ರೋಫಿಯಲ್ಲಿ ರನ್ನರ್-ಅಪ್ ಮತ್ತು 2024-25 ಪಂದ್ಯಾವಳಿಗಳಲ್ಲಿ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಕ್ವಾರ್ಟರ್-ಫೈನಲಿಸ್ಟ್ ಆಗಿತ್ತು.

ಮೂಲಗಳ ಮಾಹಿತಿ ಪ್ರಕಾರ ಜಿತೇಶ್ ಅವರು ಬರೋಡಾಗೆ ಮತ್ತು ಕರುಣ್ ನಾಯರ್ ಮತ್ತೆ ತಮ್ಮ ತವರು ರಾಜ್ಯವಾದ ಕರ್ನಾಟಕಕ್ಕೆ ಮರಳಲು ನಿರ್ಧರಿಸಿದ್ದಾರೆ ಎನ್ನಲಾಗಿದೆ. ಕಳೆದ ಋತುವಿನಲ್ಲಿ ವಿದರ್ಭದ ತಂಡದ ಪರ ಉಭಯ ಆಟಗಾರರು ಅಮೋಘ ಬ್ಯಾಟಿಂಗ್ ಪ್ರದರ್ಶಿಸುವ ಮೂಲಕ ತಂಡವನ್ನು ಹಲವು ಟೂರ್ನಿಯಲ್ಲಿ ಫೈನಲ್ ಪ್ರವೇಶಿಸುವಂತೆ ಮಾಡಿದ್ದರು.

ನಾಯರ್ ರಣಜಿ ಟ್ರೋಫಿಯಲ್ಲಿ 863 ರನ್, ವಿಜಯ್ ಹಜಾರೆ ಏಕದಿನ ಸ್ಪರ್ಧೆಯಲ್ಲಿ 779 ರನ್ ಬಾರಿಸಿದ್ದರು. 2023-24ರ ಋತುವಿಗೆ ಮುಂಚಿತವಾಗಿ ಕರ್ನಾಟಕ ತಂಡ ತೊರೆದು ವಿದರ್ಭ ತಂಡ ಸೇರಿದ್ದರು. ಆದರೆ ಈಗ ವೈಯಕ್ತಿಕ ಮತ್ತು ಕೌಟುಂಬಿಕ ಕಾರಣಗಳಿಗಾಗಿ ಕರ್ನಾಟಕಕ್ಕೆ ಮರಳುತ್ತಿದ್ದಾರೆ ಎಂದು ತಿಳಿದುಬಂದಿದೆ. ನಾಯರ್ ಮರಳುವ ಸಾಧ್ಯತೆ ಹೆಚ್ಚು ಎಂದು ಕೆಎಸ್‌ಸಿಎ ಮೂಲಗಳು ದೃಢಪಡಿಸಿವೆ. ಕಳೆದ ಋತುವಿನಲ್ಲಿ ವಿಜಯ್ ಹಜಾರೆ ಪಂದ್ಯಾವಳಿಯಲ್ಲಿ ನಾಯರ್ ವಿದರ್ಭವನ್ನು ಮುನ್ನಡೆಸಿದ್ದರು.

ಏತನ್ಮಧ್ಯೆ, ಜಿತೇಶ್ ಅವರು ಬರೋಡಾಗೆ ತೆರಳುವುದು ಬಹುತೇಕ ಖಚಿತವಾಗಿದೆ. ಬರೋಡಾ ಕ್ರಿಕೆಟ್ ಅಸೋಸಿಯೇಷನ್ (ಬಿಸಿಎ) ಮೂಲಗಳು ಒಂದು ಅಥವಾ ಎರಡು ದಿನಗಳಲ್ಲಿ ಜಿತೇಶ್ ವರ್ಗಾವಣೆ ಪೂರ್ಣಗೊಳ್ಳಲಿದೆ ಎಂದು ದೃಢಪಡಿಸಿವೆ.

ವಿದರ್ಭ ತಂಡ ತೊರೆಯಲು ಕರುಣ್ ನಾಯರ್, ಜಿತೇಶ್ ಶರ್ಮಾ ಸಿದ್ಧ

ವಿಟಾಕೀಸ್

ನ್ಯಾಯಾಧೀಶರಾದ ದೇವರಾಜ್

ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಸಿನಿಮಾ ನಿರ್ಮಾಣದತ್ತಲೂ ಒಲವು ತಾಳಿದ್ದಾರೆ. ಸಿ. ಆರ್.ಬಾಬಿ ಅವರ ಜತೆಯಾಗಿ ಜಸ್ಟ್ ಮ್ಯಾರೀಡ್ ಚಿತ್ರವನ್ನು ನಿರ್ಮಿಸಿದ್ದಾರೆ. ಸಿ.ಆರ್.ಬಾಬಿ ನಿರ್ದೇಶನದಲ್ಲಿ ಈ ಚಿತ್ರ ಸಿದ್ಧವಾಗಿದೆ. ಶೀರ್ಷಿಕೆಯಲ್ಲಿಯೇ ಸದ್ದು ಮಾಡಿದ್ದ ಜಸ್ಟ್ ಮ್ಯಾರೀಡ್ ತಾರಾಗಣದಲ್ಲಿಯೂ ಗಮನಸೆಳೆದಿತ್ತು. ಬಿಗ್ ಬಾಸ್ ಖ್ಯಾತಿಯ ಶೈನ್ ಶೆಟ್ಟಿ ನಾಯಕನಾಗಿ ನಟಿಸಿದ್ದು, ಅಂಕಿತಾ ಅಮರ್ ನಾಯಕಿಯಾಗಿ ಅಭಿನಯಿಸಿದ್ದಾರೆ. ಕನ್ನಡ ಚಿತ್ರರಂಗದ ಹಿರಿಯ ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ವಿಶೇಷ ಎಂದರೆ ಹಿರಿಯ ನಟ ದೇವರಾಜ್ ಕೂಡ ಚಿತ್ರದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ. ದೇವರಾಜ್ ಅವರು ನಿವೃತ್ತ ನ್ಯಾಯಾಧೀಶರ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಅವರ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಆಗಿದೆ.

ಕರ್ತವ್ಯದಲ್ಲಿ ನ್ಯಾಯಾಧೀಶ, ಸ್ವಭಾವದಲ್ಲಿ ರಕ್ಷಕ ನ್ಯಾಯಾಲಯದಲ್ಲಾದರೂ ಮನೆಯಲ್ಲಾದರೂ ಕಾನೂನು ಸದಾ ಪಾಲನೆ ಆಗುತ್ತದೆ. ನ್ಯಾಯವು ಕೇವಲ ಉದ್ಯೋಗವಲ್ಲ, ಅದು ಬದುಕಿನ ಶೈಲಿ ಎಂಬ ವಾಕ್ಯಗಳೊಂದಿಗೆ ದೇವರಾಜ್ ಅವರ ಪಾತ್ರವನ್ನು ಪರಿಚಯಿಸುವ ಪೋಸ್ಟರ್ ಅನ್ನು ಚಿತ್ರತಂಡ ಬಿಡುಗಡೆ ಮಾಡಿದೆ.

ಜಸ್ಟ್ ಮ್ಯಾರೀಡ್ ಪ್ರೇಮಕಥೆಯ ಚಿತ್ರವಾಗಿದ್ದರೂ, ಇಲ್ಲಿ ಕೌಟುಂಬಿಕ ಕಥೆಯೂ ಬೆರೆತಿದೆ. ಸಿ.ಆರ್.ಬಾಬಿ ಅವರೇ ಕಥೆ ಬರೆದಿದ್ದು, ರಘು ನಿಡುವಳ್ಳಿ ಸಂಭಾಷಣೆ ರಚಿಸಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಪಿ.ಜಿ. ಛಾಯಾಗ್ರಹಣ, ಶ್ರೀಕಾಂತ್ ಮತ್ತು ಪ್ರತೀಕ್ ಸಂಕಲನ, ಅಮರ್ ಕಲಾ ನಿರ್ದೇಶನ, ವಿಕ್ರಮ್ ಮೋರ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಸಿನಿಮಾದ ಹಾಡುಗಳಿಗೆ ಕೆ.ಕಲ್ಯಾಣ್, ವಿ.ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ, ನಾಗರ್ಜುನ ಶರ್ಮ ಮತ್ತು ಧನಂಜಯ್ ರಂಜನ್ ಸಾಹಿತ್ಯ ರಚಿಸಿದ್ದಾರೆ.

ಒಮೆನ್‌ನಲ್ಲಿ ದೆವ್ವ

ಚಂದನವನದಲ್ಲಿ ವಿಭಿನ್ನ ಕಥೆಯ ಸಿನಿಮಾಗಳು ಬರುತ್ತಿವೆ, ಆ ಸಾಲಿಗೆ ಹೊಸಬರೇ ಸೇರಿ ನಿರ್ಮಿಸಿರುವ ಒಮೆನ್ ಸಿನಿಮಾ ಸೇರ್ಪಡೆಯಾಗಿದೆ. ಟೈಟಲ್‌ನಲ್ಲಿಯೇ ಗಮನಸೆಳೆದಿರುವ ಒಮೆನ್ ಹಾರರ್ ಜಾನರ್‌ನಲ್ಲಿ ಮೂಡಿಬಂದಿದೆ. ಮರವಂಜಿ ಪ್ರೊಡಕ್ಷನ್ಸ್ ಮತ್ತು ಅಂಗಾಳಪರಮೇಶ್ವರಿ ಮೂವಿಮೇಕರ್ಸ್ ಬ್ಯಾನರ್‌ನಲ್ಲಿ ಅಜಯ್ ಕುಮಾರ್ ಮತ್ತು ವಿ.ಮಿರುನಳಿನಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಯೂಟ್ಯೂಬರ್ ಒಬ್ಬ ನಿಗೂಢವಾಗಿದ್ದ ಒಂದು ಬಂಗಲೆಗೆ ಹೊಕ್ಕು ಅಲ್ಲಿನ ನಿಗೂಢತೆಯನ್ನು ಭೇದಿಸಲು ಹೋದಾಗ ಎದುರಾಗುವ ಸಮಸ್ಯೆಗಳ ಸುತ್ತ ಚಿತ್ರದ ಕಥೆ ಸಾಗುತ್ತದೆ. ಸಿನಿಮಾದಲ್ಲಿ ಅತ್ಯಾಧುನಿಕ ಕಂಪ್ಯೂಟರ್ ಗ್ರಾಫಿಕ್ಸ್ ಒಳಗೊಂಡಿದ್ದು, ಸಂಗೀತ ಮತ್ತು ಸೌಂಡ್ ಡಿಸೈನ್ ಪ್ರೇಕ್ಷಕರಿಗೆ ರೋಮಾಂಚಕಾರಿ ಹಾಗೂ ಭಯಾನಕ ಅನುಭವವನ್ನು ನೀಡುತ್ತದೆ ಎನ್ನುತ್ತಾರೆ ನಿರ್ದೇಶಕರು.

ವಿಬಿನ್.ಎಸ್.ಸಂತೋಷ್ ಕಥೆ ಬರೆದು ನಿರ್ದೇಶನ ಮಾಡಿದ್ದು, ಸಂಕಲನ ಕಾರ್ಯವನ್ನು ನಿರ್ವಹಿಸಿದ್ದಾರೆ. ಅಜಯ್ ಕುಮಾರ್ ನಾಯಕನಾಗಿ ಕಾಣಿಸಿಕೊಂಡಿದ್ದು, ನೀಷ್ಮಾ ಶೆಟ್ಟಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಮೈತ್ರಿ ಜಗ್ಗಿ, ಕೀರ್ತನಾ ಪುಲ್ಕಿ, ರಾಘು, ಆಕಾಶ್ ಕುಲಕರ್ಣಿ ಅಭಿನಯಿಸಿದ್ದಾರೆ. ಭುವನ್ ಶಂಕರ್, ಸನ್‌ಸ್ಕಾರ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಸೆನ್ಸಾರ್ ಪಾಸ್ ಆಗಿರುವ ಒಮೆನ್ ಶೀಘ್ರದಲ್ಲಿಯೇ ತೆರೆಗೆ ಬರಲಿದೆ.

ಉಡಾಳ ರಾಜ ರತ್ನಾಕರ

ವಿರೇಶ್ ಬೊಮ್ಮಸಾಗರ ಕಥೆ ಬರೆದು ನಿರ್ದೇಶಿಸಿರುವ ರಾಜರತ್ನಕರ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಚಂದನ್ ರಾಜ್ ನಾಯಕನಾಗಿ ನಟಿಸಿದ್ದು, ಪಕ್ಕಾ ಉಡಾಳನಾಗಿ ಕಾಣಿಸಿಕೊಂಡಿದ್ದಾರೆ.

ದುಡಿಬೇಕು ಅನ್ನೋದೆಲ್ಲ ಏನಿಲ್ಲ... ದುಡ್ ಮಾಡ್ಬೇಕು ಅಷ್ಟೇ... ಅದು ಫ್ಯಾಮಿಲಿನ ಇಕ್ಕಟ್ಟಿಗೆ ಸಿಲುಕಿಸಿಯಾದರೂ ಸರಿ.. ಎಂಬ ಡೈಲಾಗ್ ಗಮನಸೆಳೆಯುತ್ತದೆ. ಜೀವನದಲ್ಲಿ ಹಣ ಸಂಪಾದಿಸಬೇಕು ಎಂಬ ಆಸೆ ಹೊತ್ತ ಸೋಮಾರಿಯ ಕಥೆ ತೆರೆಯಲ್ಲಿ ಸಾಗುತ್ತದೆ. ಅದಕ್ಕೆ ಕಾಮಿಡಿ, ಸೆಂಟಿಮೆಂಟ್ ಬೆರೆಸಿ ಕಟ್ಟಿಕೊಡಲಾಗುತ್ತಿದೆ.

ನಮ್ಮ ನೇಟಿವಿಟಿ ಕಥೆಗಳನ್ನು ಸಿನಿಮಾ ಮಾಡಬೇಕು ಎಂಬುದು ನನ್ನ ಆಸೆಯಾಗಿತ್ತು. ಅಂತಹದ್ದೇ ಕಥೆ ಈ ಚಿತ್ರದಲ್ಲಿಯೂ ಇದೆ, ಈ ಸಿನಿಮಾದಲ್ಲಿ ನಟಿಸಿದ್ದು ಖುಷಿ ಕೊಟ್ಟಿದೆ. ನನ್ನ ಪಾತ್ರ ಎಲ್ಲರನ್ನೂ ಸೆಳೆಯಲಿದೆ ಎಂದು ಚಂದನ್ ಹೇಳಿದರು. ನಾಗರಾಜ್ ರಾವ್, ಯಮುನಾ ಶ್ರೀನಿಧಿ, ಚೇತನ್ ದುರ್ಗಾ, ಸಿದ್ದು, ಡಿಂಗ್ರಿ ನರೇಶ್ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಚೌಮುದ ಬ್ಯಾನರ್‌ನಲ್ಲಿ ಜಯರಾಮ ಸಿ. ಮಾಲೂರು ಚಿತ್ರ ನಿರ್ಮಾಣ ಮಾಡಿದ್ದಾರೆ. ಈ ಚಿತ್ರದಲ್ಲಿ ಅಪ್ಸರಾ ನಾಯಕಿಯಾಗಿ ಬಣ್ಣ ಹಚ್ಚಿದ್ದರು, ಆದರೆ ಸಿನಿಮಾ ರಿಲೀಸ್‌ಗೂ ಮೊದಲೇ ಇಹಲೋಕ ತ್ಯಜಿಸಿದರು. ಇದು ಚಿತ್ರತಂಡಕ್ಕೆ ದುಃಖ ತಂದಿದ್ದು, ಚಿತ್ರತಂಡ ನಾಯಕಿ ಅಪ್ಸರಾ ಅವರಿಗೆ ಈ ಚಿತ್ರವನ್ನು ಅರ್ಪಿಸುತ್ತಿದೆ.

> ನಾನು ಒಂದು ದಶಕದಿಂದ ಚಿತ್ರರಂಗದ ಹಲವು ವಿಭಾಗಗಳಲ್ಲಿ ಕಾರ್ಯನಿರ್ವಹಿಸಿದ್ದೇನೆ. ಒಳ್ಳೆಯ ಸಿನಿಮಾ ನಿರ್ದೇಶನ ಮಾಡಬೇಕು ಎಂಬ ಆಸೆ ನನಗಿತ್ತು. ರಾಜರತ್ನಾಕರ ಚಿತ್ರದ ಮೂಲಕ ನನ್ನ ಕಸನು ನನಸಾಗಿದೆ. ಇದು ಎಲ್ಲರಿಗೂ ಕನೆಕ್ಟ್ ಆಗುವ ಕಥೆಯಾಗಿದೆ. ಎಲ್ಲರ ಮನೆಯಲ್ಲೂ ಉಡಾಳನೊಬ್ಬ ಇದ್ದೇ ಇರುತ್ತಾನೆ. ಹೀಗಾಗಿ ಎಲ್ಲರಿಗೂ ಸಿನಿಮಾ ಇಷ್ಟವಾಗಲಿದೆ.
>
> -ವಿರೇಶ್ ಬೊಮ್ಮಸಾಗರ ನಿರ್ದೇಶಕ

ಅಬ್ಬರಿಸಲು ಸಿದ್ಧವಾದ ಎಕ್ಕ

ದೊಡ್ಮನೆ ಮೊಮ್ಮಗ ಯುವ ರಾಜ್‌ಕುಮಾರ್ ಯುವನಾಗಿ ಮನಗೆದ್ದರು, ಈಗ ಎಕ್ಕನಾಗಿ ಅಬ್ಬರಿಸಲು ಸಿದ್ಧವಾಗಿದ್ದಾರೆ. ಯುವ ನಟನೆಯ ಎಕ್ಕ ಸಿನಿಮಾದ ಚಿತ್ರೀಕರಣ ಮುಕ್ತಾಯವಾಗಿದ್ದು, ಬಿಡುಗಡೆಗೆ ರೆಡಿಯಾಗಿದೆ. ಚಿತ್ರದ ಟೀಸರ್, ಹಾಡುಗಳು ರಿಲೀಸ್ ಆಗಿದ್ದು ಸಿನಿಪ್ರಿಯರ ಮನಗೆದ್ದಿವೆ. ರೋಹಿತ್ ಪದಕಿ ಕಥೆ ಬರೆದು ನಿರ್ದೇಶನ ಮಾಡಿರುವ ಎಕ್ಕ ಪಕ್ಕಾ ಮಾಸ್, ರಾ ಕಮರ್ಷಿಯಲ್ ಸಿನಿಮಾವಾಗಿದ್ದು ಯುವರಾಜ್ ಕುಮಾರ್ ರಗಡ್ ಲುಕ್‌ನಲ್ಲಿ ಮಿಂಚಿದ್ದಾರೆ. ಸಂಜನಾ ಆನಂದ್ ಹಾಗೂ ಸಂಪದಾ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ, ಉಳಿದಂತೆ ಅತುಲ್, ಆದಿತ್ಯಾ, ಜಾಲಿ ಜಾಕ್, ಸಾಧು ಕೋಕಿಲಾ, ಪುನೀತ್ ರುದ್ರನಾಗ್, ಸೂರಿ, ಹರಿಣಿ, ಶ್ರುತಿ, ರಾಹುಲ್ ದೇವಶೆಟ್ಟಿ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಬಹಳ ಅದ್ದೂರಿಯಾಗಿ ಮೂಡಿಬಂದಿರುವ ಎಕ್ಕ ಚಿತ್ರವನ್ನು ಪಿಆರ್‌ಕೆ ಪ್ರೊಡಕ್ಷನ್ಸ್, ಜಯಣ್ಣ ಫಿಲಂಸ್ ಹಾಗೂ ಕೆಆರ್‌ಜಿ ಸ್ಟುಡಿಯೊಸ್ ಸಂಸ್ಥೆಗಳು ಒಟ್ಟಾಗಿ ನಿರ್ಮಾಣ ಮಾಡಿವೆ. ಚರಣ್ ರಾಜ್ ಸಂಗೀತ, ಸತ್ಯಾ ಹೆಗಡೆ ಛಾಯಾಗ್ರಹಣ ಈ ಚಿತ್ರಕ್ಕಿದೆ. ಪ್ರೇಕ್ಷಕರಲ್ಲಿ ಭಾರೀ ನಿರೀಕ್ಷೆ ಮೂಡಿಸಿರುವ ಎಕ್ಕ ಜುಲೈ 18ಕ್ಕೆ ಅದ್ದೂರಿಯಾಗಿ ತೆರೆಗೆ ಬರಲಿದೆ.

ಮೊದಲು ಎಕ್ಕ ಚಿತ್ರವನ್ನು ಜೂನ್ 6ಕ್ಕೆ ತೆರೆಗೆ ತರಲು ಪ್ಲಾನ್ ಮಾಡಿದ್ದೆವು. ಆದರೆ ಸಿನಿಮಾದ ಕೆಲಸ ಬಾಕಿ ಇದ್ದುದರಿಂದ ಬಿಡುಗಡೆ ತಡವಾಯ್ತು. ಜುಲೈ 18ರಂದು ನಮ್ಮ ಚಿತ್ರ ಅದ್ದೂರಿಯಾಗಿ ತೆರೆಗೆ ಬರಲಿದೆ ಎಂದು ನಿರ್ಮಾಪಕ ಕಾರ್ತಿಕ್ ಗೌಡ ತಿಳಿಸಿದರು.

> ಎಕ್ಕ ಚಿತ್ರದಲ್ಲಿ ಒಂದೊಳ್ಳೆಯ ವೈಬ್ ಇದೆ. ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಚಿತ್ರದ ಪ್ರತಿ ಕಂಟೆಂಟನ್ನು ಸಿನಿಪ್ರಿಯರು ಮೆಚ್ಚಿದ್ದಾರೆ. ಈಗ ಸಿನಿಮಾವನ್ನು ಪ್ರೇಕ್ಷಕರ ಮುಂದಿಡಲು ಕಾತರದದ್ದೇವೆ. ಚಿತ್ರವನ್ನು ಎಲ್ಲರೂ ಮೆಚ್ಚುತ್ತಾರೆ ಎಂಬ ನಂಬಿಕೆ ನನಗಿದೆ.
>
> -ರೋಹಿತ್ ಪದಕಿ ನಿರ್ದೇಶಕ

> ಎಕ್ಕ ಸಿನಿಮಾದ ಕಂಟೆಂಟ್ ಎಲ್ಲರಿಗೂ ಮುಟ್ಟುತ್ತಿದೆ. ಬ್ಯಾಂಗಲ್ ಬಂಗಾರಿ.. ಹಾಡಿಗೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ತುಂಬಾ ಖುಷಿಯಿಂದ ಈ ಸಿನಿಮಾ ಮಾಡಿದ್ದೇವೆ. ಪ್ರೇಕ್ಷಕರು ಈ ಚಿತ್ರವನ್ನು ಚಿತ್ರಮಂದಿರದಲ್ಲಿ ನೋಡಿ ಸಂತಸ ಪಡುತ್ತಾರೆ ಎಂಬ ಅಭಿಲಾಷೆ ಇದೆ. ಈ ಚಿತ್ರದಲ್ಲಿ ನಾನು ಹೊಸ ಅವತಾರದಲ್ಲಿ ಕಾಣಿಸಿಕೊಂಡಿದ್ದೇನೆ.
>
> -ಯುವರಾಜ್‌ಕುಮಾರ್

ನಾಲ್ಕು ಬಣ್ಣದ ಗೀತಗುಚ್ಛ

ನಿರ್ದೇಶಕ ಯೋಗರಾಜ್ ಭಟ್ ಹಲವು ಸೂಪರ್ ಹಿಟ್ ಚಿತ್ರಗಳನ್ನು ನಿರ್ದೇಶಿಸಿ ಸೈ ಎನಿಸಿಕೊಂಡಿದ್ದಾರೆ. ಅವರ ಸಿನಿಮಾಗಳಲ್ಲಿ ಹಾಡುಗಳು ಮಧುರವಾಗಿದ್ದು, ಕೇಳಲು ಕರ್ಣಾನಂದ ನೀಡುತ್ತವೆ. ಅಂತೆಯೇ ಈಗ ಯೋಗರಾಜ್ ಭಟ್ ಆಲ್ಬಂ ಗೀತೆಗಳನ್ನು ನಿರ್ದೇಶಿಸಿದ್ದಾರೆ. ಮತ್ತೆ ಮೊದಲಿನಿಂದ ಶೀರ್ಷಿಕೆಯಲ್ಲಿ ಸಿದ್ಧವಾಗಿರುವ ಈ ಗೀತ ಗುಚ್ಛವನ್ನು ಶ್ರೀನಿಧಿ ಹಾಗೂ ಪ್ರಸನ್ನ ನಿರ್ಮಿಸಿದ್ದಾರೆ. ನಾಲ್ಕು ಬಣ್ಣಗಳ ಅಚ್ಚ ಕನ್ನಡ ಹಾಡುಗಳ ಹೂರಣ ಇಲ್ಲಿದ್ದು, ಮತ್ತೆ ಮೊದಲಿಂದ ಆಲ್ಬಂನ ಮೊದಲ ಹಾಡು ಮೋಹದ ಬಣ್ಣ ನೀಲಿ.. ಬಿಡುಗಡೆಯಾಗಿದೆ. ಯೋಗರಾಜ್ ಭಟ್ ಅವರು ಬರೆದಿರುವ ಈ ಹಾಡನ್ನು ಖ್ಯಾತ ಗಾಯಕ ವಿಜಯ್ ಪ್ರಕಾಶ್ ಹಾಡಿದ್ದಾರೆ. ಅನಿರುದ್ಧ್ ಶಾಸ್ತ್ರಿ ಸಂಗೀತ ಸಂಯೋಜಿಸಿದ್ದಾರೆ. ಈ ಆಲ್ಬಂನಲ್ಲಿ ನಾಲ್ಕು ಗೀತೆಗಳಿದ್ದು, ನಾಲ್ಕು ಸಂಗೀತ ನಿರ್ದೇಶಕರು, ನಾಲ್ಕು ಗಾಯಕರು, ನಾಲ್ಕು ನಾಯಕಿಯರು ಇರುವುದು ವಿಶೇಷ. ಎಲ್ಲಾ ಹಾಡುಗಳಿಗೂ ಯೋಗರಾಜ್ ಭಟ್ ಅವರೇ ಸಾಹಿತ್ಯ ರಚಿಸಿದ್ದು, ಮನೋಮೂರ್ತಿ, ವಿ. ಹರಿಕೃಷ್ಣ, ಚೇತನ್-ಡ್ಯಾವಿ, ಅನಿರುದ್ಧ ಶಾಸ್ತ್ರಿ ಸಂಗೀತ ಸಂಯೋಜಿಸಿದ್ದಾರೆ. ವಿಜಯ ಪ್ರಕಾಶ್, ಚೇತನ್ ಸೋಸ್ಕ, ವಾಸುಕಿ ವೈಭವ್, ಅದಿತಿ ಖಂಡೇಗಲ ಹಾಡಿಗೆ ದನಿಯಾಗಿದ್ದಾರೆ.

ಈ ಹಾಡಿನಲ್ಲಿ ಸಂಜನ್ ಕಜೆ ನಾಯಕನಾಗಿ ಕಾಣಿಸಿಕೊಂಡಿದ್ದು, ನಿಧಿ ಸುಬ್ಬಯ್ಯ, ಅಮಿೀತಾ. ಎಸ್. ಕುಲಾಲ್, ದೇವಿಕಾ ಶಿಂಧೆ ಹಾಗೂ ಅಂಜಲಿ ಗೌಡ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ಮತ್ತೆ ಮೊದಲಿಂದ ಆಲ್ಬಂನಲ್ಲಿ ನಾಲ್ಕು ಹಾಡುಗಳಿದ್ದು ಒಂದಕ್ಕಿಂತ ಒಂದು ಕೇಳಲು ಮಧುರವಾಗಿವೆ.